ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಟಿ20 ವಿಶ್ವಕಪ್: ಭಾರತ-ಕಿವೀಸ್ ಫೈನಲ್ ಇಂದು

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಟಿ20 ವಿಶ್ವಕಪ್ ಪ್ರಶಸ್ತಿ ಸುತ್ತು

ಬ್ಯಾಟಿಂಗ್ ಪಿಚ್‌ನಲ್ಲಿ ಮಿಂಚಿದವರೇ ಚಾಂಪಿಯನ್ಸ್

ಸಂಜೆ 7ಕ್ಕೆ ಪಂದ್ಯ

ಭಾರತಕ್ಕೆ ಮೂರನೇ ಕಪ್ ಗೆಲ್ಲುವ ಭರವಸೆ

ಸತತ 2ನೇ ಬಾರಿ ಫೈನಲ್ ಆಡುತ್ತಿರುವ ಭಾರತ

ಮೊದಲ ಟ್ರೋಫಿಗಾಗಿ ನ್ಯೂಜಿಲೆಂಡ್ ಫೈಟ್

• ವಿವರ ಪುಟ ೧೩

ಬೆಂಗಳೂರು

ಭಾನುವಾರ, 8 ಮಾರ್ಚ್ 2026

ಸಂಪುಟ 33, ಸಂಚಿಕೆ 127, ಪುಟಗಳು 14+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

RNI: 58231/94
REG No.KA/BG GPO/2532/2021-23

hosadigantha.com
epaper.hosadigantha.com
Hosadigantha Digital

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ : ಪಂಚಮಿ, ನಕ್ಷತ್ರ: ಸ್ವಾತಿ

ದಿನದ ಮಾತು

ಜ್ಞಾನವೇ ಶಕ್ತಿ. ಶಕ್ತಿಯೇ ಜೀವನ, ಅಜ್ಞಾನವೇ ದೌರ್ಬಲ್ಯ, ದೌರ್ಬಲ್ಯವೇ ಮರಣ.

▲ ರಾಮಕೃಷ್ಣ ಪರಮಹಂಸ

ಹೀಗೊಂದು ಕಿಟ್ಟಿ ಪಾರ್ಟಿ ಅನುಭವ

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬



ಸ್ತ್ರೀ.. ಎಂದರೆ ಅಷ್ಟೇ ಸಾಕೆ? ನಿನಗೆ ಬೇರೆ ಹೆಸರು ಬೇಕೇ?

ಇಂದು ವಿಶ್ವ ಮಹಿಳಾ ದಿನ

• ವಿಶೇಷ ಪುಟ ೫

ಕಿರುಸುದ್ದಿ

ಎಲ್‌ಪಿಜಿ ದರ 60 ರೂ. ಏರಿಕೆ, ಹೊಸ ಬೆಲೆ ಜಾರಿ

• **ಹೊಸದಿಲ್ಲಿ:** ಇರಾನ್ ಯುದ್ಧದ ನಡುವೆ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ದೇಶಾದ್ಯಂತ 60 ರೂ. ಏರಿಕೆಯಾಗಿದ್ದು, ಶನಿವಾರವೇ ಹೊಸ ದರವನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. 14.2 ಕೆ.ಜಿ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ 60 ರೂ. ಹೆಚ್ಚಿಸಲಾಗಿದೆ. ಅದೇ ರೀತಿ 19 ಕೆ.ಜಿ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆ 115 ರೂ. ಹೆಚ್ಚಿಸಲಾಗಿದೆ.

• ಪುಟ ೧೦

ಮಾನವೀಯ ದೃಷ್ಟಿಯಿಂದ ಲವಣ್ ಲಂಗರಿಗೆ ಅವಕಾಶ

• ಪುಟ ೧೦

ಡೇರಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಖುಲಾಸೆ

• ಪುಟ ೧೦

ಭಾರತದ ವಿದೇಶಿ ಕರೆನ್ಸಿ ಸಂಪತ್ತು ಹೆಚ್ಚಳ

• ಪುಟ ೧೦

ಮುಂದಿನ ವರ್ಷಾಂತ್ಯಕ್ಕೆ ಏಡ್ಸ್ ನಿಯಂತ್ರಣ ಗುರಿ

• ಪುಟ ೧೦

ಇಸ್ರೇಲ್‌ಗೆ 12,000 ಬಾಂಬ್ ಮಾರಾಟಕ್ಕೆ ಅಮೆರಿಕ ಒಪ್ಪಿಗೆ

• ಪುಟ ೧೦

ಒಳ ಮೀಸಲಾತಿ ಕಾಯ್ದೆ ಅನೂರ್ಜಿತ: ಛಲವಾದಿ

• ಪುಟ ೨

ಕೇಂದ್ರ ಸರ್ಕಾರ ವಿದೇಶಾಂಗ ನೀತಿ ಉಲ್ಲಂಘನೆ

• ಪುಟ ೨

ಟೆಹ್ರಾನ್, ದುಬೈನಲ್ಲಿ ಹತ್ತಾರು ಸ್ಫೋಟ | ದಿನೇದಿನೆ ಉಲ್ಬಣ

ಹೆಚ್ಚಿದ ಯುದ್ಧೋನ್ಮಾದ

• **ವಾಷಿಂಗ್ಟನ್:** ಕಳೆದ 9 ದಿನಗಳಿಂದ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ದಿನೇದಿನೇ ಉಲ್ಬಣಗೊಳ್ಳುತ್ತಲೇ ಇದ್ದು, ಯುದ್ಧ ಅಂತ್ಯದ ಯಾವ ಲಕ್ಷಣವೂ ಕಾಣುತ್ತಿಲ್ಲ. ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿ ಶನಿವಾರ ಭಾರೀ ಸ್ಫೋಟಗಳು ಸಂಭವಿಸಿವೆ. ಟೆಹ್ರಾನ್‌ನ ಪ್ರಮುಖ ವಿಮಾನ ನಿಲ್ದಾಣವಾದ ಮೆಹ್ರಾಬಾದ್ ವಿಮಾನ ನಿಲ್ದಾಣದ ಮೇಲೂ ದಾಳಿಯಾಗಿದ್ದು, ಕೆಲವು ವಿಮಾನಗಳಿಗೆ ಹಾನಿಯಾಗಿದೆ. ಇದಕ್ಕೆ ಪ್ರತಿದಾಳಿಯೆಂಬಂತೆ ಇರಾನ್ ಕೂಡ ಇಸ್ರೇಲ್ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ಮುಂದುವರಿಸಿದೆ.



ದುಬೈ ಮೇಲೂ ದಾಳಿ: ಶನಿವಾರ ಬೆಳಿಗ್ಗೆ ದುಬೈ ಮೇಲೆ ದಾಳಿ ಮಾಡಿರುವ ಇರಾನ್, ವಿವಿಧೆಡೆ ಹಲವು ಸ್ಫೋಟಗಳನ್ನುಂಟುಮಾಡಿದೆ. ತನ್ನ ವಾಯುರಕ್ಷಣಾ ವ್ಯವಸ್ಥೆ ಸಕ್ರಿಯವಾಗಿ ದಾಳಿಗಳನ್ನು ಎದುರಿಸಿದೆ ಎಂದು ದುಬೈ ಸರಕಾರ ಹೇಳಿದೆ. ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ವಿಮಾನಗಳಿಗಾಗಿ ಕಾಯುತ್ತಿದ್ದು, ಎಚ್ಚರಿಕೆ ಸೈರನ್ ಮೊಳಗಿದ ವೇಳೆ ಇವರೆಲ್ಲ ರೈಲ್ವೆ ಸುರಂಗಗಳೊಳಗೆ ಆಶ್ರಯ ಪಡೆದರು.

ಇರಾನ್ ಮೇಲೆ ಮಾರಕ ದಾಳಿ: ಡೊನಾಲ್ಡ್ ಟ್ರಂಪ್ ಎಚ್ಚರಿಕೆ

ಇಸ್ರೇಲ್ ಮತ್ತು ಅಮೆರಿಕದೊಂದಿಗಿನ ತನ್ನ ಯುದ್ಧದ ವೇಳೆ ನೆರೆಯ ದೇಶಗಳ ಮೇಲೆ ದಾಳಿ ನಡೆಸಿರುವ ಬಗ್ಗೆ ಇದೀಗ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಕ್ಷಮೆಯಾಚಿಸಿದ ಬಳಿಕ, ಇರಾನ್ 'ಮಧ್ಯಪ್ರಾಚ್ಯದ ಸೋತ ಪಕ್ಷ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವ್ಯಂಗ್ಯವಾಡಿದ್ದಾರೆ. ಇರಾನ್ ವಿರುದ್ಧ ಅತ್ಯಂತ ಕಠಿಣ ಹೊಡೆತ ನೀಡುವುದಾಗಿಯೂ ಅವರು ಎಚ್ಚರಿಸಿದ್ದಾರೆ.ತನ್ನ 'ಟ್ರೂತ್ ಸೋಷಿಯಲ್ 'ಸಾಮಾಜಿಕ ಜಾಲ ತಾಣದಲ್ಲಿ ಮಾಡಿದ ಪೋಸ್ಟ್‌ನಲ್ಲಿ, ನರಕಕ್ಕೆ ತಳ್ಳಲ್ಪಟ್ಟಿರುವ ಇರಾನ್, ಇನ್ನು ಮುಂದೆ ನಿಮ್ಮ ಮೇಲೆ ದಾಳಿ ಮಾಡುವುದಿಲ್ಲ ಎಂಬುದಾಗಿ ನೆರೆಯ ಕೊಲ್ಲಿ ದೇಶಗಳಿಗೆ ಭರವಸೆ ನೀಡಿರುವ ಇರಾನ್ ಕ್ಷಮೆಯಾಚಿಸಿ ಕೊನೆಗೂ ಶರಣಾಗಿದೆ. ➡ಪುಟ ೨



ಇರಾನ್‌ಗೆ ಕಾದಿದೆ ಅತಿ ದೊಡ್ಡ ದಾಳಿ: ಯುಎಸ್

ಯುದ್ಧದಲ್ಲಿ ಅತಿದೊಡ್ಡ ಬಾಂಬ್ ದಾಳಿ ಇನ್ನಷ್ಟೇ ನಡೆಯಬೇಕಾಗಿದೆ ಎಂದು ಅಮೆರಿಕದ ವಿತ್ತ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ಟಿವಿ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ಈಗಾಗಲೇ ಇರಾನ್‌ನ ಸೇನಾ ಸಾಮರ್ಥ್ಯಗಳು, ನಾಯಕತ್ವ ಹಾಗೂ ಪರಮಾಣು ಕಾರ್ಯಕ್ರಮಗಳ ಮೇಲೆ ದಾಳಿ ನಡೆಸಿದ್ದು, ಇರಾನ್ ಜರ್ಜುರಿತಗೊಂಡಿದೆ. ➡ಪುಟ ೨

ಇರಾನ್‌ಗೆ ರಷ್ಯಾ ಮಾಹಿತಿ!

ಅಮೆರಿಕದ ಯುದ್ಧನೌಕೆಗಳು, ವಿಮಾನಗಳು ಮತ್ತು ಇತರ ಮಿಲಿಟರಿ ಆಸ್ತಿಗಳನ್ನು ಗುರಿಯಾಗಿಸಲು ಇರಾನ್‌ಗೆ ನೆರವಾಗಬಲ್ಲ ಗುಪ್ತಚರ ಮಾಹಿತಿಯನ್ನು ರಷ್ಯಾ ಒದಗಿಸಿದೆ ಎಂದು ಗುಪ್ತಚರ ವರದಿಗಳನ್ನು ಆಧರಿಸಿ ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

ಮಾಹಿತಿ ಹಂಚಿಕೆ ಆರೋಪ: ಅಮೆರಿಕದ ಮಿಲಿಟರಿ ಗುರಿಗಳನ್ನು ಗುರುತಿಸಲು ಇರಾನ್‌ಗೆ ಸಹಾಯ ಮಾಡುವ ಮಾಹಿತಿಯನ್ನು ಮಾಸ್ಕೋ ರವಾನಿಸಿದೆ ಎಂದು ಇಬ್ಬರು ಅಧಿಕಾರಿಗಳು ಹೇಳಿದ್ದಾರೆ. ಆದರೆ, ಇರಾನ್‌ನ ಮಿಲಿಟರಿ ಕ್ರಮಗಳನ್ನು ರಷ್ಯಾ ನಿರ್ದೇಶಿಸುತ್ತಿದೆ ಅಥವಾ ಈ ಮಾಹಿತಿಯನ್ನು ಹೇಗೆ ಬಳಸಬೇಕೆಂದು ಸೂಚನೆ ನೀಡುತ್ತಿದೆ ಎಂಬುದಕ್ಕೆ ಯಾವುದೇ ಪುರಾವೆಗಳು ಲಭ್ಯವಾಗಿಲ್ಲ, ಎನ್ನಲಾಗಿದೆ.ಮಾಹಿತಿ ಹಂಚಿಕೆ ಅಮೆರಿಕದ ಪ್ರಸ್ತುತ ಮಿಲಿಟರಿ ಕಾರ್ಯಾಚರಣೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ವೈಟ್ ಹೌಸ್ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಹೇಳಿದ್ದಾರೆ. ➡ಪುಟ ೨

16 ವಿಮಾನ ನಾಶ: ಹೇಡಿತನದ ಕೃತ್ಯ

ಟೆಹ್ರಾನ್‌ನ ಮೆಹ್ರಾಬಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಇಸ್ರೇಲಿ ದಾಳಿಗಳು ಗುರಿಯಾಗಿಸಿಕೊಂಡಿವೆ ಎಂದು ವರದಿಯಾದ ನಂತರ ಬಲದಿಂದ ಪ್ರತಿಕ್ರಿಯಿಸುವುದಾಗಿ ಇರಾನ್ ಎಚ್ಚರಿಸಿದೆ. ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಈ ದಾಳಿಯನ್ನು ಖಂಡಿಸಿದ್ದು, ನಾಗರಿಕ ವಿಮಾನಯಾನ ಸೌಲಭ್ಯಗಳನ್ನು ಗುರಿಯಾಗಿಸುವುದು ಸ್ವೀಕಾರಾರ್ಹವಲ್ಲ ಎಂದು ಹೇಳಿದ್ದಾರೆ. ನಮ್ಮ ವಿಮಾನ ನಿಲ್ದಾಣಗಳನ್ನು ಗುರಿಯಾಗಿಸುವುದು ಹೇಡಿತನದ ಕೃತ್ಯವಾಗಿದೆ. ನಾವು ಅದಕ್ಕೆ ಬಲವಾಗಿ ಪ್ರತಿಕ್ರಿಯಿಸುತ್ತೇವೆ ಎಂದು ಇರಾನಿನ ಮಾಧ್ಯಮಗಳು ವರದಿ ಮಾಡಿದ ಹೇಳಿಕೆಯಲ್ಲಿ ಅರಾಘ್ಚಿ ತಿಳಿಸಿದ್ದಾರೆ. ಮೆಹ್ರಾಬಾದ್ ವಿಮಾನ ನಿಲ್ದಾಣದಲ್ಲಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಕುಡ್ಸ್ ಫೋರ್ಸ್ ಸೇರಿದ 16 ವಿಮಾನಗಳನ್ನು ನಾಶಪಡಿಸಿವೆ ಎಂದು ಒಪ್ಪಿಕೊಂಡಿವೆ.

ಅಧಿಕಾರ ಬಿಡಿ ಎಂದರೆ ಬಿಡುತ್ತೇನೆ

ವರಿಷ್ಠರ ಮಾತಿನಂತೆ ನಡೆಯುವೆ: ಸಿಎಂ

• **ಮೈಸೂರು:** ಪಕ್ಷದ ಹೈಕಮಾಂಡ್ ಅಧಿಕಾರ ಬಿಡಿ ಎಂದು ಹೇಳಿದರೆ ಬಿಡುತ್ತೇನೆ. ಅಧಿಕಾರದಲ್ಲಿ ಮುಂದುವರಿಯಿರಿ ಎಂದರೆ ಮುಂದುವರಿಯುತ್ತೇನೆ. ಹಾಗಾಗಿ ನಾನು ಅಧಿಕಾರದಲ್ಲಿ ಮುಂದುವರಿಯಬೇಕೋ, ಬೇಡವೋ ಎಂಬುದರ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರು ತಾಲೂಕಿನ ವರುಣ ಕ್ಷೇತ್ರದ ಪಿಳ್ಳಾಹಳ್ಳಿ ಹೆಲಿಪ್ಯಾಡ್‌ನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಹಣಕಾಸು ಸಚಿವನಾಗಿಯೂ ಈಗ 17ನೇ ಬಜೆಟ್ ಮಂಡಿಸಿದ್ದೇನೆ. ಕರ್ನಾಟಕದಲ್ಲಿ ಹೆಚ್ಚು ಬಜೆಟ್ ಮಂಡಿಸಿರುವುದು ನಾನೇ. ಹೈಕಮಾಂಡ್ ಅವಕಾಶ ಕೊಟ್ಟರೆ ಇನ್ನು ಮುಂದೆಯೂ ಎರಡು ಬಜೆಟ್ ಮಂಡಿಸುತ್ತೇನೆ. ಹೈಕಮಾಂಡ್ ಸಿಎಂ ಸ್ಥಾನದ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ, ಅದಕ್ಕೆ ನಾನು ಬದ್ಧನಾಗಿದ್ದೇನೆ. ಹೈಕಮಾಂಡ್ ಮೇಲೆ ನನಗೆ ವಿಶ್ವಾಸವಿದೆ. ಅವರ ಮೇಲೆ ವಿಶ್ವಾಸ ಇರಲೇಬೇಕು ಎಂದರು.

ರೆಕಾರ್ಡ್ ಮುಖ್ಯವಲ್ಲ: ಬಜೆಟ್ ಮಂಡನೆ ಮೂಲಕ ದಾಖಲೆ ಮುರಿಯುವುದು ಮುಖ್ಯವಲ್ಲ. ಜನರು ಅವಕಾಶ ಕೊಟ್ಟರೆ ಮುಂದೆಯೂ ಬಜೆಟ್ ಮಂಡಿಸುತ್ತೇನೆ. ನಾನು ವಾಸ್ತವ ಬಿಟ್ಟು ಮಾತನಾಡುವುದಿಲ್ಲ, ಇಡೀ ರಾಜ್ಯದ ಜನರಿಗೆ ಆಸೆ ಇದೆ. ಯಾರು ಏನೇ ಹೇಳಿದರೂ ಕೊನೆಯ ದಾಗಿ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಸ್ಪಷ್ಟಪಡಿಸಿದರು.

ನಾನು ಒಂದು ವರ್ಗಕ್ಕೆ ಸೀಮಿತವಾಗಿಲ್ಲ: ಬಜೆಟ್ ಒಂದು ವರ್ಗಕ್ಕೆ ಸೀಮಿತ ಎಂದು ಬಿಜೆಪಿ ನಾಯಕರ ಟೀಕೆಗೆ ಉತ್ತರಿಸಿ, ಸಿದ್ದರಾಮಯ್ಯ, ಬಜೆಟ್ ಒಂದು ವರ್ಗಕ್ಕೆ ಸೀಮಿತವಾಗಿಲ್ಲ, ಸಾಮಾಜಿಕ ನ್ಯಾಯದಲ್ಲಿ ಬಜೆಟ್ ಮಂಡನೆ ಮಾಡಿದ್ದೇವೆ. ಬಜೆಟ್ ಇಡೀ ರಾಜ್ಯದ ಅಭಿವೃದ್ಧಿಯ ಬಜೆಟ್ ಆಗಿದೆ. ➡ಪುಟ ೨



ಸಾಲಕ್ಕೆ ಸಿಎಂ ಸಮರ್ಥನೆ


ಸಾಲ ಮಾಡಿ ಬಜೆಟ್ ಮಂಡಿಸಿದ್ದಾರೆ ಎಂಬ ಬಿಜೆಪಿ ಟೀಕೆಗೆ ಪ್ರತಿಕ್ರಿಯಿಸಿ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಎಷ್ಟು ಸಾಲ ಮಾಡಿದ್ದಾರೆ ಎಂಬುದು ಗೊತ್ತೇ? ಸಾಲ ಮಾಡದೆ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ನಮ್ಮ ಸಾಲ ಕೂಡ ಫೈನಾನ್ಸ್ ಮಿತಿಯಲ್ಲಿದೆ. ಸಾಲ ಯಾವಾಗಲೂ ಶೇ.25ರ ಒಳಗೆ ಇರಬೇಕು. ನಾವು ಶೇ.24ರಷ್ಟು ಸಾಲ ಮಾಡಿದ್ದೇವೆ ಎಂದು ಸಮರ್ಥಿಸಿಕೊಂಡರು. ಕೇಂದ್ರ ಸರ್ಕಾರ ಎಷ್ಟು ಸಾಲ ಮಾಡಿದೆ ಎಂಬುದು ವಿಪಕ್ಷ ನಾಯಕ ಆರ್. ಅಶೋಕ್ ಅವರಿಗೆ ಗೊತ್ತಾ? ಪ್ರಧಾನಿ ಮೋದಿ ಅವರು ಬಂದ ಮೇಲೆ 11 ವರ್ಷಗಳಲ್ಲಿ 165 ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ. ಶೇ.55.6ರಷ್ಟು ಸಾಲ ಮೋದಿ ಮಾಡಿದ್ದಾರೆ. ಆದರೆ ನಾವು ಆರ್ಥಿಕ ಶಿಸ್ತಿನ ಮಿತಿಯಲ್ಲಿ ಸಾಲ ಮಾಡಿ, ಅಭಿವೃದ್ಧಿಗೆ ಹಣ ಕೊಡುತ್ತಿದ್ದೇವೆ. ಆದರೆ ಬಿಜೆಪಿ ಅವರ ಮಿತಿ ಆರ್ಥಿಕ ಸ್ಥಿತಿಗಿಂತ ಹೆಚ್ಚಾಗಿದೆ. ನಾವು ಮಾಡಿರುವ ಸಾಲ ಆರ್ಥಿಕ ಮಿತಿ ಒಳಗಿದೆ ಎಂದು ಸಿಎಂ ಹೇಳಿದರು.

ಪಂಪ್ಡ್ ಸ್ಟೋರೇಜ್‌ಗೆ ಒಪ್ಪಿಗೆ ಹಿನ್ನೆಲೆ | ಪಿಐಎಲ್ ವಿಚಾರಣೆ

ಶರಾವತಿ: ಸರ್ಕಾರಕ್ಕೆ ಹೈ ನೋಟಿಸ್

• **ಬೆಂಗಳೂರು:** ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ 10 ಸಾವಿರ ಕೋಟಿ ರೂ.ವೆಚ್ಚದ ಶರಾವತಿ ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಯೋಜನೆಗೆ ರಾಜ್ಯ ವನ್ಯಜೀವಿ ಮಂಡಳಿ ನೀಡಿರುವ ಅನುಮೋದನೆ ಮತ್ತು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ನೀಡಿರುವ ತಾತ್ವಿಕ ಅನುಮೋದನೆಯ ಕಾನೂನು ಬದ್ಧತೆ ಪ್ರಶ್ನಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಸಾಗರದ ಅಖಿಲೇಶ್ ಚಿಪ್ಲಿ, ಉಡುಪಿಯ ಡಾ.ರವೀಂದ್ರನಾಥ ಶಾನಬಾಗ್ ಮತ್ತು ಶಿವಮೊಗ್ಗದ ಸಿ.ಬಿ. ಮನೋಹರ ಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಕೀಲೆ ಬಿ.ವಿ. ವಿದ್ಯುಲ್ಲತಾ ಅವರ ವಾದ ಆಲಿಸಿದ ಪೀಠವು, ಪ್ರತಿವಾದಿಗಳಾದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಕಾರ್ಯದರ್ಶಿ ಹಾಗೂ ರಾಜ್ಯ ಅರಣ್ಯ, ಪರಿಸರ ಮತ್ತು ಪರಿಸರ ವಿಜ್ಞಾನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.ಉದ್ದೇಶಿತ ಯೋಜನೆಯು ವನ್ಯಜೀವಿಗಳಿಗೆ ಸಂಪೂರ್ಣ ಹಾನಿ ಉಂಟು ಮಾಡಲಿದೆ. ➡ಪುಟ ೨



ಗೂಗಲ್, ಕೊಲಂಬೋ ಟೆಲಿಗ್ರಾಫ್, ಲಂಕಾ ನ್ಯೂಸ್‌ಗೆ ನೋಟಿಸ್

ಶ್ರೀಲಂಕಾ ಜಡ್ಜ್ ಅರ್ಜಿ ವಿಚಾರಣೆ

• **ಬೆಂಗಳೂರು:** ತಮ್ಮ ವಿರುದ್ಧ ಆನ್‌ಲೈನ್‌ನಲ್ಲಿ ಪ್ರಕಟವಾಗಿರುವ ಮಾನಹಾನಿಕರ ಲೇಖನಗಳನ್ನು ತೆರವುಗೊಳಿಸುವಂತೆ ನಿರ್ದೇಶಿಸಬೇಕು ಎಂದು ಕೋರಿ ಶ್ರೀಲಂಕಾ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆ, ಗೂಗಲ್ ಇಂಡಿಯಾ, ಗೂಗಲ್ ಇಂಕ್, ಕೊಲಂಬೋ ಟೆಲಿಗ್ರಾಫ್ ಹಾಗೂ ಲಂಕಾ ಇ-ನ್ಯೂಸ್‌ಗೆ ನೋಟಿಸ್ ಜಾರಿ ಮಾಡಿದೆ.

ಶ್ರೀಲಂಕಾ ಸುಪ್ರೀಂನಲ್ಲಿ ನ್ಯಾಯಮೂರ್ತಿ ಯಾಗಿರುವ ಎಎಚ್‌ಎಂಡಿ ನವಾಜ್ ಅವರು ಆನ್‌ಲೈನ್‌ನಲ್ಲಿ ಪ್ರಕಟವಾಗಿರುವ ಮಾನಹಾನಿ ಲೇಖನಗಳನ್ನು ತೆರವುಗೊಳಿಸುವಂತೆ ರಾಜ್ಯ ಹೈಕೋರ್ಟ್‌ಗೆ ಅರ್ಜಿ ಅಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಸಚಿನ್ ಶಂಕರ್ ಮಗದುಮ್ ಅವರಿದ್ದ ಪೀಠವು ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆ ಸೇರಿದಂತೆ ಗೂಗಲ್ ಇಂಡಿಯಾ, ಗೂಗಲ್ ಇಂಕ್, ಕೊಲಂಬೋ ಟೆಲಿಗ್ರಾಫ್ ಹಾಗೂ ಲಂಕಾ ಇ-ನ್ಯೂಸ್‌ಗೆ ನೋಟಿಸ್ ಜಾರಿ ಮಾಡಿ ವಿಚಾರಣೆಯನ್ನು ಮುಂದೂಡಿದೆ. ➡ಪುಟ ೨



ನೋಟಿಸ್ ನೀಡಿದರೂ ಸ್ಪಂದಿಸದ ಗೂಗಲ್

ಈಗಾಗಲೇ ಈ ಸಂಬಂಧ ಗೂಗಲ್ ಸಂಸ್ಥೆಗೆ ನೋಟಿಸ್ ನೀಡಿದ್ದರೂ, ಆಕ್ಷೇಪಾರ್ಹ ಹಾಗೂ ಅವಹೇಳನಕಾರಿ ಸುದ್ದಿಗಳನ್ನು ಆನ್‌ಲೈನ್‌ನಿಂದ ತೆಗೆದುಹಾಕಲಾಗಿಲ್ಲ ಎಂದು ನ್ಯಾ. ನವಾಜ್ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ಹೀಗಾಗಿ ನ್ಯಾಯಾಲಯವು ಮಧ್ಯಪ್ರವೇಶಿಸಿ ಅಂತಹ ಮಾನಹಾನಿಕರ ವಿಷಯಗಳನ್ನು ತಕ್ಷಣವೇ ತೆರವುಗೊಳಿಸಲು ಸಂಬಂಧಪಟ್ಟ ಸಂಸ್ಥೆಗಳಿಗೆ ನಿರ್ದೇಶನ ನೀಡಬೇಕೆಂದು ಅವರು ಕೋರಿದ್ದಾರೆ.

ನಿಶಾಂತ್ ಇಂದು ರಾಜಕೀಯಕ್ಕೆ



ಮುಖ್ಯಮಂತ್ರಿ ರಾಜೀನಾಮೆ ಬೆನ್ನಲ್ಲೇ ಮುನ್ನೆಲೆಗೆ ಬಂದ ಪುತ್ರ ನಿಶಾಂತ್

• **ಹೊಸದಿಲ್ಲಿ:** ರಾಜ್ಯ ಸಭೆಗೆ ನಾಮನಿರ್ದೇಶನಗೊಂಡ ನಿತೀಶ್ ಕುಮಾರ್ ಬಿಹಾರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಪುತ್ರ ನಿಶಾಂತ್ ಕುಮಾರ್ ಭಾನುವಾರ ಸಕ್ರಿಯ ರಾಜಕಾರಣ ಪ್ರವೇಶಿಸಲಿದ್ದಾರೆ. ಹೊಸ ತಲೆಮಾರಿನ ನಾಯಕ ನಿಶಾಂತ್ ರಾಜಕೀಯ ಪ್ರವೇಶದೊಂದಿಗೆ ಪಕ್ಷದಲ್ಲಿ ನಾಯಕತ್ವದ ಚರ್ಚೆಗಳು ನಡೆಯುತ್ತಿವೆ. ಪಕ್ಷದ ನಾಯಕರೆಲ್ಲರೂ ತಾಳ್ಮೆ ಮತ್ತು ಒಗ್ಗಟ್ಟಿನಿಂದ ಇರಬೇಕೆಂದು ಹಿರಿಯ ನಾಯಕರು ಮನವಿ ಮಾಡಿದ್ದಾರೆ. ಭಾನುವಾರ ನಿಶಾಂತ್ ರಾಜ್ಯ ರಾಜಕೀಯಕ್ಕೆ ಪದಾರ್ಪಣೆ ಮಾಡಲಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವ, ಜೆಡಿ(ಯು) ಮುಖಂಡ ಶ್ರವಣ್ ಕುಮಾರ್, ನಿತೀಶ್ ಅವರ ಪುತ್ರ ಎಂಬ ಕಾರಣಕ್ಕೆ ನಿಶಾಂತ್ ಅವರನ್ನು ಕರೆತರಲಾಗುತ್ತಿಲ್ಲ. ➡ಪುಟ ೨

ರಾಷ್ಟ್ರಪತಿ ಕಾರ್ಯಕ್ರಮಕ್ಕೆ ಅನುಮತಿ ನೀಡದೆ ಅಪಮಾನ

ನನ್ನೇಲೆ ದೀದಿಗೇಕೆ ಕೋಪ?

• **ಹೊಸದಿಲ್ಲಿ:** ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇದೇ ಮೊದಲ ಬಾರಿಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಸಾರ್ವಜನಿಕವಾಗಿ ಸಭ್ಯ ಭಾಷೆಯಲ್ಲೇ ಛೀಮಾರಿ ಹಾಕಿದ್ದಾರೆ. ನಾನೂ ಬಂಗಾಳದ ಮಗಳು, ಮಮತಾ ನನ್ನ ಕಿರಿಯ ಸಹೋದರಿ ಇದ್ದಂತೆ. ನನಗೇನೂ ಅವರ ಮೇಲೆ ದ್ವೇಷವಿಲ್ಲ. ಆದರೆ ನನಗೆ ಅಸಮಾಧಾನವಾಗಿದೆ. ನನ್ನ ಮೇಲೆ ಅವರಿಗೇಕೆ ಇಷ್ಟು ಕೋಪ ಎಂದು ಮುರ್ಮು ಪ್ರಶ್ನಿಸಿದ್ದಾರೆ.

ಶನಿವಾರ ಉತ್ತರ ಬಂಗಾಳದ ನಡೆದ 9ನೇ ಅಂತಾರಾಷ್ಟ್ರೀಯ ಆದಿವಾಸಿ (ಸಂತಾಲ್) ಸಮ್ಮೇಳನಕ್ಕೆ ಅನುಮತಿ ನೀಡದೆ ಸ್ಥಳ ಬದಲಾಯಿಸಿದ್ದಲ್ಲದೆ, ರಾಷ್ಟ್ರಪತಿಗೆ ಸೂಕ್ತ ಭದ್ರತೆಯನ್ನೂ ನೀಡದೆ ಮುರ್ಮು ಅವರನ್ನು ಮುಖ್ಯಮಂತ್ರಿ ಮಮತಾ ಅಪಮಾನಿಸಿದ್ದಾರೆ. ಘಟನೆಯನ್ನು ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಖಂಡಿಸಿದ್ದಾರೆ.

ಉತ್ತರ ಬಂಗಾಳದ ಸಿಲಿಗುರಿಯ ಬಿಧಾನ್‌ನಗರದಲ್ಲಿ 9ನೇ ಅಂತಾರಾಷ್ಟ್ರೀಯ ಆದಿವಾಸಿ (ಸಂತಾಲ್) ಸಮ್ಮೇಳನವನ್ನು ಆಯೋಜಿಸಲು ಮೊದಲೇ ನಿರ್ಧರಿಸಲಾಗಿದ್ದು, ರಾಷ್ಟ್ರಪತಿ ಮುರ್ಮು ಅವರನ್ನು ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಲಾಗಿತ್ತು. ➡ಪುಟ ೨



ರಾಷ್ಟ್ರಪತಿಗೆ ಅಪಮಾನ ನಾಚಿಕೆಗೇಡು: ಪ್ರಧಾನಿ

ರಾಷ್ಟ್ರಪತಿ ಮುರ್ಮು ಅವರನ್ನು ಅಪಮಾನಿಸಿದ್ದು ನಾಚಿಕೆಗೇಡು ಮತ್ತು ನಡೆಯಬಾರದ ಘಟನೆ. ಪ್ರಜಾಪ್ರಭುತ್ವ ಮತ್ತು ಆದಿವಾಸಿ ಸಮುದಾಯಗಳ ಸಬಲೀಕರಣವನ್ನು ನಂಬುವ ಪ್ರತಿಯೊಬ್ಬರಿಗೂ ನೋವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಖಂಡಿಸಿದ್ದಾರೆ.

ಜನರ ಬಳಕೆಗೆ ಡೀಮ್ಡ್ ಅರಣ್ಯ ಪ್ರದೇಶ: ಜಾರ್ಜ್

ವನ್ಯಜೀವಿ-ಮಾನವ ಸಂಘರ್ಷ ತಡೆಗೆ ಬಜೆಟ್‌ನಲ್ಲಿ ಹಣ ಮೀಸಲು

• **ಮೂಡಿಗೆರೆ:** ಕೊಡಗು-ಚಿಕ್ಕಮಗಳೂರು ಸೇರಿದಂತೆ ಪಶ್ಚಿಮಘಟ್ಟ ಪ್ರದೇಶದಲ್ಲಿ ವನ್ಯಜೀವಿ ಮಾನವ ಸಂಘರ್ಷ ತಡೆಗೆ ಈ ಬಾರಿ ಬಜೆಟ್‌ನಲ್ಲಿ ಸಾಕಷ್ಟು ಹಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮೀಸಲಿಟ್ಟಿದ್ದಾರೆ ಎಂದು ಇಂಧನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.ಅವರು ಶನಿವಾರ ಪಟ್ಟಣದ ಅಡ್ಯಂತಾಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನಗಳ ಹಕ್ಕುಪತ್ರ, ಕಂದಾಯ ಗ್ರಾಮಗಳ ಹಕ್ಕುಪತ್ರ ಹಾಗೂ ಇತರೇ ಸವಲತ್ತುಗಳ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ➡ಪುಟ ೨

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,85,000**(2,85,000) ಅಪರಂಜಿ ಚಿನ್ನ: **1,63,640**(1,61,130) ಆಭರಣ ಚಿನ್ನ: **1,50,000**(1,47,700) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

\$1 = ₹91.93

ಕಿರಣ್ ಕಮತೆ ರಾಜ್ಯಕ್ಕೆ ಪ್ರಥಮ

• **ಬೆಳಗಾವಿ:** ಚಿಕ್ಕೋಡಿ ತಾಲೂಕಿನ ಹತ್ತರವಾಟ ಗ್ರಾಮದ ಕಿರಣ್ ಸಣ್ಣಪ್ಪ ಕಮತೆ ಅವರು ಯುಪಿಎಸ್ಸಿ ಪರೀಕ್ಷೆಯಲ್ಲಿ ದೇಶಕ್ಕೆ 53ನೇ ರ್‍ಯಾಂಕ್ ಮತ್ತು ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆಯುವ ಮೂಲಕ ಮಹತ್ವದ ಸಾಧನೆ ಮೆರೆದಿದ್ದಾರೆ.



ಯುಪಿಎಸ್ಸಿ ಪರೀಕ್ಷೆಯಲ್ಲಿ ದೇಶಕ್ಕೆ 53ನೇ ರ್‍ಯಾಂಕ್

ಬೆಳಗಾವಿಯ ಗೋಗಟೆ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಿಇ ಸಿವಿಲ್ ಪದವಿ ಪಡೆದಿರುವ ಕಿರಣ್ ಕಮತೆ, ಸದ್ಯ ಬೆಂಗಳೂರಿನ ಲೋಕೋಪಯೋಗಿ ಇಲಾಖೆ ಮುಖ್ಯ ಕಚೇರಿಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಿರಣ್ ಅವರ ತಂದೆ ಡಾ. ಸಣ್ಣಪ್ಪ ಕಮತೆ ನಿಡಸೋಸಿಯ ಹೀರಾ ಶುಗರ್ಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಾಯಿ ರುಕ್ಮಿಣಿ ಗೃಹಿಣಿಯಾಗಿಯಾಗಿದ್ದಾರೆ. ಕಿರಣ್ ಅವರ ವಿದ್ಯಾಭ್ಯಾಸದ ಹಾದಿ ವೈವಿಧ್ಯಮಯವಾಗಿದೆ. ಅವರು 1 ಮತ್ತು 2ನೇ ತರಗತಿಯನ್ನು ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಅಂಬೆಜೋಗಾಯಿಯ ಮರಾಠಿ ಪ್ರಾಥಮಿಕ ಶಾಲೆಯಲ್ಲಿ ಮುಗಿಸಿದ್ದಾರೆ. 3ರಿಂದ 8ನೇ ತರಗತಿಯನ್ನು ಹುಬ್ಬಳ್ಳಿಯ ಎಂ.ಆರ್. ಸಾಖರೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಲಿತಿದ್ದಾರೆ.

9 ಮತ್ತು 10ನೇ ತರಗತಿಯನ್ನು ಗದಗದ ಕೆಎಲ್‌ಇ ಸಂಸ್ಥೆಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಿಪ್ಪಾಣಿಯ ಜಿ.ಐ.ಬಾಗೇವಾಡಿ ಕಾಲೇಜಿನಲ್ಲಿ ಪಿಯುಸಿ ಸೈನ್ಸ್ ಮುಗಿಸಿದ್ದಾರೆ. ಗೋಗಟೆ ಕಾಲೇಜಿನಲ್ಲಿ ಬಿಇ ಸಿವಿಲ್ ಪದವಿ ಪಡೆದ ಅವರು 2023ರಲ್ಲಿ ಪಿಡಬ್ಲ್ಯುಡಿಯಲ್ಲಿ ಸಹಾಯಕ ಎಂಜಿನಿಯರ್ ಆಗಿ ನೇಮಕಾತಿ ಹೊಂದಿದ್ದರು. ಇದು ನನ್ನ ಕೊನೆಯ ಅವಕಾಶವಾಗಿತ್ತು. ಕೆಲಸ ಮಾಡುತ್ತಲೇ ದಿನಕ್ಕೆ ಐದಾರು ಗಂಟೆ ಓದುತ್ತಿದ್ದೆ. ಏನಾದರೂ ಆಗಲಿ ಈ ಸಲ ಪಾಸ್ ಆಗಲೇಬೇಕು ಎಂದುಕೊಂಡು ಪರೀಕ್ಷೆ ಬರೆದಿದ್ದೆ. 250 ರ್‍ಯಾಂಕ್ ಒಳಗೆ ಬರುವ ನಿರೀಕ್ಷೆ ಇತ್ತು. ಆದರೆ 53ನೇ ರ್‍ಯಾಂಕ್ ಬಂದಿರುವುದು ಹಾಗೂ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಸಿಕ್ಕಿರುವುದಕ್ಕೆ ಬಹಳಷ್ಟು ಖುಷಿಯಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಹೋಳಿ ಆಚರಣೆ



ರಂಗ ಪಂಚಮಿ ಅಂಗವಾಗಿ ಹುಬ್ಬಳ್ಳಿ ನಗರದ ವಿವಿಧೆಡೆ ಶನಿವಾರ ಹೋಳಿ ಹಬ್ಬವನ್ನು ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು.

ವಿದೇಶಾಂಗ ನೀತಿ ಉಲ್ಲಂಘನೆ

• **ಕಲಬುರಗಿ:** ಕೇಂದ್ರ ಸರ್ಕಾರ ದೇಶದ ವಿದೇಶಾಂಗ ನೀತಿಯನ್ನು ಅಡವಿಟ್ಟಿದ್ದು, ಇದರ ಪರಿಣಾಮವಾಗಿ ಭಾರತದ ಗೌರವಕ್ಕೆ ಧಕ್ಕೆ ಉಂಟಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.



ನಗರದ ಐವನ್ ಶಾಹಿ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಮೆರಿಕದ ಉಪ ಕಾರ್ಯದರ್ಶಿ ದೆಹಲಿಗೆ ಬಂದು ಭಾರತವನ್ನು ಚೀನಾದಷ್ಟು ಬೆಳೆಯಲು ಬಿಡುವುದಿಲ್ಲ ಎಂದು ಹೇಳುತ್ತಾರೆ. ಮತ್ತೊಬ್ಬರು ರಷ್ಯಾದಿಂದ ತೈಲ ಖರೀದಿ ಮಾಡಲು ನಾವೇ ಸೂಚಿಸಿದ್ದೇವೆ ಎಂದು ಹೇಳುತ್ತಾರೆ. ಈ ಹೇಳಿಕೆಗಳಿಗೆ ಒಬ್ಬರೂ ಕೇಂದ್ರ ಸಚಿವರು ವಿರೋಧ ವ್ಯಕ್ತಪಡಿಸಿಲ್ಲ ಎಂದು ಪ್ರಶ್ನಿಸಿದರು. ಇದು ನೇರವಾಗಿ ದೇಶದ ವಿದೇಶಾಂಗ ನೀತಿಯನ್ನು ಅಡವಿಟ್ಟಂತಾಗಿದೆ. ಇದರ ಪರಿಣಾಮವಾಗಿ ಪ್ರಧಾನಿ ನರೇಂದ್ರ ಮೋದಿಯವರ ಹಾಗೂ ದೇಶದ ಗೌರವಕ್ಕೂ ಧಕ್ಕೆಯಾಗಿದೆ ಎಂದು ಅವರು ಟೀಕಿಸಿದರು.

ಆರ್‌ಎಸ್‌ಎಸ್ ನಾಯಕರು ಎಲ್ಲಿದ್ದಾರೆ ಎಂದು ಪ್ರಶ್ನಿಸಿದ ಅವರು, ಅಮೆರಿಕದಲ್ಲಿ ಬಹಿರಂಗವಾಗುತ್ತಿರುವ ಎಕ್‌ಸ್ಟೀನ್ ಫೈಲ್‌ಗಳ ಬಗ್ಗೆ ಕೂಡ ಉಲ್ಲೇಖಿಸಿದರು. ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದಲ್ಲಿ ಮೋದಿಯವರ ರಾಜಕೀಯವನ್ನು ನಾಶ ಮಾಡುತ್ತೇವೆ ಎಂದು ಹೇಳಿರುವುದಾಗಿ ಆರೋಪಿಸಿದರು. ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆ ವಿಚಾರಕ್ಕೂ ಪ್ರತಿಕ್ರಿಯಿಸಿದ ಅವರು, ಇದಕ್ಕೆ ಉತ್ತರವನ್ನು ಬಿಜೆಪಿ ನಾಯಕರು ನೀಡಬೇಕು ಎಂದು ಹೇಳಿದರು. ನಟ ವಿಜಯ್ ಮತ್ತು ನಟಿ ರಶ್ಮಿಕಾ ಮಂದಣ್ಣ ಅವರನ್ನು ಭೇಟಿ ಮಾಡಲು ಪ್ರಧಾನಿಗೆ ಸಮಯವಿದ್ದರೆ, ಜನರ ಸಮಸ್ಯೆಗಳನ್ನು ಪರಿಹರಿಸಲು ಸಮಯ ಯಾಕಿಲ್ಲ ಎಂದು ಪ್ರಶ್ನಿಸಿದರು. ಕ್ರಿಕೆಟ್ ವಿಚಾರ ಪ್ರಸ್ತಾಪಿಸಿದ ಅವರು, ಪ್ರಧಾನಮಂತ್ರಿ ಸೆಮಿಫೈನಲ್ ಪಂದ್ಯಕ್ಕೆ ಶುಭಾಶಯ ಕೋರಿದ್ದಾರೆ. ನಾಳೆ ಫೈನಲ್ ಪಂದ್ಯಕ್ಕೂ ಹೋಗಬಹುದು ಎಂದು ಹೇಳಿದರು. ಮೋದಿಯವರು ಪಂದ್ಯ ನೋಡಲು ಹೋಗದಿದ್ದರೆ ಭಾರತ ಗೆಲ್ಲಬಹುದು ಎಂದು ಹಾಸ್ಯಾತ್ಮಕವಾಗಿ ಹೇಳಿದ ಅವರು, ಇದನ್ನು ನಾನು ಸುಮ್ಮನೆ ಹೇಳುತ್ತಿಲ್ಲ, ಹಿಂದೆ ಉದಾಹರಣೆಗಳಿವೆ ಎಂದು ಹೇಳಿದರು.

ಕಿರುಸುದ್ದಿ

ಮಹಿಳಾ ಸಮಾವೇಶ ಇಂದು

• **ಬೆಂಗಳೂರು:** ಅಂತಾರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿ ಮಹಿಳಾ ಜಾಗೃತಿ ಮೂಡಿಸುವ ದೃಷ್ಟಿಯಿಂದ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ವತಿಯಿಂದ ಎಬಿಜಿಪಿ ಬೆಂಗಳೂರು ಮಹಿಳಾ ಸಮಾವೇಶವು ಮಾ.8ರಂದು ಬೆಳಗ್ಗೆ 10.30ಕ್ಕೆ ಶೇಷಾದ್ರಿಪುರಂನ ಯಾದವಸ್ಮೃತಿಯಲ್ಲಿ ಜರುಗಲಿದೆ. ಈ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಜಾಹೀರಾತುಗಳಲ್ಲಿ ಮಹಿಳೆಯರ ಪಾತ್ರ ಹಾಗೂ ಅವರ ಅಸ್ಮಿತೆ ಹಾಗೂ ಘನತೆ. ಅದರಿಂದ ಸಮಾಜದಲ್ಲಿ ಆಗುತ್ತಿರುವ ಪರಿಣಾಮಗಳು ಈ ವಿಚಾರವಾಗಿ ಗೋಷ್ಠಿ ನಡೆಯಲಿದ್ದು, ಚರ್ಚಾಗೋಷ್ಠಿಯು ಇರಲಿದೆ. ಹಿರಿಯ ಪತ್ರಕರ್ತೆ ಕೆ.ಎಚ್. ಸಾವಿತ್ರಿ ಸುರೇಶ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಎಬಿಜಿಪಿ ಕರ್ನಾಟಕ ಪ್ರಾಂತ ಅಧ್ಯಕ್ಷ ಡಾ. ನರಸಿಂಹ ನಕ್ಷತ್ರಿ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಕಾನೂನು ತಜ್ಞೆ ಮೀರಾ ಬಾಯಿ ಫಡಕೆ ಮತ್ತು ಎಬಿಜಿಪಿ ಕರ್ನಾಟಕ ಪ್ರಾಂತದ ಉಪಾಧ್ಯಕ್ಷ ಡಾ. ವಿಜಯ ವಿಷ್ಣು ಭಟ್ ವಕ್ತಾರರಾಗಿ ಪಾಲ್ಗೊಳ್ಳಲಿದ್ದಾರೆ.

ಸಿಲಿಂಡರ್ ದರ ಏರಿಕೆಗೆ ಸಿಎಂ ವಿರೋಧ

• **ಬೆಂಗಳೂರು:** ಗೃಹ ಬಳಕೆಯ ಸಿಲಿಂಡರ್ ಬೆಲೆ ಏರಿಕೆಯನ್ನು ವಿರೋಧಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದ್ದು, ಭಾರತದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಹಣದುಬ್ಬರ ಮತ್ತು ಬೆಲೆ ಏರಿಕೆಯಿಂದ ತತ್ತರಿಸಿಹೋಗಿರುವ ಸಮಯದಲ್ಲಿಯೇ ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಿಸಿರುವುದು ನೆಲಕ್ಕೆ ಬಿದ್ದವನಿಗೆ ಒದ್ದಂತಾಗಿದೆ ಎಂದಿದ್ದಾರೆ. ಎಕ್ಸ್ ಖಾತೆಯಲ್ಲಿ ಕೇಂದ್ರ ಸರ್ಕಾರದ ನೀತಿಯನ್ನು ಟೀಕಿಸಿರುವ ಅವರು, ಗೃಹ ಬಳಕೆಯ ಸಿಲಿಂಡರ್‌ಗಳ ಬೆಲೆಯನ್ನು ಸುಮಾರು 60 ರೂ. ರಷ್ಟು ಹೆಚ್ಚಿಸಿರುವುದರಿಂದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಜೀವನ ನಿರ್ವಹಣೆಯ ವೆಚ್ಚ ದುಬಾರಿಯಾಗಲಿದೆ ಎಂದು ತಿಳಿಸಿದ್ದಾರೆ. ಪಂಡಿತ್ ಜವಾಹರಲಾಲ್ ನೆಹರು ಅವರ ಪ್ರಕಾರ ವಿದೇಶಾಂಗ ನೀತಿಯು ಆರ್ಥಿಕ ನೀತಿಯ ಪರಿಣಾಮವಾಗಿದೆ. ನೆಹರೂ ಅವರು ಏಳೆಂಟು ದಶಕಗಳ ಹಿಂದೆಯೇ ನೀಡಿದ್ದ ಎಚ್ಚರಿಕೆ ಇಂದು ಅಕ್ಷರಶಃ ಸತ್ಯವಾಗಿದೆ. ರಾಜತಾಂತ್ರಿಕತೆ ಎನ್ನುವುದು ಕಾರ್ಯತಂತ್ರವಾಗದೆ, ಪ್ರದರ್ಶನದ ವಸ್ತುವಾಗಿ ಮಾರ್ಪಟ್ಟಾಗ, ಅದಕ್ಕೆ ಅನಿವಾರ್ಯವಾಗಿ ಬಡವರು ಮತ್ತು ಮಧ್ಯಮ ವರ್ಗದ ಜನರು ಬಲಿಯಾಗುತ್ತಾರೆ ಎಂದು ಹೇಳಿದ್ದಾರೆ.

ಅರಳಿ ಮರಕ್ಕೆ ಲಾರಿ ಡಿಕ್ಕಿ: ಇಬ್ಬರ ಸಾವು

• **ತುಮಕೂರು:** ತಾಲೂಕಿನ ನಾಗವಲ್ಲಿ ಸಮೀಪದ ರಂಗಾಪುರ ಬಳಿಯ ಸೋಪನಹಳ್ಳಿ ಗೇಟ್‌ನಲ್ಲಿ ಅರಳಿ ಮರಕ್ಕೆ ಲಾರಿ ಡಿಕ್ಕಿಯಾಗಿ ಇಬ್ಬರು ಮೃತಪಟ್ಟಿದ್ದಾರೆ. ಕೇರಳದ ರಷೀದ್ ಅಲಿ (25), ಅಮೀನ್ (23) ಮೃತರು. ಆಂಧ್ರಪ್ರದೇಶದಿಂದ ಕೇರಳಕ್ಕೆ ಲಾರಿಯಲ್ಲಿ ಕಡಪ ಕಲ್ಲು ಸಾಗಿಸುತ್ತಿದ್ದರು. ಚಾಲಕನ ನಿಯಂತ್ರಣದ ತಪ್ಪಿದ ಲಾರಿ ಮರಕ್ಕೆ ಡಿಕ್ಕಿ ಹೊಡೆದಿದೆ. ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಹೆಬ್ಬೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಪಘಾತದ ನಂತರ ಕುಣಿಗಲ್- ತುಮಕೂರು ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿತ್ತು. ಅಪಘಾತ ವಿಷಯ ತಿಳಿದು ಹೆಚ್ಚಿನ ಸಂಖ್ಯೆಯ ಜನರು ಜಮಾಯಿಸಿದ್ದರು. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಕುಣಿಗಲ್ ರಸ್ತೆಯಲ್ಲಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ. ಇದಕ್ಕೆ ಕಡಿವಾಣ ಹಾಕಬೇಕು. ಅದೃಷ್ಟವಶಾತ್ ಇವತ್ತು ಅರಳಿ ಮರದ ಕೆಳಗಡೆ ಯಾರೂ ಇರಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಹೆದ್ದಾರಿಯಲ್ಲಿ ಹಂಪ್ಸ್ ಅಳವಡಿಸಬೇಕು. ಅಪಘಾತ ನಿಯಂತ್ರಣಕ್ಕೆ ಅಗತ್ಯ ಕ್ರಮ ವಹಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಕರ್ನಾಟಕ ಜಾಗತಿಕ ಬ್ರ್ಯಾಂಡ್: ಸಚಿವ ಡಾ. ಜಿ.ಪರಮೇಶ್ವರ

ಸುರಕ್ಷಿತ ಡಿಜಿಟಲ್ ವ್ಯವಸ್ಥೆ

• **ಬೆಂಗಳೂರು:** ಕರ್ನಾಟಕವು ವಿಶ್ವದಲ್ಲೇ ಅತ್ಯಂತ ಸುರಕ್ಷಿತ ಡಿಜಿಟಲ್ ವ್ಯವಸ್ಥೆಯನ್ನು ಹೊಂದಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು.

ಸಿಐಡಿ ಹಾಗೂ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಸಿಐಡಿ ಇ ಕೋಡ್ 3ನೇ ವರ್ಷದ ಸೈಬರ್ ಅಪರಾಧ ತನಿಖಾ ಶೃಂಗಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ಕೇವಲ ಒಂದು ರಾಜ್ಯವಲ್ಲ, ಅದು ಜಾಗತಿಕ ಬ್ರ್ಯಾಂಡ್. ಜಗತ್ತು ಬೆಂಗಳೂರಿನತ್ತ ನೋಡಿದಾಗ, ನಾವೀನ್ಯತೆಯ ಭವಿಷ್ಯ ಕಾಣಿಸುತ್ತದೆ. ಉತ್ತಮ ಮತ್ತು ಅತ್ಯಂತ ಸುರಕ್ಷಿತ ಡಿಜಿಟಲ್ ವ್ಯವಸ್ಥೆಯನ್ನು ನಾವು ಹೊಂದಿದ್ದೇವೆ ಎಂದರು.

43 ಸಿಇಎನ್ ಪೊಲೀಸ್ ಠಾಣೆಗಳನ್ನು ಸ್ಥಾಪಿನೆ: ಸೈಬರ್ ದಾಳಿಗಳನ್ನು ತನಿಖೆ ಮಾಡಲು ಮತ್ತು ಡಿಜಿಟಲ್ ಪುರಾವೆಗಳನ್ನು ಸಂಗ್ರಹಿಸಲು ಅಗತ್ಯವಾದ ಕೌಶಲ್ಯ, ತರಬೇತಿ ಮತ್ತು ತಂತ್ರಜ್ಞಾನದೊಂದಿಗೆ ವಿಶೇಷ ಸೈಬರ್ ಅಪರಾಧ ಘಟಕಗಳನ್ನು ಸ್ಥಾಪಿಸುವ ಮೂಲಕ ರಾಜ್ಯ ಸರ್ಕಾರವು ಸೈಬರ್ ಅಪರಾಧಗಳನ್ನು ಮಟ್ಟಹಾಕಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ. ಕರ್ನಾಟಕದ ಎಲ್ಲ ಜಿಲ್ಲೆಗಳು ಮತ್ತು ಪ್ರಮುಖ ನಗರಗಳಲ್ಲಿ ಒಟ್ಟು 43 ಸಿಇಎನ್ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿದೆ. ನಮ್ಮ ನಾಗರಿಕರಿಗೆ ಸೈಬರ್ ಸುರಕ್ಷತೆ ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ಸೈಬರ್ ಅಪರಾಧಗಳ ಪತ್ತೆ ಶೇ.15 ರಷ್ಟಿದೆ: ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ಮಾತನಾಡಿ, ಡಿಜಿಟಲ್ ಸುರಕ್ಷತೆ ಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದ್ದರೂ, ಸೈಬರ್ ಅಪರಾಧಗಳ ಪತ್ತೆ ಹಚ್ಚುವ ಪ್ರಮಾಣವು ಕೇವಲ ಶೇ.10-15 ರಷ್ಟಿದೆ. ತಂತ್ರಜ್ಞಾನವು ಕೇವಲ ಉನ್ನತ ಮಟ್ಟದ ಕಚೇರಿಗಳಿಗೆ ಸೀಮಿತವಾಗದೆ, ಜನಸಾಮಾನ್ಯರು ನೇರವಾಗಿ ಸಂಪರ್ಕಿಸುವ ಪೊಲೀಸ್ ಠಾಣೆಗಳಿಗೆ ವಿಸ್ತರಿಸಿದಾಗ ಮಾತ್ರ ಸೈಬರ್ ಸವಾಲುಗಳನ್ನು ಎದುರಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ರಾಜ್ಯ ಪೊಲೀಸ್ ಮಹಾನಿರ್ದೇಶಕರಾದ ಡಾ. ಎಂ.ಎ.ಸಲೀಂ, ಸೈಬರ್ ಕಮಾಂಡ್ ಡಿಜಿಪಿ ಪ್ರಣವ್ ಮೊಹಾಂತಿ, ಇನ್ಫೋಸಿಸ್ ಫೌಂಡೇಶನ್ ಟ್ರಸ್ಟಿ ಸುನೀಲ್ ಕುಮಾರ್ ಧಾರೇಶ್ವರ್, ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾ ಸಿಇಒ ವಿನಾಯಕ ಗೋಡ್ಸೆ, ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.



> ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರವು ರಾಜ್ಯದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಹಾಗೂ ವಿವಿಧ ರಾಜ್ಯ ಮತ್ತು ಕೇಂದ್ರ ಸಂಸ್ಥೆಗಳ ಸದಸ್ಯರು ಸೇರಿದಂತೆ 62 ಸಾವಿರಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಿದೆ.
> ■ ಡಾ. ಜಿ.ಪರಮೇಶ್ವರ, ಸಚಿವ

ಸೈಬರ್ ಕೈಂನಿಂದ 2031ರ ವೇಳೆಗೆ 12.2 ಟ್ರಿಲಿಯನ್ ನಷ್ಟ

ಸೈಬರ್ ಕಮಾಂಡ್‌ನ ಡಿಜಿಪಿ ಡಾ.ಪ್ರಣವ್ ಮೊಹಂತಿ ಮಾತನಾಡಿ, ಜಾಗತಿಕ ಮಟ್ಟದಲ್ಲಿ ಸೈಬರ್ ಅಪರಾಧಗಳಿಂದ ಉಂಟಾಗುವ ಆರ್ಥಿಕ ನಷ್ಟವು 2031ರ ವೇಳೆಗೆ ಜಗತ್ತಿನಾದ್ಯಂತ ಸುಮಾರು 12.2 ಟ್ರಿಲಿಯನ್ ನಷ್ಟು ಮೊತ್ತದ ಹಾನಿಯಾಗುವ ಸಂಭವವಿದೆ. ಇದು ಭಾರತದ ಒಟ್ಟು ಆರ್ಥಿಕತೆಯ ಮೂರು ಪಟ್ಟು ಹೆಚ್ಚು ಎಂಬುದು ಆತಂಕಕಾರಿ ಸಂಗತಿ. ಇತ್ತೀಚಿನ ದಿನಗಳಲ್ಲಿ ಪ್ರತಿ ಸೆಕೆಂಡಿಗೆ ಸುಮಾರು 3,41,000 ಮೊತ್ತದ ಹಣ ಸೈಬರ್ ದಾಳಿಗಳಿಂದಾಗಿ ಲೂಟಿಯಾಗುತ್ತಿದೆ. ಆಧುನಿಕ ಡಿಜಿಟಲ್ ಯುಗದಲ್ಲಿ ಸೈಬರ್ ಅಪರಾಧಗಳು ಕೇವಲ ಕಂಪ್ಯೂಟರ್ ಸಿಸ್ಟಮ್‌ಗಳನ್ನು ಹ್ಯಾಕ್ ಮಾಡುವುದಕ್ಕೆ ಸೀಮಿತವಾಗಿಲ್ಲ. ಬದಲಾಗಿ ವಂಚಕರು ಈಗ ಮನುಷ್ಯನ ಮನಸ್ಸನ್ನೇ ಹ್ಯಾಕ್ ಮಾಡುವ ಸೋಷಿಯಲ್ ಇಂಜಿನಿಯರಿಂಗ್ ತಂತ್ರಕ್ಕೆ ಮೊರೆ ಹೋಗುತ್ತಿದ್ದಾರೆ ಎಂದರು.

ಒಳ ಮೀಸಲಾತಿ ಕಾಯ್ದೆ ಅನೂರ್ಜಿತ: ಛಲವಾದಿ

• **ಬೆಂಗಳೂರು:** ಒಳ ಮೀಸಲಾತಿ ಸಂಬಂಧಿತ ಕಾಯ್ದೆಗೆ ಕೋರ್ಟ್ ಒಪ್ಪಿಗೆ ಇಲ್ಲದ ಕಾರಣ ರಾಜ್ಯಪಾಲರಿಂದ ಅಂಕಿತ ಪಡೆಯಬಾರದಿತ್ತು ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆಕ್ಷೇಪಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿದ ಅವರು, ಒಳ ಮೀಸಲಾತಿ ಶೇ. 15ರಿಂದ 17ಕ್ಕೆ ಏರಿಸಲಾಗಿತ್ತು. ನ್ಯಾ.ನಾಗಮೋಹನ್ ದಾಸ್ ಅವರ ವರದಿಯನ್ನೂ ಪಡೆದರು. ಅದರ ಪ್ರಕಾರವೇ 6, 6, 5 ಎಂದು ಹಂಚಿಕೆ ಮಾಡಿದ್ದರು. ಕಾಯ್ದೆ ಅನುಮೋದಿಸಿ ರಾಜ್ಯಪಾಲರಿಂದ ಅಂಕಿತವನ್ನೂ ಪಡೆದಿದ್ದರು. ನೀವ್ಯಾಕೆ ರಾಜ್ಯಪಾಲರ ಅಂಕಿತ ತೆಗೆದುಕೊಂಡಿರಿ? ನಿಮಗೆ ಪ್ರಜ್ಞೆ, ಬುದ್ಧಿ ಇಲ್ಲವೇ? ಅಂಕಿತ ಪಡೆದ ಮೇಲೆ ಅದನ್ನೇ ಜಾರಿಗೊಳಿಸಬೇಕಿತ್ತು. ಶೇ.15ರ ಮೇಲೆ ಹಂಚಿಕೆ ಮಾಡುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ್ದೀರಿ. ಹಾಗಾಗಿ, ಈ ಕಾಯ್ದೆ ಅನೂರ್ಜಿತ ಎಂದರು. ನೀವು ಯಾವ ರೀತಿ 56 ಸಾವಿರ ಹುದ್ದೆಗಳನ್ನು ತುಂಬುತ್ತೀರಿ? ಎಸ್‌ಸಿ, ಎಸ್‌ಟಿಗಳ ಪಾಲು ಏನು? ಧಾರವಾಡ ವಿವಿ, ಬಿಡಿಎ, ಸಾರಿಗೆ ಇಲಾಖೆಯಲ್ಲಿ ಎ, ಬಿ, ಸಿ ಪ್ರವರ್ಗಗಳನ್ನು ಯಾಕೆ ಪ್ರಕಟಿಸಿದ್ದೀರಿ? ಗೊಂದಲ ಯಾಕೆ ಸೃಷ್ಟಿಸಿದ್ದೀರಿ? ಎಂದು ಪ್ರಶ್ನಿಸಿದ ಅವರು, ಎಲ್ಲ ಹುದ್ದೆಗಳೂ ಪ್ರವರ್ಗ ಎ ಎಂದು ಬಂದಿವೆ. ಈಗ ಜಾತಿ ಸಂಘರ್ಷಕ್ಕೆ ಸಿದ್ದರಾಮಯ್ಯ ಅವರು ಕುಮ್ಮಕ್ಕು ಕೊಡುತ್ತಿದ್ದಾರೆ ಎಂದು ಟೀಕಿಸಿದರು.

2025-26ರಲ್ಲಿ 42,017 ಕೋಟಿ ರೂ., ಈ ಬಾರಿ 44,632 ಕೋಟಿ ರೂ. ಇಟ್ಟಿದ್ದಾಗಿ ಘೋಷಿಸಿದ್ದಾರೆ. 4 ವರ್ಷಗಳಲ್ಲಿ 1,56,701 ಕೋಟಿ ರೂ. ಕೊಟ್ಟ ಘೋಷಣೆ ಮಾಡಿದ್ದಾರೆ. ಆದರೆ, ಪೈಕಿ ಎಸ್‌ಸಿ-ಎಸ್‌ಟಿ ಕಲ್ಯಾಣ ಕಾರ್ಯಕ್ರಮಗಳಿಗೆ 25,291 ಕೋಟಿ ರೂ. ಮಾತ್ರ ಉಳಿದಿದೆ ಎಂದು ವಿವರಿಸಿದರು.

ಪರಿಶಿಷ್ಟ ವರ್ಗಗಳಿಗೆ ದೋಖಾ

ರಾಜ್ಯ ಸರ್ಕಾರದ 2026-27ರ ಆಯವ್ಯಯ ಪತ್ರವನ್ನು ಶುಕ್ರವಾರ ಮುಖ್ಯಮಂತ್ರಿ ಮತ್ತು ಹಣಕಾಸು ಸಚಿವ ಸಿದ್ದರಾಮಯ್ಯ ಮಂಡಿಸಿದ್ದಾರೆ. ರಾಜ್ಯ ಸರ್ಕಾರವು ಉಚಿತ, ಖಚಿತ, ನಿಶ್ಚಿತ ಎಂಬ ಘೋಷವಾಕ್ಯದಡಿ ಅಧಿಕಾರಕ್ಕೆ ಬಂದಿತ್ತು. ಪರಿಶಿಷ್ಟ ಜಾತಿ-ವರ್ಗಗಳಿಗೆ ವಿಶೇಷಗಳಿವೆ. ಅವರಿಗೆ ಘೋಷಣೆಗಳು ಉಚಿತ, ದೋಖಾ ಖಚಿತ, ನಂಬಿದವರ ಸರ್ವನಾಶ ನಿಶ್ಚಿತ ಎಂದು ವಿಶ್ಲೇಷಿಸಿದರು.

ಎಆರ್‌ಎಐ ಕೇಂದ್ರಕ್ಕೆ ಜಾಗ: ಎಚ್‌ಡಿಕೆ ಅಭಿನಂದನೆ

• **ಮಂಡ್ಯ:** ಮಂಡ್ಯದಲ್ಲಿ ಆಟೋಮೋಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ಎಆರ್‌ಎಐ) ಸಂಶೋಧನೆ ಮತ್ತು ಪರೀಕ್ಷಾ ಕೇಂದ್ರ ತೆರೆಯಲು 100 ಎಕರೆ ಭೂಮಿಯನ್ನು ನೀಡುವುದಾಗಿ ರಾಜ್ಯ ಸರ್ಕಾರ ಬಜೆಟ್‌ನಲ್ಲಿಯೇ ಘೋಷಣೆ ಮಾಡಿರು ವುದು ಸ್ವಾಗತಾರ್ಹ. ಇದಕ್ಕಾಗಿ ಸರ್ಕಾರ ಮತ್ತು ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಡ್ಯದಲ್ಲಿ ಕೈಗಾರಿಕೆಗೆ ಅಭಿವೃದ್ಧಿಗೆ ಪೂರಕ ವ್ಯವಸ್ಥೆಯನ್ನು ಸೃಷ್ಟಿ ಮಾಡಬೇಕು. ಅದಕ್ಕಾಗಿ ಎಲ್ಲರೂ ಶ್ರಮಿಸಬೇಕು. ಎಆರ್‌ಎಐ ಕೇಂದ್ರ ಸ್ಥಾಪನೆಗೆ ಮೊದಲ ಹಂತದಲ್ಲಿ ಕೇಂದ್ರ ಸರ್ಕಾರವು 500 ಕೋಟಿ ವೆಚ್ಚ ಮಾಡುತ್ತಿದೆ. ನಂತರ ಇನ್ನೂ 500 ಕೋಟಿಗಳನ್ನು ಹೂಡಿಕೆ ಮಾಡಲಾಗುವುದು. ಆದಷ್ಟು ಬೇಗ ನನ್ನ ಸಚಿವಾಲಯದ ಅಧಿಕಾರಿಗಳು, ತಾಂತ್ರಿಕ ನಿಪುಣರು ಆಗಮಿಸಿ ಸ್ಥಳ ಪರಿಶೀಲನೆ ನಡೆಸುವರು. ಭೂಮಿಯನ್ನು ರಾಜ್ಯ ಸರ್ಕಾರ ಎಲ್ಲಿ ಕೊಡಲಿದೆ ಎಂಬುದನ್ನು ಎದುರು ನೋಡುತ್ತಿದ್ದೇವೆ. ಈಗಾಗಲೇ ಸರ್ಕಾರ ಗುರುತಿಸಿರುವ ಭೂಮಿ ಯೋಜನೆಗೆ ಸೂಕ್ತವೋ ಅಲ್ಲವೋ ಎಂದು ಪರಿಶೀಲನೆ ನಡೆಸುವರು ಎಂದರು.

ಈಗಾಗಲೇ ರಾಜ್ಯದಲ್ಲಿ ಎಲೆಕ್ಟ್ರಿಕ್ ವಾಹನ ಕ್ಷೇತ್ರಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಎಫ್‌ಕೆಸಿಸಿಐ ಪದಾಧಿಕಾರಿಗಳು ಸೇರಿ 50ಕ್ಕೂ ಹೆಚ್ಚು ಕೈಗಾರಿಕೋದ್ಯಮಿಗಳ ಸಭೆ ನಡೆಸಿದ್ದೇನೆ. ರಾಜ್ಯಕ್ಕೆ ಒಳ್ಳೆಯದಾಗಬೇಕು ಎನ್ನುವ ಉದ್ದೇಶದಿಂದ ನಾನು ಕೆಲಸ ಮಾಡುತ್ತಿದ್ದೇನೆ. ಯಾರನ್ನೋ ಮೆಚ್ಚಿಸಲು ಕೆಲಸ ಮಾಡುತ್ತಿಲ್ಲ. ಜನರ ಋಣ ತೀರಿಸಲು ಕೆಲಸ ಮಾಡುತ್ತಿದ್ದೇನೆ ಎಂದು ಅವರು ಹೇಳಿದರು.



ದಾಖಲೆ ಬಜೆಟ್ಟಿನ ದಾಖಲೆ ಹೊರೆ ಜನರ ಮೇಲೆ ಬೀಳಲಿದೆ

ಸಿದ್ದರಾಮಯ್ಯ ಅವರು ದಾಖಲೆ 17ನೇ ಬಜೆಟ್ ಮಂಡಿಸಿದ್ದಾರೆ ಸರಿ. ಹಾಗೆಯೇ ಜನರ ಮೇಲೆಯೂ ದಾಖಲೆಯ ಸಾಲದ ಹೊರೆ ಹೊರಿಸಿದ್ದಾರೆ. ಈ ದಾಖಲೆ ಬಜೆಟ್‌ನ ಹೊಡೆತ ಜನರ ಮೇಲೆ ಹೇಗೆ ಬೀಳುತ್ತೆ ಅಂತ ನೋಡಬೇಕು. ಆರ್ಥಿಕ ತಜ್ಞರು ಸಹ ಈ ಬಗ್ಗೆ ಹೇಳಿದ್ದಾರೆ. ಈ ಬಜೆಟ್‌ನ ಅಂಕಿ-ಅಂಶದಿಂದ ಸಾಕಷ್ಟು ಸಮಸ್ಯೆ ಆಗುತ್ತೆ ಎಂದು ಎಚ್ಚರಿಕೆ ನೀಡಿದ್ದಾರೆ. ರಾಜ್ಯದ ಸಾಲದ ಪ್ರಮಾಣ ವಿತ್ತೀಯ ಹೊಣೆಗಾರಿಕೆಯನ್ನು ಮೀರಿದೆ. ಮನಸೋ ಇಚ್ಛೆ ಸಾಲ ಮಾಡಿದ್ದಾರೆ. ಇದರ ಪರಿಣಾಮ ಮುಂದಿನ ದಿನಗಳಲ್ಲಿ ಗೊತ್ತಾಗುತ್ತೆ ಎಂದು ಸಚಿವರು ಕಳವಳ ವ್ಯಕ್ತಪಡಿಸಿದರು.

ಆ ವ್ಯಕ್ತಿ ಜತೆ ನನ್ನ ಹೋಲಿಕೆ ಮಾಡಬೇಡಿ

ಮದ್ದೂರು ಕ್ಷೇತ್ರದ ಶಾಸಕ ಕದಲೂರು ಉದಯ್ ಅವರು ಟೀಕೆ ಮಾಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ಉತ್ತರಿಸಿದ ಎಚ್.ಡಿ.ಕುಮಾರಸ್ವಾಮಿ ಅವರು, ಅವರ ಬಗ್ಗೆ ನಾನು ಚರ್ಚೆ ಮಾಡೋ ಅವಶ್ಯಕತೆ ಇಲ್ಲ. ಆ ವ್ಯಕ್ತಿ ಜತೆ ನನ್ನ ಯಾಕೆ ಹೋಲಿಕೆ ಮಾಡ್ತೀರಾ. ನಾನು ಶ್ರೀಲಂಕಾಗೆ ಹೋಗಿ ಜಾಮೀನು ಪಡೆಯುವವರೆಗೆ ಕೂತಿರಲಿಲ್ಲ ಎಂದು ಛೇಡಿಸಿದರು.

ಬಜೆಟ್ ಕುರಿತು ನಾಳೆ ಶಾಸಕರಿಗೆ ಕಾರ್ಯಾಗಾರ: ಸ್ಪೀಕರ್ ಖಾದರ್

• **ಮಂಗಳೂರು:** ರಾಜ್ಯ ವಿಧಾನ ಮಂಡಲದ ಬಜೆಟ್ ಅಧಿವೇಶನ ಆರಂಭವಾಗಲಿದ್ದು, ಈ ಹಿನ್ನೆಲೆಯಲ್ಲಿ ಮಾ. 9ರಂದು ಶಾಸಕರಿಗಾಗಿ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್ ತಿಳಿಸಿದ್ದಾರೆ.




ಮಂಗಳೂರಿನಲ್ಲಿ ಶುಕ್ರವಾರ ಸುದ್ದಿಗಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿವೇಶನದಲ್ಲಿ ಮಂಡಿಸಲಾದ ಬಜೆಟ್ ಕುರಿತು ಮೂರು ವಾರಗಳ ಕಾಲ ಸುದೀರ್ಘ ಚರ್ಚೆಗೆ ಅವಕಾಶ ಇದೆ. ಇದಕ್ಕೆ ಪೂರ್ವಭಾವಿಯಾಗಿ ಬಜೆಟ್ ಕುರಿತು ಸಂಪೂರ್ಣ ಮಾಹಿತಿ ನೀಡಲು ಶಾಸಕರಿಗೆ ಈ ಕಾರ್ಯಾಗಾರವನ್ನು ಬೆಂಗಳೂರಿನ ಹೋಟೆಲ್ ಲಲಿತ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದರು. 17 ಬಾರಿ ಬಜೆಟ್ ಮಂಡಿಸಿದ ಅನುಭವ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಾಗಾರ ನಡೆಸಿಕೊಡಲಿದ್ದಾರೆ. ಹಿರಿಯ ಅಕಾರಿಗಳು ಕೂಡ ಭಾಗವಹಿಸಲಿದ್ದಾರೆ. ಬಜೆಟ್ ಎಂದರೇನು? ಅನುದಾನದ ಹಂಚಿಕೆ ಹೇಗೆ? ಅನುದಾನದ ಬಳಕೆ ಹೇಗೆ ಇತ್ಯಾದಿ ವಿಷಯಗಳ ಮೇಲೆ ಈ ಕಾರ್ಯಾಗಾರ ಬೆಳಕು ಚೆಲ್ಲಲಿದೆ. ಆದರೆ ಈ ಬಾರಿ ಮಂಡಿಸಿದ ಬಜೆಟ್‌ಗೂ ಈ ಕಾರ್ಯಾಗಾರಕ್ಕೂ ಯಾವುದೇ ಸಂಬಂಧ ವಿಲ್ಲ ಎಂದವರು ಸ್ಪಷ್ಟಪಡಿಸಿದರು. ಈ ಬಾರಿಯ ಬಜೆಟ್ ಸಾಲ ಮಾಡಿ ಮಂಡಿಸಿದ ಬಜೆಟ್ ಎಂಬ ಆರೋಪ, ಟೀಕೆಗಳು ಕೇಳಿಬರುತ್ತಿವೆ. ಆರೋಪಗಳು ಸಹಜ, ಕೇಂದ್ರದಲ್ಲೂ ಬಜೆಟ್ ಬಗ್ಗೆ ಟೀಕೆ ಆಗುತ್ತೆ. ಹಾಗೆಯೇ ರಾಜ್ಯದಲ್ಲೂ ಸಹಜ. ಪ್ರತಿಪಕ್ಷದ ಸದಸ್ಯರು ಅವರ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಅವರಿಗೆ ಅವರ ಅಭಿಪ್ರಾಯ ತಿಳಿಸುವ ಅವಕಾಶ ಇದೆ.ಎಂದರು.

ಕೇಂದ್ರದ ಜತೆ ಕೈಜೋಡಿಸಿ: ಸೋಮಣ್ಣ

• **ಬೆಂಗಳೂರು:** ರಾಜ್ಯ ಕಾಂಗ್ರೆಸ್ ಸರ್ಕಾರ ಅಹಂಕಾರ ಬಿಟ್ಟು ಕೇಂದ್ರ ಸರ್ಕಾರದ ಜೊತೆ ಕೈಜೋಡಿಸಿ ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಿವಿಮಾತು ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಪ್ರಧಾನಿ ನರೇಂದ್ರಮೋದಿ ಅವರ ಪಾರದರ್ಶಕ ಆಡಳಿತವನ್ನು ನೋಡಿ ಕಾಂಗ್ರೆಸ್ ಸರ್ಕಾರ ಕಲಿಯಬೇಕು. ಸಾಲದ ಪ್ರಮಾಣ ಏರಿಸುವ ಮೂಲಕ ರಾಜ್ಯವನ್ನು ಮಾರಾಟಕ್ಕೆ ಇಟ್ಟಿದ್ದಾರೆ.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಇಂತಹ ಬಜೆಟ್ ನಿರೀಕ್ಷೆ ಮಾಡಿರಲಿಲ್ಲ ಎಂದರು. ನಾಲ್ಕು ಸಾವಿರ ಕನ್ನಡ ಶಾಲೆಗಳನ್ನು ಮುಚ್ಚಿಸಿ ಅಲ್ಪಸಂಖ್ಯಾತ ವರ್ಗದವರಿಗೆ ನಾಲ್ಕು ಸಾವಿರ ಕೋಟಿ ರೂ. ಅನುದಾನ ನೀಡಿದ್ದಾರೆ ಎಂದರು.




ಆಚಾರ್ಯ ಮಧ್ವರ ಸನ್ನಿಧಿ, ಕಾದಂಬರಿ
ಲೇ: ಡಾ.ಸುರೇಶ ಪಾಟೀಲ
ಪ್ರ: ಐಸಿರಿ ಪ್ರಕಾಶನ, ಬೆಂಗಳೂರು
ಮೊದಲ ಮುದ್ರಣ: 2025
ಪುಟ: 212 ರೂ. 250
ಸಂಪರ್ಕ: 9448700315



ಶ್ರೇಷ್ಠ ಜೀವನಕ್ಕಾಗಿ 10 ಆದರ್ಶಗಳು
ಲೇ: ಡಾ. ರಾಜನ್ ದೇಶಪಾಂಡೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಮೊದಲ ಮುದ್ರಣ: 2026
ಪುಟ: 144 ರೂ. 195
ಸಂಪರ್ಕ: (0836)-4252498 / 9448110034



ಹುಡುಕಾಟ
ಲೇ: ವೀಣಾ ಬನ್ನಂಜೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಮೊದಲ ಮುದ್ರಣ: 2017
ಪುಟ: 200 ರೂ. 250
ಸಂಪರ್ಕ: (0836)-4252498 / 9448110034



ಜ್ಞಾನ ದೇಗುಲ ನಮ್ಮೂರ ಸರ್ಕಾರಿ ಶಾಲೆ, ನಾಟಕ
ಲೇ: ಸಿದ್ದೇಶ್ವರ ನನಸುಮನೆ
ಪ್ರ: ಜನಪದರು ಸಾಂಸ್ಕೃತಿಕ ವೇದಿಕೆ (ರಿ) ಪ್ರಕಾಶನ, ಬೆಂಗಳೂರು
ಮೊದಲ ಮುದ್ರಣ: 2025
ಪುಟ: 76 ರೂ. 50
ಸಂಪರ್ಕ: 9448578021

ನ್ಯಾಯಾಲಯದ ಆದೇಶ ಎತ್ತಿಹಿಡಿದ ಹೈ

• **ಬೆಂಗಳೂರು:** ಸ್ವಂತ ಮಗಳನ್ನು ತಾಯಿಯೇ ವೇಶ್ಯಾವಾಟಿಕೆ ದಂಧೆಗೆ ದೂಡಿದ ಆರೋಪ ಹಿನ್ನೆಲೆಯಲ್ಲಿ ವೇಶ್ಯಾವಾಟಿಕೆ ಜಾಲದಿಂದ ರಕ್ಷಿಸಲ್ಪಟ್ಟ ಸಂತ್ರಸ್ತೆಯನ್ನು ತಾಯಿಯ ಸುಪರ್ದಿಗೆ ವಹಿಸಲು ನಿರಾಕರಿಸಿದ್ದ ವಿಚಾರಣಾಧೀನ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ವಿಚಾರಣಾಧೀನ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಅರ್ಜಿ ವಜಾಗೊಳಿಸಿದೆ. ವ್ಯಾಜ್ಯದ ವಿಷಯವು ಅಪರಾಧದ ಬಗ್ಗೆ ಅಥವಾ ಸರ್ಕಾರ ಸಲ್ಲಿಸಿರುವ ಆರೋಪ ಪಟ್ಟಿಗೆ ಸಂಬಂಧಿಸಿದ್ದಲ್ಲ. ಬದಲಿಗೆ, ಸಂತ್ರಸ್ತೆ ಮತ್ತು ಇತರರ ಹೇಳಿಕೆಗಳು ತಾಯಿಯೇ ತನ್ನ ಮಗಳನ್ನು ವೇಶ್ಯಾವಾಟಿಕೆಗೆ ಒತ್ತಾಯಿಸಿದ್ದಾಳೆ ಎಂಬುದನ್ನು ಮೇಲ್ನೋಟಕ್ಕೆ ಸೂಚಿಸುತ್ತವೆ. ವೇಶ್ಯಾವಾಟಿಕೆ ದಂಧೆಯಿಂದ ಸಂತ್ರಸ್ತೆಯನ್ನು ರಕ್ಷಿಸಿ ಮಕ್ಕಳ ಕಲ್ಯಾಣ ಕೇಂದ್ರದ ವಶದಲ್ಲಿರಿಸಿದ್ದರೆ, ತಾಯಿಯೇ ತನ್ನ ಮಗಳನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿದ್ದಾಳೆ ಎಂಬ ಆರೋಪಗಳಿವೆ. ಇಂಥ ಸಂದರ್ಭದಲ್ಲಿ ಮಗುವನ್ನು ತಾಯಿಯ ವಶಕ್ಕೆ ನೀಡಬಾರದು ಎಂಬ ಹೆಚ್ಚುವರಿ ರಾಜ್ಯ ಸರ್ಕಾರಿ ಅಭಿಯೋಜಕರ ವಾದ ಸರಿಯಾಗಿದೆ ಎಂದು ನ್ಯಾಯಾಲಯ ಆದೇಶದಲ್ಲಿ ಅಭಿಪ್ರಾಯಪಟ್ಟಿದೆ.

ಪ್ರಕರಣದ ಆರೋಪ ಪಟ್ಟಿ ಸಲ್ಲಿಸುವಾಗ ತಾಯಿಯ ಹೆಸರನ್ನು ಹೇಗೆ ಕೈಬಿಡಲಾಗಿದೆ ಎಂಬುದು ಅರ್ಥವಾಗದ ವಿಷಯವಾಗಿದೆ. ಮೇಲ್ನೋಟಕ್ಕೆ ಆಕೆ ತನ್ನ ಮಗಳನ್ನು ವೇಶ್ಯಾವಾಟಿಕೆಗೆ ತಳ್ಳಿದ್ದಾಳೆ ಎಂಬ ಬಲವಾದ ಅನುಮಾನವಿದ್ದರೂ ಸಹ, ಆರೋಪ ಪಟ್ಟಿಯಲ್ಲಿ ಆಕೆಯ ಹೆಸರನ್ನು ಪೊಲೀಸರು ಹೇಗೆ ಬಿಡಲು ಸಾಧ್ಯ ಎಂದು ಪ್ರಶ್ನಿಸಿರುವ ನ್ಯಾಯಾಲಯವು ಸಂತ್ರಸ್ತೆಯನ್ನು ಅರ್ಜಿದಾರರ ವಶಕ್ಕೆ ನೀಡುವ ಬದಲು ಆಕೆಗೆ ಸುರಕ್ಷಿತ ವ್ಯವಸ್ಥೆ ಕಲ್ಪಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದಿದೆ.

ದೆಹಲಿ ಮತ್ತು ಬಾಂಬೆ ಹೈಕೋರ್ಟ್‌ಗಳ ತೀರ್ಪುಗಳನ್ನು ಉಲ್ಲೇಖಿಸಿರುವ ನ್ಯಾಯಾಲಯ, ರಕ್ಷಿಸಲ್ಪಟ್ಟ ವ್ಯಕ್ತಿಗಳನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿದಾಗ, ಮ್ಯಾಜಿಸ್ಟ್ರೇಟ್ ಅವರು ಸೆಕ್ಷನ್ 17(2)ರ ಅಡಿಯಲ್ಲಿ ಮೊದಲ ಬಾರಿಗೆ ಹಾಜರುಪಡಿಸಿದಾಗಲೇ ಅವರ ವಯಸ್ಸನ್ನು ಖಚಿತಪಡಿಸಿಕೊಳ್ಳಬೇಕು. ಒಂದುವೇಳೆ ಆ ವ್ಯಕ್ತಿ 18 ವರ್ಷದೊಳಗಿನವರಾಗಿದ್ದು, ಕಾನೂನಿನ ಸಂಘರ್ಷಕ್ಕೊಳಪಟ್ಟ ಬಾಲಾಪರಾಧಿಯಾಗಿದ್ದರೆ ಬಾಲನ್ಯಾಯ ಮಂಡಳಿಗೆ ಅಥವಾ ಆ ವ್ಯಕ್ತಿಯು ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಗುವಾಗಿದ್ದರೆ ಮಕ್ಕಳ ಕಲ್ಯಾಣ ಸಮಿತಿಗೆ ಪ್ರಕರಣವನ್ನು ವರ್ಗಾಯಿಸಬೇಕು ಎಂದು ಹೇಳಿದೆ.

ಮೇಲಿನ ತೀರ್ಪುಗಳ ಆಧಾರದಲ್ಲಿ, ತನ್ನ ಮಗಳನ್ನೇ ವೇಶ್ಯಾವಾಟಿಕೆ ದಂದೆಯಲ್ಲಿ ಬಳಸಿಕೊಳ್ಳುತ್ತಿದ್ದಾಳೆ ಎಂದು ಆರೋಪಿಸಲಾದ ತಾಯಿಗೆ ಮಗುವನ್ನು ಹಸ್ತಾಂತರಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಯಾವುದೇ ವಿಚಾರಣಾ ಅರ್ಹತೆ (ಮೆರಿಟ್) ಹೊಂದಿರದ ಕಾರಣ ಅರ್ಜಿ ವಜಾಗೊಳಿಸಲಾಗುತ್ತಿದೆ ಎಂದು ಆದೇಶಿಸಿದೆ.

ಕಿರುಸುದ್ದಿ

ಹವ್ಯಕ ಭಾಷಾ ಅಕಾಡೆಮಿ ಸ್ಥಾಪನೆಗೆ ಗಿರಿಧರ ಕಜೆ ಸ್ವಾಗತ

ಬೆಂಗಳೂರು: ಹವ್ಯಕ ಭಾಷೆಯ ಸಂರಕ್ಷಣೆ ಹಾಗೂ ಸಂವರ್ಧನೆಗಾಗಿ ಹವ್ಯಕ ಭಾಷಾ ಅಕಾಡೆಮಿಯನ್ನು ಸ್ಥಾಪಿಸುವಂತೆ ಅಖಿಲ ಹವ್ಯಕ ಮಹಾಸಭೆಯು ಮಾಡಿದ ಮನವಿಯನ್ನು ಪರಿಗಣಿಸಿ, ಸರ್ಕಾರವು ಹವ್ಯಕ ಭಾಷಾ ಅಕಾಡೆಮಿಯನ್ನು ಬಜೆಟ್‌ನಲ್ಲಿ ಘೋಷಣೆ ಮಾಡಿರುವುದಕ್ಕೆ ಮಹಸಭಾ ಸರ್ಕಾರಕ್ಕೆ ಧನ್ಯವಾದ ತಿಳಿಸಿದೆ. ಈ ಕುರಿತು ಮಹಾಸಭೆಯ ಅಧ್ಯಕ್ಷ ಡಾ.ಗಿರಿಧರ ಕಜೆ ಪ್ರಕಟಣೆ ನೀಡಿದ್ದು, ಹವಿಗನ್ನಡ, ಹವ್ಯಕ ಕನ್ನಡ, ಹೈವಗನ್ನಡ, ಹೈಗಭಾಷೆ ಎಂಬ



ಹೆಸರುಗಳಿಂದ ಗುರುತಿಸಲ್ಪಡುವ ಹವ್ಯಕ ಭಾಷೆಯು ಕನ್ನಡದ ಸಾಮಾಜಿಕ ಉಪಭಾಷೆಯಾಗಿದ್ದು, ಭಾಷಾ ವೈವಿಧ್ಯ ಹಾಗೂ ಭಾಷಾ ಶ್ರೀಮಂತಿಕೆ ಕಾರಣದಿಂದಾಗಿ ಭಾಷಾ ಜಗತ್ತಿನಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಕನ್ನಡ ಭಾಷೆಯ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಹವಿಗನ್ನಡದ ಅಧ್ಯಯನ ಬಹಳ ಮುಖ್ಯವಾಗಿದ್ದು, ಇದುವರೆಗೆ ಲಭ್ಯವಿರುವ ಅತ್ಯಂತ ಹಳೆಯ ಕನ್ನಡ ಸಾಹಿತ್ಯ ಮತ್ತು ಶಾಸನಗಳಲ್ಲಿಯೂ ಕಂಡುಬರುವ ಕೆಲವು ಆದಿ-ದ್ರಾವಿಡ ಲಕ್ಷಣಗಳನ್ನು ಹವಿಗನ್ನಡವು ಇಂದಿಗೂ ಉಳಿಸಿಕೊಂಡಿದೆ. ಆದ್ದರಿಂದ ಹವಿಗನ್ನಡದ ಅಮೂಲಾಗ್ರ ಅಧ್ಯಯನ ಹಾಗ ಸಂರಕ್ಷಣೆಗಾಗಿ ಹವ್ಯಕ ಭಾಷಾ ಅಕಾಡೆಮಿಯ ಸ್ಥಾಪನೆ ಅತ್ಯಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ, ಹವ್ಯಕ ಭಾಷಾ ಅಕಾಡೆಮಿಯನ್ನು ಸ್ಥಾಪಿಸುವ ನಿರ್ಧಾರವನ್ನು ಕೈಗೊಂಡಿರುವ ರಾಜ್ಯ ಸರ್ಕಾರಕ್ಕೆ ಹಾಗೂ ಈ ಪ್ರಯತ್ನಕ್ಕೆ ಕೈಜೋಡಿಸಿದ ಎಲ್ಲಾ ಹಿತೈಷಿಗಳಿಗೂ ಧನ್ಯವಾದಗಳನ್ನು ತಿಳಿಸಿದ್ದಾರೆ.

ದ್ವಿಚಕ್ರ ವಾಹನ ಕಳ್ಳನ ಬಂಧನ: 10 ಬೈಕ್ ವಶ

ಬೆಂಗಳೂರು: ನಗರದ ವಿವಿಧ ಬಡಾವಣೆಗಳಲ್ಲಿ ಸರಣಿ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪಿಯೊಬ್ಬನನ್ನು ಕೊಡಿಗೆಹಳ್ಳಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತನಿಂದ ಸುಮಾರು 7 ಲಕ್ಷ ರೂ. ಮೌಲ್ಯದ 10 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಫೆ.10 ರಂದು ಸಹಕಾರನಗರದ ನಿವಾಸಿಯೊಬ್ಬರು ತಮ್ಮ ಮನೆಯ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳ್ಳತನವಾಗಿರುವ ಬಗ್ಗೆ ಕೊಡಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣದ ತನಿಖೆ ಕೈಗೊಂಡ ಪೊಲೀಸರು, ಖಚಿತ ಮಾಹಿತಿಯ ಮೇರೆಗೆ ಫೆ.18ರಂದು ಡಿ.ಜೆ. ಹಳ್ಳಿಯ ಕನಕನಗರ ಮುಖ್ಯ ರಸ್ತೆಯ ಅಜುರ್ ಪಬ್ಲಿಕ್ ಶಾಲೆಯ ಬಳಿ ಆರೋಪಿಯನ್ನು ವಶಕ್ಕೆ ಪಡೆದರು. ಪೊಲೀಸರ ವಿಚಾರಣೆ ವೇಳೆ ಆರೋಪಿ ತನ್ನ ತಪ್ಪೊಪ್ಪಿಕೊಂಡಿದ್ದು, ಕೊಡಿಗೆಹಳ್ಳಿ ಮಾತ್ರವಲ್ಲದೆ ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ವಾಹನಗಳನ್ನು ಕಳವು ಮಾಡಿರುವುದಾಗಿ ತಿಳಿಸಿದ್ದಾನೆ. ಆರೋಪಿಯ ಬಂಧನದಿಂದ ಕೊಡಿಗೆಹಳ್ಳಿ, ಚಂದ್ರಾಲೇಔಟ್, ಸುಬ್ರಮಣ್ಯ ನಗರ, ಯಲಹಂಕ ಉಪನಗರ, ದೇವರಜೀವನಹಳ್ಳಿ, ಗೋವಿಂದರಾಜನಗರ, ವಿಜಯನಗರ ಹಾಗೂ ಎಚ್‌ಎಸ್‌ಆರ್ ಲೇಔಟ್ ಠಾಣೆಗಳಲ್ಲಿ ದಾಖಲಾಗಿದೆ.

ಹಣಕಾಸಿನ ನೆರವು: ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಕಂಬಳಕ್ಕೆ ಸಿಎಂ ಪ್ರೋತ್ಸಾಹ

ಬಂಟ್ವಾಳ: ಅವಿಭಜಿತ ದ.ಕ.ಜಿಲ್ಲೆಯಲ್ಲಿ ನಡೆಯುವ ಕಂಬಳ ಜಾತ್ಯಾತೀತ, ಧರ್ಮಾತೀತವಾಗಿ ಭಾಗವಹಿಸುವ ಜನಪ್ರಿಯ ಕ್ರೀಡೆಯಾಗಿದ್ದು, ಇದನ್ನು ಉಳಿಸಿ ಬೆಳೆಸುವುದು ನಮ್ಮ ಜವಾಬ್ದಾರಿ, ಈ ನಿಟ್ಟಿನಲ್ಲಿ ನಮ್ಮ ಸರಕಾರ ಕಂಬಳಕ್ಕೆ ಪ್ರೋತ್ಸಾಹ, ಬೆಂಬಲದ ಜತೆಗೆ ಹಣಕಾಸಿನ ನೆರವನ್ನೂ ಕೊಡ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಬಂಟ್ವಾಳ ತಾಲೂಕಿನ ನಾವೂರು ಗ್ರಾಮದ ಕೂಡಿಬೈಲಿನಲ್ಲಿ ಶನಿವಾರ ಆರಂಭಗೊಂಡ 15 ನೇ ವರ್ಷದ 'ಮೂಡೂರು-ಪಡೂರು' ಜೋಡುಕರೆ ಬಯಲು ಕಂಬಳಕೂಟದಲ್ಲಿ ಸಂಜೆ ನಡೆದ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜಕೀಯ ಪ್ರಜಾಪ್ರಭುತ್ವದ ಜತೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವ ದೊರಕಿದಾಗ ಮಾತ್ರ ಸ್ವಾತಂತ್ರ್ಯದ ಪರಿಕಲ್ಪನೆ ಯಶಸ್ಸು ಕಾಣುತ್ತದೆ. ಈ ಹಿನ್ನಲೆಯಲ್ಲಿ ಸಮಾಜದ ದುರ್ಬಲ ವರ್ಗವನ್ನು ಮುಖ್ಯವಾಹಿನಿಗೆ ತರುವ ಕೆಲಸ ಮಾಡುತ್ತಿದ್ದೇವೆ. ಮುಂದೆಯೇ ಮಾಡುತ್ತವೆ. ರಾಜ್ಯದ ಜನ ಕೈ ಹಿಡಿಯುತ್ತಾರೆಂಬ ವಿಶ್ವಾಸವಿದೆ. 2028ಕ್ಕೂ ನಾವೇ ಅಧಿಕಾರಕ್ಕೆ ಬರುತ್ತವೆ ಎಂದರು.

ರಮಾನಾಥ ರೈಗಳ ಕ್ಷೇತ್ರಕ್ಕೆ ಐದು ಸಾವಿರ ಕೋಟಿ ರೂಪಾಯಿಯನ್ನು ಕಳೆದ ಅವಧಿಯಲ್ಲಿ ತರಿಸಿ ಅಭಿವೃದ್ಧಿ ಮಾಡಲಾಗಿತ್ತು. ಆದರೂ ಅವರನ್ನು ಕ್ಷೇತ್ರದ ಜನ ಸೋಲಿಸಿದರು. ಇದು ನೋವಿನ ಸಂಗತಿ, ಇನ್ನೊಂದು ಸಾರಿ ಅವರು ನಿಲ್ಲುತ್ತಾರೆ. 2028ಕ್ಕೆ ಮತ್ತೆ ಅಭ್ಯರ್ಥಿ ಆಗುತ್ತಾರೆ, ಪ್ರಾಮಾಣಿಕ ಮಂತ್ರಿಗಳಲ್ಲಿ ರಮಾನಾಥ ರೈ ಕೂಡ ಒಬ್ಬರಾಗಿದ್ದರು. ಹೀಗಾಗಿ ಅವರು ಮತ್ತೆ ಗೆಲ್ಲಬೇಕು ಎಂದರು. ಮುಂದಿನ ಆರ್ಥಿಕ ವರ್ಷದಲ್ಲಿ ಬೆಂಜನಪದವಿನಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲಾಗುವುದು ಎಂದರು

ಬಾರ್ಕೂರು ಮಹಾಸಂಸ್ಥಾನದ ಪೀಠಾಧಿಪತಿ ಶ್ರೀ ವಿದ್ಯಾವಾಚಸ್ಪತಿ ಡಾ.ಸಂತೋಷ್ ಗುರೂಜಿ ಆಶೀರ್ವಚನಗೈದರು. ಕರ್ನಾಟಕ ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ್, ಸಾರಿಗೆ ಸಚಿವ ರಾಮಲಿಂಗ ರೆಡ್ಡಿ,ಎಂ ಎಲ್ ಸಿ ಸಲೀಮ್ ಅಹ್ಮದ್, ಐವಾನ್ ಡಿಸೋಜ, ಶಾಸಕರುಗಳಾದ ಅಶೋಕ್ ಕುಮಾರ್ ರೈ, ಟಿ.ಡಿ.ರಾಜೇಗೌಡ, ಮಾಜಿ ಸಚಿವ ವಿನಯ ಕುಮಾರ್ ಸೊರಕೆ,ಸಾಮಾಜಿಕ ಕಾರ್ಯಕರ್ತ ಎಂ.ಜಿ.ಹೆಗಡೆ,ವಿವಿಧ ನಿಗಮದ ಅಧ್ಯಕ್ಷರಾದ ಲಾವಣ್ಯ ಬಲ್ಲಾಳ್,ಟಿ.ಎಮ್ ಶಹೀದ್ ತೆಕ್ಕಿಲ್,ಮಮತಾ ಡಿ.ಎಸ್. ಗಟ್ಟಿ, ಶಾಲೆಟ್ ಪಿಂಟೋ, ಸದಾಶಿವ ಉಳ್ಳಾಲ್,ಸಿಎಂ ಅವರ ಮಾಧ್ಯಮ ಸಲಹೆಗಾರ ಪ್ರಭಾಕರ್, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಗೌಡ, ಧನಭಾಗ್ಯ ಆರ್., ಕೆಪಿಸಿಸಿ ಪ್ರ.ಕಾರ್ಯದರ್ಶಿಗಳಾದ ಪದ್ಮರಾಜ್ ಆರ್ ಪೂಜಾರಿ, ಕೃಪಾ ಆಳ್ವ, ಬಂಟ್ವಾಳ ವಲಯದ ಧರ್ಮಗುರು ವಿಕ್ಟರ್ ಡಿಸೋಜ, ವಿಲ್ಪೆಡ್ ರೋಡ್ರಿಗಸ್ ಮೈಸೂರು,ಮಾಜಿ ಶಾಸಕಿ ಶಕುಂತಳಾ ಶೆಟ್ಟಿ,ಚೆನ್ನವೇಣಿ ಶೆಟ್ಟಿ, ನ್ಯಾಯವಾದಿ ಅಶ್ವನಿಕುಮಾರ್ ರೈ, ದೀಪಕ್ ಕುಮಾರ್ ರೈ ಇದ್ದರು.



ಸಿಎಂಗೆ ಕಂಬಳದ ಬೆತ್ತ

ಇದೇ ವೇಳೆ ಕಂಬಳ ಸಮಿತಿಯ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಂಬಳದ ಬೆತ್ತ,ಸ್ಮರಣಿಕೆಯನ್ನಿತ್ತು ಸನ್ಮಾನಿಸಲಾಯಿತು.

ಕಂದಾಯ ಸಂಗ್ರಹಕಾರ್ಯ ಕ್ರಮಬದ್ಧವಾಗಿರಲಿ

ಅಧಿಕಾರಿಗಳಿಗೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಸಲಹೆ



ಬೆಂಗಳೂರು: ಅಧಿಕಾರಿಗಳು ಕ್ರಮಬದ್ಧವಾಗಿ ಕಂದಾಯ ಸಂಗ್ರಹ ಕಾರ್ಯವನ್ನು ನಿರ್ವಹಿಸಬೇಕು ಎಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಆಯುಕ್ತ ಡಾ.ರಾಜೇಂದ್ರ ಕೆ.ವಿ ತಿಳಿಸಿದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಆಯುಕ್ತ ಡಾ. ರಾಜೇಂದ್ರ, ಕೆ.ವಿ ಅವರು ಮಹಾಲಕ್ಷ್ಮೀಲೇಔಟ್ ವಿಧಾನಸಭಾಕ್ಷೇತ್ರದ ಶಾಸಕ ಗೋಪಾಲಯ್ಯ ಅವರ ಸಮ್ಮುಖದಲ್ಲಿ, ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್‌ಗಳಿಗೆ ಸಂಬಂಧಿಸಿದ ಮಳೆ ಮುಂಜಾಗ್ರತಾ ಕ್ರಮಗಳು ಹಾಗೂ ವಿವಿಧ ಅಭಿವೃದ್ಧಿ ಕಾರ್ಯಗಳ ಪ್ರಗತಿ ಕುರಿತು ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಆಸ್ತಿಗಳಿಗೆ ತಪ್ಪಾಗಿ ಕಂದಾಯ ಪಾವತಿಸಿರುವ ಪ್ರಕರಣಗಳನ್ನು ಪಟ್ಟಿಮಾಡಿ, ಪರಿಶೀಲಿಸಿ ಸರಿಪಡಿಸಿ, ಬಾಕಿ ಇರುವ ಕಂದಾಯವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಬೇಕು. ಸಂಬಂಧಿಸಿದ ದಾಖಲೆಗಳು ಹಾಗೂ ಪ್ರಗತಿಯನ್ನು ಸಮರ್ಪಕವಾಗಿ ಸಂಗ್ರಹಿಸಿ ನಿರ್ವಹಿಸಬೇಕು. ಜತೆಗೆ, ವ್ಯವಸ್ಥಿತವಾಗಿ ಇ-ಖಾತಾ ಮೇಳಗಳನ್ನು ಆಯೋಜಿಸಿ ನಾಗರಿಕರಿಗೆ ಸುಲಭವಾಗಿ ಇ-ಖಾತಾ ದೊರಕುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಭೆಯಲ್ಲಿ ಅಪರ ಆಯುಕ್ತರು (ಅಭಿವೃದ್ಧಿ) ದಿಗ್ವಿಜಯ್ ಬೋಡ್ಕೆ, ಅಪರ ಆಯುಕ್ತರು (ಕಂದಾಯ ಮತ್ತು ಆಡಳಿತ) ಮಂಜುನಾಥ್ ಸ್ವಾಮಿ, ಜಂಟಿ ಆಯುಕ್ತರು ಆರತಿ ಆನಂದ್, ಮುಖ್ಯ ಅಭಿಯಂತರರು ಸ್ವಯಂಪ್ರಭಾ, ಉಪ ಆಯುಕ್ತರು ಅಬ್ದುಲ್ ರಬ್ ಹಾಗೂ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

ಬ್ಲ್ಯಾಕ್ ಸ್ಪಾಟ್ ತೆರವಿಗೆ ಕ್ರಮ: ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಮರ್ಪಕ ಘನತ್ಯಾಜ್ಯ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಆರೋಗ್ಯ ವೈದ್ಯಾಧಿಕಾರಿಗಳು ಹಾಗೂ ಎಜಿಎಂಗಳವರು ಯೋಜಿತ ಕಾರ್ಯಯೋಜನೆ ರೂಪಿಸಬೇಕು. ಹೆಲ್ತ್ ಇನ್ಸ್‌ಪೆಕ್ಟರ್ ಹಾಗೂ ಹೆಲ್ತ್ ಸೂಪರ್‌ವೈಸರ್‌ಗಳ ಮೇಲ್ವಿಚಾರಣೆಯಲ್ಲಿ ಬ್ಲ್ಯಾಕ್ ಸ್ಪಾಟ್‌ಗಳನ್ನು ಸಂಪೂರ್ಣವಾಗಿ ತೆರವುಗೊಳಿಸಿ, ಅವು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಅಲ್ಲದೆ, ಮುಂಜಾಗ್ರತಾ ಕ್ರಮವಾಗಿ ಸಂಬಂಧಿತ ಪ್ರದೇಶಗಳಲ್ಲಿ ಔಷಧಿ ಸಿಂಪಡಣೆ ನಡೆಸುವಂತೆ ತಿಳಿಸಿದರು.

ರಾಜಕಾಲುವೆ ಸ್ವಚ್ಛತಾ ಕಾರ್ಯಕ್ಕೆ ಸೂಚನೆ

ಉದ್ಯಾನಗಳಲ್ಲಿ ಅಳವಡಿಸಿರುವ ಪರಿಕರಗಳ ದುರಸ್ತಿ ಕೈಗೊಳ್ಳುವುದು ಹಾಗೂ ಒಣಗಿರುವ ಗಿಡಗಳನ್ನು ಗುರುತಿಸಿ ಸೂಕ್ತ ಕ್ರಮ ವಹಿಸಬೇಕು. ರಸ್ತೆ ಬದಿಗಳಲ್ಲಿರುವ ಅಪಾಯಕಾರಿ ಮರಗಳು ಮತ್ತು ಕೊಂಬೆಗಳನ್ನು ಗುರುತಿಸಿ ಅಗತ್ಯವಿದ್ದಲ್ಲಿ ಕತ್ತರಿಸಿ, ಬಳಿಕ ಸ್ಥಳವನ್ನು ಸಮರ್ಪಕವಾಗಿ ಸ್ವಚ್ಛಗೊಳಿಸಬೇಕು. ಮಳೆ ಮುಂಜಾಗ್ರತಾ ದೃಷ್ಟಿಯಿಂದ ರಾಜಕಾಲುವೆಗಳ ಸ್ವಚ್ಛತಾ ಕಾರ್ಯಗಳನ್ನು ತ್ವರಿತಗೊಳಿಸುವುದು. ನಗರ ಪಾಲಿಕೆ ವ್ಯಾಪ್ತಿಯಲ್ಲಿ ಖಾಲಿ ಜಾಗಗಳಲ್ಲಿ ಕಸ ಎಸೆಯುವವರನ್ನು ಗುರುತಿಸಿ ದಂಡ ವಿಧಿಸಬೇಕು. ರಸ್ತೆಗಳಲ್ಲಿ ಅಗತ್ಯವಿರುವ ವಿದ್ಯುತ್ ದೀಪಗಳ ವ್ಯವಸ್ಥೆ ಹಾಗೂ ಸಮರ್ಪಕ ನಿರ್ವಹಣೆಗೆ ಕ್ರಮ ಕೈಗೊಳ್ಳುವುದು ಸೇರಿದಂತೆ ವಿವಿಧ ವಿಷಯಗಳ ಕುರಿತು ಮುನ್ನೆಚ್ಚರಿಕೆ ಕ್ರಮ ವಹಿಸದುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಶ್ವಾನವನ್ನು ವಾಕಿಂಗ್ ಮಾಡಿಸುವ ವಿಚಾರಕ್ಕೆ ಜಗಳ

ವ್ಯಕ್ತಿ ಮೇಲೆ ಹಲ್ಲೆ, ಪೊಲೀಸರಿಗೆ ದೂರು

ಬೆಂಗಳೂರು: ಅಪಾರ್ಟ್‌ಮೆಂಟ್ ಸಂಕೀರ್ಣವೊಂದರಲ್ಲಿ ಶ್ವಾನವನ್ನು ವಾಕಿಂಗ್ ಮಾಡಿಸುವ ವಿಚಾರವಾಗಿ ಆರಂಭವಾದ ಸಣ್ಣ ಜಗಳ ಇದೀಗ ದೊಡ್ಡಮಟ್ಟದ ಹಲ್ಲೆ ಹಾಗೂ ಪೊಲೀಸ್ ದೂರಿನ ಹಂತಕ್ಕೆ ತಲುಪಿದೆ.

ವರ್ತೂರಿನ ಬ್ರಿಗೇಡ್ ಈಥೋಪಿಯ ಈಸ್ಟ್ ಅಂಟೋಪಿಯ ಅಪಾರ್ಟ್‌ಮೆಂಟ್‌ನಲ್ಲಿ ಏಳೆಂಟು ಜನ ಹಿರಿಯ ನಾಗರಿಕರು ಸೇರಿ ವ್ಯಕ್ತಿಯೊಬ್ಬರ ಮೇಲೆ ಮನಬಂದಂತೆ ಹಲ್ಲೆ ನಡೆಸಿರುವ ಘಟನೆ ನಡೆದಿದೆ. ತರುಣ್ ಅರೋರಾ ಎಂಬವರು ತಮ್ಮ ಸಾಕು ನಾಯಿಯನ್ನು ವಾಕಿಂಗ್ ಮಾಡಿಸಲು ಹೊರಗೆ ಕರೆತಂದಿದ್ದ ಸಂದರ್ಭದಲ್ಲಿ ಈ ಗಲಾಟೆ ಸಂಭವಿಸಿದೆ. ಅಪಾರ್ಟ್‌ಮೆಂಟ್ ಆವರಣದಲ್ಲಿ ಯೋಗ ಮತ್ತು ವ್ಯಾಯಾಮಕ್ಕೆ ಮೀಸಲಿಟ್ಟ ಜಾಗದಲ್ಲಿ ನಾಯಿ ಮೂತ್ರ ವಿಸರ್ಜನೆ ಮಾಡುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಈ ವಿಚಾರವಾಗಿ ಅಲ್ಲಿಯೇ ವ್ಯಾಯಾಮ ಮಾಡುತ್ತಿದ್ದ ಹಿರಿಯ ನಾಗರಿಕರು ತರುಣ್ ಅವರೊಂದಿಗೆ ಮಾತಿನ ಚಕಮಕಿ ನಡೆಸಿದ್ದಾರೆ. ಮಾತಿಗೆ ಮಾತು ಬೆಳೆದು ಆಕ್ರೋಶಗೊಂಡ ಹಿರಿಯ ನಾಗರಿಕರು ಏಕಾಏಕಿ ತರುಣ್ ಮುಗಿಬಿದ್ದಿದ್ದಾರೆ. ಹಲ್ಲೆಯ ತೀವ್ರತೆಗೆ ತರುಣ್ ಕೆಳಗೆ ಬಿದ್ದರೂ ಬಿಡದ ವೃದ್ಧರ ಗುಂಪು, ಅವರನ್ನು ಕಾಲಿನಿಂದ ತುಳಿದು ದೌರ್ಜನ್ಯ ಎಸಗಿದ್ದಾರೆ ಎನ್ನಲಾಗಿದೆ. ಗಲಾಟೆ ವಿಕೋಪಕ್ಕೆ ಹೋದಾಗ ಅಲ್ಲಿದ್ದ ಮಹಿಳೆಯೊಬ್ಬರು ಮಧ್ಯಪ್ರವೇಶಿಸಿ ಜಗಳ ಬಿಡಿಸಿದ್ದಾರೆ.

ಠಾಣೆ ಮೆಟ್ಟಿಲೇರಿದ ಪ್ರಕರಣ

ಹಲ್ಲೆಗೊಳಗಾದ ತರುಣ್ ಅರೋರಾ ಅವರು ಕೂಡಲೇ ವರ್ತೂರು ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ. ಅಷ್ಟೇ ಅಲ್ಲದೆ, ನಗರ ಪೊಲೀಸ್ ಆಯುಕ್ತರ ಕಚೇರಿಗೂ ಭೇಟಿ ನೀಡಿ ಹಿರಿಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು, ಹಲ್ಲೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಮಹಿಳೆಯಿಂದ ಪ್ರತಿದೂರು

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿರಿಯ ನಾಗರಿಕರ ಪರವಾಗಿ ಮಹಿಳೆಯೊಬ್ಬರು ಪ್ರತಿದೂರು ದಾಖಲಿಸಿದ್ದಾರೆ. ತರುಣ್ ಅವರೇ ನಮ್ಮ ಮೇಲೆ ಹಲ್ಲೆ ನಡೆಸಿ ಜೀವ ಬೆದರಿಕೆ ಹಾಕಿದ್ದಾರೆ. ನಮ್ಮ ಮಕ್ಕಳು ವಿದೇಶದಲ್ಲಿದ್ದಾರೆ, ನಾವು ಇಲ್ಲಿ ಒಬ್ಬಂಟಿಯಾಗಿದ್ದೇವೆ ಎಂಬುದನ್ನು ಬಳಸಿಕೊಂಡು ನನ್ನ ಬಳಿ ದೊಡ್ಡ ಗುಂಪಿದೆ, ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಎಂದು ಬೆದರಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಸದ್ಯ ವರ್ತೂರು ಪೊಲೀಸರು ಎರಡು ಕಡೆಯಿಂದ ದೂರು ಹಾಗೂ ಪ್ರತಿದೂರನ್ನು ದಾಖಲಿಸಿಕೊಂಡಿದ್ದು, ಸಿಸಿಟಿವಿ ದೃಶ್ಯಾವಳಿಗಳ ಆಧಾರದ ಮೇಲೆ ತನಿಖೆ ಮುಂದುವರಿಸಿದ್ದಾರೆ.

ಅಡ್ಡಪಲ್ಲಕ್ಕಿ ಉತ್ಸವ

ಅರಸೀಕೆರೆ: ತಾಲೂಕಿನ ಹಾರನಹಳ್ಳಿ ಸುಕ್ಷೇತ್ರ ಕೋಡಿಮಠದಲ್ಲಿ ಕಳೆದ ಮೂರು ದಿನಗಳಿಂದ ನಡೆಯುತ್ತಿರುವ ಶ್ರೀ ಮಹದೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಪ್ರತಿವರ್ಷದ ಸಂಪ್ರದಾಯದಂತೆ ಹಾರನಹಳ್ಳಿ ಗ್ರಾಮದಲ್ಲಿ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವವನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ, ವಿಜೃಂಭಣೆಯಿಂದ ಭಕ್ತಾದಿಗಳು ನೆರವೇರಿಸಿದರು.

ತಾಲೂಕಿನ ಹಾರನಹಳ್ಳಿ ಸುಕ್ಷೇತ್ರ ಕೋಡಿಮಠದಲ್ಲಿ ನಡೆಯುವ ಶ್ರೀ ಮಹದೇಶ್ವರ ಜಾತ್ರಾ ಮಹೋತ್ಸವಕ್ಕೆ ಸುಧೀರ್ಘ ಇತಿಹಾಸ ಇದ್ದು, ಈ ಜಾತ್ರಾ ಮಹೋತ್ಸವದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಭಕ್ತರು ತಂಡೋಪತಂಡವಾಗಿ ಆಗಮಿಸಿ ತಮ್ಮ ತನು ಮನ ದನ ಸೇವೆಯನ್ನು ಶ್ರದ್ಧಾಭಕ್ತಿಯಿಂದ ಸಮರ್ಪಿಸಿ ಶ್ರೀ ಕ್ಷೇತ್ರ ದೇವತೆಗಳ ಹಾಗೂ ಶ್ರೀ ಗುರುವಿನ ಒಲುಮೆಗೆ ಪಾತ್ರರಾಗುತ್ತಾರೆ ಆಗಾಗಿ ಶ್ರೀ ಮಹದೇಶ್ವರ ಜಾತ್ರೆ ಮಹೋತ್ಸವವು ಶ್ರೀಗುರುಗಳ ಮತ್ತು ಭಕ್ತರ ಸಮೂಹದ ಸಮಾಗಮನಕ್ಕೆ ಪ್ರತಿವರ್ಷವು ಸಾಂಪ್ರದಾಯಕವಾಗಿ ಸಾಕ್ಷಿಯಾಗುವುದು ಸುಕ್ಷೇತ್ರ ಕೋಡಿಮಠದ ವಿಶೇಷತೆಯಾಗಿದೆ.

ಸುಕ್ಷೇತ್ರದಲ್ಲಿ ನಿರಂತರವಾಗಿ ಮೂರು ದಿನ ಗಳಿಂದ ನಡೆಯುತ್ತಿರುವ ಜಾತ್ರಾ ಮಹೋತ್ಸವ ಅಂಗವಾಗಿ ಮುಂಜಾನೆ ಶ್ರೀ ಶಿವಲಿಂಗ ಸ್ವಾಮಿ ಗಳ ಗದ್ದುಗೆಗೆ ರುದ್ರಾಭಿಷೇಕ, ಬಿಲ್ವಾರ್ಚನೆ ಹಾಗೂ ವಿವಿಧ ಪೂಜಾ ಕಾರ್ಯಗಳನ್ನು ನೆರವೇರಿಸಲಾಯಿತು. ನಂತರ ಪ್ರತಿ ವರ್ಷದ ಸಂಪ್ರದಾಯದಂತೆ ಶ್ರೀಮಠದ ಭಕ್ತರು ಸಕಲ ಬಿರುದಾವಳಿಗಳೊಂದಿಗೆ ವಿವಿಧ ಜಾನಪದ ಕಲಾತಂಡಗಳು, ಮಂಗಳವಾದ್ಯಗಳ ಜೊತೆಗೆ ಹಾರನಹಳ್ಳಿ ಗ್ರಾಮ ಪ್ರವೇಶಿಸಿದ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವವನ್ನು ಗ್ರಾಮಸ್ಥರು ಸ್ವಾಗತಿಸಿ ತಮ್ಮ ಭಕ್ತಿಯ ಭಾವನೆ ಸಮರ್ಪಣೆ ಮಾಡಿದರು, ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಅಡ್ಡಪಲ್ಲಕ್ಕಿ ಮಹೋತ್ಸವವು ನೆರವೇರಿಸಿದ ನಂತರ ಶ್ರೀ ಮಹದೇಶ್ವರ ಬೆಟ್ಟಕ್ಕೆ ಪಲ್ಲಕ್ಕಿ ಸಮೇತ ಶ್ರೀಗಳು ದಯಮಾಡಿಸುವರು.

ದೈಹಿಕ ಚಟುವಟಿಕೆಗಳಿಂದ ಉತ್ತಮ ಆರೋಗ್ಯ: ಸಚಿವ

ಬೆಂಗಳೂರು: ದೈಹಿಕ ಚಟುವಟಿಕೆಗಳಿಂದ ಉತ್ತಮ ಆರೋಗ್ಯ, ಮಾನಸಿಕ ಶಾಂತಿ, ನೆಮ್ಮದಿ ಸಿಗುತ್ತದೆ. ಮನಸ್ಸು ಶಾಂತವಾಗಿದ್ದರೆ ವಾಹನ ಚಾಲನೆ, ಪ್ರಯಾಣದ ವೇಳೆ ನಾವು ಎಚ್ಚರಿಕೆಯಿಂದ ಇರಲು ಸಾಧ್ಯ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದರು.



ಕಂಠೀರವ ಕ್ರೀಡಾಂಗಣದಲ್ಲಿ ಸಾರಿಗೆ ಇಲಾಖೆಯು ಬೆಂಗಳೂರು ಸಂಚಾರ ಪೊಲೀಸ್ ಸಹಯೋಗದೊಂದಿಗೆ ಶನಿವಾರ ಆಯೋಜಿಸಿದ್ದ ನಮ್ಮ ರಸ್ತೆ ನಮ್ಮ ಸುರಕ್ಷತೆ 5ಕೆ ಸೇಫ್ ಎ ಥಾನ್ ವಾಕಿಂಗ್, ರನ್ನಿಂಗ್, ಸೈಕ್ಲಿಂಗ್, ಬೈಕಿಂಗ್ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅಪಘಾತಗಳು, ರಸ್ತೆ ಸುರಕ್ಷತೆ ಬಗ್ಗೆ ಬೇರೆಯವರನ್ನು ದೂಷಿಸುವ ಬದಲು ನಾವು ಎಚ್ಚರಿಕೆ ವಹಿಸಬೇಕು ಎಂದರು.

ಸಾರಿಗೆ ಆಯುಕ್ತ ಯೋಗೀಶ್ ಎ.ಎಂ ಮಾತನಾಡಿ, ರಸ್ತೆ ಸುರಕ್ಷತೆಯು ಕೇವಲ ನಿಯಮ ಪಾಲನೆಯಲ್ಲ, ಅದು ಪ್ರತಿಯೊಬ್ಬ ನಾಗರಿಕನ ಅಮೂಲ್ಯ ಜೀವವನ್ನು ಉಳಿಸುವ ಒಂದು ಮಹತ್ತರ ಜವಾಬ್ದಾರಿಯಾಗಿದೆ. ಪ್ರತಿಯೊಬ್ಬರೂ ಕಡ್ಡಾಯವಾಗಿ ಸಂಚಾರ ನಿಯಮಗಳನ್ನು ಪಾಲಿಸುವ ಮೂಲಕ ಅಪಘಾತ ರಹಿತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಮಾತನಾಡಿ, ರಸ್ತೆ ಸುರಕ್ಷತೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ನಮ್ಮ ಜೀವದ ಜತೆಗೆ ಇತರರ ಜೀವವೂ ಬಹಳ ಮುಖ್ಯ ಎಂಬುದನ್ನು ಪ್ರತಿಯೊಬ್ಬ ವಾಹನ ಸವಾರರು ಅರಿತುಕೊಳ್ಳಬೇಕು. ಬೆಂಗಳೂರಿನಲ್ಲಿ ನಡೆಯುತ್ತಿರುವ ಇಂತಹ ಅಪಘಾತಗಳನ್ನು ತಡೆಯಲು ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದ್ದು, ಒನ್-ವೇ ಉಲ್ಲಂಘನೆ ಮತ್ತು ವ್ಹೀಲಿಂಗ್ ಮಾಡುವವರ ವಿರುದ್ಧ ಈಗಾಗಲೇ ಕಠಿಣ ಕಾನೂನು ಕ್ರಮಗಳನ್ನು ಜರುಗಿಸಲಾಗುತ್ತಿದೆ ಎಂದು ತಿಳಿಸಿದರು. 13 ಸಾವಿರ ಜನ ಸೇಫ್ ಎ ಥಾನ್ ನಲ್ಲಿ ಭಾಗವಹಿಸಿದ್ದರು.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಕೆ.ರವಿ ಕರೆ

ಮಾಧ್ಯಮ ಅವಕಾಶವಂಚಿತರ ಪರ ಧ್ವನಿ ಎತ್ತಲಿ

ಬೆಂಗಳೂರು: ಸಮ ಸಮಾಜ ನಿರ್ಮಾಣದಲ್ಲಿ ಮಾಧ್ಯಮಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತವೆ. ಹಾಗಾಗಿ ಮಾಧ್ಯಮಗಳು ಸಮಾಜದಲ್ಲಿ ಅವಕಾಶ ವಂಚಿತ ಸಮುದಾಯಗಳ ಪರವಾಗಿ ಧ್ವನಿ ಎತ್ತಬೇಕು ಎಂದು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ (ಕೋಲಾರ) ಕುಲಪತಿ ಪ್ರೊ. ಬಿ.ಕೆ.ರವಿ ಕರೆ ಕೊಟ್ಟರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬೆಂಗಳೂರು ನಗರ ಜಿಲ್ಲೆ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯ ಜ್ಞಾನಭಾರತಿ ಸಹಯೋಗದಲ್ಲಿ ಆಯೋಜಿಸಿದ ಎರಡು ದಿನಗಳ ಮಾಧ್ಯಮ ಹಬ್ಬ 2026 ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಜನರನ್ನು ದಿಕ್ಕುತಪ್ಪಿಸುವಂತಹ, ಅವರಿಗೆ ಸುಳ್ಳು ಸಂದೇಶವನ್ನು ಕೊಟ್ಟು ಅವರಲ್ಲಿ ಮಾನಸಿಕ ಗೊಂದಲವನ್ನು ಉಂಟು ಮಾಡುವುದು ಪತ್ರಕರ್ತರ ಕೆಲಸವಲ್ಲ, ಸತ್ಯಾಸತ್ಯತೆಯನ್ನು ತಿಳಿದುಕೊಂಡು ಸುದ್ದಿ, ಲೇಖನಗಳನ್ನು ಬರೆಯಬೇಕು. ಸಾಮಾಜಿಕ ಹೊಣೆಗಾರಿಕೆ ಮರೆತ ಮಾಧ್ಯಮ ಬಹಳ ಕಾಲ ಜನಸಾಮಾನ್ಯರ ವಿಶ್ವಾಸಾರ್ಹತೆ ಪಡೆಯಲಾರದು ಎಂದು ಪತ್ರಕರ್ತರಾಗುವ ವಿದ್ಯಾರ್ಥಿಗಳನ್ನು ಅವರು ಎಚ್ಚರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ರಮೇಶ್ ಬಿ. ಮಾತನಾಡಿ, ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಮಾಧ್ಯಮದ ವಿವಿಧ ಆಯಾಮಗಳ ಬಗ್ಗೆ ಪರಿಚಯಿಸಿ, ಸ್ಪರ್ಧೆಗಳ ಮೂಲಕ ಅವರಲ್ಲಿ ಕ್ಷೇತ್ರದ ಪ್ರಾಯೋಗಿಕ ಅನುಭವ ನೀಡಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅರ್ಥಪೂರ್ಣ ಕಾರ್ಯಕ್ರಮವನ್ನು ನೀಡಿದೆ ಎಂದು ಸಂತಸ ವ್ಯಕ್ತಪಡಿಸಿದರು. ಸಮಾರಂಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಎಲೆಕ್ಟ್ರಾನಿಕ್ ಮೀಡಿಯಾ ವಿಭಾಗದ ಸಂಯೋಜಕಿ ಪ್ರೊ. ವಾಹಿನಿ ಅರವಿಂದ್, ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಮೂಹ ಮತ್ತು ಸಂವಹನ ಪತ್ರಿಕೋದ್ಯಮ ವಿಭಾಗದ ಅಧ್ಯಕ್ಷ ಡಾ. ತಾಂಡವ ಗೌಡ ಟಿ.ಎನ್., ಕನ್ನಡ ಚಲನಚಿತ್ರ ನಿರ್ಮಾಪಕ ಹಾಗೂ ನಿರ್ದೇಶಕ ಬಿ.ಸುರೇಶ, ಬೆಂಗಳೂರು ನಗರ ಜಿಲ್ಲೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕಿ ಪಲ್ಲವಿ ಹೊನ್ನಾಪುರ ಉಪಸ್ಥಿತರಿದ್ದರು.



ವಿಜೇತರಿಗೆ ಬಹುಮಾನ ವಿತರಣೆ

ಎರಡು ದಿನಗಳ ಕಾಲ ನಡೆದ ಮಾಧ್ಯಮ ಹಬ್ಬ-2026ರ ವಿದ್ಯಾರ್ಥಿಗಳಿಗೆ ಕಾರ್ಯಾಗಾರದಲ್ಲಿ ಹಮ್ಮಿಕೊಂಡ ಸ್ಪರ್ಧೆಗಳಲ್ಲಿ ವಿಜೇತರಿಗೆ ನಗದು ಬಹುಮಾನ ಪ್ರಶಂಸನಾ ಪತ್ರ ಹಾಗೂ ಟ್ರೋಫಿಗಳನ್ನು ನೀಡಲಾಯಿತು.

BEFORE THE MOTOR ACCIDENT CLAIMS TRIBUNAL AT BENGALURU CITY
M.V.C. No.7888/2025 (SCCH-10)

PETITIONER: ANNIYAMMA -V/s-
RESPONDENTS: K.M. Mahesh .K.M & another

NOTICE TO RESPONDENT No.1

Mahesh .K.M, Major, S/o. Kanimara Shetty, #289/2, Prem Nagar, Kempe Gowda Layout, Laggere, Bengaluru-560058. (R.C. owner of Hero Splendor Plus Motorcycle bearing Regn, No. KA-41-K-7425)

WHEREAS, the petitioner has filed the above claim petition against the respondents for claiming compensation of Rs. 20,00,000/- on account of the injuries sustained by her in the road traffic accident, which occurred on 13/09/2025 at about 19:30 hours, while the petitioner and her friend Aruna were crossing the Magadi Road, near Huliyuramma Temple, Dasapura Hobli, Bengaluru North, hit by one Hero Splendor Plus Motorcycle bearing Regn, No.KA-41-K-7425 to the petitioner and her friend Aruna.

Take Notice that you have to appear before this Hon'ble Court on **09/04/2026** at **11:00 A.M.** either in person or by Pleader duly instructed to answer all material questions in the petition. If you failed to appear on the date mentioned above, then the case will be heard and decided ex-parte.

Given under my hand and seal of the court on this 27/02/2026

By order of the Court, Assistant Registrar, Court of Small Causes, Bangalore

RAMAKRISHNA .K, Advocate
#11, G-5, VMC Complex, 10th Cross, Cubbonpet, Bengaluru-560002

THE HONOURABLE I ADDL SENIOR CIVIL JUDGE AND CJM COURT AT KOLAR, O.S. No. 240/2017

BETWEEN: Smt Manjula ....Plaintiff
AND
Sri Byrappa and others ...Defendants

NOTICE UNDER SECTION ORDER 5 RULE 20 READ WITH SECTION 151 OF CPC DEFENDANTS NO 12(1a), (1b) and (1c)

12(1a). Sri Jayaramappa S/o Late Middi Muniswamappa, aged about 78 years.
(1b). Sri Aswathappa S/o Late Middi Muniswamappa, aged about 74 years.
(1c). Sri Prabhakara S/o Late Middi Muniswamappa, aged about 70 years.
All are residing at Thotli Village, Sugutur Hobli, Kolar Taluk.

Wherefore, the Plaintiff above named were filed a suit for the relief of partition and separate possession along with the consequential reliefs against the defendants, the defendant No 12(1a), (1b) and (1c) were not receiving the court suit summons notices on I A, hence this notice through the Paper Publication Hosadi gantha News Paper. The above matter is coming up for hearing on 15-4-2026 The persons interested in the matter may appear before this court in person or through their advocate on that day at 11.00 am in person or through the legal practitioner. Failing which the matter will be heard and determined exparte.

Given under my hand and seal of this court on this 7-3-2026.

By the order of the Court,
Sd/- Shirasthedar
I Addl.Senior Civil Judge at Kolar.
M.S.Badarinarayana, Advocate, Kolar.

ಘನವೆತ್ತ ಅಪರ ಸಿವಿಲ್ ಜಡ್ಜ್ ನ್ಯಾಯಾಲಯ, ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ. ಶಿಡ್ಲಘಟ್ಟ
ಕ್ರಿಮಿನಲ್ ಮಿಸ್ ಸಂಖ್ಯೆ: 50/2026

ಅರ್ಜಿದಾರರು : 1) ಶ್ರೀ ಚಿಕ್ಕ ಮುನಿವೆಂಕಟಪ್ಪ ಬಿನ್ ಲೇಟ್ ದೊಡ್ಡಪಯ್ಯ, ವಯಸ್ಸು ಸುಮಾರು 78 ವರ್ಷ, 2) ಶ್ರೀ ನಾಗರಾಜ ಬಿನ್ ಲೇಟ್ ದೊಡ್ಡ ಮುನಿವೆಂಕಟಪ್ಪ, ವಯಸ್ಸು ಸುಮಾರು 54 ವರ್ಷ, 3) ಶ್ರೀ ಮಂಜುನಾಥ ಬಿನ್ ಲೇಟ್ ಮುನಿವೆಂಕಟಪ್ಪ, ವಯಸ್ಸು ಸುಮಾರು 39 ವರ್ಷ, ಎಲ್ಲಾರು ವಾಸ: ಬಶೆಟ್ಟಹಳ್ಳಿ ಗ್ರಾಮ ಮತ್ತು ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.

-ವಿರುದ್ಧ-

ಎದುರುದಾರರು: ತಹಶೀಲ್ದಾರ್, ಶಿಡ್ಲಘಟ್ಟ ತಾಲ್ಲೂಕು, ಶಿಡ್ಲಘಟ್ಟ.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಪ್ರಕರಣದಲ್ಲಿ 1ನೇ ಅರ್ಜಿದಾರರ ಅಜ್ಜಿ ಮತ್ತು ಅರ್ಜಿದಾರರ ಸಂಖ್ಯೆ: 2 ರಿಂದ 3ರ ಮುತ್ತಜ್ಜಿ ವೆಂಕಟಮ್ಮ ಬಿನ್‌ಲೇಟ್ ಚಿಕ್ಕಗಂಗರವರು ದಿನಾಂಕ: 12.01.1952 ರಂದು, ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಬಶೆಟ್ಟಹಳ್ಳಿ ಹೋಬಳಿ, ಬಶೆಟ್ಟಹಳ್ಳಿ ಗ್ರಾಮದಲ್ಲಿ ನಿಧನರಾಗಿದ್ದು, ಸದರಿಯವರ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿಕೊಂಡಿದ್ದು, ಅದರಂತೆ ಸಂಬಂಧಪಟ್ಟ ವಾರಸುದಾರರು ಇದ್ದಲ್ಲಿ, ಸದರಿಯವರು ತಮ್ಮ ವಕೀಲರ ಮುಖಾಂತರ ಅಥವಾ ಖುದ್ದಾಗಿ ತಮ್ಮ ತಕರಾರು ಇದ್ದಲ್ಲಿ ದಿನಾಂಕ: 09.04.2026 ರಂದು ಸಲ್ಲಿಸಲು ಈ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಶಿಡ್ಲಘಟ್ಟ ನ್ಯಾಯಾಲಯ, ಶಿಡ್ಲಘಟ್ಟ

ಅರ್ಜಿದಾರರ ಪರ ವಕೀಲರು
ವಿ.ಎಂ. ಬೈರಾರೆಡ್ಡಿ ಬಿ.ಎ. ಎಲ್.ಎಲ್.ಬಿ.ವಕೀಲರು, ಶಿಡ್ಲಘಟ್ಟ.

IN THE COURT OF THE HON'BLE CIVIL JUDGE & JMFC. AT BAGEPALLI
Crl.Mis.No. 1690/2025

Petitioners:
1. **Sri. Polagur Venkatarayappa,** S/o.Late Venkatappa, Aged about 85 years,
2. **Sri. Chowdappa,** S/o.Polagur Venkatarayappa, Aged about 53 years,

Both are R/at. Chowdampalli village, Chelur hobli, Bagepalli Taluk, Chikkaballapur District.

V/s

Respondent :-
The Registrar birth and death office of the Tahsildar Bagepalli Taluk, Bagepalli.

DRAFT PUBLICATION

The petitioners have filed this petition death certificate of the petitioner No.1 wife and mother of petitioner No.2 one **Late. VENKATAMMA W/o.Late.PULAGUR VENKATARAYAPPA,** she was died in the house of the petitioner **on 20-04-2017,** at Chowdampalli Village, Chelur hobli, Bagepalli taluk, Chikkaballapur dist, the petition is pending. Any person have any right, or interest may appear before this Hon'ble court **on 18/03/26 at 11:00 a.m,** in person or through pleader to your objections if any. Take notice that in default of your appearance on the date before mentioned in the petition, failing which the matter will be heard and decided ex-parte.

Dated thus **07 day of March 2026.**

BY ORDER OF THE COURT
Sheristedar
Court of Civil Judge & J.M.F.C Bagepalli.

Advocate for Petitioner
ESHWARAPPA C.S. M.A.,LL.B.
ADVOCATE, KAR/419/2017
Court Complex, Chikkaballapur-562104
MOB-9731411363
Emall-eshwar1987.ee@gmail.com

IN THE COURT OF MOTOR ACCIDENT CLAIMS TRIBUNAL AT BENGALURU (SCCH-17)
MVC No. 3516/2025

BETWEEN: Sri. Ningaraju S.N @ Ningaraju ... PETITIONER
AND: Mr. Ramesh .R and another ... **RESPONDENTS**

NOTICE TO RESPONDENT No.01

Ramesh .R, S/o: Ramanna, R/at: No.25, 4th Cross, Maruthinagar, Madeshwaranagar Main Road, Bengaluru-560091.

Take notice that the above petitioner has filed the above petition against you for the recovery of compensation amount of Rs.20,00,000/- for injuries sustained by the petitioner in a RTA, that occurred on 02/05/2025 at about 08:00 A.M, on SH-33, Kunigal Maddur Main Road, Near P.H Halli Village, Huliyurdurga Hobli, Kunigal Talluk, Tumkuru, involving your Scooter bearing Regn No KA-02-JA-7309. The said case is fixed to be held on **16/04/2026**. You are hereby directed to appear on that day before the court at **11:00 A.M.,** personally or through your counsel, failing which the matter will be determined as Ex-parte.

Given under my hand & seal of the court on this 26/02/2026

By order of the Court, Assistant Registrar, Court of Small Causes, Bangalore

SAROJA .G, Advocate
No.85/3, 1st Floor, 2nd Cross, Anjananagara, Magadi Main Road, Behind Sri Ram Medical, Vishwaneedam Post, Bangalore-560 091

BEFORE THE MOTOR ACCIDENT CLAIMS TRIBUNAL SCCH 02 AT BANGALORE
M.V.C. 5948/2021)

BETWEEN
T M Kulkarni. .....**Petitioner**
AND
Ashok Kumar & Anr .....**Respondents**

Notice to Respondent No-1(A)

HV Govindegowda No. 553/H, 1st cross, 3rd stage, 4th Block, Basaveswaranagara, Bangalore - 560079

NOTICE PAPER PUBLICATION

WHEREAS, take notice that the above named petitioner has filed the above case claiming compensation at **Rs.20,00,000/-. (Rupees Twenty Lakhs)** with costs and interest against you for the **injuries sustained by him in road accident which occurred on 04/03/2021 at About 12-15 PM near Fish Canteen Road, inside cubbon park, bangalore involving your fathers Motor cycle Bearing No. KA-02-HT-3275** as such you are hereby summoned to appear before this Hon'ble court in person or by pleader **on 21.04.2026 at 11.00 AM** to answer the same failing which the above case will be disposed of placing you exparte.

Given under my hand and the seal of the court this the **5/3/2026**

By Order of the Court
Assistant Registrar
Court of Small Causes
Bangalore -

Advocate Name & Address:
Krishnamurthy S G
Advocates, Office At No. 145, 1st Floor, 2nd Cross, 2nd Main, Opp ASB Developers, Sunkadakatte, Bangalore - 560 091 M: 9964096376

IN THE HONBLE COURT OF THE Ist ADDITIONAL SENIOR CIVIL JUDGE AT NELAMANGALA
O.S.No. 556/2013

BETWEEN : Smt. Kamalamma ...**PLAINTIFF**
AND : Smt. Bhagyamma & others ...**DEFENDANTS**

SUMMONS FOR SERVICE BY ADVETISEMENT IN A NEWS PAPER ORDER 5 RULE 20(1)(A)

Summons to the Defendant No.4

SMT. INDRANI D/o late Rajanna Aged about 24 years Residing at, Garuda Nilaya, Adarsha Nagara, 1st Main, 4th Cross, Tumkur

Whereas, the plaintiff has instituted the above suit for the relief of partition and other reliefs against you, you are hereby summonsed to appear before the Hon'ble Ist Additional senior Civil Judge at Nelamangala on **04/06/2026 at 11:00 AM** either in person or through a counsel to answer the same, failing which the suit will be disposed of an ex-parte.

SCHEDULE

ITEM NO.1 All that piece and parcel of the agriculture land bearing Sy.No.3/2 measuring 1 acre 14 guntas situated at Hullegowdanahalli Village, Dasanapura Hobli, Bengaluru North Taluk, bounded on:
East by : Land of Rajanna, **West by :** Land of Subbanna,
North by : Land of Gangaramaiah,
South by : Land of Phanish,

ITEM NO.2 All that piece and parcel of the agriculture land bearing Sy.No.69/1 measuring 0-27.08 guntas situated at Hullegowdanahalli Village, Dasanapura Hobli, Bengaluru North Taluk, bounded on:
East by : Kharab Land, **West by :** Land of Suggaramaiah & Kallugutte, **North by :** Land of Ranganarasaiah,
South by : Land of Krishnappa,

ITEM NO.3 All that piece and parcel of the agriculture land bearing Sy.No.7/2A measuring 0-10.08 guntas situated at Hullegowdanahalli Village, Dasanapura Hobli, Bengaluru North Taluk bounded on:
East by : Land of Rangaiah & Suggarangaiah,
West by : Land of Phanish, **North by :** Land of Rajappa,
South by : Land of Rangaramaiah,

Given under my hand and seal of this Hon'ble court on 5th March 2026.

BY ORDER OF THE COURT
Sd/- SHERISTEDAR
COURT OF SENIOR CIVIL JUDGE & JMFC., NELAMANGALA

Advocate for Plaintiffs YASHASVI ASSOCIATES
Umesh B.A. L.L.B.,
Sharath Babu. C B.A. L.L.B., Advocates
#10, 2nd Floor, Anand Complex, Opposite Town Police Station, B.H.Road, Nelamangala Town -562 123
Bengaluru Rural District - 562 123

ಕರ್ನಾಟಕ ಸರ್ಕಾರ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಮಹಾತ್ಮಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು–22

ನಂ: ಕೃಉಮಾಸ(ಬೆಂ)ಎನ್‌ಒಸಿ–5102/2025–26 ದಿ: 12.02.2026

ಪ್ರಕಟಣೆ

ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವ ಸಮಸ್ತ ರೈತಬಾಂಧವರು, ಪೇಟಿ ಕಾರ್ಯಕರ್ತರು ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶ್ರೀ ಬಸವರಾಧ್ಯ. ಬಿ.ಯು S/o ಲೇಟ್ ಬಿ.ಜಿ.ಉಮೇಶ್, ಇವರು ದಿನಾಂಕ: 04.02.2026 ರಂದು ಈ ಕಛೇರಿಗೆ ಸಲ್ಲಿಸಿರುವ ಮನವಿಯಲ್ಲಿ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ 5ನೇ ಮುಖ್ಯ ರಸ್ತೆಯಲ್ಲಿ ಮೆ:ಗಂಗಪ್ಪ ಅಂಡ್ ಕಂಪನಿ ಸಂಸ್ಥೆಯ ಹೆಸರಿನಲ್ಲಿ ಹೊಂದಿರುವ ಮಳಿಗೆ ಸಂಖ್ಯೆ: 231ನ್ನು ಸದರಿ ಸಂಸ್ಥೆಯ ಮಾಲೀಕರಾದ ಶ್ರೀ ಬಿ.ಜಿ.ಉಮೇಶ್, ಇವರು ಶ್ರೀ ಬಸವರಾಧ್ಯ.ಬಿ. ಯು ಇವರ ಹೆಸರಿಗೆ ವಿಲ್ ಮೂಲಕ ನೊಂದಣಿ ಮಾಡಿ ಕೊಟ್ಟಿರುತ್ತಾರೆ. ಶ್ರೀ ಬಿ.ಜಿ.ಉಮೇಶ್, ಇವರು ದಿನಾಂಕ: 01.08.2025 ರಂದು ಮರಣ ಹೊಂದಿರುವುದರಿಂದ ಸದರಿ ಸ್ವತ್ತನ್ನು ತಮ್ಮ ಹೆಸರಿಗೆ ಖಾತಾ ಬದಲಾವಣೆ ಮಾಡಲು ಅನುಮತಿ ನೀಡುವಂತೆ ವಿನಂತಿಸಿ ಕೊಂಡಿರುತ್ತಾರೆ.

ಆದುದರಿಂದ ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಯಾರಿಂದಲಾದರೂ ಆಕ್ಷೇಪಣೆ / ತಕರಾರುಗಳಿದ್ದಲ್ಲಿ ಈ ಪ್ರಕಟಣೆಯು ದಿನ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ದಾಖಲೆ ಸಹಿತ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಬೆಂಗಳೂರು, ಇವರಿಗೆ ಸಲ್ಲಿಸಲು ತಿಳಿಸಲಾಗಿದೆ ಮತ್ತು ನಿಗಧಿತ ಅವಧಿ ಮುಗಿದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/– **ಕಾರ್ಯದರ್ಶಿ**

BEFORE THE MOTOR ACCIDENT CLAIMS TRIBUNAL AT BANGALORE
MVC 4059/2025

BETWEEN : KHADEER AHMED ...**Petitioner**
AND : RELIANCE GENERAL INSURANCE CO. LTD., & ANOTHER ...**Respondents**

NOTICE FOR SECOND RESPONDENT

To,Mr. **RANGASWAMY,** S/o. RANGAPPA, Residing at No.25, 1ST MAIN, 4TH A CROSS, SYNDICATE BANK COLONY, SVG NAGAR, NAGARABHAVI, BANGALORE-560072.

''ಹಾಗೇನಿಲ್ಲ. ಮೀನಾಕ್ಷಿಗೆ ಕಾರ್ ಕೊಟ್ಟೆ; ಎರಡು ಡೆಂಟು, ಒಂದು ಸಿಗ್ನಲ್ ಜಂಪ್ ಕೇಸು ಗೇಯ್ನ್ ಆಗಿದೆ. ರಚನಾಗೆ ರೂಮ್ ಕೊಟ್ಟು 'ಫೀಲ್ ಎಟ್ ಹೋಂ' ಅಂದೆ. ಅವಳು ಬೆಡ್ ಮೇಲೆ ಒದ್ದೆ ಟವಲ್ ಹಾಕಿದಳು. ಸಿಕ್ಕ ಸಿಕ್ಕ ಕಡೆಯಲ್ಲಿ ಟಿಶ್ಯೂಗಳನ್ನ ಎಸೆದಳು. ಕಿಟಕಿಯ ಕರ್ಟನ್‌ಗೆ ಫ್ರೆಂಚ್ ಫ್ರೈಸ್ ತಿಂದು ಕೈ ಒರೆಸಿಕೊಂಡಳು. ಹೆಚ್ಚಾದ ಲಿಪ್‌ಸ್ಟಿಕ್ಕನ್ನ ಪಿಲ್ಲೋ ಕವರ್‌ನಿಂದ ಒರೆಸಿಕೊಂಡಳು. ಅಂತೂ ಅವರ ಮನೆಯಲ್ಲಿ ಹೇಗಿರ್ತಾಳೋ ಹಾಗಿದ್ದಳು. ಅವಳಿಗೆ ಸ್ವಾತಂತ್ರ್ಯ ಕೊಟ್ಟೆ, ನಾನು ಯಾರಿಗೆ ಯಾವ ಮಾತನ್ನ ಎಲ್ಲಿ ಆಡಬಾರದು ಅನ್ನೋ ಜ್ಞಾನವನ್ನ ಗೇಯ್ನ್ ಮಾಡ್ದೆ. ನನ್ನ ಕಥೆ ಹಾಗಿರಲಿ, ನೀನು ಏನು ಕೊಟ್ಟೆ, ಏನು ಪಡೆದೆ?'' ಎಂದೆ.

''ನಿಮ್ಮ ಮಾತಿಗೆ ಬೆಲೆ ಕೊಟ್ಟೆ. ಹಾಗೆ ಬೆಲೆ ಕೊಟ್ಟಿದ್ದು ಮಣ್ಣಿನ್ನೋ ಕೆಲಸ ಅನ್ನೋ ಪರಿಜ್ಞಾನವನ್ನ ಪಡೆದೆ. From give to gain to give to groan! ಒಳ್ಳೆಯ ಫಜೀತಿಯಾಯ್ತು'' ಎಂದು ಟೆರಿಬಲ್ ಸುಸ್ತಿನಲ್ಲೂ ಕೆಂಗಣ್ಣಾದಳು ಸತಿ. ''ಆಮೆನ್'' ಎಂದೆ.

ಅಧ್ಯಯನಪೂರ್ಣ ಕೃತಿ 'ಔಶನಸ ಚಾಣಕ್ಯ'

ಚಾಣಕ್ಯರ ಅಸಾಧಾರಣ ವ್ಯಕ್ತಿತ್ವವನ್ನು ಒಂದೇ ಕಡೆ ಸಮಗ್ರವಾಗಿ ಕಟ್ಟಿಕೊಡುವಲ್ಲಿ ಸದ್ಯೋಜಾತ ಭಟ್ಟರ 'ಔಶನಸ ಚಾಣಕ್ಯ' ಯಶಸ್ವಿಯಾಗಿದೆ. ಈ ಪುಸ್ತಕವು ಇಂದು ಬಿಡುಗಡೆಯಾಗಲಿದೆ.

▸ **ಅಶ್ವಿನಿ ಹೊದಲ**



ಭಾರತೀಯ ಇತಿಹಾಸವನ್ನು ವೈದಿಕ ಮತ್ತು ಪುರಾಣೇತಿಹಾಸ, ಪ್ರಾಚೀನ ಮತ್ತು ಮಧ್ಯಕಾಲೀನ ಹಾಗೂ ಆಧುನಿಕ ಇತಿಹಾಸ ಎಂಬುದಾಗಿ ಮೂರು ಕಾಲಘಟ್ಟದಲ್ಲಿ ವಿಶ್ಲೇಷಿಸಬಹುದು. ಶ್ರುತಿ-ಸ್ಮೃತಿಗಳು, ಧರ್ಮಸೂತ್ರಗಳ ಅನುಷ್ಠಾನವನ್ನು ರಾಮಾಯಣ-ಮಹಾಭಾರತಗಳಲ್ಲಿ ಕಾಣಬಹುದು. ಮಹಾಭಾರತದ ಕಾಲಕ್ಕೆ ಬಂದಾಗ ಅನೇಕ ಬೃಹತ್ ಸಾಮ್ರಾಜ್ಯಗಳು, ರಾಜವಂಶಗಳು, ಚಕ್ರವರ್ತಿಗಳು ಆರ್ಯಾವರ್ತವನ್ನು ಆಳಿಹೋಗಿದ್ದರು. ಕೌರವ-ಪಾಂಡವರು ಬೃಹಸ್ಪತಿನೀತಿ ಮತ್ತು ಶುಕ್ರನೀತಿಗಳನ್ನು ಸಂಪೂರ್ಣ ಅನುಸರಿಸಿದ್ದು ಇಡೀ ಮಹಾಭಾರತದುದ್ದಕ್ಕೂ ಕಾಣಬಹುದು. ಅರ್ಥನೀತಿ, ದಂಡನೀತಿ, ರಾಜನೀತಿಯಾದಿಯಾಗಿ ಸಾಮ್ರಾಜ್ಯ ಸ್ಥಾಪನೆ ಮತ್ತು ನಿರ್ವಹಣೆಗೆ ರಾಜನಾದವ ಪಾಲಿಸಬೇಕಾದ ಅನುಶಾಸನಗಳನ್ನು ಭೀಷ್ಮ ಮತ್ತು ವಿದುರರು ಮಹಾಭಾರತದಲ್ಲಿ ವಿಸ್ತಾರವಾಗಿ ತಿಳಿಸಿಕೊಟ್ಟಿದ್ದಾರೆ. ಆದರೆ ಮಹಾಭಾರತದ (ಕ್ರಿ.ಪೂ. 3102) ನಂತರದಲ್ಲಿ ಮತ್ತೊಂದು ರಾಜ್ಯಶಾಸ್ತ್ರ ಬಹಳ ಖ್ಯಾತವಾಯಿತು ಅದೇ ಚಾಣಕ್ಯನ ಅರ್ಥಶಾಸ್ತ್ರ. ತನಗಿಂತ ಪೂರ್ವದಲ್ಲಿದ್ದ ಶುಕ್ರನೀತಿ ಮತ್ತು ಬೃಹಸ್ಪತಿನೀತಿಯನ್ನು ಆಗಿನ ಕಾಲಘಟ್ಟಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ಚಾಣಕ್ಯ ರಚಿಸಿದ ರಾಜನೀತಿ ಸರ್ವಕಾಲಕ್ಕೂ ಅನ್ವಯಿಸುವಂತದ್ದು. ಇಂದು ಭಾರತವೂ ಸೇರಿದಂತೆ ಜಗತ್ತಿನ ಬಹುತೇಕ ದೇಶಗಳು ತಮ್ಮ ರಾಷ್ಟ್ರೀಯ ನೀತಿಗಳನ್ನು ಚಾಣಕ್ಯನ ಅರ್ಥಶಾಸ್ತ್ರದ ಮೇಲೆಯೇ ರಚಿಸಿಕೊಂಡಿವೆ.

ಭಾರತ ಯುದ್ಧ ಮುಗಿದು ಪಾಂಡವರು 36 ವರ್ಷಗಳ ಆಳ್ವಿಕೆ ನಡೆಸಿದರು. ಆನಂತರದಲ್ಲಿ ಬೃಹದ್ರಥ, ಪ್ರದ್ಯೋತ, ಶಿಶುನಾಗ ವಂಶದ ರಾಜರು ಸುಮಾರು 1500 ವರ್ಷ ಮಗಧವನ್ನು ಆಳಿದರು. ಭೌಗೋಳಿಕವಾಗಿ 16 ಮಹಾಜನಪದಗಳಲ್ಲಿ ಮಗಧವು ಪ್ರಮುಖವಾಗಿತ್ತು. ಮಗಧದ ಸಾರ್ವಭೌಮತ್ವದ ಅಧಿಪತ್ಯವು ಶಿಶುನಾಗರ ನಂತರ ನಂದ ವಂಶದ ರಾಜರ ತೆಕ್ಕೆಗೆ ಬಿತ್ತು. ನಂದವಂಶದ ಕೊನೆಯ ದೊರೆ ಸುಮಾಲ್ಯನಂದನ ವಿಷಯ ಲೋಲುಪತೆಯಿಂದ ಮಹಾಜನಪದವೊಂದು ಅರಾಜಕತೆಯತ್ತ ಸಾಗುತ್ತಿದ್ದಾಗಲೇ ಗ್ರೀಕ್ ದೊರೆ ಅಲೆಕ್ಸಾಂಡರ್ ಭಾರತದ ಮೇಲೆ ತನ್ನ ಅಧಿಪತ್ಯ ಸ್ಥಾಪಿಸಲು ಸಿಂಧೂನದಿಯ ಸಮೀಪ ಬೀಡುಬಿಟ್ಟಿದ್ದ. ಅಲ್ಲಿಂದ ಆರಂಭವಾಗುವುದೇ ರೋಚಕ ಇತಿಹಾಸ. ಒಳಗಿನ ರಾಜಕೀಯ ಶಿಥಿಲತೆ ಮತ್ತು ಹೊರಗಿನಿಂದ ಯವನರ ದಾಳಿ ಎರಡಕ್ಕೂ ಪರಿಹಾರವೆಂದರೆ ಅಖಂಡ ಭಾರತವನ್ನು ಏಕಚಕ್ರಾಧಿಪತ್ಯದ ಕೆಳಗೆ ತರುವುದು. ಚಾರಿತ್ರಿಕವಾಗಿ ಇದೊಂದು ಮಹತ್ವದ ಘಟ್ಟವೆನಿಸುತ್ತದೆ. ಹೊಸದೊಂದು ಬದಲಾವಣೆಯ ಅನಿವಾರ್ಯತೆಯನ್ನು ಮನಗಂಡ ಧೀಮಂತ ಮಹಾಗುರು ಚಾಣಕ್ಯರು ಮಗಧವನ್ನು ಮೋರಿಯಾ ಜನಪದದ ರಾಜಕುಮಾರನಾದ ಚಂದ್ರಗುಪ್ತನನ್ನು ಆ ಮಹಾನ್ ಕಾರ್ಯಕ್ಕೆ ತರಬೇತುಗೊಳಿಸಿದ ಪರಿ ನಿಜಕ್ಕೂ ಕುತೂಹಲಕಾರಿ. ಚಾಣಕ್ಯರ ಕಾರ್ಯವೈಖರಿ, ವಿದ್ವತ್ತು, ತಂತ್ರಗಾರಿಕೆ ಎಲ್ಲವನ್ನೂ ವಿಷದವಾಗಿ ಒಳಗೊಂಡಿರುವ ಐತಿಹಾಸಿಕ ಕಾದಂಬರಿಯೇ ಸದ್ಯೋಜಾತ ಭಟ್ಟರ 'ಔಶನಸ ಚಾಣಕ್ಯ'. ಮಹಾಜನಪದಗಳ ಆಗಿನ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ವ್ಯವಸ್ಥೆಗಳ ಸಂಪೂರ್ಣ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಈ ಪುಸ್ತಕ ಯಶಸ್ವಿಯಾಗಿದೆ. ಕನ್ನಡದಲ್ಲಿ ಚಾಣಕ್ಯರ ಕುರಿತಾಗಿ ಕೆಲವು ಕಾದಂಬರಿಗಳು ಬಂದಿದ್ದರೂ ಈ ಪುಸ್ತಕ ಅವರ ಪರಿಪೂರ್ಣ ವ್ಯಕ್ತಿತ್ವವನ್ನು ಕಾಲ್ಪನಿಕವಾಗಿರಿಸದೇ ಐತಿಹಾಸಿಕ ಹಿನ್ನೆಲೆಯಲ್ಲಿ ನೈಜವಾಗಿ ಕಟ್ಟಿಕೊಡುತ್ತದೆ.



ಒಂದು ಸಾಮ್ರಾಜ್ಯ ಸ್ಥಾಪನೆ ಎಂದರೆ ಒಂದು ಸಾಲಿನಲ್ಲಿ ದಾಖಲಾಗುವ ಇತಿಹಾಸವಲ್ಲ. ಮೌರ್ಯ ಸಾಮ್ರಾಜ್ಯ ಸ್ಥಾಪನೆಯ ಮೂಲಕ ಸುಭದ್ರ ಭಾರತ ನಿರ್ಮಾಣಕ್ಕಾಗಿ ಚಾಣಕ್ಯರು ಅನುಸರಿಸಿದ ತಂತ್ರಗಾರಿಕೆ ಎಂಥವರನ್ನೂ ನಿಬ್ಬೆರಗಾಗಿಸುವಂತದ್ದು. ಸಮಸ್ತ ಆರ್ಯಾವರ್ತ, ಆರ್ಯ ಸಂಸ್ಕೃತಿಯ ಮೇಲೆ ವಿದೇಶೀಯರ ದಾಳಿಯನ್ನು ವಿರೋಧಿಸಲು, ಅವರು ಭಾರತದೊಳಗೆ ಪ್ರವೇಶಿಸದಂತೆ ತಡೆಯಲು, ಆಂತರಿಕ ಕಲಹಗಳನ್ನು ಸೃಷ್ಟಿಸಿಕೊಂಡು ವಿದೇಶೀಯರ ಕೈಗೆ ಭಾರತವನ್ನು ಒಪ್ಪಿಸಲು ಸಿದ್ಧರಾಗಿದ್ದ ದುರ್ಬಲ ರಾಜರನ್ನು ನಿರ್ಮೂಲ ಮಾಡುವಂತಹ ಕಷ್ಟಸಾಧ್ಯವಾದ ಕಾರ್ಯವನ್ನು ಸಾಧಿಸಿದವರು ಚಾಣಕ್ಯರು. ಪ್ರಬಲವಾದ ಚಕ್ರವರ್ತಿಯೊಬ್ಬನ ನಾಯಕತ್ವದಿಂದ ಮಾತ್ರವೇ ಭಾರತದ ಐಕ್ಯತೆ ಸಾಧ್ಯವೆಂಬುದನ್ನು ಮನಗಂಡ ಚಾಣಕ್ಯರು ತಕ್ಷಶಿಲೆಯಿಂದ ಮಗಧಕ್ಕೆ ಬಂದು ದುರ್ಬಲ ರಾಜರನ್ನೆಲ್ಲ ತಂತ್ರಗಾರಿಕೆಯಿಂದ ತಮ್ಮ ಹಿಡಿತಕ್ಕೆ ತೆಗೆದುಕೊಂಡು, ಸಣ್ಣಸಣ್ಣ ಜನಪದಗಳ ಜನರನ್ನು ಒಟ್ಟುಗೂಡಿಸಿ ಗ್ರೀಕ್‌ಸೇನೆಯನ್ನು ಹಿಮ್ಮೆಟ್ಟುವಂತೆ ಮಾಡಿ, ದುಷ್ಟ ನಂದರಾಜನ ದುರಾಡಳಿತವನ್ನು ಅಂತ್ಯಗೊಳಿಸಿ, ಚಂದ್ರಗುಪ್ತನಿಂದ ಮೌರ್ಯ ಸಾಮ್ರಾಜ್ಯ ಸ್ಥಾಪಿಸಿದ ಧೀಮಂತ ವ್ಯಕ್ತಿ. ಔಶನಸವೆಂಬ ವಿಚಿತ್ರ ಮತ್ತು ನಿಗೂಢ ತಂತ್ರಗಾರಿಕೆಯೊಂದು ಪ್ರಾಚೀನದಲ್ಲಿ ಇತ್ತಾದರೂ ಅದರ ಪರಿಪೂರ್ಣ ಪ್ರಯೋಗವನ್ನು ಕೃತಿಕಾರರು ಪ್ರಪ್ರಥಮ ಬಾರಿಗೆ ಕನ್ನಡಕ್ಕೆ ಪರಿಚಯಿಸಿದ್ದಾರೆ. ಅಂದಿನ ಕಾಲಕ್ಕೆ ಕುಟಿಲ ರಾಜಕೀಯ ತಂತ್ರವಾದ ಔಶನಸ ನೀತಿಯಲ್ಲಿ ಪರಿಣತರಾಗಿದ್ದ ಬೆರಳೆಣಿಕೆಯಷ್ಟು ಜನರಲ್ಲಿ ಪ್ರಾಚಾರ್ಯ ಚಾಣಕ್ಯರು ಮುಂಚೂಣಿಯಲ್ಲಿ ನಿಲ್ಲುತ್ತಾರೆ.

ಅದಾಗಲೇ ಮಗಧವು ಬಹುದೊಡ್ಡ ಸಾಮ್ರಾಜ್ಯವಾಗಿತ್ತು. ಕ್ರಯ-ವಿಕ್ರಯಗಳ ವಹಿವಾಟು ಉನ್ನತಸ್ತರದಲ್ಲಿ ಅಭಿವೃದ್ಧಿಗೊಂಡಿತ್ತು. ಪೂರ್ವದಿಂದ ಹೊರಟ ವಣಿಕರು ಕೋಸಲ, ಕಾಶೀ, ಶ್ರಾವಸ್ತಿ, ಪಾಂಚಾಲ, ಕೇಕಯದ ಮಾರ್ಗವಾಗಿ ಗಾಂಧಾರ, ಕಾಂಭೋಜದೆಡೆಗೆ ತೆರಳುತ್ತಿದ್ದರು. ಸಾರ್ಥ ಎಂಬ ಸುಸಜ್ಜಿತ ವ್ಯಾಪಾರ ಮತ್ತು ವಾಣಿಜ್ಯ ವ್ಯವಸ್ಥೆಯೇ ರಾಜ್ಯ ಕೋಶಗಳನ್ನು ತುಂಬಿಸುವ ಆರ್ಥಿಕ ಪ್ರಮುಖ ಮೂಲವಾಗಿತ್ತು. ಸಾರ್ಥಗಳು ಮಹಾನಗರಗಳನ್ನು ಹಾದುಹೋಗುವಾಗ ನಡೆಯುವ ಚಟುವಟಿಕೆಗಳು, ಅಲ್ಲಿನ ರಕ್ಷಣಾ ವ್ಯವಸ್ಥೆ, ವಿಭಿನ್ನ ಸಂಸ್ಕೃತಿಗಳ ಮಿಶ್ರಣ, ಭಾಷಾ ಕಲೆಗಳು, ಎಲ್ಲವನ್ನೂ ಕೃತಿಕಾರರು ವಿಶೇಷವಾಗಿ ಪರಿಚಯಿಸಿದ್ದಾರೆ. ಪ್ರಾಯಶಃ ಸಾರ್ಥದ ಪರಿ ಕಲ್ಪನೆಯೇ ಚಾಣಕ್ಯರಿಗೆ ಅರ್ಥನೀತಿಯನ್ನು ಸಾರ್ವ ಕಾಲಿಕ ವಾಗಿರುವಂತೆ ರಚಿಸುವುದು ಸಾಧ್ಯವಾಯಿತು. ಮೊಘಲರು ಭಾರತವನ್ನು ಪ್ರವೇಶಿಸಿದ ನಂತರದಲ್ಲಿ ಈ ಸಾರ್ಥವೆಂಬ ವ್ಯಾಪಾರ ಪದ್ಧತಿ ಕಣ್ಣಿಗೆ ಕಾಣದಂತೆ ನಶಿಸಿತು.

ಒಂದು ರಾಷ್ಟ್ರದ ಉಳಿವಿಗೆ ಧರ್ಮಮೂಲದಿಂದ ಬರುವ ಅರ್ಥವೇ ಅತ್ಯಂತ ಪ್ರಮುಖವಾದದ್ದು. ದಂಡ ಮತ್ತು ತೆರಿಗೆ ಕೋಶಕ್ಕೆ ಮೂಲವಾದರೂ ಅದಕ್ಕೊಂದು ಚೌಕಟ್ಟು ಇರಬೇಕು. ಜನರು ಅರ್ಥ ವ್ಯವಸ್ಥೆಯಿಂದ ದೂರ ಸರಿದರೆ ಅಥವಾ ಅನಗತ್ಯ ಸ್ವೇಚ್ಛಾಕಾರ್ಯಗಳಲ್ಲಿ ನಿರತರಾದರೆ ಅದು ಇಡೀ ರಾಷ್ಟ್ರವನ್ನು ಅವನತಿಗೆ ದೂಡುತ್ತದೆ. ರಾಜನಾದವನಿಗೆ ಜಿತೇಂದ್ರಿಯತ್ವವೇ ಪ್ರಧಾನ, ಆತ ರಾಜಪೀಠವನ್ನು ಅಲಂಕರಿಸಿದರೂ ವಿಲಾಸೀಜೀವನ ನಡೆಸದೇ ಸಂನ್ಯಾಸಿಯಂತೆಯೇ ಜೀವಿಸಬೇಕು ಎಂಬುದು ಚಾಣಕ್ಯರ ತತ್ತ್ವ. ಶಿಥಿಲವಾಗುತ್ತಿದ್ದ ರಾಜಕೀಯ ವ್ಯವಸ್ಥೆಗೆ ಅವಶ್ಯವಾಗಿರಲೇಬೇಕಾದ ಆಡಳಿತಾತ್ಮಕ ಕ್ರಮಗಳು, ಸೇನಾ ವ್ಯವಸ್ಥೆ, ಗೂಢಚರ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ, ರಾಜತಂತ್ರಗಳು, ನೆರೆಹೊರೆ ರಾಜ್ಯಗಳೊಂದಿಗಿನ ಸೌಹಾರ್ದತೆ, ಬಾಹ್ಯ ಆಕ್ರಮಣಗಳನ್ನು ಬಗ್ಗುಬಡಿಯುವ ಆಂತರಿಕ ಭದ್ರತೆ, ರಾಜ್ಯಾಡಳಿತದಲ್ಲಿರುವ ಪ್ರತಿಯೊಬ್ಬನ ಜವಾಬ್ದಾರಿ ಮತ್ತು ಕರ್ತವ್ಯಗಳು, ಎಲ್ಲವನ್ನೂ ಚಾಣಕ್ಯರು ಹೇಗೆ ನಿರ್ವಹಿಸಿದರು ಎಂಬುದನ್ನು ಪುಸ್ತಕ ಓದಿಯೇ ತಿಳಿಯಬೇಕು.

ಪ್ರಬಲ ಮತ್ತು ಸದೃಢ ರಾಷ್ಟ್ರನಿರ್ಮಾಣಕ್ಕಾಗಿ ತಮ್ಮ ಇಡೀ ಜೀವನವನ್ನೇ ವಿನಿಯೋಗಿಸಿಕೊಂಡವರು ಆಚಾರ್ಯ ಚಾಣಕ್ಯರು. ಅವರ ಇಡೀ ಜೀವನವೇ ಅಧ್ಯಯನಕ್ಕೆ ಯೋಗ್ಯವಾದ್ದು. ಆರ್ಯಸಂಸ್ಕೃತಿ, ಆರ್ಯಪರಂಪರೆ, ಆರ್ಯದೇಶವನ್ನು ಸದಾ ಏಕತ್ರವಾಗಿರಿಸಲು ಶ್ರಮಿಸಿದ ಅಸಾಧಾರಣ ವ್ಯಕ್ತಿತ್ವವನ್ನು ಒಂದೇ ಕಡೆ ಸಮಗ್ರವಾಗಿ ಕಟ್ಟಿಕೊಡುವಲ್ಲಿ ಸದ್ಯೋಜಾತ ಭಟ್ಟರ 'ಔಶನಸ ಚಾಣಕ್ಯ' ಯಶಸ್ವಿಯಾಗಿದೆ. ಪ್ರತಿಯೊಂದು ಅಧ್ಯಾಯವು ರೋಮಾಂಚನವನ್ನುಂಟುಮಾಡುತ್ತದೆ. ಓದುಗನ ಮನಸ್ಸನ್ನು ಅಂದಿನ ಕಾಲಕ್ಕೆ ಕೊಂಡೊಯ್ದು ವಿಹರಿಸುವಂತೆ ಮಾಡುವುದಂತೂ ಸತ್ಯ. ಚಾಣಕ್ಯರನ್ನು ಧಾರಾವಾಹಿಗಳಲ್ಲೋ, ಚಲನಚಿತ್ರಗಳಲ್ಲೋ ಕಾಲ್ಪನಿಕವಾಗಿ ಚಿತ್ರಿಸಿಕೊಂಡು ಅವರ ವ್ಯಕ್ತಿತ್ವವನ್ನು ಸಂಕುಚಿತಗೊಳಿಸಿ ಇದಮಿತ್ಥಂ ಎಂದು ತಿಳಿಯುವುದರ ಬದಲಾಗಿ ಚಾಣಕ್ಯರ ನೈಜವ್ಯಕ್ತಿತ್ವವನ್ನು ಅರಿಯಲು ಇತಿಹಾಸಕಾರರಾದ ಸದ್ಯೋಜಾತ ಭಟ್ಟರ ಅಧ್ಯಯನಪೂರ್ಣ ಕೃತಿ 'ಔಶನಸ ಚಾಣಕ್ಯ'ವನ್ನು ಎಲ್ಲರೂ ಓದಲೇಬೇಕೆಂಬ ಆಗ್ರಹ ನನ್ನದು. ಇಂದು ಬಿಡುಗಡೆಯಾಗುತ್ತಿರುವ ಕನ್ನಡ ಸಾಹಿತ್ಯ ಲೋಕಕ್ಕೆ ಅತ್ಯುತ್ತಮ ಕಾಣಿಕೆಯಾದ ಕೃತಿಗೆ ಮತ್ತು ಕೃತಿಕಾರರಿಗೆ ಅಭಿನಂದನೆಗಳು.

ಜನೌಷಧಿ ಅಗ್ಗವೂ ಹೌದು, ವಿಶ್ವಾಸಾರ್ಹವೂ ಹೌದು; ಉಳಿತಾಯದೊಂದಿಗೆ ಆರೋಗ್ಯ ರಕ್ಷಣೆ

▸ **ಜೆ.ಪಿ.ನಡ್ಡಾ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು**



ಒಂದು ರಾಷ್ಟ್ರದ ಪ್ರಗತಿಯ ನಿಜವಾದ ಅಳತೆಗೋಲು ಅಲ್ಲಿನ ನಾಗರಿಕರು ಆರೋಗ್ಯ ರಕ್ಷಣೆಯಂತಹ ಮೂಲಭೂತ ಅವಶ್ಯಕತೆಗಳನ್ನು ಎಷ್ಟು ಸುಲಭವಾಗಿ ಪಡೆಯುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ದಶಕಗಳ ಕಾಲ, ಔಷಧಿಗಳ ಹೆಚ್ಚಿನ ಬೆಲೆಯು ಭಾರತದ ಲಕ್ಷಾಂತರ ಜನರ ಆರೋಗ್ಯ ಮತ್ತು ಕ್ಷೇಮಕ್ಕೆ ಪ್ರಮುಖ ಆರ್ಥಿಕ ಅಡಚಣೆಯಾಗಿತ್ತು. ಈ ಹಿನ್ನೆಲೆಯಲ್ಲಿ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಪ್ರಾರಂಭವಾದ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ (ಪಿಎಂಬಿಜೆಪಿ), ಬ್ರಾಂಡೆಡ್ ಔಷಧಿಗಳಿಗಿಂತ ಗಣನೀಯವಾಗಿ ಕಡಿಮೆ ಬೆಲೆಗೆ ಗುಣಮಟ್ಟದ ಜೆನೆರಿಕ್ ಔಷಧಿಗಳನ್ನು ಒದಗಿಸುವ ಮೂಲಕ ಸಾರ್ವಜನಿಕ ಆರೋಗ್ಯ ರಕ್ಷಣೆಯಲ್ಲಿನ ನಿರ್ಣಾಯಕ ಕೊರತೆಯನ್ನು ನೀಗಿಸಿದೆ. ಆಳವಾದ ವ್ಯವಸ್ಥಿತ ಬದಲಾವಣೆಯನ್ನು ತಂದಿದೆ.

ಜಾಗತಿಕವಾಗಿ, ಜೆನೆರಿಕ್ ಔಷಧಿಗಳು ಸುಲಭವಾಗಿ ಲಭ್ಯವಾಗುವ ಆರೋಗ್ಯ ವ್ಯವಸ್ಥೆಯ ಬೆನ್ನೆಲುಬಾಗಿವೆ. ಪ್ರಪಂಚದಾದ್ಯಂತ ಶೇ.80-90 ರಷ್ಟು ವೈದ್ಯರು ಬರೆಯುವ ಚೀಟಿಗಳಲ್ಲಿ ಇವುಗಳೇ ಇರುತ್ತವೆ. ಅಗತ್ಯ ಔಷಧಿಗಳ ಲಭ್ಯತೆಯನ್ನು ವಿಸ್ತರಿಸುವಲ್ಲಿ ಇವು ನಿರ್ಣಾಯಕ ಪಾತ್ರ ವಹಿಸಿವೆ. ಜೆನೆರಿಕ್ ಔಷಧಿಗಳು ಪ್ಯಾಕೇಜಿಂಗ್, ಲೇಬಲಿಂಗ್ ಮತ್ತು ನಿಷ್ಕ್ರಿಯ ಘಟಕಾಂಶಗಳಲ್ಲಿ ವ್ಯತ್ಯಾಸ ಹೊಂದಿರಬಹುದು, ಆದರೆ ಇವುಗಳು ಅವುಗಳ ಚಿಕಿತ್ಸಕ ಪರಿಣಾಮದ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಎಂದು ಅಧ್ಯಯನಗಳು ತೋರಿಸಿವೆ. ಇವು ಡೋಸೇಜ್, ಸುರಕ್ಷತೆ, ಸಾಮರ್ಥ್ಯ, ಗುಣಮಟ್ಟ ಮತ್ತು ಉದ್ದೇಶಿತ ಬಳಕೆಯ ವಿಷಯದಲ್ಲಿ ಬ್ರಾಂಡೆಡ್ ಔಷಧಿಗಳಿಗೆ ಸಮನಾಗಿರುತ್ತವೆ ಮತ್ತು ಅದೇ ಕಟ್ಟುನಿಟ್ಟಾದ ಉತ್ಪಾದನಾ ಮತ್ತು ಗುಣಮಟ್ಟದ ಮಾನದಂಡಗಳನ್ನು ಅನುಸರಿಸುತ್ತವೆ.

ಪಿಎಂಬಿಜೆಪಿ ಎನ್ನುವುದು ಕೇವಲ ಚಿಲ್ಲರೆ ವ್ಯಾಪಾರದ ಒಂದು ವಿಧಾನವಲ್ಲ; ಇದು ಭಾರತದ ಆರೋಗ್ಯ ವ್ಯವಸ್ಥೆಯ ರಚನಾತ್ಮಕ ಬಲವರ್ಧನೆಯನ್ನು ಪ್ರತಿನಿಧಿಸುತ್ತದೆ. ಇದು ಈ ವರ್ಷದ ಜನೌಷಧಿ ಸಪ್ತಾಹದ ವಿಷಯವಾದ ''ಜನೌಷಧಿ ಸಸ್ತೀ ಭೀ, ಭರೋಸೆಮಂದ್ ಭೀ, ಸೇಹತ್ ಕಿ ಬಾತ್, ಬಚತ್ ಕೆ ಸಾತ್'' (ಜನೌಷಧಿ ಅಗ್ಗವೂ ಹೌದು, ವಿಶ್ವಾಸಾರ್ಹವೂ ಹೌದು, ಉಳಿತಾಯದೊಂದಿಗೆ ಆರೋಗ್ಯದ ರಕ್ಷಣೆ) ಎಂಬುದರಲ್ಲಿ ಪ್ರತಿಫಲಿಸುತ್ತದೆ, 18,000 ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳ ನಿರಂತರವಾಗಿ ವಿಸ್ತರಿಸುತ್ತಿರುವ ಜಾಲದ ಮೂಲಕ, ಈ ಯೋಜನೆಯು ಔಷಧಿಗಳು ಮಾರುಕಟ್ಟೆ ದರಕ್ಕಿಂತ ಶೇ.50ರಿಂದ 80ರಷ್ಟು ಕಡಿಮೆ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡಿದೆ. ಇದು ಎಲ್ಲಾ ಸಾಮಾಜಿಕ-ಆರ್ಥಿಕ ಹಿನ್ನೆಲೆಯ ಕುಟುಂಬಗಳಿಗೆ ಬೆಂಬಲ ನೀಡುತ್ತಿದೆ.

ಈ ಯೋಜನೆಯ ಪ್ರಮಾಣವು ಅದರ ಉತ್ಪನ್ನಗಳ ಪಟ್ಟಿಯಲ್ಲಿಯೂ ಕಂಡುಬರುತ್ತದೆ. ಜನೌಷಧಿಯು 29 ವಿಭಿನ್ನ ಚಿಕಿತ್ಸಾ ಕ್ಷೇತ್ರಗಳನ್ನು ಒಳಗೊಂಡಿರುವ 2,110 ಔಷಧಿಗಳು ಮತ್ತು 315 ಶಸ್ತ್ರಚಿಕಿತ್ಸಾ ಉತ್ಪನ್ನಗಳ ಬೃಹತ್ ಸಂಗ್ರಹವನ್ನು ಹೊಂದಿದೆ. ಭಾರತೀಯ ಔಷಧಗಳು ಮತ್ತು ವೈದ್ಯಕೀಯ ಸಾಧನಗಳ ಬ್ಯೂರೋ (ಪಿಎಂಬಿಐ) ನೇರ ಉಸ್ತುವಾರಿಯಲ್ಲಿ, ಈ ಉತ್ಪನ್ನಗಳ ವಿಸ್ತರಣೆಯು ಮಾರುಕಟ್ಟೆ ವಿಶ್ಲೇಷಣೆ, ಪಾಲುದಾರರ ತೊಡಗಿಸಿಕೊಳ್ಳುವಿಕೆ ಮತ್ತು ಸಮರ್ಪಿತ ತಜ್ಞರ ಸಮಿತಿಯ ಕಟ್ಟುನಿಟ್ಟಿನ ಮೇಲ್ವಿಚಾರಣೆಯನ್ನು ಒಳಗೊಂಡಿರುವ ಒಂದು ಕ್ರಿಯಾತ್ಮಕ ಮತ್ತು ದತ್ತಾಂಶ ಆಧಾರಿತ ಪ್ರಕ್ರಿಯೆಯಾಗಿದೆ. ಇದು ಯೋಜನೆಯು ದೇಶದ ಬದಲಾಗುತ್ತಿರುವ ಆರೋಗ್ಯ ಅವಶ್ಯಕತೆಗಳು ಮತ್ತು ಔಷಧೀಯ ಬೇಡಿಕೆಗಳಿಗೆ ಅನುಗುಣವಾಗಿರುವುದನ್ನು ಖಚಿತಪಡಿಸುತ್ತದೆ. ಬಲವಾದ ನಿಯಂತ್ರಕ ಮೇಲ್ವಿಚಾರಣೆಯೊಂದಿಗೆ, ಭಾರತೀಯ ಔಷಧ ಕಂಪನಿಗಳು ಅಮೆರಿಕ, ಬ್ರಿಟನ್ ಮತ್ತು ಐರೋಪ್ಯ ಒಕ್ಕೂಟದಂತಹ ಕಟ್ಟುನಿಟ್ಟಾದ ಮಾರುಕಟ್ಟೆಗಳು ಸೇರಿದಂತೆ 200ಕ್ಕೂ ಹೆಚ್ಚು ದೇಶಗಳಲ್ಲಿ ವಿಶ್ವಾಸಾರ್ಹ ಪೂರೈಕೆದಾರರಾಗಿ ಬೆಳೆದಿವೆ. ಭಾರತೀಯ ಔಷಧ ಕಂಪನಿಗಳು ಲ್ಯಾಟಿನ್ ಅಮೆರಿಕ, ಆಫ್ರಿಕಾ ಮತ್ತು ಪೂರ್ವ ಯುರೋಪಿನಂತಹ ಉದಯೋನ್ಮುಖ ಮಾರುಕಟ್ಟೆಗಳಿಗೂ ವಿಸ್ತರಿಸುತ್ತಿವೆ.

ಈ ಉದ್ಯಮವು 'ಬಯೋಸಿಮಿಲರ್ಸ್', ಜೈವಿಕ ಔಷಧಿಗಳ ಜೆನೆರಿಕ್ ಆವೃತ್ತಿಗಳ ಮೇಲೆ ಗಮನ ಹರಿಸುತ್ತಿದೆ, ಜತೆಗೆ ಸಂಕೀರ್ಣ ಜೆನೆರಿಕ್ಸ್ ಮತ್ತು ವಿಶೇಷ ಔಷಧಿಗಳನ್ನು ತಯಾರಿಸಲು ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಹೆಚ್ಚಿನ ಹೂಡಿಕೆ ಮಾಡುತ್ತಿದೆ. ಈ ದೂರದೃಷ್ಟಿಯ ಯೋಜನೆಗಳು ಭಾರತವನ್ನು ಜಾಗತಿಕ ಉತ್ಪಾದನಾ ಕೇಂದ್ರವಾಗಿ ಮಾತ್ರವಲ್ಲದೆ, ಕೈಗೆಟುಕುವ ಔಷಧಿ ಕ್ಷೇತ್ರದಲ್ಲಿ ಭವಿಷ್ಯದ ನಾವೀನ್ಯತೆ ನಾಯಕನನ್ನಾಗಿ ರೂಪಿಸುತ್ತಿವೆ.

ಬಹು-ಪದರದ ಗುಣಮಟ್ಟ ಭರವಸೆ ಚೌಕಟ್ಟಿನ ಮೂಲಕ, 'ಕಡಿಮೆ ಬೆಲೆ ಎಂದರೆ ಉತ್ಪಾದನಾ ಗುಣಮಟ್ಟದಲ್ಲಿ ರಾಜಿ' ಎಂಬ ಮಿಥ್ಯೆಯನ್ನು ಪಿಎಂಬಿಜೆಪಿ ಪರಿಣಾಮಕಾರಿಯಾಗಿ ತೊಡೆದುಹಾಕಿದೆ. ಜಾಗತಿಕ ಉತ್ಪಾದನಾ ಮಾನದಂಡಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಲು ಡಬ್ಲ್ಯುಎಚ್ ಒ-ಜಿಎಂಪಿ ಪ್ರಮಾಣೀಕೃತ ತಯಾರಕರಿಂದ ಔಷಧಿಗಳನ್ನು ಖರೀದಿಸಲಾಗುತ್ತದೆ. ಪ್ರತಿ ಬ್ಯಾಚ್ ಔಷಧಿಯು ಔಷಧಾಲಯದ ಶೆಲ್ಫ್ ತಲುಪುವ ಮೊದಲು ರಾಷ್ಟ್ರೀಯ ಪರೀಕ್ಷೆ, ಮಾಪನಾಂಕ ನಿರ್ಣಯ ಪ್ರಯೋಗಾಲಯಗಳ ಮಾನ್ಯತೆ ಮಂಡಳಿ (ಎನ್‌ಎಬಿಎಲ್) ಅನುಮೋದಿತ ಪ್ರಯೋಗಾಲಯಗಳಲ್ಲಿ ಕಟ್ಟುನಿಟ್ಟಾದ ಮೌಲ್ಯೀಕರಣಕ್ಕೆ ಒಳಗಾಗಬೇಕು ಎಂಬುದು ನಿಯಮವಾಗಿದೆ. ಈ ಔಷಧಗಳು ಔಷಧ ಮತ್ತು ಸೌಂದರ್ಯವರ್ಧಕ ಕಾಯ್ದೆ, 1940 ಅನ್ನು ಅನುಸರಿಸುತ್ತವೆ. ಲಭ್ಯತೆ, ಗುಣಮಟ್ಟ ಮತ್ತು ಕೈಗೆಟುಕುವ ದರ ಎಂಬ ಮೂರು ಸ್ತಂಭಗಳ ಮೇಲೆ ಕೇಂದ್ರೀಕರಿಸುವ ಮೂಲಕ, ಪಿಎಂಬಿಜೆಪಿ ಲಕ್ಷಾಂತರ ಜನರ ವೈದ್ಯಕೀಯ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡಿದೆ. ನಿರಂತರ ಸಾಂಸ್ಥಿಕ ಬೆಂಬಲ, ಹೆಚ್ಚುತ್ತಿರುವ ಸಾರ್ವಜನಿಕ ಜಾಗೃತಿ ಮತ್ತು ಮತ್ತಷ್ಟು ಮೂಲಸೌಕರ್ಯ ಸುಧಾರಣೆಗಳೊಂದಿಗೆ, ಪ್ರತಿ ಜಿಲ್ಲೆಯಲ್ಲಿ 'ಜನೌಷಧಿ ಕೇಂದ್ರ' ಎಂಬ ದೃಷ್ಟಿಕೋನವು ಈಗ ಕೇವಲ ಆಶಯವಾಗಿ ಉಳಿದಿಲ್ಲ? ಅದು ನನಸಾಗುತ್ತಿರುವ ವಾಸ್ತವವಾಗಿದೆ.

ಬೆಳಗಾವಿ ವಿಮಾನ ನಿಲ್ದಾಣ ರೆಡ್ ಝೋನ್ ಘೋಷಣೆ

ಬೆಳಗಾವಿ: ಇಸ್ರೇಲ್, ಇರಾನ್, ಅಮೆರಿಕ ಯುದ್ಧದಿಂದಾಗಿ ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣವನ್ನು 'ರೆಡ್ ಝೋನ್' ಎಂದು ಘೋಷಿಸಲಾಗಿದೆ.

ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದ ಮಾರ್ಗಸೂಚಿಯಂತೆ ಈ ಕ್ರಮ ಕೈಗೊಳ್ಳಲಾಗಿದೆ. ಸಾಂಬ್ರಾ ವಿಮಾನ ನಿಲ್ದಾಣದ ಸುತ್ತಮುತ್ತ 8 ಕಿಲೋಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಡ್ರೋನ್ ಹಾಗೂ ಅನ್ಮ್ಯಾನ್ಸ್ ಏರಿಯಲ್ ವಾಹನಗಳ ಹಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ರೆಡ್ ಝೋನ್ ಮತ್ತು ಯೆಲ್ಲೋ ಝೋನ್ ವ್ಯಾಪ್ತಿಯಲ್ಲಿ ಅನುಮತಿ ಇಲ್ಲದೆ ಡ್ರೋನ್ ಹಾರಾಟ ನಡೆಸುವುದು ಕಾನೂನುಬಾಹಿರ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.



ಇದಕ್ಕೆ ಸಂಬಂಧ ಬೆಳಗಾವಿ ಪೊಲೀಸ್ ಕಮಿಷನರ್ ಭೂಷಣ್ ಬೊರಸೆ ಪತ್ರಿಕಾ ಪ್ರಕಟಣೆ ಹೊರಡಿಸಿ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದಾರೆ. ವಿಮಾನ ನಿಲ್ದಾಣದ ಭದ್ರತೆ ದೃಷ್ಟಿಯಿಂದ ಈ ಕ್ರಮ ಅತ್ಯಾವಶ್ಯಕವಾಗಿದ್ದು, ಆದೇಶ ಉಲ್ಲಂಘನೆ ಮಾಡುವವರ ವಿರುದ್ಧ ಕಾನೂನು ಕಠಿಣ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಪ್ರಸ್ತುತ ಜಾಗತಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಾಗಿದ್ದು, ಸಾರ್ವಜನಿಕರು ಸಹಕರಿಸುವಂತೆ ಪೊಲೀಸ್ ಇಲಾಖೆ ಮನವಿ ಮಾಡಿದೆ.

ಉತ್ತರ ಪ್ರದೇಶದ ಶಿಕ್ಷಣ ಪದ್ಧತಿ ದೇಶಕ್ಕೆ ಮಾದರಿ

ಲಖ್ನೋ: ಉತ್ತರ ಪ್ರದೇಶದಲ್ಲಿ ಕಳೆದ ಏಳು ವರ್ಷಗಳಲ್ಲಿ ಶಿಕ್ಷಣ, ಉನ್ನತ ಶಿಕ್ಷಣ, ಅಂಗನವಾಡಿ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಮಹತ್ವದ ಪರಿವರ್ತನೆ ಕಂಡುಬಂದಿದ್ದು, ಸಮಗ್ರ ದೃಷ್ಟಿಯೊಂದಿಗೆ ರೂಪಿಸಿದ ಆಡಳಿತ ಕ್ರಮಗಳು ರಾಜ್ಯವನ್ನು ರಾಷ್ಟ್ರಮಟ್ಟದಲ್ಲಿ ಗಮನಾರ್ಹ ಸ್ಥಾನಕ್ಕೆ ಕೊಂಡೊಯ್ದಿವೆ ಎಂದು ರಾಜ್ಯಪಾಲರಾದ ಆನಂದಿ ಬೆನ್ ಪಟೇಲ್ ಅವರು ಹೇಳಿದರು.

ಕರ್ನಾಟಕ ಮತ್ತು ತ್ರಿಪುರ ಪತ್ರಕರ್ತರ ನಿಯೋಗಗಳು ಉತ್ತರ ಪ್ರದೇಶದ ಜನಭವನಕ್ಕೆ ಭೇಟಿ ನೀಡಿ ರಾಜ್ಯಪಾಲರೊಂದಿಗೆ ನಡೆಸಿದ ಸಂವಾದದಲ್ಲಿ, ಶಿಕ್ಷಣ ಕ್ಷೇತ್ರದ ಸುಧಾರಣೆಗಳು, ವಿಶ್ವವಿದ್ಯಾಲಯಗಳ ಗುಣಮಟ್ಟ ಹೆಚ್ಚಿಸುವ ಕ್ರಮಗಳು, ಮಹಿಳಾ ಸಬಲೀಕರಣ, ಅಂಗನವಾಡಿ ಅಭಿವೃದ್ಧಿ, ಆರೋಗ್ಯ ಅಭಿಯಾನಗಳು ಹಾಗೂ ಸಾಮಾಜಿಕ ಪಾಲ್ಗೊಳ್ಳುವಿಕೆ ಕುರಿತು ರಾಜ್ಯಪಾಲರು ಹಾಗೂ ಅಧಿಕಾರಿಗಳು ವಿವರಿಸಿದರು. ಈ ವೇಳೆ ಮಾತನಾಡಿದ ರಾಜ್ಯಪಾಲರಾದ ಆನಂದಿ ಬೆನ್ ಪಟೇಲ್, ಶಿಕ್ಷಣ ವ್ಯವಸ್ಥೆಯನ್ನು 'ಕೆಜಿಯಿಂದ ಪಿಜಿವರೆಗೆ' ಒಂದೇ ನಿರಂತರ ಪ್ರಕ್ರಿಯೆಯಾಗಿ ನೋಡಬೇಕು ಎಂದು ಹೇಳಿದರು.

ಅಂಗನವಾಡಿಗೆ ಬರುವ ಮೂರು ವರ್ಷದ ಮಗು ಭವಿಷ್ಯದಲ್ಲಿ ವಿಶ್ವವಿದ್ಯಾಲಯ ತಲುಪುವವರೆಗೂ ಅದರ ಶಿಕ್ಷಣದ ಪಥವನ್ನು ಸಮಗ್ರವಾಗಿ ರೂಪಿಸಬೇಕು ಎಂಬುದು ಈ ಮಾದರಿಯ ಮೂಲಭೂತ ಚಿಂತನೆ ಎಂದು ವಿವರಿಸಿದರು. ಗ್ರಾಮಮಟ್ಟದಲ್ಲಿ ಸಮೀಕ್ಷೆ ನಡೆಸಿ, ಮೂರು ವರ್ಷದ ಮಕ್ಕಳನ್ನು ಅಂಗನವಾಡಿಗೆ ಹಾಗೂ ಆರು ವರ್ಷ ಮೇಲ್ಪಟ್ಟ ಮಕ್ಕಳನ್ನು ಶಾಲೆಗೆ ಸೇರಿಸುವ ಕಾರ್ಯ ನಡೆಯುತ್ತಿದೆ. ಉಚಿತ ಪಠ್ಯಪುಸ್ತಕಗಳು, ಸಮವಸ್ತ್ರ ವಿತರಣೆ, ಗ್ರಂಥಾಲಯ ನಿರ್ಮಾಣ ಹಾಗೂ ಸಮುದಾಯದ ಪಾಲ್ಗೊಳ್ಳುವಿಕೆಯಿಂದ ಶಾಲಾ ಬಿಡುವಿಕೆ ಪ್ರಮಾಣವನ್ನು ಬಹುತೇಕ ಶೂನ್ಯಕ್ಕೆ ಇಳಿಸಲಾಗಿದೆ ಎಂದು ತಿಳಿಸಿದರು.

ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 2019ರಿಂದ ಗುಣಮಟ್ಟ ಹೆಚ್ಚಿಸುವ ಕ್ರಮಗಳನ್ನು ಕೈಗೊಂಡಿದ್ದು, ವಿಶ್ವವಿದ್ಯಾಲಯಗಳ ಸ್ವಾಟ್ ವಿಶ್ಲೇಷಣೆ, ಮೂಲಸೌಕರ್ಯ ಅಭಿವೃದ್ಧಿ, ಶಿಕ್ಷಕರ ನೇಮಕಾತಿ ಸುಧಾರಣೆ ಹಾಗೂ ಸಂಶೋಧನೆಗೆ ಉತ್ತೇಜನ ನೀಡಲಾಗಿದೆ. ಕೋವಿಡ್ ಅವಧಿಯಲ್ಲೂ ಆನ್‌ಲೈನ್ ಸಭೆಗಳ ಮೂಲಕ ವಿಶ್ವವಿದ್ಯಾಲಯಗಳ ಕಾರ್ಯವನ್ನು ನಿರಂತರವಾಗಿ ಪರಿಶೀಲಿಸಲಾಗಿದೆ.



ಉನ್ನತ ಶಿಕ್ಷಣ ಸಾಧನೆ

- ಒಟ್ಟು ವಿಶ್ವವಿದ್ಯಾಲಯಗಳು: 38
- ನ್ಯಾಕ್ ಎ++ : 9
- ನ್ಯಾಕ್ ಎ+ : 4
- ನ್ಯಾಕ್ ಎ : 5
- ಎನ್‌ಐಆರ್‌ಎಫ್ ಪಟ್ಟಿಯಲ್ಲಿ 11 ಸ್ಥಾನ
- ಪಾರದರ್ಶಕ ನೇಮಕಾತಿ: 1500ಕ್ಕೂ ಹೆಚ್ಚು

ಆರೋಗ್ಯ ಕ್ಷೇತ್ರದಲ್ಲಿ ಕ್ರಮ

ರಾಜ್ಯದಲ್ಲಿ 50 ಸಾವಿರಕ್ಕೂ ಹೆಚ್ಚು ಅಂಗನವಾಡಿ ಕೇಂದ್ರಗಳಿಗೆ ಮಕ್ಕಳ ಕುರ್ಚಿ, ಮೇಜು, ಕಲಿಕಾ ಸಾಮಗ್ರಿ ಒಳಗೊಂಡ ಕಿಟ್‌ಗಳನ್ನು ಸಿಎಸ್‌ಆರ್ ನೆರವಿನಿಂದ ಒದಗಿಸಲಾಗಿದೆ. ಇದರ ಪರಿಣಾಮವಾಗಿ ಅಂಗನವಾಡಿಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಾಗಿದೆ. ಟಿಬಿ ರೋಗಿಗಳನ್ನು ದತ್ತು ಪಡೆಯುವ ನಿಕ್ಷಯ್ ಮಿತ್ರ ಯೋಜನೆ ಹಾಗೂ ಬಾಲಕಿಯರ ಆರೋಗ್ಯಕ್ಕಾಗಿ ಎಚ್‌ಪಿವಿ ಲಸಿಕೆ ಅಭಿಯಾನ ಕೂಡ ರಾಜ್ಯದಲ್ಲಿ ವ್ಯಾಪಕವಾಗಿ ಜಾರಿಯಲ್ಲಿವೆ.

ಮಹಿಳಾ ಸಬಲೀಕರಣಕ್ಕೆ ಒತ್ತು

ಮಹಿಳೆಯರು ಕೃಷಿ, ಪಶುಸಂಗೋಪನೆ, ಹಾಲು ಉತ್ಪಾದನೆ, ಸಣ್ಣ ಉದ್ಯಮಗಳಲ್ಲಿ ಭಾಗವಹಿಸಲು ಪ್ರತ್ಯೇಕ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಮಹಿಳಾ ಸ್ವಸಹಾಯ ಗುಂಪುಗಳಿಗೆ ಕಾರ್ಯಾಗಾರ ಸ್ಥಳ, ಆರ್ಥಿಕ ನೆರವು ಮತ್ತು ಮಾರುಕಟ್ಟೆ ಸಂಪರ್ಕ ಕಲ್ಪಿಸುವ ಮೂಲಕ ಅವರ ಆದಾಯವನ್ನು ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

◈ ಎಷ್ಟೇ ಆಧುನಿಕತೆ ಬಂದರೂ ಆಧ್ಯಾತ್ಮಿಕತೆ ಮತ್ತು ಸಂಸ್ಕೃತಿಯನ್ನು ಭಾರತೀಯರು ಮರೆಯದೆ ಮುಂದುವರಿಸುತ್ತಿದ್ದಾರೆ ಎನ್ನುವುದಕ್ಕೆ ಈ ಬ್ರಹ್ಮಕಲಶೋತ್ಸವವೇ ಸಾಕ್ಷಿ
-ಉಜಿರೆ ಜನಾರ್ದನ ದೇವಸ್ಥಾನದಲ್ಲಿ ದಿನೇಶ್ ಗುಂಡೂರಾವ್
-ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ಎಂಬ ಡಿವಿಜಿ ಕಗ್ಗ ನೆನಪಾಗುತ್ತೆ.

ದಿನ ಭವಿಷ್ಯ

ಮೇಷ
ಅಶಾಂತ ಮನಸ್ಥಿತಿ. ವೃತ್ತಿ ಕ್ಷೇತ್ರದ ಕೆಲವು ಬೆಳವಣಿಗೆಯಿಂದ ಅಸಮಾಧಾನ. ಮನೆ ಸದಸ್ಯರ ಸಂಗದಲ್ಲಿ ನೆಮ್ಮದಿ. ಧನಪ್ರಾಪ್ತಿ.

ವೃಷಭ
ಸಣ್ಣ ವಿಷಯಕ್ಕೂ ರೇಗುವ ಸನ್ನಿವೇಶ ಉಂಟಾದೀತು. ತಾಳ್ಮೆ ವಹಿಸಿ. ನಿಮ್ಮ ಕೆಲಸದಲ್ಲಿ ಬೇಕೆಂದೇ ಕೆಲವರು ತಪ್ಪು ಹುಡುಕುವರು.

ಮಿಥುನ
ಸಂಗಾತಿಯ ವರ್ತನೆ ಅಸಮಾಧಾನ ಉಂಟು ಮಾಡಬಹುದು. ವಾಗ್ವಾದ ಸಂಭವ. ನಿಮ್ಮಿಂದ ತಾಳ್ಮೆಯ ನಡೆ ಅವಶ್ಯ. ಖರ್ಚು ಹೆಚ್ಚಲಿದೆ.

ಕಟಕ
ಸಮಯಕ್ಕೆ ತಕ್ಕಂತೆ ಸೂಕ್ತ ನಿರ್ಧಾರ ತಾಳಿ. ಹಳೆಯ ನಿರ್ಧಾರಕ್ಕೇ ಅಂಟಿಕೊಂಡು ಕೂರದಿರಿ. ಆಪ್ತರಿಂದ ಶುಭ ಸುದ್ದಿ ಕೇಳಿಬಂದೀತು.

ಸಿಂಹ
ಅಗತ್ಯಕ್ಕಿಂತ ಹೆಚ್ಚು ಹಣ ಖರ್ಚು ಚಿಂತೆ ತಂದೀತು. ನಿಮ್ಮ ಹಿತೈಷಿಗಳನ್ನು ಅವಗಣನೆ ಮಾಡಬೇಡಿ. ಪ್ರೀತಿಯಲ್ಲಿ ಯಶಸ್ಸು ಸಿಗಲಿದೆ.

ಕನ್ಯಾ
ಕೆಲವು ಬೆಳವಣಿಗೆ ನಿರಾಶೆ ತರುವುದು. ಬಂಧುವಿನ ಜತೆ ವಿರಸ. ಯಶಸ್ಸಿನ ದಾರಿಯಲ್ಲಿ ವಿಘ್ನ ತಲೆದೋರಲಿದೆ. ಸಂಯಮವಿರಲಿ.

ತುಲಾ
ಸಂಬಂಧಪಡದ ವಿಚಾರದಲ್ಲಿ ನೀವು ಸಿಲುಕುವಿರಿ. ನೆಮ್ಮದಿ ಹಾಳಾದೀತು. ಕೌಟುಂಬಿಕ ಸಹಕಾರ ಪಡೆಯಿರಿ. ಮಕ್ಕಳ ಸಾಧನೆ ತೃಪ್ತಿ.

ವೃಶ್ಚಿಕ
ಇತ್ತೀಚಿನ ಕೆಲವು ಬೆಳವಣಿಗೆಗಳ ಕಾರಣದಿಂದ ಧಾರ್ಮಿಕ ಭಾವ ಹೆಚ್ಚಬಹುದು. ಕಷ್ಟ ಮರೆಯಲು ದೇವರ ಮೊರೆ ಹೋಗುವಿರಿ.

ಧನು
ನಿಮ್ಮ ಸಾಧನೆಯ ಶ್ರೇಯಸ್ಸು ಇತರರು ಕಸಿದುಕೊಂಡಾರು. ಎಚ್ಚರದಿಂದಿರಿ. ಕೌಟುಂಬಿಕ ಬಿಕ್ಕಟ್ಟು. ಅತಿರೇಕದ ಪ್ರತಿಕ್ರಿಯೆ ತೋರದಿರಿ.

ಮಕರ
ವ್ಯವಹಾರದ ಒತ್ತಡ ಮಧ್ಯೆಯೂ ಖುಷಿ ಪಡುವ ಪ್ರಸಂಗ ಉಂಟಾಗಲಿದೆ. ಆರ್ಥಿಕ ಉನ್ನತಿ. ವೈವಾಹಿಕ ಸಂಬಂಧ ಕೂಡಿಬಂದೀತು. ಆರೋಗ್ಯ ವೃದ್ಧಿ.

ಕುಂಭ
ಇತರರ ಒಳ್ಳೆಯ ಕೆಲಸ ಶ್ಲಾಘಿಸಿರಿ. ನಿಮ್ಮ ವರ್ತನೆಯಿಂದ ಇತರರ ಮೆಚ್ಚುಗೆ ಗಳಿಸುವಿರಿ. ಕೌಟುಂಬಿಕ ಸಂತೋಷ. ಬಂಧುಗಳ ಭೇಟಿ.

ಮೀನ
ಎಲ್ಲರನ್ನು ಕುರುಡಾಗಿ ನಂಬದಿರಿ. ನಿಮ್ಮನ್ನು ವಂಚಿಸಲು ಯತ್ನ ನಡೆಯುತ್ತದೆ. ಪ್ರೀತಿಯ ಅಭಿವ್ಯಕ್ತಿ ಪ್ರತಿಕೂಲ ಫಲಿತಾಂಶ ತಂದೀತು.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30
ಅದೃಷ್ಟ ಸಂಖ್ಯೆ 2,9,4,1

ಯುವಜನತೆಗೆ ಸಂಪಾದಕ ಮಹಾಬಲ ಸೀತಾಳಬಾವಿ ಕಿವಿಮಾತು

ಸ್ಪರ್ಧೆ ಸಮಾಜಕ್ಕೆ ಅವಶ್ಯ

ಬೆಂಗಳೂರು: ರಾಷ್ಟ್ರೋತ್ಥಾನದ ಪ್ರಬಂಧ ಸ್ಪರ್ಧೆಗಳು ಅದರದ್ದೇ ಆದ ಮೌಲ್ಯಗಳನು ಒಳಗೊಂಡಿದೆ. ಯುವ ಜನರಿಗಾಗಿ ಏರ್ಪಡಿಸುವ ಈ ರೀತಿಯ ಪ್ರಬಂಧ ಸ್ಪರ್ಧೆಗಳು ಇಂದಿನ ಸಮಾಜಕ್ಕೆ ತುಂಬಾ ಅವಶ್ಯವಾಗಿದೆ ಎಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಸಂಪಾದಕ ಮಹಾಬಲ ಸೀತಾಳಬಾವಿ ಅಭಿಪ್ರಾಯಪಟ್ಟರು.

ಕೆಂಪೇಗೌಡ ನಗರದ ರಾಷ್ಟ್ರೋತ್ಥಾನ ಪರಿಷತ್‌ನ ಕೇಶವಶಿಲ್ಪ ಸಭಾಂಗಣದಲ್ಲಿ ಉತ್ಥಾನ ಮಾಸಪತ್ರಿಕೆಯಿಂದ ಶತಮಾನ ಪೂರೈಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘ : ವಿಚಾರ, ವಿಶೇಷತೆ ಮತ್ತು ಕೊಡುಗೆಗಳು ವಿಷಯದ ಕುರಿತು ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ 2025ರ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉತ್ಥಾನ ಮಾಸಪತ್ರಿಕೆ ಮಾಧ್ಯಮವಲಯದಲ್ಲೂ ಮೌಲ್ಯಕ್ಕಾಗಿ ಹೆಸರುವಾಸಿ. ಯುವಕರಿಗಾಗಿ ಆಯೋಜಿಸಿದ ಪ್ರಬಂಧ ಸ್ಪರ್ಧೆಯ ಮೂಲಕ ಮೌಲ್ಯಗಳನ್ನು ಉಳಿಸುವ ಅವಕಾಶವನ್ನು ಕಲ್ಪಿಸಿದೆ. ಸಮಾಜದಲ್ಲಿ ಮರೆಯಾಗುತ್ತಿರುವ ಮೌಲ್ಯಗಳನ್ನು ತಿಳಿಸಲು ಈ ರೀತಿಯ ಪ್ರಭಂದ ಸ್ಪರ್ಧೆಗಳು ಅವಶ್ಯಕ. ಈ ಕೆಲಸವನ್ನು ಉತ್ಥಾನ ಮಾಸಪತ್ರಿಕೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಎಲ್ಲಾ ಪತ್ರಿಕೆಗಳು ಇಂದು ಮಾರುಕಟ್ಟೆಯ ಮಾರ್ಗದಲ್ಲಿ ನಡೆಯುತ್ತಿವೆ. ಆದರೆ 60 ವರ್ಷಕ್ಕೂ ಹೆಚ್ಚಿನ ಕಾಲ ಉತ್ಥಾನ ಪತ್ರಿಕೆ ತನ್ನ ಮಾರ್ಗವನ್ನು ಬದಲಾಯಿಸಿಲ್ಲ. ಯಾವ ಆಶಯಕ್ಕೆ ಆರಂಭವಾಯಿತೋ ಅದೇ ಆಶಯವನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದೆ. ಸಾಮಾಜಿಕ ಮೌಲ್ಯ, ದೇಶ ಪ್ರೇಮ ಹಾಗೂ ಜೀವನದ ಆದರ್ಶಗಳನ್ನು ಉತ್ಥಾನ ಜನರಿಗೆ ತಲುಪಿಸುತ್ತಿದೆ. ಸಂಸ್ಕೃತಿಯ ತತ್ವ ವನ್ನು ಇನ್ನೂ ಉಳಿಸಿಕೊಂಡಿದೆ. ಆದರೆ ಇದೇ ಸಮಯವನ್ನು ದಾಟಿದ ಹಲವು ಪತ್ರಿಕೆಗಳು ತಮ್ಮ ತತ್ವಗಳನ್ನು ಮರೆಯುತ್ತಿರುವುದು ದುರದೃಷ್ಟಕರ ಎಂದು ವಿಷಾದ ವ್ಯಕ್ತಪಡಿಸಿದರು. ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್ ಮಾತನಾಡಿ, ನಮ್ಮಲ್ಲಿ ಇರುವ ಬರವಣಿಗೆಯ ಪ್ರತಿಭೆಯನ್ನು ಇನ್ನಷ್ಟು ವಿಸ್ತಾರಗೊಳಿಸುವುದು ಪ್ರಬಂಧ ಸ್ಪರ್ಧೆಯ ಮುಖ್ಯ ಉದ್ದೇಶವಾಗಿದೆ ಎಂದರು.



ಹಿಂದು ಎನ್ನುವುದು ಜೀವ ಪದ್ಧತಿ: ರಾಜೇಶ್ ಪದ್ಮಾರ್

ಯಾವ ದೇವರನ್ನು ಪೂಜಿಸಲಾಗುತ್ತದೆ ಎನ್ನುವುದರ ಮೇಲೆ ಹಿಂದುತ್ವ ನಿಂತಿಲ್ಲ. ಭಾರತ ದೇಶದಲ್ಲಿ ಇರುವವರು ಎಲ್ಲರೂ ಹಿಂದೂಗಳೇ. ಹಿಂದೂ ಎನ್ನುವುದು ಒಂದು ಜೀವನದ ದೃಷ್ಟಿಯಾಗಿದೆ, ಜೀವನ ಪದ್ಧತಿಯಾಗಿದೆ. ಜೀವನವನ್ನು ಹೀಗೆ ನಡೆಸುತ್ತೇವೆ ಎನ್ನುವುದೇ ಹಿಂದುತ್ವವಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಾಗದೆ ಸರ್ವಯಾಪ್ತಿ ಮತ್ತು ಸರ್ವ ಸ್ಪರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಅಖಿಲ ಭಾರತೀಯ ದೃಷ್ಟಿಕೋನವನ್ನು ಸಂಘ ಒಳಗೊಂಡಿದೆ ಎಂದು ರಾಜೇಶ್ ಪದ್ಮಾರ್ ವ್ಯಾಖ್ಯಾನಿಸಿದರು.

ವಿಜೇತರಿಗೆ ಬಹುಮಾನ ವಿತರಣೆ

ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪೂಜಾ ಮಹಾದೇವ ಸಾರವಾಡ ಪ್ರಥಮ ಸ್ಥಾನ, ಬೆಂಗಳೂರಿನ ಮನೋವಿಜ್ಞಾನ ಜ್ಯೋತಿ ನಿವಾಸ ಕಾಲೇಜಿನ ಸಹನಾ ಎಂ ದ್ವಿತೀಯ ಸ್ಥಾನ, ಬೆಳಗಾವಿಯ ಸುಂದರಬಾಯಿ ಬಿ. ಪಾಟೀಲ್ ವುಮೆನ್ಸ್ ಕಾಲೇಜ್ ಆಫ್ ಎಜುಕೇಷನ್‌ನ ಕಾವೇರಿ ಎಂ. ಹೆಗಡೆ ತೃತೀಯ ಸ್ಥಾನ ಪಡೆದಿದ್ದಾಳೆ. ಇದರೊಂದಿಗೆ ಹತ್ತು ಜನ ವಿದ್ಯಾರ್ಥಿಗಳಿಗೆ ಸಮಾದಾನಕರ ಬಹುಮಾನ ನೀಡಲಾಗಿದೆ. ಕಾರ್ಯಕ್ರಮದಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಖಜಾಂಚಿ ಕೆ. ಎಸ್. ನಾರಾಯಣ್ ಉಪಸ್ಥಿತರಿದ್ದರು.

ಇರಾನ್ ಮೇಲೆ ಮಾರಕ ದಾಳಿ: ಡೊನಾಲ್ಡ್ ಟ್ರಂಪ್ ಎಚ್ಚರಿಕೆ

ಪುಟ 1➡ ಅಮೆರಿಕ ಮತ್ತು ಇಸ್ರೇಲ್‌ನ ಭಾರೀ ದಾಳಿಯ ಕಾರಣದಿಂದಲೇ ಇರಾನ್ ಈ ಭರವಸೆ ನೀಡುವಂತಾಗಿದೆ ಎಂದಿದ್ದಾರೆ.

ಇರಾನ್ ಮಧ್ಯಪ್ರಾಚ್ಯದ ಮೇಲೆ ಹಿಡಿತ ಸಾಧಿಸಿ ಅದನ್ನೇ ಆಳಲು ಮುಂದಾಗಿತ್ತು. ಆದರೆ ಇನ್ನು ಅದು ಮಧ್ಯಪೂರ್ವ ದೇಶಗಳನ್ನು ಗೂಂಡಾಗಳಂತೆ ಬೆದರಿಸಲು ಸಾಧ್ಯವಾಗದು. ಇದರ ಬದಲಿಗೆ ಅದೀಗ ಮಧ್ಯಪೂರ್ವದ ಸೋತ ದೇಶವಾಗಿದ್ದು, ಅದು ಶರಣಾಗುವವರೆಗೆ ಅಥವಾ ಸಂಪೂರ್ಣ ಕುಸಿತ ಕಾಣುವವರೆಗೆ ಅನೇಕ ದಶಕಗಳ ಕಾಲ ಹೀಗಿರಬೇಕಾಗುವುದು ಎಂದು ಅಮೆರಿಕದ ರಿಪಬ್ಲಿಕನ್ ಪಕ್ಷದ ನಾಯಕನೂ ಆಗಿರುವ ಟ್ರಂಪ್ ಹೇಳಿದ್ದಾರೆ.

ಷರತ್ತಿಲ್ಲದೆ ಶರಣಾಗಲು ಒತ್ತಾಯ: ಇರಾನ್ ಬೇಷರತ್ತಾಗಿ ಶರಣಾಗಬೇಕೆಂದು ಟ್ರಂಪ್ ಒತ್ತಾಯಿಸಿದ್ದು, ಇದೊಂದೇ ಸಂಘರ್ಷವನ್ನು ಕೊನೆಗೊಳಿಸಲು ಇರುವ ಸ್ವೀಕಾರಾರ್ಹ ದಾರಿ. ಹೊಸ ನಾಯಕತ್ವ ಸ್ಥಾಪನೆಗೆ ಇರಾನ್ ಅವಕಾಶ ಮಾಡಿಕೊಟ್ಟಲ್ಲಿ ಆ ದೇಶದ ಆರ್ಥಿಕತೆ ಅಭಿವೃದ್ಧಿಗೆ ನೆರವಾಗುವುದಾಗಿ ಭರವಸೆ ನೀಡಿದ್ದಾರೆ. ಇರಾನಿನ ಇಸ್ಲಾಮಿಕ್ ರಿಪಬ್ಲಿಕ್ ಶರಣಾದಲ್ಲಿ, ಅಮೆರಿಕ ಮತ್ತು ಅದರ ಮಿತ್ರ ದೇಶಗಳು ಇರಾನನ್ನು ವಿನಾಶದಿಂದ ಮೇಲೆತ್ತಿ ಆರ್ಥಿಕವಾಗಿ ಹಿಂದೆಂದಿಗಿಂತ ಉತ್ತಮ, ಸಶಕ್ತ ದೇಶವನ್ನಾಗಿಸಲು ನೆರವಾಗಲಿವೆ ಎಂದಿದ್ದಾರೆ.

ಇರಾನ್‌ಗೆ ರಷ್ಯಾ ಮಾಹಿತಿ!

ಪುಟ 1➡ ಅಮೆರಿಕದ ಅಧಿಕಾರಿಗಳು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ ಮತ್ತು ಇಂತಹ ಬೆಳವಣಿಗೆಗಳನ್ನು ತಮ್ಮ ಕಾರ್ಯಾಚರಣೆಯ ಯೋಜನೆಗಳಲ್ಲಿ ಪರಿಗಣಿಸುತ್ತಿದ್ದಾರೆ ಎಂದು ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ತಿಳಿಸಿದ್ದಾರೆ.
ರಷ್ಯಾ-ಇರಾನ್ ಸಂಬಂಧ: ಇರಾನ್‌ಗೆ ಗುಪ್ತಚರ ಅಥವಾ ಮಿಲಿಟರಿ ನೆರವು ನೀಡಲಾಗಿದೆಯೇ ಎಂಬ ಬಗ್ಗೆ ಪ್ರತಿಕ್ರಿಯಿಸಲು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ನಿರಾಕರಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ರಷ್ಯಾ ಮತ್ತು ಇರಾನ್ ತಮ್ಮ ಸಂಬಂಧಗಳನ್ನು ಬಲಪಡಿಸಿಕೊಂಡಿವೆ. ಉಕ್ರೇನ್‌ನಲ್ಲಿನ ರಷ್ಯಾದ ಯುದ್ಧಕ್ಕೆ ಬೆಂಬಲವಾಗಿ ಟೆಹ್ರಾನ್ ಡ್ರೋನ್ ಮತ್ತು ಇತರ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ.

ಇರಾನ್‌ಗೆ ಕಾದಿದೆ ದೊಡ್ಡ ದಾಳಿ: ಯುಎಸ್

ಪುಟ 1➡ ಇರಾನಿನ ನೌಕಾ ಪಡೆ ತೀವ್ರ ಹಾನಿಗೀಡಾಗಿದ್ದು, ಜತೆಗೆ ಇರಾನಿನ ಅನೇಕ ನಾಯಕರು, ಸೇನಾಧಿಕಾರಿಗಳು ಕೂಡ ಹತರಾಗಿದ್ದಾರೆ. ಇದೀಗ ಅಮೆರಿಕ ಇರಾನಿನ ಕ್ಷಿಪಣಿ ನೆಲೆಗಳ ಮೇಲೆ ದಾಳಿಗಳನ್ನು ನಡೆಸಲು ಮುಂದಾಗಿದೆ. ಇರಾನಿನ ಜಾಮ್ ಕ್ಷಿಪಣಿ ನೆಲೆ ಈಗಾಗಲೇ ಭಾರೀ ಹಾನಿಗೆ ತುತ್ತಾಗಿದೆ. ಇರಾನಿನಲ್ಲಿ ಈಗಾಗಲೇ 1230ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದರೆ, ಲೆಬನಾನ್‌ನಲ್ಲಿ 200 ಮತ್ತು ಇಸ್ರೇಲ್‌ನಲ್ಲಿ 11 ಮಂದಿ ಬಲಿಯಾಗಿದ್ದಾರೆ.

ವರಿಷ್ಠರ ಮಾತಿನಂತೆ ನಡೆಯುವೆ: ಸಿಎಂ



ಪುಟ 1➡ ಕೇಂದ್ರ ಸರ್ಕಾರ ನಮಗೆ ಕೊಡುವ ದುಡ್ಡು ಕೊಟ್ಟಿಲ್ಲ. ಅದರಿಂದ ನಮಗೆ ಹೊರೆ ಆಗಿದೆ. ಕೇಂದ್ರದಿಂದ ರಾಜ್ಯಕ್ಕೆ ಹೊರೆ ಹೆಚ್ಚುತ್ತಿದೆ. ಕೇಂದ್ರದ ಮನರೆಗಾದಿಂ ದಲೂ ರಾಜ್ಯಕ್ಕೆ ಹೊರೆಯಾಗುತ್ತಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.
ಅಡುಗೆ ಅನಿಲ ದರ ಏರಿಕೆಗೆ ಕಿಡಿ: ಗ್ಯಾಸ್ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿದ ಸಿದ್ದರಾಮಯ್ಯ, ನರೇಂದ್ರ ಮೋದಿ ಬರುವುದಕ್ಕಿಂತ ಮುನ್ನ ಎಷ್ಟಿತ್ತು? ಅವರು ಬಂದು ಅದನ್ನು ಜಾಸ್ತಿ ಮಾಡಿದರು. ಅದರಿಂದ ಯಾರಿಗೆ ತೊಂದರೆ ಆಯ್ತು? ಜನರು, ಬಳಕೆದಾರರಿಗೆ ತೊಂದರೆ ಆಗಿದೆ ಎಂದು ದೂರಿದರು.

ಶ್ರೀಲಂಕಾ ಜಡ್ಜ್ ಅರ್ಜಿ ವಿಚಾರಣೆ

ಪುಟ 1➡ **ಹಿತಾಸಕ್ತಿ ಸಂಘರ್ಷ ತಪ್ಪಿಸಲು ಭಾರತದಲ್ಲಿ ಅರ್ಜಿ:** ತಮ್ಮ ವಿರುದ್ಧ 2015 ಮತ್ತು 2020ರಲ್ಲಿ ಸುಳ್ಳು ಹಾಗೂ ಆಧಾರರಹಿತವಾದ ಮಾನಹಾನಿಕರ ಸುದ್ದಿಗಳನ್ನು ಪ್ರಕಟಿಸಲಾಗಿದೆ ಎಂದು ನ್ಯಾ. ನವಾಜ್ ಆರೋಪಿಸಿದ್ದಾರೆ. ಪ್ರಸ್ತುತ ತಾವು ಶ್ರೀಲಂಕಾದ ಸುಪ್ರೀಂಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸುತ್ತಿರುವುದರಿಂದ ಅಲ್ಲಿನ ನ್ಯಾಯಾಲಯದಲ್ಲೇ ಅರ್ಜಿ ಸಲ್ಲಿಸಿದರೆ ಹಿತಾಸಕ್ತಿ ಸಂಘರ್ಷದ ಪ್ರಶ್ನೆ ಉದ್ಭವಿಸಬಹುದು ಎಂದು ಅವರು ಅರ್ಜಿಯಲ್ಲಿ ತಿಳಿಸಿದ್ದಾರೆ. ಯಾರೂ ಕೂಡ ತನ್ನ ಅಹವಾಲಿಗೆ ತಾನೇ ತೀರ್ಪುಗಾರನಾಗಬಾರದು ಎಂಬ ನೈಸರ್ಗಿಕ ನ್ಯಾಯದ ತತ್ವದ ಹಿನ್ನೆಲೆಯಲ್ಲಿ ತಾವು ಭಾರತದ ನ್ಯಾಯಾಲಯದ ಮೊರೆಹೋಗಿರುವುದಾಗಿ ಅವರು ಸ್ಪಷ್ಟಪಡಿಸಿದ್ದಾರೆ.

ಶ್ರೀಲಂಕಾ ಕೋರ್ಟ್ ಆಫ್ ಅಪೀಲ್‌ನ ಮುಖ್ಯಸ್ಥರಾಗಿದ್ದ ಅವಧಿಯಲ್ಲಿ ತಾವು ನೀಡಿದ್ದ ಕಾನೂನು ಅಭಿಪ್ರಾಯವನ್ನು ಕೆಲವು ಆನ್‌ಲೈನ್ ಸುದ್ದಿ ತಾಣಗಳಲ್ಲಿ ದುರುದ್ದೇಶಪೂರಿತವಾಗಿ ತಪ್ಪಾಗಿ ಉಲ್ಲೇಖಿಸಿವೆ ಮತ್ತು ಇದರಿಂದ ತಮ್ಮ ಘನತೆಗೆ ಕುಂದುಂಟಾಗಿದೆ ಎಂದು ಅವರು ದೂರಿದ್ದಾರೆ. ಭಾರತದ ಸಂವಿಧಾನವು ಘನತೆಯಿಂದ ಬದುಕುವ ಹಕ್ಕನ್ನು ಕೇವಲ ಭಾರತೀಯರಿಗೆ ಮಾತ್ರವಲ್ಲದೆ ವಿದೇಶಿಯರಿಗೂ ವಿಸ್ತರಿಸಿರುವುದರಿಂದ, ಈ ಅರ್ಜಿ ಪರಿಗಣಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಜನರ ಬಳಕೆಗೆ ಡೀಮ್ಡ್ ಅರಣ್ಯ ಪ್ರದೇಶ: ಜಾರ್ಜ್

ಪುಟ 1➡ ಡೀಮ್ಡ್ ಫಾರೆಸ್ಟ್ ಪ್ರದೇಶ ಸಾರ್ವಜನಿಕ ಉಪಯೋಗಕ್ಕೆ ಬಳಸಲು ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು ನಿರ್ಧರಿಸಿದ್ದಾರೆ. ಅದರಂತೆ ಜಂಟಿ ಸರ್ವೆ ಕಾರ್ಯ ನಡೆಯುತ್ತಿದ್ದು, ಈಗಾಗಲೇ 50 ಸಾವಿರ ಎಕರೆ ಭೂಮಿ ಸಾರ್ವಜನಿಕ ಉಪಯೋಗಕ್ಕೆ ಕೊಡುವ ಪ್ರಯತ್ನ ನಡೆದಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ 56 ಸಾವಿರ ಉದ್ಯೋಗ ಯುವಜನರಿಗೆ ನೀಡಲು ತೀರ್ಮಾನಿಸಲಾಗಿದೆ. ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು ಸುಲಭದ ಮಾತಲ್ಲ, ಆದರೂ ರಾಜ್ಯ ಸರ್ಕಾರ ಜನಪರವಾದ ಯೋಜನೆಗಳು ಜಾರಿ ಮಾಡುವ ಮೂಲಕ ಇತರೆ ರಾಜ್ಯಗಳಿಗಿಂತ ಉತ್ತಮ ಆಡಳಿತ ನಮ್ಮ ಸರಕಾರ ನೀಡುತ್ತಿದೆ ಎಂದರು.

1990ರಲ್ಲಿ ಬಂಗಾರಪ್ಪ ಮುಖ್ಯಮಂತ್ರಿಯಾದಾಗ ಆಶ್ರಯ ನಿವೇಶನ ನೀಡಲಾಗುತ್ತಿತ್ತು. ಆ ಸಂದರ್ಭದಲ್ಲೂ ಸರ್ಕಾರಿ ಜಾಗ ಇರಲಿಲ್ಲ, ಆಗ ಖಾಸಗಿ ಜಾಗವನ್ನು ಖರೀದಿಸಿ ಜನರ ಉಪಯೋಗಕ್ಕೆ ನೀಡಲಾಗಿತ್ತು. ಈಗಲೂ ಅದೇ ಸಂದರ್ಭ ಎಲ್ಲೆಡೆ ಸೃಷ್ಟಿಯಾಗಿದೆ. ಜನಪರವಾದ ಕಾರ್ಯಕ್ರಮ ಮಾಡುವ ಸಿಎಂ ನಮ್ಮ ಜತೆ ಇದ್ದಾರೆ. ಗ್ಯಾರಂಟಿ ಯೋಜನೆಯಿಂದ ರಾಜ್ಯದ ಜನರಿಗೆ ಅನುಕೂಲವಾಗಿದ್ದು, ಆರ್ಥಿಕವಾಗಿ ಮುಂದೆ ಸಾಗಲು ಸಹಕಾರಿಯಾಗಿದೆ. ಜಿಲ್ಲೆಯ ಸಮಸ್ಯೆ ಬಗೆಹರಿಸಲು ಸಾಕಷ್ಟು ಶ್ರಮಿಸಿದ್ದೇನೆ. ಆದರೆ ಜಿಲ್ಲೆಯಲ್ಲಿರುವ ಸ್ಥಳೀಯರೇ ಉಸ್ತುವಾರಿ ಮಂತ್ರಿಗಳಾದರೆ ಅಭಿವೃದ್ಧಿ ಇನ್ನಷ್ಟು ಸುಲಭವಾಗುವ ದೃಷ್ಟಿಯಿಂದ ಜಿಲ್ಲೆಗೆ ಮಂತ್ರಿ ಸ್ಥಾನ ಕೊಡುವ ಬಗ್ಗೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇನೆಂದು ಹೇಳಿದರು. ಕ್ಷೇತ್ರದ ಶಾಸಕಿ ನಯನಾ ಮೋಟಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, 1 ವರ್ಷದ ಹಿಂದೆ ಚಂದ್ರಲೋಕದಲ್ಲಿ ನಿವೇಶನ ಕೊಡ್ತಾರಾ ಎಂಬ ಟೀಕೆ ಬಂದಿತ್ತು. ಆದರೆ ಈಗ ಹೆಮ್ಮೆಯಿಂದ ಹೇಳುತ್ತೇನೆ. ಚಂದ್ರಲೋಕದಲ್ಲಿ ಅಲ್ಲ, ತಮ ಕ್ಷೇತ್ರದ ದಾರದಹಳ್ಳಿ ನಂದೀಪುರ, ತ್ರಿಪುರ, ಹಂತೂರು, ಜಾವಳಿ, ಬಿ.ಹೊಸಳ್ಳಿ, ತಳಿಹಳ್ಳಿ, ಬಸ್ಕಲ್, ಈ 8 ಗ್ರಾ.ಪಂ. ವ್ಯಾಪ್ತಿಯಲ್ಲಿ 242 ಫಲಾನುಭವಿಗಳಿಗೆ ನಿವೇಶನದ ಹಕ್ಕುಪತ್ರ ಕೊಡಲು ಮುಂದಾಗಿದ್ದೇವೆ. ಮಲೆಮನೆ ಮತ್ತು ಮದುಗುಂಡಿ ನಿರಾಶ್ರಿತರಿಗೆ ಭೂಮಿ ಕೊಡುವ ಕಾರ್ಯ ಮುಗಿಸಿದರೆ ತನಗೆ ತೃಪ್ತಿ ಸಿಗುತ್ತದೆ ಎಂದರು.

ಕುದುರೆಮುಖ ಲೇಬರ್ ಕಾಲೋನಿಯಲ್ಲಿರುವ ಸುಮಾರು 40 ಕುಟುಂಬಕ್ಕೆ ನಿವೇಶನ ಕೊಡುವ ಚಿಂತನೆ ಮಾಡಿರುವುದಾಗಿ ಹೇಳಿದರು.

ಮಾಜಿ ಸಚಿವೆ ಮೋಟಮ್ಮ, ಭದ್ರಾ ಕಾಡಾ ಅಧ್ಯಕ್ಷ ಡಾ.ಕೆ.ಪಿ. ಅಂಶುಮಂತ್, ರಾಜ್ಯ ಪರಿಸರ ಮೌಲ್ಯಮಾಪನ ಪ್ರಾಧಿಕಾರದ ಅಧ್ಯಕ್ಷ ಎ.ಎನ್.ಮಹೇಶ್ ಮಾತನಾಡಿದರು. ಜಿಲ್ಲಾಧಿಕಾರಿ ಎನ್.ಎಂ. ನಾಗರಾಜ್, ಜಿ.ಪಂ.ಸಿಇಒ ಎಚ್.ಎಸ್. ಕೀರ್ತನಾ, ಬಿ.ಎಸ್. ಜಯರಾಂಗೌಡ, ಕೆ.ವೆಂಕಟೇಶ್, ರಮೇಶ್ ಹೊಸ್ಕೆರೆ, ಜಿತೇಂದ್ರಕುಮಾರ್, ನಟೇಶ್, ವಿಜಯಕುಮಾರ್, ತಹಶೀಲ್ದಾರ್ ಎಸ್. ಅಶ್ವಿನಿ ಮತ್ತಿತರರಿದ್ದರು.

ಲೋಕಾಯುಕ್ತ ದಾಳಿ: 6.82 ಕೋಟಿ ಮೌಲ್ಯದ ಆಸ್ತಿ ಪತ್ತೆ

ಹಾಸನ: ಮಹಾನಗರಪಾಲಿಕೆಯ ಇಂಜಿನಿಯರ್ ಸತ್ಯನಾರಾಯಣ ಅವರ ಮನೆ ಸೇರಿದಂತೆ ವಿವಿಧ ಕಡೆಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ನಡೆಸಿದ ದಾಳಿಯಲ್ಲಿ ಸುಮಾರು 6 ಕೋಟಿ 82 ಲಕ್ಷ 54 ಸಾವಿರ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ. ಪಾಲಿಕೆ ಇಂಜಿನಿಯರ್ ಸತ್ಯನಾರಾಯಣ ಅವರಿಗೆ ಸಂಬಂಧಿಸಿದಂತೆ 7 ಕಡೆಗಳಲ್ಲಿ ಲೋಕಾಯುಕ್ತ ತಂಡ ದಾಳಿ ನಡೆಸಿ ಪರಿಶೀಲನೆ ನಡೆಸಿದೆ. ಪ್ರಾಥಮಿಕ ತನಿಖೆಯಲ್ಲಿ ಅವರ ಆದಾಯಕ್ಕಿಂತ ಶೇಕಡಾ 200.74 ರಷ್ಟು ಹೆಚ್ಚುವರಿ ಆಸ್ತಿ ಹೊಂದಿರುವ ಮಾಹಿತಿ ಲಭ್ಯವಾಗಿದೆ. ದಾಳಿಯ ವೇಳೆ 52 ಲಕ್ಷ ಮೌಲ್ಯದ 7 ನಿವೇಶನಗಳು, 5 ಕೋಟಿ 30 ಲಕ್ಷ ಮೌಲ್ಯದ 3 ಮನೆಗಳು ಹಾಗೂ 3 ಎಕರೆ 33 ಗುಂಟೆ ಕೃಷಿ ಜಮೀನು ಸೇರಿದಂತೆ ಒಟ್ಟು 5 ಕೋಟಿ 98 ಲಕ್ಷ 35 ಸಾವಿರ ರೂ. ಮೌಲ್ಯದ ಸ್ಥಿರಾಸ್ತಿ ಪತ್ತೆಯಾಗಿದೆ.

ನಿಶಾಂತ್ ಇಂದು ರಾಜಕೀಯಕ್ಕೆ

ಪುಟ 1➡ ನಿಶಾಂತ್ ರಾಜಕೀಯ ಪ್ರವೇಶ ಪಕ್ಷದ ಕಾರ್ಯಕರ್ತರ ಇಚ್ಛೆಯಾಗಿದೆ ಎಂದು ತಿಳಿಸಿದ್ದಾರೆ.



ಹೊಸ ಪೀಳಿಗೆ ನೇತೃತ್ವದ ನಿರೀಕ್ಷೆ: ಮುಂದಿನ ಪೀಳಿಗೆಯ ನಾಯಕನಿಗೆ ಪಕ್ಷ ನಡೆಸುವ ಜವಾಬ್ದಾರಿ ವಹಿಸುವ ಉದ್ದೇಶದಿಂದ ನಿಶಾಂತ್ ಅವರನ್ನು ಕರೆತರಲಾಗುತ್ತಿದೆ ಎಂದು ರಾಜಕೀಯ ಪಂಡಿತರು ಲೆಕ್ಕಾಚಾರ ಹಾಕುತ್ತಿದ್ದಾರೆ. ನಿಶಾಂತ್ ಆಗಮನದಿಂದ ಪಕ್ಷದಲ್ಲಿ ಏನೆಲ್ಲಾ ಬದಲಾವಣೆ ಆಗಲಿದೆಯೆಂಬ ಕುತೂಹಲ ಸೃಷ್ಟಿಯಾಗಿದೆ.

ತಾಳ್ಮೆ ವಹಿಸಲು ನಿತೀಶ್ ಮನವಿ

ಮುಖ್ಯಮಂತ್ರಿ ನಿರ್ದೇಶನದ ಮೇರೆಗೆ ಶುಕ್ರವಾರ ಪಕ್ಷದ ಶಾಸಕಾಂಗ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಮುಖ್ಯಮಂತ್ರಿ ವಿಷಯ ತಿಳಿಸಿದ್ದು, ಪಕ್ಷದ ನಾಯಕರು, ಕಾರ್ಯಕರ್ತರು, ಶಾಸಕರು, ಸಂಸದರು ಮತ್ತು ಸಚಿವರು ತಾಳ್ಮೆಯಿಂದ ಇರಬೇಕೆಂದು ಮನವಿ ಮಾಡಿದ್ದರು. ತಾವು ಪಕ್ಷ ಬಿಟ್ಟು ಹೋಗುತ್ತಿಲ್ಲ, ಎಲ್ಲರ ಜತೆಗಿದ್ದು ಕೆಲಸ, ಪಕ್ಷದ ಸದಸ್ಯರ ಜತೆಗಿದ್ದು ಮಾರ್ಗದರ್ಶನ ಮಾಡುವುದಾಗಿ ನಿತೀಶ್ ಭರವಸೆ ನೀಡಿದ್ದಾರೆ. ಅವರ ಮಾತುಗಳನ್ನು ಆಲಿಸಿದ ಬಳಿಕ ನಿರ್ಧಾರವನ್ನು ಗೌರವಿಸಿದ್ದೇವೆ. ಆದರೆ ರಾಜ್ಯದ ಜನರಿಗೆ ಸಂತಸವಾಗಿಲ್ಲ ಎಂದು ಸಚಿವ ಶ್ರವಣ್ ಕುಮಾರ್ ತಿಳಿಸಿದ್ದಾರೆ.

ಶರಾವತಿ: ಸರ್ಕಾರಕ್ಕೆ ಹೈ ನೋಟಿಸ್

ಪುಟ 1➡ ಈ ಯೋಜನೆಗೆ ಒಟ್ಟು 142.763 ಹೆಕ್ಟೇರ್ ಭೂಮಿಯ ಅಗತ್ಯವಿದೆ. ಅದರಲ್ಲಿ 102 ಹೆಕ್ಟೇರ್ ಪ್ರದೇಶವು ಭೌಗೋಳಿಕವಾಗಿ ಅಭಯಾರಣ್ಯದೊಳಗೆ ಮತ್ತು 39.715 ಹೆಕ್ಟೇರ್ ಪರಿಸರ ಸೂಕ್ಷ್ಮ ವಲಯದಲ್ಲಿದೆ. ಇಂತಹ ಬೃಹತ್ ಅಭಯಾರಣ್ಯ ಮತ್ತು ಪರಿಸರ ಸೂಕ್ಷ್ಮ ವಲಯದೊಳಗೆ ಜಲವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಅನುಮೋದನೆ ನೀಡುವುದರಿಂದ ಬೃಹತ್ ಕಂಬ ನೆಡುವುದು, ಕಂಬಗಳ ನಡುವೆ ಹೆಚ್ಚಿನ ವೋಲ್ಟೇಜ್ ತಂತಿ ಎಳೆಯುವುದೂ ಸೇರಿದಂತೆ ಉತ್ಪಾದಿಸುವ ಜಲವಿದ್ಯುತ್ ರವಾನಿಸಲು ಪ್ರಸರಣ ಮಾರ್ಗಗಳ ನಿರ್ಮಾಣದಿಂದ ಅಮೂಲ್ಯ ವೃಕ್ಷ ಸಂಪತ್ತು ನಾಶವಾಗಲಿದೆ. ವನ್ಯಜೀವಿಗಳ ಆವಾಸಸ್ಥಾನಕ್ಕೆ ಧಕ್ಕೆಯಾಗಲಿದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ. ವನ್ಯಜೀವಿಗಳ ಪ್ರಯೋಜನಕ್ಕಾಗಿ ಮತ್ತು ಬೇಡದ ಉದ್ದೇಶಗಳಿಗಾಗಿ ವನ್ಯಜೀವಿ ಅಭಯಾರಣ್ಯ ಪ್ರದೇಶ ಬಳಕೆಗೆ ಅನುಮೋದನೆ ನೀಡುವ ಅಧಿಕಾರ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಗೆ ಇಲ್ಲ. ಈ ನಿಟ್ಟಿನಲ್ಲಿ, ವನ್ಯಜೀವಿ ರಕ್ಷಣಾ ಕಾಯಿದೆ-1972ರ ಸೆಕ್ಷನ್ 29ರ ಅಡಿಯಲ್ಲಿ ವಿಧಿಸಲಾದ ನಿರ್ಬಂಧವನ್ನು ಗಮನದಲ್ಲಿ ಶರಾವತಿ ಕಣಿವೆಯ ಅಭಯಾರಣ್ಯ ಮತ್ತು ಅದರ ಪರಿಸರ ಸೂಕ್ಷ್ಮ ವಲಯದಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ ಯೋಜನೆಗೆ ಯಾವುದೇ ಅನುಮೋದನೆ ನೀಡಬಾರದು ಎಂದು ಕೋರಲಾಗಿದೆ.

ನನ್ನೇಲೆ ದೀದಿಗೇಕೆ ಕೋಪ?



ಪುಟ 1➡ ಆದರೆ ಕೊನೆಯ ಕ್ಷಣದಲ್ಲಿ ಬಿಧಾನ್‌ನಗರದಲ್ಲಿ ಸಮ್ಮೇಳನ ನಡೆಸಲು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸರ್ಕಾರ ಅನುಮತಿ ನಿರಾಕರಿಸಿದೆ. ಬಿಧಾನ್‌ನಗರ ಬದಲಿಗೆ ಬಾಗ್ಡೋಗ್ರಾ ವಿಮಾನ ನಿಲ್ದಾಣ ಸಮೀಪದ ಗೋಶಾಯ್‌ಪುರ ಎಂಬ ಇನ್ನಷ್ಟು ನಿರ್ಬಂಧಿತ ಸ್ಥಳದಲ್ಲಿ ಸಮ್ಮೇಳನ ಆಯೋಜಿಸಲು ಆದೇಶಿಸಿದೆ.
ಭಾರೀ ವಿರೋಧ: ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿಗೇ ಗೌರವವಿಲ್ಲವೆಂದಾದರೆ ಸಾಮಾನ್ಯ ನಾಗರಿಕರ ಕಥೆಯೇನು ಎಂಬ ಪ್ರಶ್ನೆ ಜನಮಾನಸದಲ್ಲಿ ಉದ್ಭವಿಸಿದ್ದು, ಮಮತಾ ಅರಾಜಕತೆಗೆ ಭಾರೀ ವಿರೋಧ ವ್ಯಕ್ತವಾಗುತ್ತಿದೆ.

ಐದು ಲಕ್ಷ ಜನ ಸೇರಬಹುದು: ರಾಷ್ಟ್ರಪತಿ ಮುರ್ಮು

ಗೋಶಾಯ್‌ಪುರದಲ್ಲಿನ ಕಾರ್ಯಕ್ರಮದ ಬಳಿಕ ಸಿಲಿಗುರಿಯ ಬಿಧಾನನಗರಕ್ಕೆ ರಾಷ್ಟ್ರಪತಿ ಭೇಟಿ ನೀಡಿದ ಸಂತಾಲ್ ಸಮುದಾಯದ ಜನರು ಮತ್ತು ಸ್ಥಳೀಯರ ಜತೆ ಸಂವಹನ ನಡೆಸಿದರು. ಬಿಧಾನನಗರದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ರಾಷ್ಟ್ರಪತಿ ಮುರ್ಮು ಮಾತನಾಡಿದ್ದು, ಇಲ್ಲಿ 5 ಲಕ್ಷಕ್ಕೂ ಹೆಚ್ಚು ಜನ ಸೇರಲು ವ್ಯವಸ್ಥೆ ಮಾಡಬಹುದು. ಆದರೆ ಇಲ್ಲಿ ಸಮ್ಮೇಳನ ನಡೆಸಿದರೆ ಜನ ಕಿಕ್ಕಿರಿದು ಸೇರುತ್ತಾರೆಂದು ಸ್ಥಳೀಯ ಆಡಳಿತ ಅನುಮತಿ ನೀಡಿಲ್ಲ ಎಂದು ಮುರ್ಮು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಸಂತಾಲ್ ಜನರ ಅಭಿವೃದ್ಧಿ ನಡೆದಿದೆಯೇ?

ಪ್ರದೇಶದಲ್ಲಿ ಸಂತಾಲ್ ಬುಡಕಟ್ಟು ಜನಾಂಗದವರ ಅಭಿವೃದ್ಧಿ ನಡೆಯುತ್ತಿದೆಯೋ ಇಲ್ಲವೋ? ಸಮುದಾಯದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಸಂತಾಲ್ ಜನರಿಲ್ಲದೆ ಕುರ್ಚಿಗಳು ಖಾಲಿ ಖಾಲಿ ಇರುವುದನ್ನು ನೋಡಿದರೆ ಬಂಗಾಳದಲ್ಲಿ ಸಂತಾಲ್ ಸಮುದಾಯಕ್ಕೆ ಸರ್ಕಾರಿ ಸವಲತ್ತುಗಳೆಲ್ಲಾ ಸಿಗುತ್ತಿವೆಯೋ ಇಲ್ಲವೋ ಎಂಬ ಸಂಶಯ ನನಗೆ ಕಾಡುತ್ತಿದೆ ಎಂದು ಮುರ್ಮು ಕಿಡಿಕಾರಿದ್ದಾರೆ.

ಆಯೋಜಕರಿಗೆ ಹತಾಶೆ

ಕೊನೆಯ ಕ್ಷಣ ಹಲವು ಬದಲಾವಣೆಗಳಾಗಿದ್ದು, ಕನಿಷ್ಠ ಶೌಚಾಲಯ ವ್ಯವಸ್ಥೆ ಕಲ್ಪಿಸಲೂ ಆಯೋಜಕರಿಗೆ ಸಾಧ್ಯವಾಗಿಲ್ಲ. ಇದರಿಂದ ಸಮ್ಮೇಳನ ಆಯೋಜಕರೂ ಟಿಎಂಸಿ ಸರ್ಕಾರದ ವಿರುದ್ಧ ಹತಾಶೆ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರಪತಿಗೆ ಅಪಮಾನ ನಾಚಿಕೆಗೇಡು: ಮೋದಿ

ಸ್ವತಃ ಆದಿವಾಸಿ ಸಮುದಾಯ ಪ್ರತಿನಿಧಿಸುವ ರಾಷ್ಟ್ರಪತಿಗಳು ವ್ಯಕ್ತಪಡಿಸಿದ ನೋವು ಮತ್ತು ವ್ಯಥೆ ದೇಶದ ಜನರ ಮನಸ್ಸಿಗೆ ದುಃಖ ಉಂಟುಮಾಡಿದೆ. ಟಿಎಂಸಿ ಸರ್ಕಾರ ಮಿತಿಮೀರಿದ ದುರ್ವರ್ತನೆ ತೋರಿದ್ದು, ರಾಷ್ಟ್ರಪತಿಗಾದ ಅಪಮಾನಕ್ಕೆ ಅವರ ಆಡಳಿತವೇ ನೇರ ಹೊಣೆ. ಇದರ ಜತೆ ಸಂತಾಲ್ ಸಂಸ್ಕೃತಿಯಂತಹ ಮಹತ್ವದ ವಿಚಾರವನ್ನು ಬಂಗಾಳ ಸರ್ಕಾರ ಕಡೆಗಣಿಸಿದ್ದು ದುರದೃಷ್ಟಕರ ಎಂದಿದ್ದಾರೆ. ರಾಷ್ಟ್ರಪತಿ ಪದವಿ ರಾಜಕೀಯಕ್ಕಿಂತ ಮೇಲಿನದ್ದು. ಆ ಹುದ್ದೆಯ ಪಾವಿತ್ರ್ಯವನ್ನು ಎಂದಿಗೂ ಗೌರವಿಸಬೇಕು. ಟಿಎಂಸಿ ಮತ್ತು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಒಳ್ಳೆಯ ಬುದ್ಧಿ ಬರಲೆಂದು ಆಶಿಸುವುದಾಗಿ ಮೋದಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಿರುಸುದ್ದಿ

ನಾಳೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಸೂಲಿಬೆಲೆ: ಮೇರಾ ಯುವಭಾರತ್ ಬೆಂಗಳೂರು ಗ್ರಾಮಾಂತರ, ಜೇನುಗೂಡು ರೂರಲ್ ಡೆವಲಪ್‌ಮೆಂಟ್ ಅಂಡ್ ಕಲ್ಚರಲ್ ಟ್ರಸ್ಟ್, ಸೂಲಿಬೆಲೆ ಗ್ರಾಮ ಪಂಚಾಯಿತಿ ಹಾಗೂ ಆಶ್ರಯ ಸಂಜೀವಿನಿ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಮಾರ್ಚ್ 9 ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟಿನ ನಿರ್ದೇಶಕರಾದ ಸೈಯದ್ ಮಹಬೂಬ್ ತಿಳಿಸಿದ್ದಾರೆ. ಪ್ರತಿಭಾಶರತ್ ಬಚ್ಚೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಹಿರಿಯ ಮುಖಂಡ ಬಿ.ಎನ್. ಗೋಪಾಲಗೌಡ ಅಧ್ಯಕ್ಷತೆ ವಹಿಸಲಿದ್ದಾರೆ, ವಿಶೇಷ ಅಹ್ವಾನಿತರಾಗಿ ಬಮೂಲ್ ನಿರ್ದೇಶಕ ಬಿ.ವಿ.ಸತೀಶಗೌಡ, ನಾರಾಯಣಗೌಡ ಇತರರು ಪಾಲ್ಗೊಳ್ಳಲಿದ್ದಾರೆ. ರಂಗೋಲಿ ಸ್ಪರ್ಧೆ, ಮಹೆಂದಿ ಸ್ಪರ್ಧೆ, ಲೆಮನ್ ಸ್ಪೂನ್, ಮ್ಯೂಜಿಕಲ್ ಚೇರ್, 100 ಮೀಟರ್ ಓಟ ಹಾಗೂ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಪಾಲ್ಗೊಂಡ ಪ್ರತಿ ಮಹಿಳೆಗೆ ಟ್ರಸ್ಟಿನ ವತಿಯಿಂದ ಉಡುಗೊರೆ ನೀಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಮಾಗೆ ಪಿಎಚ್‌ಡಿ ಪದವಿ

ಮಂಡ್ಯ: ತಾಲೂಕಿನ ಉಮ್ಮಡಹಳ್ಳಿ ಗ್ರಾಮದ ಯು.ಎಸ್. ಸುಮಾ ಅವರು ಔಷಧ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಅಭಿಷೇಕ್ ಅವರ ಮಾರ್ಗದರ್ಶನದಲ್ಲಿ ಫಾರ್ಮುಲೇಷನ್ ಅಂಡ್ ಡೆವಲಪ್‌ಮಂಟ್ ಆಫ್ ನೋವಲ್ ಡಿಸೈನಿಂಗ್ ಆಫ್ ಪೊಸೊಕೊನಜೋಲ್ ಹೇರ್ ಜೆಲ್ ಎಂಬ ವಿಷಯದ ಕುರಿತು



ಮಂಡಿಸಿದ ಮಹಾಪ್ರಬಂಧಕ್ಕೆ ರಾಜಸ್ಥಾನದ ಸನ್‌ರೈಸ್ ಯೂನಿವರ್ಸಿಟಿ ಪಿಎಚ್‌ಡಿ ಪದವಿಗೆ ಅಂಗೀಕರಿಸಿ, ಕಳದೆ ಫೆ. 25ರಂದು ನಡೆದ ವಿವಿ ಘಟಿಕೋತ್ಸವದಲ್ಲಿ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಗಿದೆ.

ಬೆಂಗಳೂರಿನ ಮಲ್ಲಿಗೆ ಔಷಧಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಯು.ಎಸ್. ಸುಮಾ ಅವರು ಉಮ್ಮಡಹಳ್ಳಿಯ ಸಿದ್ದರಾಮಯ್ಯ ಎಸ್. ಹಾಗೂ ಮಾದೇವಿ ಪುತ್ರಿಯಾಗಿದ್ದಾರೆ.

ಸಾವಯವ ತಾಲೂಕು ಗರಿ: ಶಾಸಕ

ಪಾಂಡವಪುರ: 2026-27ನೇ ಸಾಲಿನ ಬಜೆಟ್‌ನಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕನ್ನು ಸಂಪೂರ್ಣ ಸಾವಯವ ತಾಲೂಕನ್ನಾಗಿ ಪರಿವರ್ತಿಸಲು ಅಧಿಕೃತ ಸಾವಯವ ಪ್ರಮಾಣೀಕರಣ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು ಎಂದು ಘೋಷಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರನ್ನು ಮೇಲುಕೋಟೆ ಶಾಸಕ



ದರ್ಶನ್ ಪುಟ್ಟಣ್ಣಯ್ಯ ಅಭಿನಂದಿಸಿದ್ದಾರೆ. ಇದರ ಜತೆಗೆ 2026-27ನೇ ಸಾಲಿನ ಬಜೆಟ್‌ನಲ್ಲಿ ಮೇಲುಕೋಟೆಗೆ ಶ್ರಮಿಕ ವಸತಿ ಶಾಲೆ ಮಂಜೂರು ಮಾಡಿರುವ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಅರ್ಪಿಸಿದ್ದಾರೆ.



ಕಾಗಿನೆಲೆ ಕನಕ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಹಾಗೂ ಕನಕ ಶ್ರೀ ಗೃಹ ನಿರ್ಮಾಣ ಸಹಕಾರಿ ಸಂಘದ ಸಂಸ್ಥಾಪಕ ಅಧ್ಯಕ್ಷ ಟಿ.ಬಿ.ಬಳಗಾವಿ ಅವರ 74ನೇ ಜನ್ಮದಿನ ಪ್ರಯುಕ್ತ, ಬಸವೇಶ್ವರ ನಗರದಲ್ಲಿರುವ ಅವರ ಸ್ವಗೃಹಕ್ಕೆ ಕೇಂದ್ರ ಸಚಿವ ವಿ.ಸೋಮಣ್ಣ ಭೇಟಿ ನೀಡಿ ಶುಭಾಶಯ ಕೋರಿದರು.

ಆರ್‌ಎಸ್‌ಎಸ್ ಕರ್ನಾಟಕ ಉತ್ತರ ಮತ್ತು ದಕ್ಷಿಣ ಪ್ರಚಾರ ಪ್ರಮುಖ್ ಅರುಣ್‌ಕುಮಾರ್ ಅಭಿಮತ

ಹಿಂದು ಸಂಸ್ಕೃತಿ ಒಪ್ಪುವ ಪಕ್ಷಕ್ಕೆ ಸ್ವಾಗತ

ಮಂಡ್ಯ: ಹಿಂದು ಸಂಸ್ಕೃತಿಯನ್ನು ಒಪ್ಪಿಕೊಂಡು ಬರುವ ಯಾವುದೇ ರಾಜಕೀಯ ಪಕ್ಷವನ್ನು ಮುಕ್ತವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್ ಎಸ್‌ಎಸ್) ಮುಕ್ತವಾಗಿ ಅಪ್ಪಿಕೊಳ್ಳಲಿದೆ ಎಂದು ಸಂಘದ ಕರ್ನಾಟಕ ಉತ್ತರ ಮತ್ತು ದಕ್ಷಿಣ ಪ್ರಚಾರ ಪ್ರಮುಖ್ ಅರುಣ್‌ಕುಮಾರ್ ತಿಳಿಸಿದರು.

ನಗರದ ಕಮಲ ಮಂದಿರದಲ್ಲಿ ಮಂಥನ, ಮಂಡ್ಯ ವೈಚಾರಿಕ ವೇದಿಕೆ ಆಶ್ರಯದಲ್ಲಿ ನಡೆದ ಆರ್‌ಎಸ್‌ಎಸ್-100 ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, ನಮಗೆ ಹಿಂದು ಧರ್ಮ, ಈ ನೆಲದ ಸಂಸ್ಕೃತಿ, ಆಚಾರ-ವಿಚಾರಗಳು, ಪರಂಪರೆ ಮುಖ್ಯ. ಅದೆಲ್ಲವನ್ನೂ ಬಿಜೆಪಿ ಒಪ್ಪಿ ಕೊಂಡಿದೆ. ಅದರಿಂದಾಗಿಯೇ ಬಿಜೆಪಿ ಆರ್‌ಎಸ್‌ಎಸ್‌ನ ಒಂದು ಭಾಗವಾಗಿದೆ. ಇದೀಗ ಜೆಡಿಎಸ್ ಕೂಡ ಹಿಂದುತ್ವವನ್ನು ಒಪ್ಪಿಕೊಂಡು ಬಂದಿರುವುದರಿಂದ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳಲಾಗಿದೆ. ಮುಂದೆ ಕಾಂಗ್ರೆಸ್ ಕೂಡ ಹಿಂದು ಧರ್ಮ -ಸಂಸ್ಕೃತಿಯನ್ನು ಒಪ್ಪಿ ಬಂದರೆ ಅವರನ್ನೂ ನಾವು ಮುಕ್ತವಾಗಿ ಸ್ವೀಕರಿಸುವುದಾಗಿ ಹೇಳಿದರು.

ಆರ್‌ಎಸ್‌ಎಸ್‌ನಲ್ಲಿ ಜಾತಿ-ಬೇಧ ಮಾಡುತ್ತಾರೆಂ ಬುದು ಅಪ್ಪಟ ಸುಳ್ಳು. ಯಾರು ಬೇಕಾದರೂ ಸಂಘವನ್ನು ಸೇರುವುದಕ್ಕೆ ಅವಕಾಶವಿದೆ. ಸಂಘಕ್ಕೆ ಸೇರಿಸಿ ಕೊಳ್ಳುವಾಗ ಜಾತಿ ಗುರುತಿಸಿ ಸೇರಿಸಿ ಕೊಳ್ಳುವ ಪದ್ಧತಿಯೇ ಇಲ್ಲ. ಸಂಘ ಕಂಡರೆ ಆಗದ ವರು ಸುಮ್ಮನೆ ಅಪಪ್ರಚಾರ ಮಾಡುತ್ತಿದ್ದಾರೆ.

ಸಂಘವನ್ನು ಹಿಂದೆ ನಿಂತು ನಿಂದಿಸುವವರು ಸಂಘ ಸೇರಿ ನಮ್ಮ ಕಾರ್ಯಚಟುವಟಿಕೆಗಳನ್ನು ತಿಳಿಯಲಿ. ಆನಂತರ ಅಭಿಪ್ರಾಯಗಳನ್ನು ತಿಳಿಸಲಿ. ಸಂಘದ ಕಾರ್ಯವೈಖರಿಯೇ ತಿಳಿಯದೆ ಕುರುಡುತನ ದಿಂದ ಟೀಕಿಸಬಾರದು ಎಂದು ತಿಳಿಸಿದರು.



ಭವ್ಯ ರಾಮಮಂದಿರಕ್ಕೆ ಶಿಲಾನ್ಯಾಸ ನೆರವೇರಿ ಸಿದವರು ಒಬ್ಬ ದಲಿತ. ಅದೇ ಕಾರಣಕ್ಕೆ ರಾಮ ಮಂದಿರ ಅತಿ ಶೀಘ್ರವಾಗಿ ನಿರ್ಮಾಣ ಗೊಳ್ಳಲು ಸಾಧ್ಯವಾಯಿತು ಎನ್ನುವುದು ನನ್ನ ಭಾವನೆ. ನಾವು ಗಾಂಧಿ, ಅಂಬೇಡ್ಕರ್‌ಗೆ ಜೈ ಎನ್ನುತ್ತೇವೆ. ಭಾರತ ಮಾತೆಗೆ ಜೈ ಎನ್ನುತ್ತೇವೆ. ಆರ್‌ಎಸ್‌ಎಸ್‌ನ ಸಂಸ್ಥಾಪಕರ್ಯಾರಿಗೂ ನಾವು ಜೈ ಎನ್ನುವುದಿಲ್ಲ. ಅದು ನಮ್ಮ ಆರ್‌ಎಸ್‌ಎಸ್‌ನ ಶಿಸ್ತು ಎಂದು ಖಡಕ್ಕಾಗಿ ಹೇಳಿದರು.

ಆರ್‌ಎಸ್‌ಎಸ್ ನೋಂದಣಿಯಾಗಿಲ್ಲ ನಿಜ. ಆದರೆ, ನಮ್ಮ ಲೆಕ್ಕ-ಪತ್ರಗಳೆಲ್ಲವೂ ಪಕ್ಕಾ ಇದೆ. ಪ್ರತಿ ವರ್ಷ ಆಡಿಟ್ ನಡೆಯುತ್ತದೆ. ಒಂದು ಪೈಸೆ ಹಣವೂ ವ್ಯರ್ಥವಾಗದಂತೆ ಲೆಕ್ಕ ಇಡಲಾಗುತ್ತಿದೆ. ಇದನ್ನು ಯಾರು ಬೇಕಾದರೂ ಪರಿಶೀಲನೆ ನಡೆಸ ಬಹುದು. ನಮ್ಮಲ್ಲಿ ಎಲ್ಲವೂ ಮುಕ್ತ ಹಾಗೂ ಪಾರ ದರ್ಶಕವಾಗಿದೆ. ಸಂವಿಧಾನದಡಿಯಲ್ಲೇ ಸಂಘ ನಿಯಮ ಮತ್ತು ಕಾನೂನುಬದ್ಧವಾಗಿ ನಡೆಯು ತ್ತಿದೆ. ಕಾನೂನು ವಿರೋಧಿಯಾಗಿ ನಡೆಯುತ್ತಿರುವ ಒಂದೇ ಒಂದು ಸಾಕ್ಷಿ ನೀಡುವಂತೆ ಸವಾಲು ಹಾಕಿದರು.

ನಾವೆಲ್ಲಾ ಹಿಂದು, ನಾವೆಲ್ಲಾ ಒಂದು ಎಂಬ ಭಾವನೆಯನ್ನು ದೇಶದಲ್ಲಿ ಮೂಡಿಸಬೇಕಿದೆ. ಜಾತಿ ಸಂಘರ್ಷ, ಮೇಲು-ಕೀಳು ಎಂಬ ಭಾವನೆಯನ್ನು ಎಲ್ಲರೂ ತೊರೆಯಬೇಕು. ಎಲ್ಲಾ ಜಾತಿ-ಜನಾಂಗದವರು ಹಿಂದುಗಳೆಂಬ ಮನೋಭಾವ ಜನಮಾನಸದಲ್ಲಿ ಬೆಳೆಯಬೇಕು. ಆಗ ಒಗ್ಗಟ್ಟು ಮೂಡಲು ಸಾಧ್ಯವಾಗುತ್ತದೆ. ಹಲವಾರು ಜಾತಿಗಳು ರಾಜಕೀಯವಾಗಿ ವೈರುಧ್ಯಗಳನ್ನು ಹೊಂದಿದ್ದರೂ ಆರ್‌ಎಸ್‌ಎಸ್ ಎಲ್ಲರನ್ನೂ ಒಂದು ಗೂಡಿಸುವ ಸಂಕಲ್ಪ ಮಾಡಿ ಆ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯನ್ನು ಇರಿಸಿದೆ. ಒಕ್ಕಲಿಗ, ಲಿಂಗಾಯತ, ವೀರಶೈವ, ಬ್ರಾಹ್ಮಣ, ದಲಿತ, ಹಿಂದುಳಿದ ವರ್ಗ ಎಂಬ ನೂರಾರು ಜಾತಿಗಳಲ್ಲಿರುವವರೆಲ್ಲಾ ಹಿಂದೂ ಗಳೇ. ಅವರನ್ನು ಒಗ್ಗೂಡಿಸಿದಾಗ ದೇಶದ ಏಕತೆ, ಅಖಂಡತೆಗೆ ಅರ್ಥ ಬರುತ್ತದೆ ಎಂದು ಹೇಳಿದರು.

ಜಿಲ್ಲಾ ಕಾರ್ಯವಾಹ ಅವಿನಾಶ್, ಮಂಥನ ಜಿಲ್ಲಾ ಪ್ರಮುಖ್ ಪ್ರದೀಪ್‌ರೆಡ್ಡಿ ಇದ್ದರು.

ಹಿಂದಿ ಸಂಪರ್ಕ ಭಾಷೆಯಷ್ಟೇ

ಇಂಗ್ಲೀಷ್ ಭಾಷೆಗೆ ಭಾರತೀಯರು ಅಡಿಯಾಳಾಗುವುದು ಬೇಡ. ಅದನ್ನು ಕಾಲಕ್ರಮೇಣ ದೇಶದಿಂದ ದೂರವಾಗಿಸಬೇಕು. ನಮ್ಮದು ಬಹುಭಾಷೆಗಳನ್ನು ಒಳಗೊಂಡಿರುವ ದೇಶ. ಇಲ್ಲಿ ಎಲ್ಲಾ ಭಾಷೆಗಳೂ ರಾಷ್ಟ್ರೀಯ ಭಾಷೆಗಳೇ. ಎಲ್ಲಾ ಭಾಷೆಗಳಿಗೂ ಸಮಾನ ಅವಕಾಶ, ಸ್ಥಾನ-ಮಾನ, ಬೆಳವಣಿಗೆಗೆ ಪೂರಕ ವಾತಾವರಣವನ್ನು ಕಲ್ಪಿಸಿಕೊಡಬೇಕಿದೆ. ಎಲ್ಲಾ ಭಾಷೆಗಳನ್ನು ಗಟ್ಟಿಗೊಳಿಸಿ ಬೆಳೆಸಬೇಕು ಎಂದ ಅರುಣ್‌ಕುಮಾರ್, ಹಿಂದಿ ಹೇರಿಕೆ ಎಂಬ ಭಾವನೆ ಬೇಡ. ಭಾರತದಲ್ಲಿ ಅತಿ ಹೆಚ್ಚು ಜನ ಮಾತನಾಡುವ ಹಿಂದಿಭಾಷೆಯನ್ನು ಸಂವಿಧಾನ ರಚನಾಕಾರರ ಆಶಯದಂತೆ ನಿರ್ಣಯಿಸಲಾಗಿದೆ. ಉತ್ತರ ಮತ್ತು ದಕ್ಷಿಣವನ್ನು ಸಂಪರ್ಕಿಸುವ ಸೇತುವೆಯಾಗಿ ಹಿಂದಿಯನ್ನು ತರಲಾಗುತ್ತಿದೆ. ಅದೊಂದು ಸಂಪರ್ಕ ಭಾಷೆಯಾಗಿರುತ್ತದೆಯಷ್ಟೇ. ಹಿಂದಿ ಭಾಷೆಗೆ ಸಿಗುವಷ್ಟೇ ಮಾನ್ಯತೆಯನ್ನು ಇತರೆ ಎಲ್ಲಾ ಭಾಷೆಗಳಿಗೆ ನೀಡಬೇಕು ಎನ್ನುವುದು ಆರ್‌ಎಸ್‌ಎಸ್ ಉದ್ದೇಶವಾಗಿದೆ ಎಂದು ಪ್ರಶ್ನೆಯೊಂದಕ್ಕೆ ಅರುಣ್‌ಕುಮಾರ್ ಉತ್ತರಿಸಿದರು.

ಸಚಿವ ಮನ್ಸೂಖ್ ಮಾಂಡವೀಯ ಆಗಮನ: ಎಚ್.ಡಿ.ಕುಮಾರಸ್ವಾಮಿ

ಮಾ.14ಕ್ಕೆ ಒಳಾಂಗಣ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ

ಮಂಡ್ಯ: ತಾಲೂಕಿನ ವಿ.ಸಿ. ಫಾರಂನಲ್ಲಿ ಕೇಂದ್ರ ಸರ್ಕಾರದ ಖೇಲೋ ಇಂಡಿಯಾ ಯೋಜನೆಯಡಿ 14 ಕೋಟಿ ವೆಚ್ಚದಲ್ಲಿ ನಿರ್ಮಿಸಲಿರುವ ಬಹುಪಯೋಗಿ ಒಳಾಂಗಣ ಕ್ರೀಡಾಂಗಣಕ್ಕೆ ಮಾ.14ರಂದು ಕೇಂದ್ರದ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಬಲೀಕರಣ ಖಾತೆ ಸಚಿವ ಮಾನ್ಸೂಖ್ ಮಾಂಡವೀಯ ಅವರು ಶಂಕುಸ್ಥಾಪನೆ ನೆರವೇರಿಸುವರು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ತಾಲೂಕಿನ ವಿ.ಸಿ. ಫಾರಂಗೆ ಶನಿವಾರ ಭೇಟಿ ನೀಡಿ ಕ್ರೀಡಾಂಗಣ ನಿರ್ಮಾಣವಾಗಲಿರುವ ಸ್ಥಳ ಹಾಗೂ ವೇದಿಕೆ ಕಾರ್ಯಕ್ರಮದ ಸಿದ್ಧತೆಗಳನ್ನು ಪರಿಶೀಲಿಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಸಚಿವರು, ವಿ.ಸಿ. ಫಾಂಂನ 1.5 ಎಕರೆ ಜಾಗದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಲಿದ್ದೇವೆ. ಸ್ವತಃ ಈ ಕಾರ್ಯಕ್ರಮಕ್ಕೆ ಕೇಂದ್ರ ಕ್ರೀಡಾ ಸಚಿವರೇ ಬರುತ್ತಿದ್ದಾರೆ. ಗ್ರಾಮೀಣ ಮಕ್ಕಳಿಗೆ ಕ್ರೀಡೆಯಲ್ಲಿ ಪ್ರೋತ್ಸಾಹ ನೀಡಲು ಮುಂದಾಗಿದ್ದೇವೆ. ಅಲ್ಲದೆ, ಈ ಜಾಗದಲ್ಲಿ ಇನ್ನೂ ಹೆಚ್ಚಿನ ಕ್ರೀಡಾ ಸೌಲಭ್ಯ ಕಲ್ಪಿಸಲು ಮತ್ತಷ್ಟು ಜಾಗ ಬೇಕಿದೆ. ರಾಜ್ಯ ಸರ್ಕಾರ ಜಾಗ ಕೊಡುತ್ತದೆ ಎನ್ನುವ ನಿರೀಕ್ಷೆ ಇದೆ ಎಂದು ಹೇಳಿದರು.

ಕ್ರೀಡಾಂಗಣಕ್ಕೆ ಮಂಡ್ಯ ನಗರದಲ್ಲಿಯೇ ಸ್ಥಳ ಕೊಡಿ ಎಂದು ಮೊದಲು ನಾನು ಸರ್ಕಾರವನ್ನು ಕೋರಿದ್ದೆ. ಆದರೆ, ನಗರದಲ್ಲಿ ಜಾಗ ಇಲ್ಲದ ಕಾರಣಕ್ಕೆ ವಿ.ಸಿ. ಫಾರಂನಲ್ಲಿ ಸ್ಥಳಾವಕಾಶ ನೀಡಿದ್ದಾರೆ. ಐದು ಎಕರೆ ಪ್ರದೇಶ ಬೇಕಾಗಿದೆ. ಮುಂದಿನ ದಿನಗಳಲ್ಲಿ ಕ್ರೀಡಾ ಸೌಲಭ್ಯಗಳನ್ನು ಐದು ಎಕರೆಗೂ ವಿಸ್ತರಣೆ ಮಾಡುತ್ತೇವೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ. ಯೋಜನೆ ಎಲ್ಲೇ ಬಂದರೂ ಅದು ಮಂಡ್ಯ ಜಿಲ್ಲೆಯಲ್ಲೇ ಇರುತ್ತದೆ ಎಂದರು.



ವಿಶಿಷ್ಟಚೇತನರಿಗೆ 388 ಎಲೆಕ್ಟ್ರಿಕ್ ಸ್ಕೂಟರ್ ವಿತರಣೆ

ಮಾ.14ರಂದು ನಡೆಯಲಿರುವ ಕ್ರೀಡಾಂಗಣ ಶಂಕುಸ್ಥಾಪನಾ ಕಾರ್ಯಕ್ರಮದಲ್ಲಿಯೇ 388 ವಿಶಿಷ್ಟಚೇತನರಿಗೆ ಹಂಚಿಕೆ ಮಾಡಲಿರುವ ಎಲೆಕ್ಟ್ರಿಕ್ ಸ್ಕೂಟರ್‌ಗಳನ್ನು ಸಚಿವ ಎಚ್.ಡಿ.ಕುಮಾರಸ್ವಾಮಿ ಪರಿಶೀಲನೆ ನಡೆಸಿದರು. ಭಾರತದ ಹೆಸರಾಂತ ದ್ವಿಚಕ್ರ ವಾಹನ ತಯಾರಿಕಾ ಕಂಪನಿ ಟಿವಿಎಸ್ ಹಾಗೂ ಕೇಂದ್ರದ ಉಕ್ಕು ಸಚಿವಾಲಯದ ಅಧೀನದಲ್ಲಿರುವ ಭಾರತೀಯ ಉಕ್ಕು ಪ್ರಾಧಿಕಾರ (ಎಸ್‌ಎಐಎಲ್) ಎರಡೂ ಕಂಪನಿಗಳು ತಮ್ಮ ಸಿಎಸ್‌ಆರ್ ನಿಧಿಯಿಂದ ಈ ವಾಹನಗಳನ್ನು ಕೊಡುತ್ತಿವೆ. ಟಿವಿಎಸ್ ಕ್ಯೂಇಬಿ9 ಎಲೆಕ್ಟ್ರಿಕ್ ವಾಹನಗಳನ್ನು ನೀಡಲಾಗುತ್ತಿದೆ. ಆ ವಾಹನಗಳನ್ನು ಖುದ್ದು ಪರಿಶೀಲನೆ ನಡೆಸಿದ್ದೇನೆ ಎಂದು ಸಚಿವರು ಹೇಳಿದರು.

ಮಾ.27ರಿಂದ 3 ದಿನ ಬೃಹತ್ ಕೇಸರಿ ಹಬ್ಬ

ದೊಡ್ಡಬಳ್ಳಾಪುರ: ವಿಶ್ವಹಿಂದು ಪರಿಷತ್, ಬಜರಂಗದಳ ದೊಡ್ಡಬಳ್ಳಾಪುರ ಪ್ರಖಂಡ ಇವರ ವತಿಯಿಂದ ನಗರದಲ್ಲಿ ಮಾ.27, 28, 29 ಮೂರು ದಿನ ಶ್ರೀರಾಮೋತ್ಸವ ಮತ್ತು ಬೃಹತ್ ಶ್ರೀರಾಮ ಶೋಭಾ ಯಾತ್ರೆಯನ್ನು ಆಯೋಜಿಸಲಾಗಿದೆ ಎಂದು ಬಜರಂಗದಳ ಪ್ರಾಂತ ಬಲೂಪಾಸನ್ ಪ್ರಮುಖ ನರೇಶ್ ರೆಡ್ಡಿ ಹೇಳಿದರು.

ಅವರು ನಗರದ ಮುತ್ಯಾಲಮ್ಮ ದೇವಾಲಯದ ಆವರಣದಲ್ಲಿ ಶ್ರೀರಾಮ ಶೋಭಾಯಾತ್ರೆಯ ಕರಪತ್ರವನ್ನು ಬಿಡುಗಡೆ ಮಾಡಿ ಮಾತನಾಡಿ, ಮಾ.27ರಂದು ಪಾಲನ ಜೋಗಿಹಳ್ಳಿಯ ಶ್ರೀ ವಿನಾಯಕ ದೇವಾಲಯದ ಮುಂಭಾಗದಿಂದ ಆರಂಭವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಬೃಹತ್ ವಾಹನ ಜಾಥಾ ಹಮ್ಮಿಕೊಳ್ಳಲಾಗಿದೆ.

ಮಾ. 28ರಂದು ಸಂಜೀವಿನಿ ಆರೋಗ್ಯ ಉಚಿತ ತಪಾಸಣೆ ಶಿಬಿರ ಮತ್ತು ಶಸ್ತ್ರಚಿಕಿತ್ಸೆ ಆಯೋಜಿಸಲಾಗಿದ್ದು, ಸಂಜೆ ಆನಂದ್ ಗುರೂಜಿ ನೇತೃದಲ್ಲಿ ದೊಡ್ಡಬಳ್ಳಾಪುರದ ಎಲ್ಲಾ ಮಹಿಳೆಯರಿಂದ ಶ್ರೀ ದೀಪಾ ಲಕ್ಷ್ಮಿ ಪೂಜೆ ಕಾರ್ಯಕ್ರಮ ಆಯೋಜಿಸಲಾಗಿದೆ. ಮಾ.29ರಂದು ನಗರದಲ್ಲಿ ಬೃಹತ್ ಶ್ರೀರಾಮ ಶೋಭ ಯಾತ್ರೆಯನ್ನು ಹಮ್ಮಿಕೊಂಡಿದ್ದು ನಗರದ ಪ್ರಮುಖ ರಸ್ತೆಗಳಲ್ಲಿ ಭಾರತ್ ಮಾತೆ, ಶ್ರೀರಾಮ, ಈಶ್ವರ , ಆಂಜನೇಯ, ಇಮ್ಮಡಿ ಪುಲಕೇಶಿ, ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗಳು ಮತ್ತು ವಿವಿಧ ವಾದ್ಯಗಳೊಂದಿಗೆ ಭವ್ಯ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ.

ಯಾತ್ರೆಯಲ್ಲಿ ದಿಕ್ಸೂಚಿ ಭಾಷಣವನ್ನು ಕರ್ನಾಟಕ ದಕ್ಷಿಣ ಪ್ರಾಂತ ಬಜರಂಗದಳ ಸಂಯೋಜಕ್ ಪ್ರಭಂಜನ್ ಸೂರ್ಯ ಅವರು ನಡೆಸಿಕೊಡಲಿದ್ದಾರೆ. ಸಂಜೆ ಶೋಭಾಯಾತ್ರೆ ನಂತರ ಭಗತ್ ಸಿಂಗ್ ಕ್ರೀಡಾಂಗಣದಲ್ಲಿ ಲೇಸರ್ ಶೋ ರಾವಣನ ದಹನ ಮತ್ತು ಆಕರ್ಷಕ ಸಿಡಿಮದ್ದು ಪ್ರದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಮೂರು ದಿನಗಳ ಬೃಹತ್ ಕೇಸರಿ ಹಬ್ಬಕ್ಕೆ ತಾಲೂಕಿನ ಹಾಗೂ ಜಿಲ್ಲೆಯ ಸಮಸ್ತ ನಾಗರಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಹೇಳಿದರು

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಬಜರಂಗದಳ ಸಂಯೋಜಕ್ ಬಾಸ್ಕರ್, ಕೋಲಾರ ವಿಭಾಗ ಸಹ ಕಾರ್ಯದರ್ಶಿ ರವಿ, ನಗರ ಕಾರ್ಯವಾಹಕ್ ಪೂರ್ಣಚಂದ್ರ, ಹಿರಿಯ ಮುಖಂಡರಾದ ಜೋನಾ ಮಲ್ಲಿಕಾರ್ಜುನ್, ಎಂ.ಜಿ. ಶ್ರೀನಿವಾಸ್, ಡಾ.ವೆಂಕಟೇಶ, ವೀರರಾಜ್, ಲಲಿತಾ ಮೇಘ, ಚಂದು, ನಾಗರಾಜ್, ಸುಮಂತ್, ರಂಜತಗೌಡ ದೀಪು ಇದ್ದರು.



ಮಾ.11ಕ್ಕೆ ತಾಲೂಕು ಕಚೇರಿ ಮುತ್ತಿಗೆ

ದೊಡ್ಡಬಳ್ಳಾಪುರ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 100 ಅಂಕಗಳ ಹಿಂದಿ ಭಾಷಾ ಪರೀಕ್ಷೆಯನ್ನು ಕಡ್ಡಾಯಗೊಳಿಸಿರುವುದನ್ನು ವಿರೋಧಿಸಿ ಮಾ.11ರಂದು ನಗರದ ತಾಲೂಕು ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಕನ್ನಡಪರ ಸಂಘಟನೆಗಳು ತಿಳಿಸಿವೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 100 ಅಂಕಗಳ ಹಿಂದಿ ಭಾಷಾ ಪರೀಕ್ಷೆಯನ್ನು ಕಡ್ಡಾಯಗೊಳಿಸಿರುವುದನ್ನು ವಿರೋಧಿಸಿ ಹಿಂದಿ ಹೇರಿಕೆ ವಿರೋಧಿ ಕರ್ನಾಟಕ ಒಕ್ಕೂಟ ಕರೆ ಕೊಟ್ಟಿರುವ ಪ್ರತಿಭಟನೆಯ ಬಗ್ಗೆ ನಗರದ ಕನ್ನಡ ಜಾಗೃತ ಭವನದಲ್ಲಿ ಸಭೆ ನಡೆಸಿದ ಕನ್ನಡ ಪರ ಸಂಘಟನೆಗಳ ಮುಖಂಡರು,, ರಾಜ್ಯ ಶಿಕ್ಷಣ ಪರೀಕ್ಷಾ ಪದ್ಧತಿಯೊಳಗೆ ಹಿಂದಿ ಭಾಷೆ ಕಲಿಕೆಯನ್ನು ಬಲವಂತವಾಗಿ ಹೇರುತ್ತಾ ಬರಲಾಗುತ್ತಿದ್ದು, ಇದೀಗ ಕರ್ನಾಟಕದ ಲಕ್ಷಾಂ ತರ ವಿದ್ಯಾರ್ಥಿ-ಯುವಜನರ ಶೈಕ್ಷಣಿಕ ಮುನ್ನಡೆಗೆ ತೊಡಕಾಗುವ ಹಂತ ತಲುಪಿದೆ. 2025ನೇಸಾಲಿನ ಶೈಕ್ಷಣಿಕ ವರ್ಷದ ಪರೀಕ್ಷೆಯಲ್ಲಿ 1.42 ಲಕ್ಷ ವಿದ್ಯಾರ್ಥಿಗಳನ್ನು ಹಿಂದಿ ಭಾಷಾ ಪರೀಕ್ಷೆಯಲ್ಲಿ ಅನುತ್ತೀರ್ಣಗೊಳಿಸುವ ಮೂಲಕ ರಾಜ್ಯ ಸರಕಾರ, ಕನ್ನಡಿಗರ ಮೇಲೆ ಹಿಂದಿ ಭಾಷೆ ಹೇರುವ ಕೇಂದ್ರದ ಒಕ್ಕೂಟ ಸರಕಾರದ ಭಾಷಾ ದೌರ್ಜನ್ಯ ನೀತಿಗೆ ಕೈಜೋಡಿಸಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಸಭೆಯಲ್ಲಿ ನಗರಸಭಾ ಸದಸ್ಯ ತ.ನ. ಪ್ರಭುದೇವ್, ಕನ್ನಡ ಪಕ್ಷದ ರಾಜ್ಯ ಉಪಾಧ್ಯಕ್ಷ ಸಂಜೀವ ನಾಯಕ, ಜಿಲ್ಲಾಧ್ಯಕ್ಷ ಮುನಿಪಾಪಯ್ಯ, ತಾಲೂಕು ಅಧ್ಯಕ್ಷ ವೆಂಕಟೇಶ್, ಪರಮೇಶ್ ವೆಂಕಟಪ್ಪ, ಕನ್ನಡ ಜಾಗೃತ ಪರಿಷತ್ ಕಾರ್ಯದರ್ಶಿ ಡಿ.ಪಿ.ಅಂಜನೇಯ, ಕರವೇ ರಾಜ್ಯ ಕಾರ್ಯದರ್ಶಿ ರಾಜಘಟ್ಟ ರವಿ, ತಾಲೂಕು ಅಧ್ಯಕ್ಷ ಹಮಾಮ್ ಎಸ್ ವೆಂಕಟೇಶ್, ಶಿವಕುಮಾರ್, ಶಿವರಾಜ್ ಕುಮಾರ್ ಅಭಿಮಾನಿಗಳ ಸಂಘದ ರಮೇಶ್, ರಾಜುಸಣ್ಣಕ್ಕಿ ಸೇರಿದಂತೆ ಹಲವು ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.



ಮಧು 436, ವರುಣ್ ಗೌಡ 462, ಉಲ್ಲಾಸ್ 556, ಸಾಗರ್‌ಗೆ 641ನೇ ರ್‍ಯಾಂಕ್

ಯುಪಿಎಸ್‌ಸಿ: ಚಿನ್ನದನಾಡಿಗೆ 4 ರ್‍ಯಾಂಕ್

ಕೋಲಾರ: ತಾಲೂಕಿನ ಇರಗಸಂದ್ರ ಗ್ರಾಮದ ಎ.ಮಧು ಸೇರಿದಂತೆ ನಾಲ್ವರು ಶುಕ್ರವಾರ ಪ್ರಕಟವಾದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಈ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಜಿಲ್ಲೆಯ ಹಿರಿಮೆಯನ್ನು ಮತ್ತೊಮ್ಮೆ ಎತ್ತಿ ಹಿಡಿದಿದ್ದಾರೆ. ಈ ನಾಲ್ವರ ಮನೆಗಳಲ್ಲಿ ಸಂಭ್ರಮ ನೆಲೆಸಿತ್ತು. ಸಂಬಂಧಿಕರು, ಸ್ನೇಹಿತರು ಅಭಿನಂದನೆಯ ಸುರಿಮಳೆಗರೆದರು.

ಮಧು 436ನೇ ರ್‍ಯಾಂಕ್ ಗಳಿಸಿದ್ದಾರೆ. ಕಳೆದ ಬಾರಿ ಅವರು 544ನೇ ರ್‍ಯಾಂಕ್ ಪಡೆದಿದ್ದರು. ಮತ್ತೊಮ್ಮೆ ಪರೀಕ್ಷೆ ಬರೆದು ತಮ್ಮ ರ್‍ಯಾಂಕ್ ಸುಧಾರಣೆ ಮಾಡಿಕೊಂಡಿದ್ದಾರೆ. ಇದು ಅವರ ಆರನೇ ಪ್ರಯತ್ನವಾಗಿದೆ.

ಮಧು ತಂದೆ ಆನಂದ್ ಗೌಡ ಹಾಗೂ ತಾಯಿ ಸುಶೀಲಮ್ಮ ಕೃಷಿಕರು. ತರಕಾರಿ ಬೆಳೆದು ಜೀವನ ಸಾಗಿಸುತ್ತಿದ್ದಾರೆ. 'ಪುತ್ರನ ಸಾಧನೆ ಖುಷಿ ಉಂಟು ಮಾಡಿದೆ. ಹಟ ಹಿಡಿದು ಓದಿ ಕಳೆದ ಸಲಕ್ಕಿಂತ ಹೆಚ್ಚಿನ ರ್‍ಯಾಂಕ್ ಪಡೆದಿದ್ದಾನೆ. ಪೋಷಕರಾದವರಿಗೆ ಇದಕ್ಕಿಂತ ಹೆಮ್ಮೆಯ ಕ್ಷಣ ಯಾವುದಿದೆ?' ಎಂದು ಆನಂದ್ ಗೌಡ ಜೊತೆ ಮಾತನಾಡುತ್ತಾ ಭಾವುಕರಾದರು.

ಮಧು ಇರಗಸಂದ್ರ ಹಾಗೂ ಕೆಂಬೋಡಿ ಶಾಲೆಯಲ್ಲೇ 5ನೇ ತರಗತಿವರೆಗೆ ಓದಿ, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಎನಿಗದಲೆ ನವೋ ದಯ ಶಾಲೆಯಲ್ಲಿ ಪ್ರೌಢಶಿಕ್ಷಣ, ಕೋಲಾರದ ವಿದ್ಯಾಜ್ಯೋತಿ ಕಾಲೇಜಿನಲ್ಲಿ ಪಿಯುಸಿ ಶಿಕ್ಷಣ ಪಡೆದಿ ದ್ದಾರೆ. ನಂತರ ಬೆಂಗಳೂರಿನ ಜಿಕೆವಿಕೆಯಲ್ಲಿ ಬಿ.ಎಸ್ಸಿ (ಕೃಷಿ) ಓದಿದ್ದಾರೆ.






ಹೆಚ್ಚು ಪರಿಶ್ರಮ

ನಾನು ಗ್ರಾಮೀಣ ಪ್ರದೇಶದವನು. ಜನರು ಎದುರಿಸುವ ಸಮಸ್ಯೆಗಳನ್ನು ಬಹಳ ಹತ್ತಿರದಿಂದ ಗಮನಿಸಿದ್ದೇನೆ. ಅವರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಕಳೆದ ಬಾರಿಗಿಂತ ಹೆಚ್ಚು ಪರಿಶ್ರಮ ಹಾಕಿದ್ದೆ. ರ್‍ಯಾಂಕಿಂಗ್ ಸುಧಾರಣೆ ಆಗಿರುವುದು ಖುಷಿ ಉಂಟು ಮಾಡಿದೆ. ಐಎಎಸ್ ಅಧಿಕಾರಿ ಆಗಿ ಕೆಲಸ ಮಾಡಬೇಕೆಂಬುದು ನನ್ನ ಗುರಿ ಎಂದು ಎ.ಮಧು ಪ್ರತಿಕ್ರಿಯಿಸಿದರು.

ತ್ಯಾವನಹಳ್ಳಿ ಗ್ರಾಮದ ವರುಣ್ ಗೌಡ ಪಿ. 462ನೇ ರ್‍ಯಾಂಕ್ ಪಡೆದಿದ್ದಾರೆ. 3ನೇ ಪ್ರಯತ್ನದಲ್ಲಿ ಅವರು ಈ ಸಾಧನೆ ಮಾಡಿದ್ದು, ಕೊಪ್ಪಳದ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಓದಿದ್ದಾರೆ. ಸ್ವಲ್ಪ ದಿನ ವೈದ್ಯಾಧಿಕಾರಿ ಆಗಿ ಕೆಲಸ ಮಾಡಿ ಪರೀಕ್ಷೆಗೆ ಸಿದ್ಧತೆ ನಡೆಸಿದರು. ಎಎಸ್‌ಐ ಆಗಿರುವ ಪ್ರಕಾಶ್ ಆರ್. ಹಾಗೂ ಎಂ.ಪ್ರೇಮಾ ಇವರ ಪೋಷಕರು. 'ನನ್ನ ಸಾಧನೆಗೆ ಪೋಷಕರ ಪರಿಶ್ರಮವೇ ಕಾರಣ. ಅವರಿಗೇ ಈ ಸಾಧನೆಯ ಶ್ರೇಯ ಸಲ್ಲಬೇಕು' ಎಂದು ವರುಣ್ ಹೇಳಿದರು. ಕೋಲಾರ ತಾಲೂಕಿನ ಮೇಡಿತಂಬಹಳ್ಳಿ ಗ್ರಾಮದ ಎಂ.ಎಸ್. ಉಲ್ಲಾಸ್ ಯುಪಿಎಸ್‌ಸಿ ಪರೀಕ್ಷೆಯಲ್ಲಿ 556ನೇ ರ್‍ಯಾಂಕ್ ಪಡೆದಿದ್ದಾರೆ. ಪಿಎಲ್‌ಡಿ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಎಂ.ಎಚ್.ಶ್ರೀನಿವಾಸ್ ಮತ್ತು ವಿಟ್ಟಪ್ಪನಹಳ್ಳಿ ಸರ್ಕಾರಿ ಶಾಲಾ ಶಿಕ್ಷಕಿ ಸುಜಾತಾ ದಂಪತಿ ಪುತ್ರ ಉಲ್ಲಾಸ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ನಗರದ ಚಿನ್ಮಯ ವಿದ್ಯಾಲಯದಲ್ಲಿ, ಕಾಲೇಜು ಶಿಕ್ಷಣ ವನ್ನು ನಗರದ ಸಹ್ಯಾದ್ರಿ ಕಾಲೇಜಿನಲ್ಲಿ ಪೂರೈಸಿದ್ದಾರೆ. ಉನ್ನತ ಶಿಕ್ಷಣವನ್ನು ಎನ್‌ಐಟಿಕೆ ಸುರತ್ಕಲ್‌ನಲ್ಲಿ ಮುಗಿಸಿದ್ದಾರೆ. ಕೋಲಾರ ತಾಲೂಕಿನ ಶಾನುಭೋಗನಹಳ್ಳಿ ಗ್ರಾಮದ ಸಾಗರ್.ಎ 641ನೇ ರ್‍ಯಾಂಕ್ ಪಡೆದಿದ್ದಾರೆ.

₹130 ಕೋಟಿ ವೆಚ್ಚದಲ್ಲಿ ನಿರ್ಮಾಣ | 100 ಹಾಸಿಗೆಗಳ ಆಸ್ಪತ್ರೆ | ಉದ್ಘಾಟನೆಯಾಗದೆ ರೋಗಿಗಳ ಪರದಾಟ

ಉದ್ಘಾಟನೆ ಭಾಗ್ಯ ಕಾಣದ ತಾಯಿ, ಮಕ್ಕಳ ಆಸ್ಪತ್ರೆ

ತಾವರೆಕೆರೆ ಟಿ.ನಾಗರಾಜ್

ದಿಗಂತ ವಿಶೇಷ

ತಾವರೆಕೆರೆ: ಆಸ್ಪತ್ರೆಗಳು ರೋಗಿಗಳ ಪಾಲಿಗೆ ಮರುಜೀವ ನೀಡುವ ಆಲಯವಿದ್ದಂತೆ ಆದರೆ ಇಂದು ಎಷ್ಟೋ ಕಡೆಗಳಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಾಣವಾಗಿದ್ದರೂ ಉದ್ಘಾಟನೆ ಭಾಗ್ಯಕಾಣದೆ ಮೂಲೆಗುಂಪಾಗಿವೆ. ಅಂತಹುದೇ ಆಸ್ಪತ್ರೆಯೊಂದು ಹೊಸಕೋಟೆ ತಾಲೂಕಿನ ಕೊಳತೂರು ಬಳಿ ಇದೆ. ಅಪಾರ ಹಣ ವೆಚ್ಚ ಮಾಡಿ ನಿರ್ಮಿಸಿರುವ ಆಸ್ಪತ್ರೆಯು ಉದ್ಘಾಟನೆಯಾಗದ ಕಾರಣ ಸ್ಥಳೀಯ ರೋಗಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.



ಹೊಸಕೋಟೆ ತಾಲೂಕಿನ ಕೊಳತೂರು ಬಳಿ 4 ಎಕರೆ 20 ಗುಂಟೆ ವಿಸ್ತೀರ್ಣದಲ್ಲಿ 130 ಕೋಟಿ ವೆಚ್ಚದಲ್ಲಿ 100 ಹಾಸಿಗೆಗಳ ತಾಯಿ ಮಕ್ಕಳ ಸರ್ಕಾರಿ ಆಸ್ಪತ್ರೆ ನಿರ್ಮಾಣವಾಗಿ ಉದ್ಘಾಟನೆ ಕಾಣದೆ ಅನಾಥವಾಗಿದೆ. ಸರ್ಕಾರ ಬಡವರಿಗೋಸ್ಕರ ಅನುಕೂಲವಾಗಲೆಂದು ತಾಲೂಕಿನಲ್ಲಿಯೆ ಹೈಟೆಕ್ ಆಸ್ಪತ್ರೆ ನಿರ್ಮಾಣ ಮಾಡಿ ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳಲು ಹೋಗುವ ಅವರ ಆರ್ಥಿಕ ಹೊರೆಯನ್ನು ತಪ್ಪಿಸಲು ಸರ್ಕಾರ ಈ ಆಸ್ಪತ್ರೆ ನಿರ್ಮಾಣ ಮಾಡಿದೆ. ಆದರೆ ಸಾರ್ವಜನಿಕರು ಸರ್ಕಾರದ ಜನಪ್ರತಿನಿಧಿಗಳು ಖಾಸಗಿ ಆಸ್ಪತ್ರೆಗಳಿಗೆ ಸಹಕಾರ ನೀಡುತ್ತಿರುವ ಗುಮಾನಿ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದ್ದು, ಪ್ರಭಾವಿಗಳ ಮೂಲಕ ಸರ್ಕಾರಿ ಆಸ್ಪತ್ರೆಗಳ ಅಭಿವೃದ್ಧಿಗೆ ಅಡ್ಡಿ ಮಾಡುತ್ತಿದ್ದಾರೆ ಎಂಬ ಆರೋಪಗಳು ಕೇಳಿ ಬರುತ್ತಿದೆ.

2021ರಲ್ಲಿ ಭೂಮಿ ಪೂಜೆ ಮಾಡಲಾಗಿತ್ತು, ತದನಂತರ ಕಟ್ಟಡವನ್ನು ಪೂರ್ಣಗೊಳಿಸಲಾಗಿದ್ದು, ಪ್ರಸ್ತುತ ಸುಣ್ಣ ಬಣ್ಣ ಬಳಿದುಕೊಂಡು ಶೃಂಗಾರಗೊಂಡಿದೆ. ಇನ್ನೇನು ಉದ್ಘಾಟನೆಯಾಗಲಿದೆ ಎಂದು ಸಾರ್ವಜನಿಕರು ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಆದರೆ ಲೋಕಾರ್ಪಣೆ ಯಾವಾಗ ಎಂಬುದು ಸಾರ್ವಜನಿಕರ ಪಾಲಿಗೆ ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ. ಪ್ರಭಾವಿಗಳು ಬಡವರ ಬದುಕಿಗೆ ಆಶಾಕಿರಣವಾಗಬೇಕಿದ್ದ ಸರ್ಕಾರಿ ಆಸ್ಪತ್ರೆಯನ್ನು ಧೂಳುಹಿಡಿಸಿ ಪಾಳು ಬೀಳುವಂತೆ ಮಾಡುತ್ತಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸದೆ ಜಿಲ್ಲಾ ಉಸ್ತುವಾರಿ ಸಚಿವರು ಮೀನಾಮೇಷ ಎಣಿಸುತ್ತಿರುವುದರ ಹಿಂದೆ ರಾಜಕೀಯ ಕಾರಣವಿದೆ ಎಂಬ ಮಾತು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಕೂಡಲೇ ಜನಪ್ರತಿನಿಧಿಗಳು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಿ ಬಡ ಮತ್ತು ಮಧ್ಯಮ ವರ್ಗದವರ ಆರೋಗ್ಯ ಸೇವೆಯನ್ನು ಗಂಭೀರವಾಗಿ ಪರಿಗಣಿಸಿ ಆಸ್ಪತ್ರೆಯನ್ನು ತೆರೆಯಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

ತಾಲೂಕಿನ ಜನತೆಗೆ ತಾಯಿ ಮಕ್ಕಳ ಸರ್ಕಾರಿ ಆಸ್ಪತ್ರೆ ನಿರ್ಮಾಣವಾಗಿರುವುದು ಖುಷಿ ವಿಚಾರ, ಆದರೆ ಸುಮಾರು ವರ್ಷಗಳಾದರೂ ಉದ್ಘಾಟನೆಯಾಗದೆ ಉಳಿದಿರುವ ಈ ಆಸ್ಪತ್ರೆಯನ್ನು ಬಡವರ ಆರೋಗ್ಯದ ದೃಷ್ಟಿಯಿಂದ ಅಧಿಕಾರಿಗಳು, ಜನಪ್ರತಿನಿಧಿಗಳು, ರಾಜಕೀಯ ಮಾಡದೆ ಸಾರ್ವಜನಿಕರಿಗೆ ಮುಕ್ತಗೊಳಿಸಬೇಕು.
■ ಕೃಷ್ಣೇಗೌಡ, ಕೊಳತೂರು ಗ್ರಾಮ



ರಸ್ತೆ ದುರಸ್ತಿ ಬಳಿಕ ಆಸ್ಪತ್ರೆ ಉದ್ಘಾಟನೆ

ಆಸ್ಪತ್ರೆ ಕಾಮಗಾರಿ ಪೂರ್ಣಗೊಂಡಿದ್ದು ಸಂಬಂಧಪಟ್ಟ ಎಲ್ಲಾ ಪರಿಕರಗಳೂ ಸಿದ್ಧವಾಗಿದೆ, ಆದರೆ ಎನ್‌ಎಚ್-75 ರಾಷ್ಟ್ರೀಯ ಹೆದ್ದಾರಿಯಿಂದ ಕೊಳತೂರು ಹಾಗೂ ಆಸ್ಪತ್ರೆಯ ಮುಂಭಾಗದಿಂದ ಮಾಲೂರು ರಸ್ತೆಗೆ ಸೇರುವ ರಸ್ತೆ ಹದಗೆಟ್ಟಿದ್ದು. ಡಾಂಬರೀಕರಣವಾಗದೆ ಧೂಳು ತುಂಬಿಕೊಂಡಿದೆ. ಆದ್ದರಿಂದ ರಸ್ತೆ ದುರಸ್ತಿ ಮಾಡಿದ ನಂತರ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಉದ್ಘಾಟನೆಗೊಂಡು ಸಾರ್ವಜನಿಕರ ಸೇವೆಗೆ ಅನುವು ಮಾಡಿಕೊಡಲಾಗುವುದು, ಉದ್ಘಾಟನೆಗೂ ಮುನ್ನ ಹದಗೆಟ್ಟ ರಸ್ತೆಯನ್ನು ಡಾಂಬರೀಕರಣಗೊಳಿಸಬೇಕು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಆರೋಗ್ಯಧಿಕಾರಿ ಡಾ.ಲಕ್ಕಕೃಷ್ಣರೆಡ್ಡಿ ಹೇಳಿದ್ದಾರೆ.

ಕಿರುಸುದ್ದಿ

ಲೋಕೇಶ್‌ಗೆ ಪಿಎಚ್‌ಡಿ ಪದವಿ

ಹೊಳೆನರಸೀಪುರ: ಪಟ್ಟಣದ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಲೋಕೇಶ ಬಿ.ಟಿ. ಇವರು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸಾಹಿತ್ಯ : ವಿಭಿನ್ನ ನೆಲೆಗಳು ಎಂಬ ಶೀರ್ಷಿಕೆಯಲ್ಲಿ ಡಾ.ಕೆ.ಅಂಜನಪ್ಪ ಇವರ ಮಾರ್ಗದರ್ಶನದಲ್ಲಿ, ಕನ್ನಡ ವಿಶ್ವ ವಿದ್ಯಾಲಯ ಹಂಪಿ ವಿದ್ಯಾರಣ್ಯ 34ನೇ ನುಡಿ ಹಬ್ಬ ಘಟಿಕೋತ್ಸವದಲ್ಲಿ ಕುಲಪತಿಗಳಾದ ಥಾವರ್ ಚಂದ್ ಗೆಲ್ಲೋಟ್ ಅವರು ಪಿ ಎಚ್ ಡಿ ಪ್ರಮಾಣ ಪತ್ರವನ್ನು ನೀಡಿ ಗೌರವಿಸಿದರು. ಲೋಕೇಶ್ ಬಿ.ಟಿ.ಯವರು ಹೊಳೆನರಸೀಪುರ ತಾಲೂಕಿನ ಕಸಬಾ ಹೋಬಳಿ ಬಂಡಿ ಶೆಟ್ಟಿಹಳ್ಳಿ ಗ್ರಾಮದ ದಿ. ತಿಮ್ಮೇಗೌಡ ಹಾಗೂ ಗೌರಮ್ಮ ಅವರ ಮಗನಾಗಿದ್ದು ಇವರ ಸಾಧನೆಗೆ ಸಂಘ ಸಂಸ್ಥೆಯವರು ಗ್ರಾಮಸ್ಥರು ಅಭಿನಂದಿಸಿದ್ದಾರೆ.



ದಿನವೊಂದಕ್ಕೆ 2000 ರೂ. ಬಾಡಿಗೆ ಹೊರೆ!



ಹೊಳೆನರಸೀಪುರ: ತಾಲೂಕಿನ ಹಳ್ಳಿ ಮೈಸೂರು ಹೋಬಳಿಯ ಸರ್ಕಾರಿ ರಾಗಿ ಖರೀದಿ ಕೇಂದ್ರದಲ್ಲಿ ವ್ಯವಸ್ಥಿತ ನಿರ್ವಹಣೆಯ ಕೊರತೆಯಿಂದಾಗಿ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ರಾಗಿ ಖರೀದಿಯಲ್ಲಿ ಆಗುತ್ತಿರುವ ವಿಳಂಬದಿಂದಾಗಿ ಅನ್ನದಾತನ ಆರ್ಥಿಕ ಹೊರೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಗಿ ಮಾರಾಟ ಮಾಡಲು ದೂರುದೂರಿನ ಹಳ್ಳಿಗಳಿಂದ ಟ್ರಾಕ್ಟರ್ ಹಾಗೂ ಲಾರಿಗಳಲ್ಲಿ ರಾಗಿ ಚೀಲಗಳನ್ನು ತರುತ್ತಿರುವ ರೈತರು, ಕೇಂದ್ರದ ಮುಂದೆ ದಿನಗಟ್ಟಲೆ ಕಾಯುವಂತಾಗಿದೆ. ವಾಹನಗಳ ಬಾಡಿಗೆ ದಿನವೊಂದಕ್ಕೆ ಸರಾಸರಿ 2,000 ರೂಪಾಯಿಗಳಷ್ಟಿದ್ದು, ಖರೀದಿ ಪ್ರಕ್ರಿಯೆ ವಿಳಂಬವಾಗುತ್ತಿರುವುದರಿಂದ ರೈತರು ಈ ಹಣವನ್ನು ಭರಿಸಲಾಗದೆ ಕಂಗಾಲಾಗಿದ್ದಾರೆ. ಬೆಳೆದ ಬೆಳೆಗೂ ಸರಿಯಾದ ಬೆಲೆ ಸಿಗುತ್ತಿಲ್ಲ, ಇತ್ತ ವಾಹನ ಬಾಡಿಗೆಯೇ ನಮ್ಮ ಲಾಭವನ್ನೆಲ್ಲ ನುಂಗುತ್ತಿದೆ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ. ಪ್ರಸ್ತುತ ಖರೀದಿ ಕೇಂದ್ರದಲ್ಲಿ ಈಗಾಗಲೇ ಸುಮಾರು 38,000 ಚೀಲಗಳಷ್ಟು ರಾಗಿಯನ್ನು ತೂಕ ಮಾಡಿ ಸಂಗ್ರಹಿಸಲಾಗಿದೆ. ಆದರೆ, ಇನ್ನೂ ಸಾವಿರಾರು ಚೀಲಗಳು ರಸ್ತೆಯುದ್ದಕ್ಕೂ ವಾಹನಗಳಲ್ಲಿ ಸಾಲುಗಟ್ಟಿ ನಿಂತಿವೆ. ಸರಿಯಾದ ಮಾಹಿತಿ ಮತ್ತು ಸಂವಹನದ ಕೊರತೆಯಿಂದಾಗಿ ರೈತರು ಏಕಾಏಕಿ ವಾಹನಗಳನ್ನು ತರುತ್ತಿರುವುದು ಈ ಗೊಂದಲಕ್ಕೆ ಪ್ರಮುಖ ಕಾರಣವಾಗಿದೆ. ಈ ಗೊಂದಲವನ್ನು ಬಗೆಹರಿಸಲು ಅಧಿಕಾರಿಗಳು ಮತ್ತು ಸ್ಥಳೀಯ ರೈತ ಮುಖಂಡರು ಸಭೆ ನಡೆಸಿದ್ದು, ಪ್ರಮುಖ ಸಲಹೆಗಳನ್ನು ಮುಂದಿಟ್ಟಿದ್ದಾರೆ.ದೂರವಾಣಿ ಮೂಲಕ ಮಾಹಿತಿ: ರೈತರು ತಮ್ಮ ಸರದಿ ಬಂದಾಗ ಮಾತ್ರ ವಾಹನಗಳನ್ನು ತರಲು ಅನುಕೂಲವಾಗುವಂತೆ, ಕೇಂದ್ರದಿಂದಲೇ ರೈತರಿಗೆ ಫೋನ್ ಮಾಡಿ ತಿಳಿಸಬೇಕು. ಅನಗತ್ಯ ಕಾಯುವಿಕೆ ತಡೆ: ಅಧಿಕಾರಿಗಳು ಮುಂಚಿತವಾಗಿಯೇ ಪಟ್ಟಿ ಸಿದ್ಧಪಡಿಸಿ, ನಿಗದಿತ ಸಂಖ್ಯೆಯ ವಾಹನಗಳಿಗೆ ಮಾತ್ರ ಅವಕಾಶ ನೀಡಬೇಕು. ಇದರಿಂದ ರೈತರ ಹಣ ಮತ್ತು ಸಮಯ ವ್ಯರ್ಥವಾಗುವುದನ್ನು ತಡೆಯಬಹುದು. ಕೇಂದ್ರದಲ್ಲಿ ತೂಕ ಮಾಡುವ ಪ್ರಕ್ರಿಯೆಯನ್ನು ಚುರುಕುಗೊಳಿಸಬೇಕು ಹಾಗೂ ರೈತರಿಗೆ ಕನಿಷ್ಠ ಮೂಲಸೌಕರ್ಯಗಳನ್ನು ಕಲ್ಪಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಕಾರ್ಯಕಾರಿಣಿ ಸಭೆಯಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ ಎಚ್.ಸಿ. ತಮ್ಮೇಶ್ ಗೌಡ ಅಭಿಮತ

ಪ್ರತಿಪಕ್ಷಕ್ಕಿದೆ ಆಡಳಿತ ಪಕ್ಷದಷ್ಟೇ ಜವಾಬ್ದಾರಿ

ಬೆಂಗಳೂರು: ಆಡಳಿತವನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ದಿಸೆಯಲ್ಲಿ ಪ್ರತಿಪಕ್ಷಕ್ಕೂ ಆಡಳಿತ ಪಕ್ಷದಷ್ಟೇ ಜವಾಬ್ದಾರಿ ಇರುತ್ತದೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಎಚ್.ಸಿ. ತಮ್ಮೇಶ್ ಗೌಡ ಅಭಿಪ್ರಾಯ ಪಟ್ಟರು.

ಬ್ಯಾಟರಾಯನಪುರ ಬಿಜೆಪಿ ನಗರ ಮಂಡಲ ವತಿಯಿಂದ ಕ್ಷೇತ್ರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಪಕ್ಷದ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಂಡ ಅವರು, ಆಡಳಿತದಲ್ಲಿ ಆಗುವ ಅನಾಹುತಗಳನ್ನು ನೋಡಿಕೊಂಡು ಸುಮ್ಮನೆ ಕೂರುವುದು ಪ್ರತಿಪಕ್ಷದ ವರ್ತನೆಯಾಗಬಾರದು. ಆಡಳಿತ ದಿಕ್ಕು ತಪ್ಪಿದಾಗ ಅದರ ವಿರುದ್ಧ ಗಟ್ಟಿ ಧ್ವನಿ ಎತ್ತುವುದು, ಹೋರಾಟಗಳ ಮೂಲಕ ಆಡಳಿತವನ್ನು ಸರಿದಾರಿಗೆ ತರುವುದು ಪ್ರತಿಪಕ್ಷಗಳ ಜವಾಬ್ದಾರಿಯಾಗಿದೆ ಎಂದರು.

ಬ್ಯಾಟರಾಯನಪುರ ಕ್ಷೇತ್ರದಲ್ಲಿ ಪ್ರತಿಪಕ್ಷದ ನಾಯಕನಾಗಿ ಆಡಳಿತ ಪಕ್ಷದ ವೈಫಲ್ಯಗಳ ವಿರುದ್ಧ ಗಟ್ಟಿಯಾದ ಧ್ವನಿ ಎತ್ತುವುದು ಹಾಗೂ ಹೋರಾಟಗಳನ್ನು ರೂಪಿಸುವ ಮೂಲಕ ಆಡಳಿತ ಪಕ್ಷದ ಕಿವಿ ಹಿಂಡುವ ಕೆಲಸವನ್ನು ಪ್ರಾಮಾಣಿಕವಾಗಿ ಕೈಗೊಂಡಿದ್ದೇನೆ. ಈ ಬಗ್ಗೆ ಆತ್ಮ ತೃಪ್ತಿಯಿದೆ. ಬ್ಯಾಟರಾಯನಪುರ ಕ್ಷೇತ್ರದಲ್ಲಿ ಪಕ್ಷವನ್ನು ಸದೃಢವಾಗಿ ಬಲಪಡಿಸುವ ಮೂಲಕ ಮುಂಬರುವ ಜಿಬಿಎ ಚುನಾವಣೆಯಲ್ಲಿ ಎಲ್ಲಾ 14 ವಾರ್ಡ್‌ಗಳಲ್ಲಿ ಪಕ್ಷವನ್ನು ಗೆಲ್ಲಿಸುವುದು ನಮ್ಮ ಆದ್ಯತೆಯಾಗಿದ್ದು, ಈ ದಿಸೆಯಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ಗೆಲುವಿಗಾಗಿ ಪ್ರತಿ ಕಾರ್ಯಕರ್ತರು ಹೊಣೆಗಾರಿಕೆಯಿಂದ ಕೆಲಸ ಮಾಡಬೇಕು, ನಮ್ಮ ಸೋಲಿಗೆ ನಮ್ಮ ಬೇಜವಾಬ್ದಾರಿತನ ಕಾರಣವಾಗಬಾರದು.



ಜವಾಬ್ದಾರಿ ನಿರ್ವಹಣೆಯಲ್ಲಿ ಶ್ರದ್ಧೆ ಪ್ರಾಮಾಣಿಕತೆ ಇರಬೇಕು ಎಂದು ಕಾರ್ಯಕರ್ತರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಬೆಂ.ಉತ್ತರ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಹರೀಶ್, ರಾಜ್ಯ ಕಾರ್ಯದರ್ಶಿಗಳಾದ ವಿನಯ್ ಬಿದರಿ, ಶರಣು ತಳ್ಳಿಕೇರಿ, ಕಾನೂನು ಪ್ರಕೋಷ್ಠ ಸಂಚಾಲಕ ವಸಂತಕುಮಾರ್, ಬ್ಯಾಟರಾಯನಪುರ ನಗರ ಮಂಡಲ ಬಿಜೆಪಿ ಅಧ್ಯಕ್ಷ ಕೃಷ್ಣಮೂರ್ತಿ, ಗ್ರಾ.ಮಂಡಲ ಅಧ್ಯಕ್ಷ ಹನುಮಂತಗೌಡ, ಬೆಂ.ವಿಭಾಗೀಯ ಪ್ರಭಾರಿ ಎಸ್.ಎನ್. ರಾಜಣ್ಣ, ಸಹಪ್ರಭಾರಿ ಕಿರಣ್ ಬಾಬು, ಹಿರಿಯ ಬಿಜೆಪಿ ಮುಖಂಡ ಪಿ.ಕೆ. ರಾಜಗೋಪಾಲ್, ಅಗ್ರಹಾರ ನರಸಿಂಹಮೂರ್ತಿ, ಯುವ ಮೋರ್ಚಾ ರಾಜ್ಯ ಕಾರ್ಯದರ್ಶಿ ದೀಪಕ್ ಕುಮಾರ್, ನಗರ ಮಂಡಲ ಯುವ ಮೋರ್ಚಾ ಅಧ್ಯಕ್ಷ ಲೋಹಿತ್ ಗೌಡ, ಓಬಿಸಿ ಮೋರ್ಚಾ ಅಧ್ಯಕ್ಷ ಮುನಿಸ್ವಾಮಿ ಒಡೆಯರ್ (ಆನಂದ್ ಮಾಸ್ಟರ್), ಮಹಿಳಾ ಮೋರ್ಚಾ ಅಧ್ಯಕ್ಷೆ ಪೂರ್ಣಿಮಾ, ನಗರ ಮಂಡಲ ಉಪಾಧ್ಯಕ್ಷ ಚಂದ್ರಶೇಖರ್ ರೆಡ್ಡಿ, ಡಾ. ಯೋಗೀಶ್, ಪ್ರಧಾನಕಾರ್ಯದರ್ಶಿಗಳಾದ ಉಮೇಶ್ ಇ., ಸಂತೋಷ್ ರೆಡ್ಡಿ, ಶ್ರೀನಾಥ್, ಸುಬ್ಬು, ಮಧುಸೂದನ್ ಮುಂತಾದವರಿದ್ದರು.

ನಾನು ಮೋದಿ ನಾನು ಬಿಜೆಪಿ ಅಭಿಯಾನ

ಬ್ಯಾಟರಾಯನಪುರ ಕ್ಷೇತ್ರದಲ್ಲಿ ಹಲವು ಜ್ವಲಂತ ಸಮಸ್ಯೆಗಳಿದ್ದು, ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕ್ಷೇತ್ರದ ಪ್ರತಿ ವಾರ್ಡ್‌ಗಳಲ್ಲಿರುವ ನೀರಿನ ಸಮಸ್ಯೆ ಸೇರಿದಂತೆ ಹಲವು ಸಮಸ್ಯೆಗಳನ್ನು ಪಟ್ಟಿ ಮಾಡಿ, ಮಾ.16ಕ್ಕೆ ಜಿಬಿಎ ಆಯುಕ್ತರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು. ಇದಕ್ಕಾಗಿ ಪ್ರತಿ ವಾರ್ಡ್‌ನಲ್ಲಿನ ಬಿಜೆಪಿ ಮುಖಂಡರು ವಾರ್ಡ್‌ಗಳಲ್ಲಿರುವ ಸಮಸ್ಯೆಗಳನ್ನು ಪಟ್ಟಿ ಮಾಡಬೇಕು. ಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ಬಲವರ್ಧನೆಯ ನಿಟ್ಟಿನಲ್ಲಿ ನಾನು ಮೋದಿ ನಾನು ಬಿಜೆಪಿ ಎಂಬ ಅಭಿಯಾನ ಕೈಗೊಳ್ಳಲು ನಿರ್ಧರಿಸಲಾಗಿದೆ. ಪ್ರತಿ ಬೂತ್‌ನ ಅಧ್ಯಕ್ಷರು 50 ಮನೆಗಳ ಮೇಲೆ ಬಿಜೆಪಿ ಬಾವುಟ ಕಟ್ಟುವುದು, ಮೋದಿ ಆಡಳಿತದಲ್ಲಿ ಕೈಗೊಂಡಿರುವ ಹಲವು ಅಭಿವೃದ್ಧಿ ಕಾರ್ಯಗಳ ಕುರಿತು ಅರಿವು ಮೂಡಿಸುವುದು ಇತ್ಯಾದಿ ಅಭಿಯಾನದ ಮುಖ್ಯ ಧ್ಯೇಯವಾಗಿದೆ ಎಂದು ಎಚ್.ಸಿ. ತಮ್ಮೇಶ್ ಗೌಡ ತಿಳಿಸಿದರು.

ಸತೀಶ್ ಕೃಷಿಪತ್ತಿನ ಸಂಘದ ಅಧ್ಯಕ್ಷ



ಚನ್ನರಾಯಪಟ್ಟಣ: ತಾಲೂಕಿನ ದಂಡಿಗನಹಳ್ಳಿ ಹೋಬಳಿ, ಕುಂದೂರು ಮಠದಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ನಿರ್ದೇಶಕ ದೊಡ್ಡಕರಡೇವು ಗ್ರಾಮದ ಡಿ.ಟಿ.ಸತೀಶ್‌ರವರು ಅವಿರೋಧವಾಗಿ ಆಯ್ಕೆಯಾದರು.

ಕುಂದೂರು ಮಠದ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಕ್ಕೆ ಈ ಹಿಂದೆ ಅಧ್ಯಕ್ಷರಾಗಿದ್ದ ಬಿ.ಆರ್. ಹರೀಶ್ ರಾಜೀನಾಮೆ ನೀಡಿದ್ದರಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತ್ತು. ಡಿ.ಟಿ.ಸತೀಶ್ ಹೊರತುಪಡಿಸಿ ಬೇರೆ ಯಾವ ನಿರ್ದೇಶಕರು ನಾಮಪತ್ರ ಸಲ್ಲಿಸದೆ ಇದುದ್ದರಿಂದ ಇವರ ಆಯ್ಕೆಯನ್ನು ಚುನಾವಣಾಧಿಕಾರಿ ವಿಜಯೇಂದ್ರ ಘೋಷಿಸಿದರು. ಈ ಸಂದರ್ಭದಲ್ಲಿ ನೂತನ ಅಧ್ಯಕ್ಷ ಡಿ.ಟಿ.ಸತೀಶ್ ಮಾತನಾಡಿ, ಪ್ರಸ್ತುತ ಸಂಘದಲ್ಲಿ ವ್ಯಾಪ್ತಿಗೆ ಒಳಪಡುವ 1350 ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 7.5 ಕೋಟಿ ರೂ. ಸಾಲ ಮತ್ತು 16 ಸ್ತ್ರೀಶಕ್ತಿ ಸಂಘಗಳಿಗೆ 50 ಲಕ್ಷ ರೂ. ಸಾಲ ನೀಡಲಾಗಿದೆ. ಸಾಲ ತೀರುವಳಿಯೂ ಶೇ.100ರಷ್ಟಿದ್ದು, ಮುಂಬರುವ ದಿನಗಳಲ್ಲಿ ಹೊಸ ರೈತರಿಗೆ ಸಾಲ ನೀಡಲು ಕ್ಷೇತ್ರದ ಶಾಸಕರಾದ ಎಚ್.ಡಿ.ರೇವಣ್ಣ, ಮತ್ತು ವಿಧಾನ ಪರಿಷತ್ತು ಸದಸ್ಯರು ಹಾಗೂ ಆಪೆಕ್ಸ್ ಬ್ಯಾಂಕ್ ನಿದೇಶಕರಾದ ಡಾ.ಸೂರಜ್ ರೇವಣ್ಣ ಸಹಕಾರ ಕೋರಲಾಗುತ್ತದೆ. ಜೊತೆಗೆ ಸಂಘದ ಬಲವರ್ಧನೆಗೆ ಹೆಚ್ಚು ಶ್ರಮಿಸುವುದಾಗಿ ತಿಳಿಸಿದ ಅವರು ತಮ್ಮನ್ನು ಸಂಘಕ್ಕೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ ಸಂಘದ ಉಪಾಧ್ಯಕ್ಷರು, ಸೇರಿ ಎಲ್ಲ ನಿರ್ದೇಶಕರು ಮತ್ತು ಅರ್ಶೀವದಿಸಿದ ಶಾಸಕರಾದ ಹೆಚ್.ಡಿ.ರೇವಣ್ಣ ಹಾಗೂ ಡಾ.ಸೂರಜ್ ರೇವಣ್ಣನವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು. ಈ ಸಂದರ್ಭದಲ್ಲಿ ಟಿಎಪಿಸಿಎಂಎಸ್ ನಿರ್ದೇಶಕ ನಟ್ಟೇಕೆರೆ ನಾಗರಾಜು, ತಾ.ಪಂ.ಮಾಜಿ ಸದಸ್ಯ ಗ್ಯಾರಹಳ್ಳಿ ರವೀಶ್, ಎಪಿಎಂಸಿ ಮಾಜಿ ಅಧ್ಯಕ್ಷ ರಂಗಸ್ವಾಮಿ, ಮಾಜಿ ನಿರ್ದೇಶಕ ಸತೀಶ್, ದೊಡ್ಡಕರಡೇವು ಗ್ರಾ.ಪಂ. ಮಾಜಿ ಅಧ್ಯಕ್ಷ ಮಧುಕರಡೇವು, ಬಳದರೆ ಗ್ರಾ.ಪಂ. ಮಾಜಿ ಅಧ್ಯಕ್ಷ ಅನಂತ್‌ಕುಮಾರ್, ಅರಣ್ಯ ಸಮಿತಿ ಸದಸ್ಯ ವೆಂಕಟರಮಣ ಸ್ವಾಮಿ, ಸಂಘದ ಉಪಾಧ್ಯಕ್ಷ ಡಿ.ಜಗದೀಶ್, ನಿರ್ದೇಶಕರುಗಳಾದ ಬಿ.ಆರ್. ಹರೀಶ್, ನಿಂಗೇಗೌಡ, ಸಿ.ಎಂ.ಮಂಜು ನಾಥ್, ಡಿ.ಎಲ್.ಸೋಮಶೇಖರ್, ಸಣ್ಣೇಗೌಡ, ಜಯಲಕ್ಷ್ಮಮ್ಮ ಕಾಳೇಗೌಡ, ಸುಶೀಲಮ್ಮ ಅಣ್ಣೇಗೌಡ, ಬ್ಯಾಂಕ್ ನಾಮಿನಿ ಎಸ್.ಕೆ.ಅಭಿಲಾಷ್, ಕಾರ್ಯ ನಿರ್ವಹಣಾಧಿಕಾರಿ ಕೀರ್ತಿಕುಮಾರ್, ಮುಖಂಡರಾದ ಉದ್ಯಮಿ ರವಿಗೌಡ, ಚಂದ್ರೇಗೌಡ, ದಿನೇಶ್, ನಂಬಿಹಳ್ಳಿ ಆನಂದ್, ಬಿ.ಎನ್.ನಾಗೇಂದ್ರ, ಸೇರಿ ಸಂಘದ ಸಹ ಕಾರ್ಯದರ್ಶಿ ಮಂಜುನಾಥ್, ಸಿಬ್ಬಂದಿಗಳಾದ ಸ್ಮಿತಾ, ಭಾಗ್ಯಮ್ಮ ಹಾಜರಿದ್ದರು.

ಅಪರಾಧ ವಿಭಾಗದ ಡಿಐಜಿ ಕಲಾ ಕೃಷ್ಣಸ್ವಾಮಿ ಹೇಳಿಕೆ

ಮಹಿಳೆಯರ ಸಾಮರ್ಥ್ಯ ವೃದ್ಧಿಸಿ

ಬೆಂಗಳೂರು: ಮಹಿಳೆಯರ ಸಾಮರ್ಥ್ಯ, ನಾಯಕತ್ವ ಗುಣಗಳನ್ನು ಬೆಳೆಸುವ ವೇದಿಕೆಯಾಗಿ ಮಹಿಳಾ ದಿನಾಚರಣೆ ಕಾರ್ಯಕ್ರಮಗಳು ರೂಪಗೊಳ್ಳಬೇಕು. ಆ ನಿಟ್ಟಿನಲ್ಲಿ ಸಂಘ, ಸಂಸ್ಥೆಗಳ ಪಾತ್ರ ಮಹತ್ವವಾಗಿದೆ ಎಂದು ಅಪರಾಧ ವಿಭಾಗದ ಡಿ.ಐ.ಜಿ ಕಲಾ ಕೃಷ್ಣಸ್ವಾಮಿ ತಿಳಿಸಿದರು.

ಬೆಂಗಳೂರಿನ ಅರಮನೆ ರಸ್ತೆಯಲ್ಲಿರುವ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಇಂಡಿಯನ್ ಮೀಡಿಯಾ ಜರ್ನಲಿಸ್ಟ್ ಯೂನಿಯನ್, ಚಿನ್ಮಯ ಸೇವಾ ಸಂಸ್ಥೆ ಮತ್ತು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ ಜಂಟಿ ಸಹಭಾಗಿತ್ವದಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಜ್ಯುವೆಲ್ ಆಫ್ ಕರ್ನಾಟಕ' ಪ್ರಶಸ್ತಿ ಪ್ರಧಾನ ಸಮಾರಂಭ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ಮಹಿಳಾ ದಿನವು ಕೇವಲ ಆಚರಣೆಯಲ್ಲ, ಸಮಾನತೆಗಾಗಿ ನಡೆಯುತ್ತಿರುವ ಹೋರಾಟದ ಸಂಕೇತವಾಗಿದೆ. ಪರಿಶ್ರಮ ಮತ್ತು ಸಮರ್ಪಣೆಯನ್ನು ಸಾರ್ವಜನಿಕವಾಗಿ ಮಹಿಳೆಯರಿಗೆ ಗೌರವಿಸುವ ಉದ್ದೇಶದಿಂದ ಇಂಡಿಯನ್ ಮೀಡಿಯಾ ಜರ್ನಲಿಸ್ಟ್ ಯೂನಿಯನ್ ಕಾರ್ಯ ಶ್ಲಾಘನೀಯ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಬಾಗಲಕೋಟೆ-ಚಿತ್ರದುರ್ಗದ ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಮಾತನಾಡಿ, ಇವತ್ತು ಮಹಿಳೆಯರು ಸಂವಿಧಾನಾತ್ಮಕಹಕ್ಕುಗಳಮೂಲಕಸ್ವಾಭಿಮಾನದ ಬದುಕನ್ನು ರೂಪಿಸಿಕೊಂಡಿರುವುದಕ್ಕೆ ವಚನಕಾರ ಬಸವಣ್ಣ, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ನೆನೆಯಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಚಿನ್ಮಯ ಸೇವಾ ಸಂಸ್ಥೆಯ ಚಿನ್ನಪ್ಪ ವೈ. ಚಿಕ್ಕಹಾಗಡೆ, ಅಲೆಯನ್ಸ್ ಕಾಲೇಜಿನ ರಿಜಿಸ್ಟ್ರಾರ್ ಸುರೇಖಾ ಶೆಟ್ಟಿ , ಮಹಾರಾಣಿ ವಿಶ್ವ ವಿದ್ಯಾಲಯದ ಕ್ಲಸ್ಟರ್ ಮೌಲ್ಯಮಾಪನ ರಿಜಿಸ್ಟ್ರಾರ್ ರಮೇಶ್, ಐಎಂಜೆಯು ರಾಷ್ಟ್ರೀಯ ಅಧ್ಯಕ್ಷ ಎಸ್. ಬಾಲಭಾಸ್ಕರ್ ಉಪಸ್ಥಿತರಿದ್ದರು.

ಮಾ.11ಕ್ಕೆ ವಿಶ್ವ ನಲ್ಲಿ ಕೆಲಸಗಾರರ ದಿನಾಚರಣೆ

ಚನ್ನರಾಯಪಟ್ಟಣ: ವಿಶ್ವ ನಲ್ಲಿ ಕೆಲಸಗಾರರ ದಿನದ ಪ್ರಯುಕ್ತ ಮಾ.11 ರಂದು ದಿನಾಚರಣೆ ಹಾಗೂ ನೀರು ಉಳಿಸಿ ಜೀವ ರಕ್ಷಿಸಿ ಎಂಬ ಶೀರ್ಷಿಕೆಯಡಿ ಜನಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ನಲ್ಲಿ ಕೆಲಸಗಾರರ ಸಂಘದ ಅಧ್ಯಕ್ಷ ಆಂಥೋನಿ ಹೇಳಿದರು. ಪಟ್ಟಣದ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿ ಅವರು ಮಾತನಾಡಿ, ಗೃಹಬಳಕೆ, ಕಟ್ಟಡ ನಿರ್ಮಾಣ, ಕೈಗಾರಿಕೆ ಕ್ಷೇತ್ರಗಳಲ್ಲಿ ನೀರಿನ ಯೋಜಿತ ಬಳಕೆಯಿಂದಾಗಿ ಸಂರಕ್ಷಿಸಬೇಕು ಎಂದರು. ಜಲ ಸಾಕ್ಷರತೆಗೆ ಮಹತ್ವ ನೀಡಬೇಕು. ಜನಸಂಖ್ಯೆಗೆ ಅನುಗುಣವಾಗಿ ಲಭ್ಯವಾಗುತ್ತಿರುವ ಕುಡಿಯುವ ನೀರಿನ ಪ್ರಮಾಣ ಕ್ಷೀಣಿಸುತ್ತಿದೆ. ಜಲ ಜಾಗೃತಿ ಮೂಲಕ ಜೀವಜಲ ಸಂರಕ್ಷಿಸಬೇಕಾಗಿದೆ ಎಂದು ತಿಳಿಸಿದರು. ಈ ನಿಟ್ಟಿನಲ್ಲಿ ತಾಲೂಕು ನಲ್ಲಿ ಕೆಲಸಗಾರರ ಸಂಘದ ವತಿಯಿಂದ ವಿಶ್ವ ನಲ್ಲಿ ಕೆಲಸಗಾರರ ದಿನದಂದು ನೀರು ಉಳಿಸಿ ಜೀವ ರಕ್ಷಿಸಿ ಎಂಬ ಘೋಷ ವಾಕ್ಯದೊಂದಿಗೆ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದ ಬಳಿಯಿಂದ ಜಾಥಾ ಪ್ರಾರಂಭಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾರ್ವಜನಿಕರಿಗೆ ಕರಪತ್ರ ಹಂಚುವ ಮೂಲಕ ಜನಜಾಗೃತಿ ಮೂಡಿಸಲಾಗುವುದು ಎಂದರು. ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಶಾಸಕ ಸಿ.ಎನ್. ಬಾಲಕೃಷ್ಣ ಕಾರ್ಯಕ್ರಮವನ್ನು ಉದ್ಘಾಟಿಸುವರು. ಮಾಜಿ ವಿಧಾನ ಪರಿಷತ್ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಬಿಜೆಪಿ ಮುಖಂಡ ಸಿ.ಆರ್. ಚಿದಾನಂದ್, ನಲ್ಲಿ ಕೆಲಸಗಾರರ ಸಂಘದ ರಾಜ್ಯಾಧ್ಯಕ್ಷ ಮಹೇಶ್ ಸೇರಿದಂತೆ ತಾಲೂಕಿನ ಗಣ್ಯರು ಭಾಗವಹಿಸುವರು ಎಂದು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ದೊರೆಯುವ ಸೌಲಭ್ಯಗಳು, ಪಿಂಚಣಿ ಹಾಗೂ ಸದಸ್ಯರ ನೊಂದವಣೆಗೆ ಸಂಬಂಧಪಟ್ಟ ಮಾಹಿತಿಗಳನ್ನು ನೀಡಲಾಗುವುದು. ತಾಲೂಕಿನ ನಲ್ಲಿ ಕೆಲಸಗಾರರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮಾಹಿತಿ ಪಡೆದುಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.



ಉಪಾಧ್ಯಕ್ಷ ನಿಂಗೇಗೌಡ, ಖಜಾಂಚಿ ಲಕ್ಷ್ಮೀಶ್, ಸಹ ಕಾರ್ಯದರ್ಶಿ ಎನ್.ರಾಜು, ನಿರ್ದೇಶಕರಾದ ಸಿ.ಕೆ.ರಘು, ಸಂದೇಶ್, ಸ್ವಾಮಿ, ಅರುಣೇಶ್ ಸಿ.ಆರ್.ಮಂಜುನಾಥ್ ಹಾಗೂ ಇತರರು ಇದ್ದರು.

ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಹೇಳಿಕೆ

ವಿರೋಧ ಪಕ್ಷದವರಿಗೆ ಕಾರ್ಯಕರ್ತರಿಂದಲೇ ಉತ್ತರ

ಚನ್ನರಾಯಪಟ್ಟಣ: ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದಲ್ಲಿ ಭಾರತೀಯ ಜನತಾ ಪಾರ್ಟಿ ಎಲ್ಲಿದೆ ಎಂದು ಕೇಳುವ ವಿರೋಧ ಪಕ್ಷದ ನಾಯಕರಿಗೆ ಮುಂದಿನ ದಿನಗಳಲ್ಲಿ ನಮ್ಮ ಕಾರ್ಯಕರ್ತರೇ ತಕ್ಕ ಉತ್ತರ ನೀಡಲಿದ್ದಾರೆ ಎಂದು ಮಾಜಿ ಶಾಸಕ ಹಾಗೂ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಸಾರಿದ್ದಾರೆ.

ತಾಲ್ಲೂಕಿನ ಶ್ರವಣಬೆಳಗೊಳ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಭೂತ್ ಮಟ್ಟದ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮೈತ್ರಿ ರಾಜಕಾರಣದ ಹೆಸರಲ್ಲಿ ಬಿಜೆಪಿ ಅಸ್ತಿತ್ವವನ್ನೇ ಅಡಮಾನ ಇಡುವ ಪ್ರಸಂಗ ಬಂದರೆ ತಾವು ಸುಮ್ಮನಿರುವುದಿಲ್ಲ ಎಂಬ ಖಡಕ್ ಸಂದೇಶ ರವಾನಿಸಿದ್ದಾರೆ. ಕ್ಷೇತ್ರದಲ್ಲಿ ಸತತ ಮೂರು ಬಾರಿ ಗೆದ್ದು ಶಾಸಕರಾಗಿರುವ ಸಿ.ಎನ್ .ಬಾಲಕೃಷ್ಣ ಅವರಿಗೆ ಪರೋಕ್ಷವಾಗಿ ಟಾಂಗ್ ನೀಡಿದ ಪ್ರೀತಂ ಗೌಡ, ನಾವು ಮೂರು ಬಾರಿ ರೊಟ್ಟಿಯನ್ನೇ ತಿಂದಿದ್ದೇವೆ, ಈಗ ಒಂದು ಸಲ ದೋಸೆ ತಿನ್ನಬೇಕು ಎನಿಸುತ್ತಿಲ್ಲವೇ? ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು. ಈ ಮೂಲಕ ಮುಂದಿನ ಚುನಾವಣೆಯಲ್ಲಿ ಬದಲಾವಣೆಯ ದಾಲಾವಣೆಯ ಗಾಳಿ ಬೀಸಲಿದೆ ಎಂದು ಭವಿಷ್ಯ ನುಡಿದ ಅವರು, ಆ 'ದೋಸೆ'ಯೇ ಭಾರತೀಯ ಜನತಾ ಪಾರ್ಟಿಯ ಮುಂದಿನ ಅಭ್ಯರ್ಥಿಯಾಗಲಿದ್ದಾರೆ ಎಂದು ಕಾರ್ಯಕರ್ತರಲ್ಲಿ ಹೊಸ ಸಂಚಲನ ಮೂಡಿಸಿದರು. ಶ್ರವಣಬೆಳಗೊಳ ಕ್ಷೇತ್ರದಲ್ಲಿ ಬಿಜೆಪಿಗೆ ಭವಿಷ್ಯವಿಲ್ಲ ಎನ್ನುವವರಿಗೆ ಈ ಸಭೆಯ ಮೂಲಕ ಪ್ರಬಲ ಸಂದೇಶ ರವಾನೆಯಾಗಿದೆ ಎಂದು ಅವರು ಗುಡುಗಿದರು. ಅವರ ಈ ಮಾತುಗಳು ಜೆಡಿಎಸ್ ನಾಯಕರಿಗಷ್ಟೇ ಅಲ್ಲ, ಮೈತ್ರಿಯ ಅತಿಯಾದ ಹಂಬಲದಲ್ಲಿರುವ ಸ್ವಪಕ್ಷದವರಿಗೂ ನೀಡಿದ ಎಚ್ಚರಿಕೆಯಂತೆ ಕೇಳಿಬಂದಿತು. ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಎನ್‌ಡಿಎ ಮೈತ್ರಿ ಆಗಿರುವುದು ನಿಜ, ಆ ತೀರ್ಮಾನಕ್ಕೆ ನಾವು ಬದ್ಧರೂ ಹೌದು. ಆದರೆ ಮೈತ್ರಿ ಆಗಿದೆ ಎಂಬ ಕಾರಣಕ್ಕೆ ಬಿಜೆಪಿ ಕಚೇರಿಗೆ ಬೀಗ ಹಾಕಿ, ನಮ್ಮ ಕಾರ್ಯಕರ್ತರು ಯಾವುದೋ ಒಂದು ಪಕ್ಷದ ಪರವಾಗಿ ಹೋಗಲಿಕ್ಕೆ ತಯಾರಿಲ್ಲ. ಹಾಸನ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳ ಪೈಕಿ ಹಾಸನದಲ್ಲಿ ಬಿಜೆಪಿ ಈಗಾಗಲೇ ಗಟ್ಟಿಯಾಗಿದೆ. ಅದೇ ರೀತಿ ಶ್ರವಣಬೆಳಗೊಳ, ಹೊಳೆನರಸಿಪುರ, ಅರಕಲಗೂಡು ಹಾಗೂ ಅರಸೀಕೆರೆ ಭಾಗಗಳಲ್ಲೂ ಭೂತ್ ಮಟ್ಟದಿಂದ ಪಕ್ಷವನ್ನು ಬಲಿಷ್ಠಗೊಳಿಸುವ ಕೆಲಸವಾಗಬೇಕು ಎಂದು ಅವರು ಕರೆ ನೀಡಿದರು. ಅಭ್ಯರ್ಥಿ ಯಾರಾಗುತ್ತಾರೆ ಎನ್ನುವುದನ್ನು ಸರ್ವೆ ವರದಿಗಳು ತೀರ್ಮಾನಿಸುತ್ತವೆ. ಆದರೆ ಸಂಘಟನೆ ಶಕ್ತಿಯುತವಾಗಿದ್ದರೆ ಮಾತ್ರ ರಾಷ್ಟ್ರೀಯ ನಾಯಕರು ನಮ್ಮನ್ನು ಪರಿಗಣಿಸುತ್ತಾರೆ. ಆದ್ದರಿಂದ ನಮ್ಮ ಉದ್ದೇಶ ಇರುವಂಥದ್ದು ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಭಾರತೀಯ ಜನತಾ ಪಾರ್ಟಿಯ ಕನಿಷ್ಠ ಐವತ್ತು ಸಾವಿರ ಮತಗಳನ್ನು ಕ್ರೋಢೀಕರಿಸುವುದು. ಈ ನಿಟ್ಟಿನಲ್ಲಿ ಕಾರ್ಯಕರ್ತರು ಈಗಿನಿಂದಲೇ ಸನ್ನದ್ಧರಾಗಬೇಕು ಎಂದು ಪ್ರೀತಂ ಗೌಡ ಕಿವಿಮಾತು ಹೇಳಿದರು.



ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಶ್ರೀರಂಗಪಟ್ಟಣ
ಸಿ.ಮಿಸ್. ಸಂಖ್ಯೆ 6/2026

ಅರ್ಜಿದಾರರು: : 1) ಶ್ರೀಮತಿ ಎಸ್. ಪವಿತ್ರ, ಕೋಂ ನಂಜೇಗೌಡ 41 ವರ್ಷಗಳು, ವಾಸ, ವೆಲ್ಲೆಸ್ಲಿ ಸೇತುವೆ ಬಡಾವಣೆ, ಶ್ರೀರಂಗಪಟ್ಟಣ ಟೌನ್, ಶ್ರೀರಂಗಪಟ್ಟಣ ತಾಲ್ಲೋಕು, ಮಂಡ್ಯ ಜಿಲ್ಲೆ, 571438 2) ಶ್ರೀ ಶ್ರೀನಿವಾಸ ಬಿನ್ ಲೇಟ್ ತಿಮ್ಮಯ್ಯ 74 ವರ್ಷಗಳು, ವ್ಯವಸಾಯ. 3) ಶ್ರೀಮತಿ ಶಾಂತ ಕೋಂ ಶ್ರೀನಿವಾಸ 55 ವರ್ಷಗಳು, ವ್ಯವಸಾಯ. 2 ಮತ್ತು 3 ನೇ ಅರ್ಜಿದಾರರ ವಿಳಾಸ, 281, ಗಾಂಧಿನಗರ, ಚಂದಗಾಲು ಗ್ರಾಮ, ಕಸಬಾ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೋಕು, ಮಂಡ್ಯ ಜಿಲ್ಲೆ-571438 4) ಶ್ರೀಮತಿ ಶೀಲಾ.ಎಸ್. ಕೋಂ ರವಿ.ಎಲ್. 33 ವರ್ಷಗಳು, ವಾಸ, 121, ಹಳೆ ಅಂಚೆ ಕಛೇರಿ ರಸ್ತೆ, ಕುಂಬಾರ್ ಕೊಪ್ಪಲು, ಮೈಸೂರು. -570016. 5) ಶ್ರೀಮತಿ ತೇಜಸ್ವಿನಿ.ಎಸ್. ಕೋಂ ಸಂಜಯ್.ಸಿ. 32 ವರ್ಷಗಳು, ವಾಸ, 2578/1, /1, ಎರಡನೇ ತಿರುವು, ಕಾಳಿದಾಸ ರಸ್ತೆ. ವಿ.ವಿ.ಮೊಹಲ್ಲಾ, ಮೈಸೂರು- 570002.

-ವಿರುದ್ಧ-

ಎದುರುದಾರರು: ಮಾನ್ಯ ತಹಶೀಲ್ದಾರ್, "ಜನನ ಮತ್ತು ಮರಣ ನೊಂದಾವಣೆ ವಿಭಾಗ, ಮಿನಿವಿಧಾನ ಸೌಧ, ಕಛೇರಿ, ಶ್ರೀರಂಗಪಟ್ಟಣ ಟೌನ್. ಶ್ರೀರಂಗಪಟ್ಟಣ ತಾಲ್ಲೋಕು, ಮಂಡ್ಯ ಜಿಲ್ಲೆ

ಪತ್ರಿಕಾ ಪ್ರಕಟಣೆ:

ಪ್ರಸ್ತುತ ಮೇಲ್ಕಂಡ ಪ್ರಕರಣದ ಒಂದನೇ ಅರ್ಜಿದಾರರ ತಾಯಿ, ಎರಡನೇ ಅರ್ಜಿದಾರರ ಮೊದಲ ಪತ್ನಿ ಲೇಟ್ ಶ್ರೀಮತಿ ರತ್ನಮ್ಮ ಕೋಂ ಶ್ರೀನಿವಾಸ ರವರು ದಿನಾಂಕ 06-03-1987ರಂದು ಶ್ರೀರಂಗಪಟ್ಟಣ ತಾಲ್ಲೋಕು, ಕಸಬಾ ಹೋಬಳಿ, ಚಂದಗಾಲು ಗ್ರಾಮದ ಅವರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಈ ಸಂಬಂಧವಾಗಿ ಅರ್ಜಿದಾರರು ಸದರಿಯವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿಯನ್ನು ಸಲ್ಲಿಸಿರುತ್ತಾರೆ, ಇದರ ಬಗ್ಗೆ ಮತ್ಯಾರಾದರೂ ಅರ್ಜಿದಾರರ ಕೋರಿಕೆಯನ್ನು ವಿರೋಧಿಸಿ, ತಕರಾರು ಸಲ್ಲಿಸುವವರಿದ್ದರೆ ನಿಮ್ಮ ತಕರಾರರನ್ನು ಮೇಲ್ಕಂಡ ನ್ಯಾಯಾಲಯದಲ್ಲಿ ದಿನಾಂಕ 10.04.2026 ಬೆಳಗ್ಗೆ 11-00 ಘಂಟೆಗೆ ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಘನ ನ್ಯಾಯಾಲಯದವರು ತೀರ್ಮಾನ ಮಾಡಲಾಗುತ್ತದೆಯೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಈ ಪ್ರಕಟಣೆಯನ್ನು ಮಾನ್ಯ ನ್ಯಾಯಾಲಯದ ಅಪ್ಪಣೆ ಮೇರೆಗೆ ಮತ್ತು ಮೊಹರಿನೊಂದಿಗೆ ದಿನಾಂಕ 07.03.2026ರಂದು ನೀಡಲಾಗಿದೆ.

ನ್ಯಾಯಾಲಯ ಆದೇಶದ ಮೇರೆಗೆ
ಶಿರಸ್ತೇದಾರರು, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಶ್ರೀರಂಗಪಟ್ಟಣ
ಎಸ್.ಆರ್.ಸಿದ್ದೇಶ, ಅರ್ಜಿದಾರರ ಪರ ವಕೀಲರು, ಶ್ರೀರಂಗಪಟ್ಟಣ

ಬೆಂಗಳೂರು ದಕ್ಷಿಣಾ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ಆನೇಕಲ್ ಉಪಸ್ಥಿತಿ
ಆರ್.ಎ.(ಎ) : 349/2025

ಅರ್ಜಿದಾರರು : ಸುರೇಶ್
ವಿರುದ್ಧ ಎದುರುದಾರರು : ತಹಸೀಲ್ದಾರರು
ಎದುರುದಾರರ ಸಂಖ್ಯೆ 2 ರಿಂದ 9 ರವರಿಗೆ ನ್ಯಾಯಾಲಯದ ಸಮನ್ಸ್

1. **ಕೃಷ್ಣಪ್ಪ** ಬಿನ್ ಲೇಟ್ ಲಿಂಗಪ್ಪ ವಯಸ್ಸು ಸುಮಾರು 65 ವರ್ಷ 2.**ಮಂಜಪ್ಪ** ಬಿನ್ ಲೇಟ್ ಲಿಂಗಪ್ಪ ವಯಸ್ಸು ಸುಮಾರು 63 ವರ್ಷ 3. **ರತ್ನಮ್ಮ** ಬಿನ್ ಲೇಟ್ ಲಿಂಗಪ್ಪ ವಯಸ್ಸು ಸುಮಾರು 50 ವರ್ಷ
4. **ಚಿಕ್ಕ ಮರಿಯಪ್ಪ** ಬಿನ್ ಲೇಟ್ ಲಿಂಗಪ್ಪ ವಯಸ್ಸು ಸುಮಾರು 55 ವರ್ಷ 5. **ಶಿವಕುಮಾರ** ಬಿನ್ ಲೇಟ್ ಲಿಂಗಪ್ಪ ವಯಸ್ಸು ಸುಮಾರು 45 ವರ್ಷ
6. **ರೇವಣ್ಣ** ಬಿನ್ ಲೇಟ್ ಮುನೇಶ್ವರಯ್ಯ ವಯಸ್ಸು ಸುಮಾರು 55 ವರ್ಷ 7. **ಕರಿಯಪ್ಪ** ಬಿನ್ ಲೇಟ್ ಮುನೇಶ್ವರಯ್ಯ ವಯಸ್ಸು ಸುಮಾರು 53 ವರ್ಷ
9. **ಚೆನ್ನರಾಜ** ಬಿನ್ ಲೇಟ್ ಮುನೇಶ್ವರಯ್ಯ ವಯಸ್ಸು ಸುಮಾರು 50 ವರ್ಷ ಪ್ರತಿವಾದಿ 2 ರಿಂದ 9 ರವರ ವಾಸ ಹಾರಗದ್ದೆ ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು ಬೆಂಗಳೂರು ಜಿಲ್ಲೆ.

ಈ ಮೇಲ್ಕಂಡ ಘನ ನ್ಯಾಯಾಲಯದ ಆದೇಶದಂತೆ ಆರ್.ಪಿ.ಎ.ಡಿ ಪ್ರತಿವಾದಿಗಳಿಗೆ ತಲುಪಿರುವುದಿಲ್ಲ ಆ ವಿಳಾಸದಲ್ಲಿ ಇಲ್ಲವೆಂದು ಬಂದಿದೆ ಆದ್ದರಿಂದ ಈ ಕೇಸನ್ನು ನಿಮ್ಮ ಗಮನಕ್ಕೆ ತರಲು ಹೊಸ ದಿಗಂತ ದಿನ ಪತ್ರಿಕೆಯಲ್ಲಿ ಪ್ರಚುರ ಪಡಿಸಲು ವಿಚಾರಣೆಯ ದಿನಾಂಕವನ್ನು 13/03/2026 ನ್ಯಾಯಾಲಯವು ನಿಗದಿಪಡಿಸಿದೆ.

1. ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಹಾರಗದ್ದೆ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 35/1 ರಲ್ಲಿ 1 ಎಕ್ಕರೆ 23 ಗುಂಟೆ ವಿಸ್ತೀರ್ಣಕ್ಕೆ ಚೆಕ್ ಬಂದಿ:–
ಪೂರ್ವಕ್ಕೆ :– ಸರ್ವೆ ನಂಬರ್ 30ರ ಜಮೀನು
ಪಶ್ಚಿಮಕ್ಕೆ :– ರಘುರವರ ಭಾಗದ ಜಮೀನು
ಉತ್ತರಕ್ಕೆ :– ಪ್ಯಾರೇಜನ್ ರವರ ಸ್ವತ್ತು
ದಕ್ಷಿಣಕ್ಕೆ :– ಕಿಶೋರ & ಜ್ಯೋತಿ ಪ್ರಸಾದ ರವರ ಸ್ವತ್ತು
2. ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಹಾರಗದ್ದೆ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 36 ರಲ್ಲಿ 3 ಎಕ್ಕರೆ 15 ಗುಂಟೆ ಪೈಕಿ 0.16 ಗುಂಟೆ ವಿಸ್ತೀರ್ಣಕ್ಕೆ ಚೆಕ್ ಬಂದಿ:–
ಪೂರ್ವಕ್ಕೆ :– ಉಳಿಕೆ ಜಾಗ (ದೊಡ್ಡಪ್ಪನ ಮಕ್ಕಳ ಜಾಗ)
ಪಶ್ಚಿಮಕ್ಕೆ :– ರಘುರವರ ಭಾಗದ ಜಮೀನು
ಉತ್ತರಕ್ಕೆ :– ಬಸವರಾಜ ರವರ ಜಮೀನು
ದಕ್ಷಿಣಕ್ಕೆ :– ಕಮಲಮ್ಮ ರವರ ಜಮೀನು
3. ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಸೇರಿದ ಸರ್ವೆ ನಂಬರ್ 11 ರಲ್ಲಿ 3 ಎಕ್ಕರೆ 0. 18 ಗುಂಟೆ ಪೈಕಿ 1. 141/2 ಗುಂಟೆ ವಿಸ್ತೀರ್ಣಕ್ಕೆ ಚೆಕ್ ಬಂದಿ:––
ಪೂರ್ವಕ್ಕೆ :– ಸಿಂಗಾರೆಡ್ಡಿರವರ ಜಮೀನು
ಪಶ್ಚಿಮಕ್ಕೆ :– ವೆಂಕಟ ಸ್ವಾಮಿ ಸುಬ್ಬಣ್ಣ & ಅಂಜಿನಪ್ಪ ಜಮೀನು **ಉತ್ತರಕ್ಕೆ** :– ದೊಡ್ಡಪ್ಪನ ಮಕ್ಕಳ ಜಾಗ
ದಕ್ಷಿಣಕ್ಕೆ :– ರಾಘವೇಂದ್ರನ ಭಾಗದ ಸ್ವತ್ತು

ಮಾನ್ಯ ದಕ್ಷಿಣಾ ವಿಭಾಗಾಧಿಕಾರಿಗಳು
ಉಪ ವಿಭಾಗಾಧಿಕಾರಿಗಳು
ಬೆಂಗಳೂರು ದಕ್ಷಿಣ ಉಪ ವಿಭಾಗ, ಬೆಂಗಳೂರು
ರಾಮಕೃಷ್ಣಪ್ಪ ವಕೀಲರು
ಆನೇಕಲ್
9448583538

ಮಾನ್ಯ 3ನೇ ಅಪರ ಜಿಲ್ಲಾ ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಶ್ರೀರಂಗಪಟ್ಟಣ
ಪಿ & ಎಸ್.ಸಿ. 5054/2025

ಅರ್ಜಿದಾರರು:- 1) ರಾಣಿ ಕೋಂ ಮಂಜುನಾಥ.ಎಂ ಬಿನ್ ಲೇಟ್. ಕೆ.ಜಿ.ರಮೇಶ ಸುಮಾರು 38 ವರ್ಷ, ಕನಕಗಿರಿ ಕೊಳಚೆ ಫಾರ್ಮ್ ರಸ್ತೆ, ವಿದ್ಯಾರಣ್ಯ ಪುರಂ ಮೈಸೂರು -570008, 2) ರಾಜಶೇಖರ ಬಿನ್ ಲೇಟ್.ಕೆ.ಜಿ ರಮೇಶ, ಸುಮಾರು 36 ವರ್ಷ, ನಂ.2798, ಅಗ್ರಹಾರ, ಎಲೆಕೆರೆ ರಸ್ತೆ, ಕೃಷ್ಣರಾಜಪೇಟೆ ಟೌನ್,ಮಂಡ್ಯ ಜಿಲ್ಲೆ - 57 1426, 3) ಕೆ.ಜಿ.ಕುಳ್ಳೇಗೌಡ @ ಲೋಕೇಶ ಬಿನ್ ಲೇಟ್ ಜವರೇಗೌಡ, ಸುಮಾರು 58 ವರ್ಷ, ನಂ.563, ಅಗ್ರಹಾರ, ಕಸಬಾ ಹೋಬಳಿ, ಕೆ.ಆರ್.ಪೇಟೆ ತಾಲ್ಲೂಕು ಮಂಡ್ಯ ಜಿಲ್ಲೆ.

-ವಿರುದ್ಧ-

ಎದುರುದಾರರು : ಕೆ.ಜಿ.ವಿಜಯಕುಮಾರ ಬಿನ್ ಲೇ॥ ಜವರೇಗೌಡ, ಸುಮಾರು ವರ್ಷ, ಅಗ್ರಹಾರ, ಕಸಬಾ ಹೋಬಳಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಕೆ.ಆರ್.ಪೇಟೆ ತಾಲ್ಲೂಕು, ಕಸಬಾ ಹೋಬಳಿ, ಕೃಷ್ಣರಾಜಪೇಟೆ ಟೌನ್ ನಲ್ಲಿರುವ ಮಡಕ ಲಕ್ಕಿ ನಿಂಗೇಗೌಡರ ಮಗ ಜವರೇಗೌಡ ರವರು ತಮ್ಮ 1ನೇ ಮಗ ಕೆ.ಜಿ.ರಮೇಶ ರವರ ಮಕ್ಕಳಾದ (ಮೊಮ್ಮಕ್ಕಳು) ರಾಣಿ ಮತ್ತು ರಾಜಶೇಖರರವರಿಗೆ ಮತ್ತು 2ನೇ ಮಗನಾದ ಕುಳ್ಳೇಗೌಡ ಮತ್ತು 3ನೇ ಮಗನಾದ ಕೆ.ಜಿ.ವಿಜಯ್ ಕುಮಾರ್(ಎದುರುದಾರರು) ರವರಿಗೆ ಷೆಡ್ಯೂಲ್ ಸ್ವತ್ತುಗಳನ್ನು ದಿನಾಂಕ :28-12-1991 ರಂದು ಒಂದು ವಿಲ್-ಯಾ-ಮರಣ ಶಾಸನವನ್ನು ಬರೆಸಿದ್ದು, ಸದರಿ ವಿಲ್‌ನಂತೆ ಅರ್ಜಿದಾರರುಗಳ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಪ್ರೊಬೇಟ್ ಕೋರಿ ಈ ದಾವೆ ದಾಖಲಿಸಿರುತ್ತಾರೆ. ಸದರಿ ಅರ್ಜಿಯ ವಿಚಾರಣೆಯು ದಿನಾಂಕ : 24/03/2026 ರ ಬೆಳಗ್ಗೆ 11-00 ಗಂಟೆಗೆ ಇದ್ದು ಅಂದು ಕುಟುಂಬದ ಯಾರಾದರೂ ತಕರಾರು ಸಲ್ಲಿಸುವವರಿದ್ದಲ್ಲಿ ಸಲ್ಲಿಸಲು ಕೋರಿ ಈ ಪತ್ರಿಕೆಯಲ್ಲಿ ಪ್ರಕಟಣೆಯ ಮೂಲಕ ಕೋರಲಾಗಿದೆ.

-:ಷೆಡ್ಯೂಲ್ ಸ್ವತ್ತುಗಳ ವಿವರ:-

1 ಮತ್ತು 2ನೇ ಅರ್ಜಿದಾರರಾದ ರಾಣಿ ಮತ್ತು ರಾಜಶೇಖರ ರವರ ಹಿಸ್ಸೆಗೆ ಸೇರತಕ್ಕ ಸ್ವತ್ತುಗಳ ವಿವರ:

1) ಕೆ.ಆರ್.ಪೇಟೆ ತಾಲ್ಲೂಕು, ಕಸಬಾ ಹೋಬಳಿ, ವಡ್ಡರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 38/2 ರಲ್ಲಿ ತರೀ ವಿಸ್ತೀರ್ಣ 2 ಹೇರ್ಸ್, ಆಕಾರ 0-10 ಪೈಸೆವುಳ್ಳ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ :- ರಸ್ತೆ. ಪಶ್ಚಿಮಕ್ಕೆ :- ಹೇಮಾವತಿ ನದಿ, ಉತ್ತರಕ್ಕೆ :- ಸಿದ್ದೇಗೌಡ ರವರ ಜಮೀನು, ದಕ್ಷಿಣಕ್ಕೆ :- ವೆಂಕಟಗಿರಿ ರಾಮಯ್ಯನ ಜಮೀನು, 2) ಕೆ.ಆರ್.ಪೇಟೆ ತಾಲ್ಲೂಕು, ಕಸಬಾ ಹೋಬಳಿ, ವಡ್ಡರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 38/3 ರಲ್ಲಿ ತರೀ ವಿಸ್ತೀರ್ಣ 7-1/2 ಹೇರ್ಸ್, ಆಕಾರ 0-50 ಪೈಸೆವುಳ್ಳ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ :- ರಸ್ತೆ. ಪಶ್ಚಿಮಕ್ಕೆ :- ಹೇಮಾವತಿ ನದಿ, ಉತ್ತರಕ್ಕೆ :- ಸಿದ್ದೇಗೌಡ ರವರ ಜಮೀನು, ದಕ್ಷಿಣಕ್ಕೆ:- ವೆಂಕಟಗಿರಿ ರಾಮಯ್ಯನ ಜಮೀನು, 3) ಕೆ.ಆರ್.ಪೇಟೆ ತಾಲ್ಲೂಕು, ಕಸಬಾ ಹೋಬಳಿ, ವಡ್ಡರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 39 ರಲ್ಲಿ ತರೀ ವಿಸ್ತೀರ್ಣ 5-3/4 ಹೇರ್ಸ್, ಆಕಾರ 0-40 ಪೈಸೆವುಳ್ಳ ಜಮೀನಿಗೆ ಚೆಕ್ಕುಬಂದಿ :ಪೂರ್ವಕ್ಕೆ :- ರಸ್ತೆ.ಪಶ್ಚಿಮಕ್ಕೆ :- ಹೇಮಾವತಿ ನದಿ, ಉತ್ತರಕ್ಕೆ :- ಸಿದ್ದೇಗೌಡ ರವರ ಜಮೀನು, ದಕ್ಷಿಣಕ್ಕೆ :- ವೆಂಕಟಗಿರಿ ರಾಮಯ್ಯನ ಜಮೀನು, 4) ಕೆ.ಆರ್.ಪೇಟೆ ತಾಲ್ಲೂಕು, ಕಸಬಾ ಹೋಬಳಿ, ಬಂಡಿಹೊಳೆಯಿನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 4/1 ರಲ್ಲಿ ಖುಷ್ಕಿ ವಿಸ್ತೀರ್ಣ 24 ಹೇರ್ಸ್, ಆಕಾರ 0-01 ಪೈಸೆವುಳ್ಳ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ :- ಸೈಯದ್ ಉಸ್ಮಾನ್ ಜಮೀನು, ಪಶ್ಚಿಮಕ್ಕೆ :- ಅರೆಕಲ್ಲು ಮತ್ತು ದೇವಿರಮ್ಮನ ಕರೆ, ಉತ್ತರಕ್ಕೆ :- ನನ್ನ ಬಾಬ್ತು ಜಮೀನು, ದಕ್ಷಿಣಕ್ಕೆ :- ನನ್ನ ಬಾಬ್ತು ಜಮೀನು, 5) ಕೆ.ಆರ್.ಪೇಟೆ ತಾಲ್ಲೂಕು, ಕಸಬಾ ಹೋಬಳಿ, ಬಂಡಿಹೊಳೆಯಿನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 4/2 ರಲ್ಲಿ ಖುಷ್ಕಿ ವಿಸ್ತೀರ್ಣ 29-1/2 ಹೇರ್ಸ್, ಆಕಾರ 1,00 ಪೈಸೆವುಳ್ಳ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ :- ಸೈಯದ್ ಉಸ್ಮಾನ್ ಜಮೀನು, ಪಶ್ಚಿಮಕ್ಕೆ :- ಕೆರೆ ಮತ್ತು ಮಂಟಿ, ಉತ್ತರಕ್ಕೆ :- ಸರ್ಕಾರಿ ಓಣಿ, ದಕ್ಷಿಣಕ್ಕೆ :- ಸೈಯದ್ ರಜಾಕ್‌ರವರ ಜಮೀನು, 6) ಕೆ.ಆರ್.ಪೇಟೆ ಟೌನ್, ಇಂಟೀರಿಯಮ್ ಮಂಡಲ ಪಂಚಾಯತಿಗೆ ಸೇರಿದ ಅಸೆಸ್ಮೆಂಟ್ ನಂಬರಿಗೆ ಸೇರಿದ 563 ರ ಮಂಗಳೂರು ಹೆಂಚಿನ ಮನೆಗೆ ಚೆಕ್ಕುಬಂದಿ; ಪೂರ್ವಕ್ಕೆ :- ಬೋರಲಿಂಗೇಗೌಡರ ಮನೆ, ಪಶ್ಚಿಮಕ್ಕೆ :- ಶಿವಣ್ಣಚಾರಿ ರವರ ಮನೆ, ಉತ್ತರಕ್ಕೆ :- ಜೋಗಿ ನಿಂಗೇಗೌಡರವರ ಮನೆ, ದಕ್ಷಿಣಕ್ಕೆ :- ಸಣ್ಣೇಗೌಡರವರ ಮನೆ
ಈ ಮಧ್ಯೆ ಇರುವ ಪೂ-ಪ 20 ಅಡಿ, ದ-ಉ 42 ಅಡಿ

3ನೇ ಅರ್ಜಿದಾರರಾದ ಕುಳ್ಳೇಗೌಡ ರವರ ಹಿಸ್ಸೆಗೆ ಸೇರತಕ್ಕ ಸ್ವತ್ತುಗಳ ವಿವರ:

1) ಕೆ.ಆರ್.ಪೇಟೆ ತಾಲ್ಲೂಕು, ಕಸಬಾ ಹೋಬಳಿ, ವಡ್ಡರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 38/2 ರಲ್ಲಿ ತರೀ ವಿಸ್ತೀರ್ಣ 2 ಹೇರ್ಸ್, ಆಕಾರ 0-10 ಪೈಸೆವುಳ್ಳ ಜಮೀನಿಗೆ ಚೆಕ್ಕುಬಂದಿ ; ಪೂರ್ವಕ್ಕೆ :- ರಸ್ತೆ.ಪಶ್ಚಿಮಕ್ಕೆ :- ಹೇಮಾವತಿ ನದಿ, ಉತ್ತರಕ್ಕೆ :- ಸಿದ್ದೇಗೌಡ ರವರ ಜಮೀನು, ದಕ್ಷಿಣಕ್ಕೆ :- ವೆಂಕಟಗಿರಿ ರಾಮಯ್ಯನ ಜಮೀನು, 2) ಕೆ.ಆರ್.ಪೇಟೆ ತಾಲ್ಲೂಕು, ಕಸಬಾ ಹೋಬಳಿ, ವಡ್ಡರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 38/3 ರಲ್ಲಿ ತರೀ ವಿಸ್ತೀರ್ಣ 0.021/2 ಹೇರ್ಸ್, ಆಕಾರ 0-50 ಪೈಸೆವುಳ್ಳ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ :- ರಸ್ತೆ. ಪಶ್ಚಿಮಕ್ಕೆ :- ಹೇಮಾವತಿ ನದಿ ಉತ್ತರಕ್ಕೆ :- ಸಿದ್ದೇಗೌಡ ರವರ ಜಮೀನು, ದಕ್ಷಿಣಕ್ಕೆ :- ವೆಂಕಟಗಿರಿ ರಾಮಯ್ಯನ ಜಮೀನು, 3) ಕೆ.ಆರ್.ಪೇಟೆ ತಾಲ್ಲೂಕು, ಕಸಬಾ ಹೋಬಳಿ, ವಡ್ಡರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 39 ರಲ್ಲಿ ತರೀ ವಿಸ್ತೀರ್ಣ 0.063/4 ಹೇರ್ಸ್, ಆಕಾರ 0-50 ಪೈಸೆವುಳ್ಳ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ :- ರಸ್ತೆ. ಪಶ್ಚಿಮಕ್ಕೆ :- ಹೇಮಾವತಿ ನದಿ, ಉತ್ತರಕ್ಕೆ :- ಸಿದ್ದೇಗೌಡ ರವರ ಜಮೀನು, ದಕ್ಷಿಣಕ್ಕೆ :- ವೆಂಕಟಗಿರಿ ರಾಮಯ್ಯನ ಜಮೀನು, 4) ಕೆ.ಆರ್.ಪೇಟೆ ತಾಲ್ಲೂಕು, ಕಸಬಾ ಹೋಬಳಿ, ಕೆ.ಆರ್.ಪೇಟೆ ಗ್ರಾಮಕ್ಕೆ ಸೇರಿದ ಸರ್ವೆ 287 ರಲ್ಲಿ ಖುಷ್ಕಿ ವಿಸ್ತೀರ್ಣ 0.60 ಹೇರ್ಸ್, ಆಕಾರ 2.00 ಪೈಸೆವುಳ್ಳ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ :- ಸಿದ್ದಲಿಂಗೇಗೌಡ ರವರ ಜಮೀನು, ಪಶ್ಚಿಮಕ್ಕೆ :- ಮೂಡನ ಕಾಳಯ್ಯನ ಜಮೀನು, ಉತ್ತರಕ್ಕೆ :- ಸರ್ಕಾರಿ ಹಳ್ಳ, ದಕ್ಷಿಣಕ್ಕೆ :- ಬೀರಲಿಂಗೇಗೌಡರ ಜಮೀನು, 5) ಕೆ.ಆರ್.ಪೇಟೆ ತಾಲ್ಲೂಕು, ಕಸಬಾ ಹೋಬಳಿ, ಬಂಡಿಹೊಳೆಯಿನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 4/1 ರಲ್ಲಿ ಖುಷ್ಕಿ ವಿಸ್ತೀರ್ಣ 24 ಹೇರ್ಸ್, ಆಕಾರ 1,00 ಪೈಸೆವುಳ್ಳ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ :- ಸೈಯದ್ ಉಸ್ಮಾನ್ ಜಮೀನು, ಪಶ್ಚಿಮಕ್ಕೆ :- ಓಣಿ ಕಲ್ಲು ಮತ್ತು ಕೆರೆ, ಉತ್ತರಕ್ಕೆ :- ನನ್ನ ಬಾಬ್ತು ಜಮೀನು, ದಕ್ಷಿಣಕ್ಕೆ :- ನನ್ನ ಬಾಬ್ತು ಜಮೀನು, 6) ಕೆ.ಆರ್ .ಪೇಟೆ ತಾಲ್ಲೂಕು, ಕಸಬಾ ಹೋಬಳಿ, ಬಂಡಿಹೊಳೆಯಿನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 4/2 ರಲ್ಲಿ ಖುಷ್ಕಿ ವಿಸ್ತೀರ್ಣ 0.29 1/2 ಹೇರ್ಸ್, ಆಕಾರ 2,00 ಪೈಸೆವುಳ್ಳ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ :- ಸೈಯದ್ ಉಸ್ಮಾನ್ ಜಮೀನು, ಪಶ್ಚಿಮಕ್ಕೆ :- ಕೆರೆ ಮತ್ತು ಮಂಟಿ, ಉತ್ತರಕ್ಕೆ :- ಸರ್ಕಾರಿ ಓಣಿ, ದಕ್ಷಿಣಕ್ಕೆ :- ಸೈಯದ್ ರಜಾಕ್ ರವರ ಜಮೀನು, 7) ಕೆ.ಆರ್.ಪೇಟೆ ಟೌನ್, ಇಂಟೀರಿಯಮ್ ಮಂಡಲ ಪಂಚಾಯತಿಗೆ ಸೇರಿದ ಅಸೆಸ್ಮೆಂಟ್ ನಂಬರಿಗೆ ಸೇರಿದ 563 ರ ಮಂಗಳೂರು ಹೆಂಚಿನ ಮನೆಗೆ ಚೆಕ್ಕುಬಂದಿ : ಪೂರ್ವಕ್ಕೆ :- ಬೋರಲಿಂಗೇಗೌಡರ ಮನೆ, ಪಶ್ಚಿಮಕ್ಕೆ :- ನನ್ನ ಬಾಬ್ತು ಮನೆ ಮತ್ತು ಶಿವಣ್ಣಚಾರಿ ರವರ ಮನೆ, ಉತ್ತರಕ್ಕೆ :- ಭೋವಿ ನಾಗೇಗೌಡರ ಮನೆ, ದಕ್ಷಿಣಕ್ಕೆ :- ಸಣ್ಣೇಗೌಡರವರ ಮನೆ.
ಈ ಮಧ್ಯೆ ಇರುವ ಪೂ-ಪ 20 ಅಡಿ, ದ-ಉ 42 ಅಡಿ

ಈ ಪ್ರಕಟಣೆಯನ್ನು ಘನ ನ್ಯಾಯಾಲಯದ ಆದೇಶ ಮತ್ತು ಮೊಹರಿನೊಂದಿಗೆ ದಿನಾಂಕ: 25/02/2026 ರಂದು ನೀಡಲಾಗಿದೆ.

ಶಿರಸ್ತೇದಾರರು, 3ನೇ ಜಿಲ್ಲಾ ಸತ್ರ ನ್ಯಾಯಾಧೀಶರು, ಶ್ರೀರಂಗಪಟ್ಟಣ
ಅರ್ಜಿದಾರರುಗಳ ಪರ ವಕೀಲರು : **ಕೃಷ್ಣೇಗೌಡ,** ವಕೀಲರು

IN THE COURT OF THE HON'BLE DEPUTY COMMISSINER AT KOLAR
R.A.P NO:85/2025
APPELLLANT: S.Gopalakrishna and another.
V/s
RESPONDENTS.: The Assistant commissioner Kolar and others.
NOTICE TO RESPONDENT NO 3 THROUGH PAPER PUBLICATION AS PER UNDER ORDER 5 RULE 20 READ WITH SECTION 151 OF CPC.
CORRECT ADDRESS OF THE RESPONDENTS.

R-3 Amaravathi W/o late Manjunath Aged about years. Residing at Murandahalli Village Kasaba Hobli, Kolar taluk

Whereas, the appellant had instituted the above appeal against impugned mutation order passed by the 1st respondent in favour of respondents no: in LND.SC.ST 54/2010-11 on dated 14/02/2025 with respect to the land bearing old sy no:202, new no 270/ an extent of 2.00acres situated at Yadahalli village, Kasaaba Hobli, Kolaer taluk. you the respondent no: 3 are evading to receiving the notice to issued by the this Hon'ble court. Hence you are hereby noticed to appear on in person or by an advocate on 09.03.2026 at 3 PM to answer the same.

Failing which the appeal will be disposed as exparte

By order of this Hon'ble court.
Deputy commissioner kolar.
Advocate: T.M.Shivanna, Kolar

IN THE COURT OF THE HON'BLE LXXV ADDL. CITY CIVIL & SESSIONS JUDGE AT BANGALORE (CCH-76)
O.S. No. 6348/2025

BETWEEN : THE STATE BANK OF INDIA, KUMARA PARK BRANCH (1626), No. 159, 1st MAIN ROAD, NEAR BHIMAS HOTEL, SHESHADRI PURAM BANGALORE-560020 Represented by its Manger
...PLAINTIFF

AND : Mrs. GEETHA .G ...DEFENDANT

SUMMONS TO DEFENDANT BY WAY OF PAPER PUBLICATION

Mrs. GEETHA .G, aged about 39 years, D/o. Narasimaiah, # 9/1, 2nd Cross, Muneshwara Block, Near Shaneshwara Temple, Palace Guttahalli, P G Halli, Bangalore-560003. Ph : 9880472767.
ALSO AT #7, 3rd Main, BHEL Mini Colony, Pipe Line Road, Mallasandra, Bangalore-560057.
...DEFENDANT

Whereas, the Plaintiff has filed a suit Recovery of money instituted the present suit, for sum of **Rs. 2,41,230/- (Rupees Two Lakhs Forty one Thousand Two Hundred and Thirty Rupees Only)**, and future interest at contractual rate together with other applicable expenses, charges from the date of NPA till closure of loan. Hence you are hereby summoned to appear before court, person or through a Pleader **on 28.04.2026 at 11.00 A.M.** to answer the same failing which suit will be Disposed of Ex-parte.

Given under my hand and the seal of the court this 07th day of March 2026.

By Order of the Court, Senior Sheristedar, City Civil Court, Bengaluru.
Advocate for Plaintiff :
J. SATHISH KUMAR, Advocate
EWS 16/2, 1st Cross, 2nd Main, 2nd Stage, KHB (AD Halli) Basaveshwaranagar, Bengaluru-560 079. Mob : 9448448238
Email : gsnadvocates@yahoo.com



151.8 ದಶಲಕ್ಷ ಡಾಲರ್ ವೆಚ್ಚ | ಸಂಸತ್ ಒಪ್ಪಿಗೆ ಇಲ್ಲದೆ ನೇರ ಅನುಮೋದನೆ

ಇಸ್ರೇಲ್‌ಗೆ 12,000 ಬಾಂಬ್ ಮಾರಾಟಕ್ಕೆ ಅಮೆರಿಕ ಒಪ್ಪಿಗೆ

ವಾಷಿಂಗ್ಟನ್: ಇರಾನ್ ಯುದ್ಧದ ಮಧ್ಯೆ ಇಸ್ರೇಲ್ ಮನವಿ ಮೇರೆಗೆ 151.8 ದಶಲಕ್ಷ ಡಾಲರ್ ಮೌಲ್ಯದ 12,000 ಬಾಂಬ್‌ಗಳ ತುರ್ತು ಮಾರಾಟಕ್ಕೆ ಅಮೆರಿಕ ಸಂಸತ್ತಿನ ಅನುಮತಿ ಇಲ್ಲದೆಯೇ ಟ್ರಂಪ್ ಸರ್ಕಾರ ನೇರ ಅನುಮೋದನೆ ನೀಡಿದೆ. ಮಧ್ಯ ಪ್ರಾಚ್ಯದಲ್ಲಿ ಇರಾನ್ ಮೇಲಿನ ಯುದ್ಧ ಗಂಭೀರ ರೂಪ ತಾಳಿದ್ದು, ತಲಾ 1,000 ಪೌಂಡ್ ಭಾರದ 12,000 ಬಿಎಲ್‌ಯು -110ಎ/ಬಿ ಬಾಂಬ್‌ಗಳಿಗಾಗಿ ಇಸ್ರೇಲ್ ಮನವಿ ಮಾಡಿತ್ತು. ಈ ಮಾರಾಟದಲ್ಲಿ ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿಯೂ ಇರುವುದರಿಂದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಅವರು ತಕ್ಷಣವೇ ಅನುಮೋದನೆ ನೀಡಿದ್ದಾರೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ.

ಸಂಸತ್ತಿನ ಒಪ್ಪಿಗೆ ಇಲ್ಲದೆ ಅನುಮೋದನೆ: ಸಾಮಾನ್ಯವಾಗಿ ಶಸ್ತ್ರಾಸ್ತ್ರ ಮಾರಾಟ ಒಪ್ಪಂದಗಳಿಗೆ ಅಮೆರಿಕ ಸಂಸತ್ತಿನ ಅನುಮತಿ ಪಡೆಯಬೇಕು. ಆದರೆ ಇಸ್ರೇಲ್ ತುರ್ತು ಮನವಿಗೆ ಸ್ಪಂದಿಸಿದ ರುಬಿಯೋ ಅನುಮೋದನೆ ನೀಡಿದ್ದಾರೆ. ಈ ಒಪ್ಪಂದವು, ಪ್ರಸ್ತುತ ಮತ್ತು ಭವಿಷ್ಯದ ಆಕ್ರಮಣಗಳನ್ನು ಎದುರಿಸುವಲ್ಲಿ ಇಸ್ರೇಲ್ ಸಾಮರ್ಥ್ಯ ಬಲವರ್ಧಿಸಲಿದೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ. ಹೊಸ ಪ್ಯಾಕೇಜ್‌ನಲ್ಲಿ ಬಾಂಬ್‌ಗಳಷ್ಟೇ ಅಲ್ಲದೆ ಎಂಜಿನಿಯರಿಂಗ್, ಲಾಜಿಸ್ಟಿಕ್ಸ್ ಮತ್ತು ತಾಂತ್ರಿಕ ಸೇವೆಗಳನ್ನೂ ಒದಗಿಸಲಿದೆ.



ಎಲ್ಲೆಡೆ ದಟ್ಟ ಹೊಗೆ | ಘರ್ಷಣೆ ಇನ್ನಷ್ಟು ದಿನಗಳಿಗೆ ವಿಸ್ತರಿಸುವ ಸಾಧ್ಯತೆ

ದಾಳಿ-ಪ್ರತಿ ದಾಳಿಗೆ ಮಧ್ಯಪ್ರಾಚ್ಯ ತತ್ತರ!

ದುಬೈ: ಇಸ್ರೇಲ್ ಶನಿವಾರ ಮುಂಜಾನೆ ಇರಾನ್ ರಾಜಧಾನಿ ಟೆಹ್ರಾನ್ ಮೇಲೆ ಹೊಸ ಸರಣಿ ದಾಳಿಗಳನ್ನು ನಡೆಸಿದ್ದು, ಇಡೀ ನಗರ ಸ್ಫೋಟದ ಸದ್ದಿನಿಂದ ನಡುಗಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಈ ನಡುವೆ, ಅತ್ಯಂತ ಭೀಕರ ಬಾಂಬ್ ದಾಳಿಗಳು ಇನ್ನು ಮುಂದೆ ನಡೆಯಲಿವೆ ಎಂದು ಅಮೆರಿಕ ಎಚ್ಚರಿಸಿರುವುದು, ಘರ್ಷಣೆ ಇನ್ನಷ್ಟು ದಿನಗಳಿಗೆ ವಿಸ್ತರಿಸುವ ಸೂಚನೆ ನೀಡಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಫೋಟೋ, ವಿಡಿಯೋಗಳಲ್ಲಿ, ಪಶ್ಚಿಮ ಟೆಹ್ರಾನ್‌ನಲ್ಲಿ ಸರಣಿ ಸ್ಫೋಟಗಳ ನಂತರ ಕಪ್ಪು ಹೊಗೆ ಆವರಿಸುತ್ತಿರುವುದು ಕಂಡುಬಂದಿದೆ. ವಿಶಾಲ ವ್ಯಾಪ್ತಿಯ ಕ್ಷಿಪಣಿಗಳನ್ನು ಬಳಸಿ ದಾಳಿಗಳನ್ನು ಆರಂಭಿಸಿರುವುದಾಗಿ ಇಸ್ರೇಲ್ ದೃಢಪಡಿಸಿದೆ. ಇದೇ ವೇಳೆ ಇರಾನ್ ಉಡಾಯಿಸಿದ ಕ್ಷಿಪಣಿಗಳನ್ನು ತಡೆಹಿಡಿದಿರುವುದಾಗಿ ಇಸ್ರೇಲ್ ಸೇನೆ ಹೇಳಿಕೊಂಡಿದೆ.

ಅಮೆರಿಕದ ನಿಲುವು ಮತ್ತು ಮಿಲಿಟರಿ ಬೆಂಬಲ: ಈ ಮಧ್ಯೆ, ಅಮೆರಿಕಾದ ಡೊನಾಲ್ಡ್ ಟ್ರಂಪ್ ಆಡಳಿತ, ಇಸ್ರೇಲ್‌ಗೆ 151 ಮಿಲಿಯನ್ ಡಾಲರ್ ಮೌಲ್ಯದ ಹೊಸ ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮೋದನೆ ನೀಡಿದೆ. ಈ ಮೂಲಕ ಇರಾನ್ ಮೇಲೆ ಮತ್ತಷ್ಟು ಒತ್ತಡ ಹೇರಲಾಗಿದೆ. ಇರಾನ್ ಬೇಷರತ್ತಾಗಿ ಶರಣಾಗುವವರೆಗೆ ಯಾವುದೇ ಮಾತುಕತೆ ಸಾಧ್ಯವಿಲ್ಲ ಎಂದು ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದಾರೆ.

ರಷ್ಯಾ ಮತ್ತು ರಾಜತಾಂತ್ರಿಕ ನಡೆಗಳು

ಈ ಪ್ರದೇಶದಲ್ಲಿರುವ ಅಮೆರಿಕದ ಮಿಲಿಟರಿ ನೆಲೆಗಳನ್ನು ಗುರಿಯಾಗಿಸಲು ರಷ್ಯಾ ಇರಾನ್‌ಗೆ ಮಾಹಿತಿ ಹಂಚಿಕೊಳ್ಳುತ್ತಿದೆ ಎಂದು ಅಮೆರಿಕದ ಗುಪ್ತಚರ ಅಧಿಕಾರಿಗಳು ಗಂಭೀರ ಆರೋಪ ಮಾಡಿದ್ದಾರೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರೊಂದಿಗೆ ಮಾತನಾಡಿ, ಆರಂಭಿಕ ದಾಳಿಯಲ್ಲಿ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆಗೆ ಸಂತಾಪ ಸೂಚಿಸಿದ್ದಾರೆ.

ಉತ್ತರಾಧಿಕಾರಿ ವಿಚಾರ, ಅಮೆರಿಕ ವಿರುದ್ಧ ಇರಾನ್ ಕೆಂಡ

ಯುದ್ಧದ ಆರಂಭಿಕ ದಾಳಿಗಳಲ್ಲಿ ಹತ್ಯೆಗೀಡಾದ ಖಮೇನಿ ಅವರ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ತಾವೂ ಭಾಗಿಯಾಗಬೇಕು ಎಂದು ಟ್ರಂಪ್ ಮಾಧ್ಯಮ ಸಂಸ್ಥೆಗಳಿಗೆ ತಿಳಿಸಿದ್ದಾರೆ. ಟ್ರಂಪ್ ಅವರ ಈ ಹೇಳಿಕೆಯನ್ನು ವಿಶ್ವಸಂಸ್ಥೆಯಲ್ಲಿನ ಇರಾನ್ ರಾಯಭಾರಿ ಅಮೀರ್ ಸಯೀದ್ ಇರವಾನಿ ಖಂಡಿಸಿದ್ದಾರೆ. ಇರಾನ್ ತನ್ನ ಆಂತರಿಕ ವ್ಯವಹಾರಗಳಲ್ಲಿ ಯಾವುದೇ ವಿದೇಶಿ ಶಕ್ತಿಯ ಹಸ್ತಕ್ಷೇಪವನ್ನು ಒಪ್ಪುವುದಿಲ್ಲ ಮತ್ತು ಎಂದಿಗೂ ಅನುಮತಿಸುವುದಿಲ್ಲ ಎಂದು ಅವರು ಹೇಳಿದ್ದಾರೆ.

30ಕ್ಕೂ ಹೆಚ್ಚು ಯುದ್ಧನೌಕೆಗಳನ್ನು ಮುಳುಗಿಸಿದ ಅಮೆರಿಕ

ವಾಷಿಂಗ್ಟನ್: ಇರಾನ್ ವಿರುದ್ಧ ಯುದ್ಧ ಆರಂಭವಾದಾಗಿನಿಂದ ಈವರೆಗೆ ಅಮೆರಿಕ ಇರಾನ್‌ನ 30ಕ್ಕೂ ಹೆಚ್ಚು ನೌಕಾಪಡೆ ಹಡಗುಗಳನ್ನು ಮುಳುಗಿಸಿದೆ, ಎಂದು ಯುನೈಟೆಡ್ ಸ್ಟೇಟ್ಸ್ ಸೆಂಟ್ರಲ್ ಕಮಾಂಡ್ (ಸೆಂಟ್‌ಕಾಮ್) ನ ಉನ್ನತ ಮಿಲಿಟರಿ ಕಮಾಂಡರ್ ತಿಳಿಸಿದ್ದಾರೆ. ಅಮೆರಿಕದ ಸೆಂಟ್ರಲ್ ಕಮಾಂಡ್ ಮುಖ್ಯಸ್ಥ ಅಡ್ಮಿರಲ್ ಬ್ರಾಡ್ ಕೂಪರ್ ಮಾತನಾಡಿ, ನಾಶಪಡಿಸಲಾದ ಹಡಗುಗಳಲ್ಲಿ ಎರಡನೇ ಮಹಾಯುದ್ಧದ ಕಾಲದ ವಿಮಾನವಾಹಕ ನೌಕೆಯ ಗಾತ್ರದಷ್ಟೇ ದೊಡ್ಡದಾದ ಇರಾನ್‌ನ 'ಡ್ರೋನ್-ವಾಹಕ' ಹಡಗು ಕೂಡ ಸೇರಿದೆ. ಸಂಘರ್ಷದ ಆರಂಭಿಕ ದಿನಗಳಿಗೆ ಹೋಲಿಸಿದರೆ ಇರಾನ್‌ನ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿ ಸುಮಾರು ಶೇ. 90 ರಷ್ಟು ಕುಸಿದಿವೆ ಎಂದು ಹೇಳಿದ್ದಾರೆ. ಇರಾನ್‌ನ ಮಿಲಿಟರಿ ಮೂಲಸೌಕರ್ಯಗಳ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ಸತತ ದಾಳಿಗಳು ಹಾಗೂ ಇರಾನ್‌ನ ಡ್ರೋನ್ ಬೆದರಿಕೆಗಳನ್ನು ಎದುರಿಸಲು ವಿನ್ಯಾಸಗೊಳಿಸಲಾದ 'ಲೂಕಾಸ್' ಅಟ್ಯಾಕ್ ಡ್ರೋನ್‌ಗಳಂತಹ ಹೊಸ ತಂತ್ರಜ್ಞಾನಗಳ ಬಳಕೆಯೇ ಈ ಕುಸಿತಕ್ಕೆ ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಪ್ರಾದೇಶಿಕ ವ್ಯಾಪ್ತಿಗೆ ಹರಡಿದ ಯುದ್ಧ

ಈ ಸಂಘರ್ಷ ಈಗ ಉಭಯ ದೇಶಗಳ ಗಡಿ ಮೀರಿ ಹರಡುತ್ತಿದೆ. ಬಹ್ರೇನ್ ಮೇಲೆ ಇರಾನ್ ದಾಳಿ ನಡೆಸಿದ ಬೆನ್ನಲ್ಲೇ ಅಲ್ಲಿ ವಾಯುದಾಳಿಯ ಮುನ್ನೆಚ್ಚರಿಕೆ ಸೈರನ್ ಮೊಳಗಿದೆ. ಸೌದಿ ಅರೇಬಿಯಾದ ಶೈಬಾ ತೈಲ ಕೇಂದ್ರದತ್ತ ಬರುತ್ತಿದ್ದ ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಮತ್ತು ಅಮೆರಿಕದ ಪಡೆಗಳಿರುವ ಪ್ರಿನ್ಸ್ ಸುಲ್ತಾನ್ ವಾಯು ನೆಲೆಯನ್ನು ಗುರಿಯಾಗಿಸಿಕೊಂಡಿದ್ದ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ತಡೆಹಿಡಿಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕ ಗೆಲುವಿಗೆ ಪಾದ್ರಿ ಪ್ರಾರ್ಥನೆ

ಶ್ವೇತಭವನದ ಹಿರಿಯ ಅಧಿಕಾರಿಯೊಬ್ಬರು ಶ್ವೇತಭವನದಲ್ಲಿ ಯುದ್ಧದ ಬಗ್ಗೆ ಪಾದ್ರಿಯೊಬ್ಬರು ಪ್ರಾರ್ಥಿಸುತ್ತಿರುವ ವಿಡಿಯೋ ತುಣುಕು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದೆ. ಉಲ್ಬಣಗೊಳ್ಳುತ್ತಿದ್ದಂತೆ ತುಣುಕು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ. ನಾನು ನಿಮ್ಮ ಅನುಗ್ರಹಕ್ಕಾಗಿ ನಿಮ್ಮ ರಕ್ಷಣೆಗಾಗಿ ಪ್ರಾರ್ಥಿಸುತ್ತೇನೆ. ನಮ್ಮ ಪಡೆಗಳಿಗೆ ಮತ್ತು ನಮ್ಮ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನಮ್ಮ ಎಲ್ಲಾ ಪುರುಷರು ಮತ್ತು ಮಹಿಳೆಯರಿಗೆ ಅನುಗ್ರಹ ಮತ್ತು ರಕ್ಷಣೆಗಾಗಿ ನಾನು ಪ್ರಾರ್ಥಿಸುತ್ತೇನೆ ಎಂದು ಪಾದ್ರಿ ಹೇಳುತ್ತಿರುವುದು ವಿಡಿಯೋದಲ್ಲಿ ಸೆರೆಯಾಗಿದೆ.



ಹೆಚ್ಚುತ್ತಿರುವ ಸಾವು-ನೋವು, ಜಾಗತಿಕ ಆತಂಕ

ಈ ಯುದ್ಧದಲ್ಲಿ ಈವರೆಗೆ ಇರಾನ್‌ನಲ್ಲಿ ಕನಿಷ್ಠ 1,230, ಲೆಬನಾನ್‌ನಲ್ಲಿ 200 ಮತ್ತು ಇಸ್ರೇಲ್‌ನಲ್ಲಿ ಸುಮಾರು 12 ಜನರು ಮೃತಪಟ್ಟಿದ್ದಾರೆ. ಆರು ಅಮೆರಿಕನ್ ಸೈನಿಕರು ಕೂಡ ಹತ್ಯೆಗೀಡಾಗಿದ್ದಾರೆ. ಈ ಸಂಘರ್ಷದಿಂದಾಗಿ ಗಲ್ಫ್ ರಾಷ್ಟ್ರಗಳ ಇಂಧನ ರಫ್ತಿಗೆ ಅಡ್ಡಿಯಾಗಬಹುದು ಮತ್ತು ತೈಲ ಬೆಲೆ ಪ್ರತಿ ಬ್ಯಾರಲ್‌ಗೆ 150 ಡಾಲರ್‌ಗೆ ಏರಬಹುದು, ಎಂದು ಕತಾರ್ ಆತಂಕ ವ್ಯಕ್ತಪಡಿಸಿದೆ. ಈಗಾಗಲೇ ಕಚ್ಚಾ ತೈಲ ಬೆಲೆ ಕಳೆದ ಎರಡು ವರ್ಷಗಳಲ್ಲೇ ಮೊದಲ ಬಾರಿಗೆ 90 ಡಾಲರ್ ಗಡಿ ದಾಟಿದೆ.



ನೆರೆ ರಾಷ್ಟ್ರಗಳಿಗೆ ಕ್ಷಮೆ ಕೇಳಿದ ಇರಾನ್ ಅಧ್ಯಕ್ಷ

ಇಸ್ರೇಲ್ ಮತ್ತು ಅಮೆರಿಕದೊಂದಿಗಿನ ಯುದ್ಧದ ಸಮಯದಲ್ಲಿ ಪ್ರಾರಂಭಿಸಿದ ದಾಳಿಗಳಿಗಾಗಿ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ಅವರು ನೆರೆಯ ರಾಷ್ಟ್ರಗಳಿಗೆ ಕ್ಷಮೆಯಾಚಿಸಿದ್ದಾರೆ. ಇಸ್ರೇಲ್ ಅವರು ಮೊದಲು ದಾಳಿ ಮಾಡುವವರೆಗೆ ನಾವು ಅದರ ಮೇಲೆ ದಾಳಿ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಇರಾನ್‌ನಿಂದ ದಾಳಿಗೊಳಗಾದ ನೆರೆಯ ರಾಷ್ಟ್ರಗಳಿಗೆ ನಾನು ನನ್ನ ಪರವಾಗಿ ಮತ್ತು ರಾಷ್ಟ್ರದ ಪರವಾಗಿ ಕ್ಷಮೆಯಾಚಿಸುತ್ತೇನೆ. ಮಧ್ಯಂತರ ನಾಯಕತ್ವ ಮಂಡಳಿಯು ಶುಕ್ರವಾರ ನೆರೆಯ ದೇಶಗಳ ಮೇಲೆ ಯಾವುದೇ ದಾಳಿಗಳನ್ನು ಮಾಡಲಾಗುವುದಿಲ್ಲ, ಆ ದೇಶಗಳಿಂದ ನಮ್ಮ ಮೇಲೆ ದಾಳಿ ನಡೆಯದ ಹೊರತು ಯಾವುದೇ ಕ್ಷಿಪಣಿಗಳನ್ನು ಹಾರಿಸಲಾಗುವುದಿಲ್ಲ ಎಂದು ಒಪ್ಪಿಕೊಂಡಿದೆ ಎಂದು ಪೆಜೆಶ್ಕಿಯನ್ ಇರಾನಿನ ರಾಜ್ಯ ಟಿವಿ ಪ್ರಸಾರ ಮಾಡಿದ ಭಾಷಣದಲ್ಲಿ ಹೇಳಿದರು. ಅಂತೆಯೇ ಇರಾನ್ ಮೇಲೆ ದಾಳಿ ಮಾಡಿ ತಮ್ಮ ಸರ್ವೋಚ್ಚ ನಾಯಕ ಖಮೆನಿ ಹತ್ಯೆ ಮಾಡಿದ ಇಸ್ರೇಲ್-ಅಮೆರಿಕವನ್ನ ಕ್ಷಮಿಸೋ ಮಾತೇ ಇಲ್ಲ. ತಮ್ಮ ದೇಶವು ಇಸ್ರೇಲ್ ಮತ್ತು ಅಮೆರಿಕ ಮುಂದೆ ಎಂದೂ ಶರಣಾಗುವುದಿಲ್ಲ ಮಸೌದ್ ಪೆಜೆಶ್ಕಿಯಾನ್ ಹೇಳಿದ್ದಾರೆ.

ಇರಾನ್ ಹೊಸ ಅಧ್ಯಾಯಕ್ಕೆ ಬಲಪಂಥೀಯ ಪಕ್ಷ ಸ್ಥಾಪನೆ

ಟೆಹ್ರಾನ್: ಇರಾನ್ ರಾಷ್ಟ್ರೀಯವಾದಿ ಬಣ ಹೊಸ ಪಕ್ಷ ಸ್ಥಾಪನೆಯೊಂದಿಗೆ ದಶಕಗಳ ಇಸ್ಲಾಮಿಕ್ ಆಡಳಿತದ ನಂತರ ಇರಾನ್‌ನ ಹೊಸ ಅಧ್ಯಾಯಕ್ಕೆ ಮುನ್ನುಡಿ ಬರೆದಿದೆ. ಇಸ್ಲಾಮಿಕ್ ಕ್ರಾಂತಿಗೂ ಮುನ್ನ ರಾಷ್ಟ್ರಧ್ವಜದಲ್ಲಿದ್ದ ಸಿಂಹ ಮತ್ತು ಸೂರ್ಯ ಬಲಪಂಥೀಯ ಪಕ್ಷದ ಚಿಹ್ನೆಯಾಗಿ ಮರಳಿವೆ. ಇರಾನ್‌ನ ದಮಾವಂದ್ ಪರ್ವತದಲ್ಲಿ ಖಡ್ಗ ಹಿಡಿದ ಸಿಂಹ ಮತ್ತು ಸೂರ್ಯೋದಯ, ಹಳೆಯ ಪರ್ಷಿಯನ್ ಸಂಪ್ರದಾಯವಾದಿ ಸಂಕೇತಗಳನ್ನು ಕನ್ಸರ್ವೇಟಿವ್ ಪಕ್ಷ (ಸಿಪಿಐ) ತನ್ನ ಧ್ವಜದಲ್ಲಿ ಬಳಸಿಕೊಂಡಿದೆ.



ಕಿರುಸುದ್ದಿ

ಭಾರತದೊಂದಿಗೆ ರಕ್ಷಣಾ ಸಹಕಾರ ವಿಸ್ತರಣೆಗೆ ಬದ್ಧ

ಹೊಸದಿಲ್ಲಿ: ಭಾರತದೊಂದಿಗೆ ವಿಶೇಷವಾಗಿ ಸುಧಾರಿತ ಡ್ರೋನ್ ತಂತ್ರಜ್ಞಾನಗಳಲ್ಲಿ ರಕ್ಷಣಾ ಸಹಕಾರವನ್ನು ವಿಸ್ತರಿಸಲು ಪೋಲೆಂಡ್ ಎದುರು ನೋಡುತ್ತಿದೆ ಎಂದು ಪೋಲೆಂಡ್ ವಿದೇಶಾಂಗ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆರ್ಥಿಕ ಅಭಿವೃದ್ಧಿ ಮತ್ತು ತಂತ್ರಜ್ಞಾನ ಸಚಿವಾಲಯದ ಅಧೀನ ಕಾರ್ಯದರ್ಶಿ ಮೈಕೆಲ್ ಬರಾನೋವ್ಸ್ಕಿ ಅವರು ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ, ಭಾರತವನ್ನು ಕೇವಲ ಮಾರುಕಟ್ಟೆಯಾಗಿ ಮಾತ್ರವಲ್ಲದೆ ಕಾರ್ಯತಂತ್ರದ ಪಾಲುದಾರನಾಗಿ ನೋಡುವುದಕ್ಕೆ ಒತ್ತು ನೀಡಿದರು.

ತೈಲ ಆಮದು: ಸ್ವತಂತ್ರ ನಿಲುವು ಸ್ಪಷ್ಟಪಡಿಸಿದ ಭಾರತ

ಹೊಸದಿಲ್ಲಿ: ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಭಾರತಕ್ಕೆ ಯಾವುದೇ ರಾಷ್ಟ್ರದ ಅನುಮತಿಯ ಅಗತ್ಯವಿಲ್ಲ, ದೇಶ ಈ ವಿಚಾರದಲ್ಲಿ ಸ್ವಾಯತ್ತತೆಯನ್ನು ಬಿಟ್ಟುಕೊಟ್ಟಿಲ್ಲ, ಎಂದು ಭಾರತೀಯ ಅಧಿಕಾರಿಗಳು ದೃಢಪಡಿಸಿದ್ದಾರೆ. ರಷ್ಯಾದಿಂದ ತೈಲ ಖರೀದಿಸಲು ಅಮೆರಿಕಾ ಭಾರತಕ್ಕೆ ತಾತ್ಕಾಲಿಕ ಸಡಿಲಿಕೆ ನೀಡಿದ ಬೆನ್ನಲ್ಲೇ ಶನಿವಾರ ಈ ಸ್ಪಷ್ಟನೆ ನೀಡಲಾಗಿದೆ.

ಎಲ್‌ಪಿಜಿ ಬೆಲೆ 60 ರೂ. ಏರಿಕೆ, ಹೊಸ ದರ ಜಾರಿ

ಹೊಸದಿಲ್ಲಿ: ಇರಾನ್ ಯುದ್ಧದ ನಡುವೆ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ದೇಶಾದ್ಯಂತ 60 ರೂ. ಏರಿಕೆಯಾಗಿದ್ದು, ಶನಿವಾರವೇ ಹೊಸ ದರವನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. 14.2 ಕೆ.ಜಿ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ 60 ರೂ. ಹೆಚ್ಚಿಸಲಾಗಿದೆ. ಅದೇ ರೀತಿ 19 ಕೆ.ಜಿ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆ 115 ರೂ.ನಷ್ಟು ಹೆಚ್ಚಿಸಲಾಗಿದೆ. ಇವುಗಳು ಹೋಟೆಲ್, ರೆಸ್ಟೋರೆಂಟ್ ಮತ್ತು ಸಣ್ಣ ಉದ್ಯಮಗಳ ಮೇಲೆ ಪರಿಣಾಮ ಬೀರಲಿದೆ.



ಇದೇವೇಳೆ ದೇಶದಲ್ಲಿ ಇಂಧನ ಕೊರತೆ ಇಲ್ಲ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್‌ದೀಪ್ ಸಿಂಗ್ ಪುರಿ ಭರವಸೆ ನೀಡಿದ್ದು, ಗ್ರಾಹಕರು ತೈಲ ಪೂರೈಕೆ ವ್ಯತ್ಯಯಗಳ ಬಗ್ಗೆ ಚಿಂತಿಸಬೇಕಾದ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ. ಭಾರತೀಯರಿಗೆ ಕೈಗೆಟಕುವ ದರದಲ್ಲಿ ಇಂಧನ ಲಭ್ಯತೆ ನೋಡಿಕೊಳ್ಳುವುದು ನಮ್ಮ ಪ್ರಾಥಮಿಕ ಆದ್ಯತೆಯಾಗಿದೆ ಎಂದು ಸಚಿವರು ಎಕ್ಸ್ ಪೋಸ್ಟ್ ನಲ್ಲಿ ತಿಳಿಸಿದ್ದಾರೆ. ದೇಶದಲ್ಲಿ ಇಂಧನ ಕೊರತೆ ಇದೆಯೆಂಬ ವದಂತಿಯನ್ನು ಅವರು ತಳ್ಳಿಹಾಕಿದ್ದು, ಆಧಾರರಹಿತ ವರದಿ ಎಂದಿದ್ದಾರೆ.

ಬೆಂಗಳೂರಿನಲ್ಲಿ ಎಲ್‌ಪಿಜಿ ದರ: ಬೆಂಗಳೂರಿನಲ್ಲಿ 14.2 ಕೆ.ಜಿ. ಗೃಹ ಬಳಕೆ ಸಿಲಿಂಡರ್ ಬೆಲೆ 855.5ರಿಂದ 915.5 ರೂ. ತಲುಪಿದೆ. 19 ಕೆ.ಜಿ. ಎಲ್‌ಪಿಜಿ ಬೆಲೆ 144 ರೂ. ಏರಿಕೆ ಕಂಡು 1958 ರೂ. ತಲುಪಿದೆ.

ವಿದೇಶಿ ಕರೆನ್ಸಿ ಸಂಪತ್ತು ಹೆಚ್ಚಳ: ಆರ್‌ಬಿಐ ವರದಿ

ಹೊಸದಿಲ್ಲಿ: ಅತ್ತ ಇಸ್ರೇಲ್ -ಇರಾನ್ ಸಂಘರ್ಷ ಮುಂದುವರಿದಿರುವಂತೆಯೇ, ಭಾರತೀಯ ರಿಸರ್ವ್ ಬ್ಯಾಂಕ್ ದೇಶದ ಜನತೆಗೆ ಮಹತ್ವದ ಸುದ್ದಿ ನೀಡಿದೆ. ವಿದೇಶಿ ವಿನಿಮಯ ಮೀಸಲಿನ ಅತಿದೊಡ್ಡ ಭಾಗವೆಂದು ಪರಿಗಣಿಸಲಾದ ವಿದೇಶಿ ಕರೆನ್ಸಿ ಸಂಪತ್ತು 561ಮಿ.ಡಾ.ಗಳಷ್ಟು ಹೆಚ್ಚಳಗೊಂಡು ಫೆ.27ಕ್ಕೆ ಅಂತ್ಯಗೊಂಡ ವಾರದಲ್ಲಿ 573. 12ಬಿಲಿಯನ್ ಡಾಲರ್‌ಗೇರಿರುವುದಾಗಿ ಆರ್‌ಬಿಐ ಮಾಹಿತಿ ನೀಡಿದೆ.

ಸಾರ್ವಕಾಲಿಕದಾಖಲೆ: ಅಂತಾರಾಷ್ಟ್ರೀಯಉದ್ವಿಗ್ನತೆಯಸನ್ನಿವೇಶದಲ್ಲೇ ಭಾರತದ ವಿದೇಶಿ ವಿನಿಮಯ ಮೀಸಲು 4.88ಬಿ.ಡಾ. ಏರಿಕೆಯಾಗಿಸಾರ್ವಕಾಲಿಕದಾಖಲೆಯಾದ728.49ಬಿ.ಡಾ.ತಲುಪಿರುವುದು ಆರ್‌ಬಿಐ ಬಿಡುಗಡೆಗೊಳಿಸಿದ ಅಂಕಿ-ಅಂಶಗಳಿಂದ ವ್ಯಕ್ತವಾಗಿದೆ. ಇದು ಭಾರತದ ಆರ್ಥಿಕತಳಹದಿ ಸುಭದ್ರವಾಗಿರುವುದನ್ನು ಎತ್ತಿತೋರಿದೆ. ಡಾಲರ್ ಲೆಕ್ಕದಲ್ಲಿ ಹೇಳುವುದಾದರೆ , ಈ ಸೊತ್ತುಗಳು ಇತರ ಪ್ರಮುಖ ಕರೆನ್ಸಿಗಳಾದ ಯುರೋ, ಬ್ರಿಟಿಷ್ ಪೌಂಡ್ ಸ್ಟರ್ಲಿಂಗ್, ಜಪಾನಿನ ಯೆನ್‌ನಂತಹವುಗಳ ಮೌಲ್ಯಗಳಲ್ಲಿ ಆಗುತ್ತಿರುವ ಏರಿಳಿತಗಳ ಪರಿಣಾಮದ ಹೊರತಾಗಿಯೂ ಈ ಮೀಸಲು ಇರುವುದು ಗಮನಾರ್ಹವಾಗಿದೆ.

ಭಾರತೀಯ ಕೇಂದ್ರೀಯ ಬ್ಯಾಂಕ್‌ನ ಚಿನ್ನದ ಮೀಸಲು ಪ್ರಮಾಣ ಕೂಡ 4.14ಬಿಲಿಯನ್ ಡಾ.ಗಳಷ್ಟು ಹೆಚ್ಚಳಗೊಂಡು 131.63ಬಿ.ಡಾ.ಗಳಿಗೇರಿದೆ.ವಿಶೇಷ ಹಿಂತೆಗೆತ ಹಕ್ಕುಗಳು(ಎಸ್‌ಡಿಆರ್) ಕೂಡ 26ಮಿ.ಡಾ.ಹೆಚ್ಚಳವಾಗಿ 18.87ಬಿ.ಡಾ.ಗೇರಿದೆ. ಅಂತಾರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್)ನಲ್ಲಿ ಭಾರತೀಯ ಮೀಸಲುಕೂಡ158ಮಿ.ಡಾ.ಹೆಚ್ಚಳಗೊಡಯ4.87ಬಿ.ಡಾ.ತಲುಪಿರುವುದಾಗಿಯೂ ಅಂಕಿ-ಅಂಶಗಳು ತಿಳಿಸಿವೆ.

ಮುಂದಿನ ವರ್ಷಾಂತ್ಯಕ್ಕೆ ಏಡ್ಸ್ ನಿಯಂತ್ರಣ ಗುರಿ

ಹೊಸದಿಲ್ಲಿ: ಮಿಷನ್ ಏಡ್ಸ್ ಸುರಕ್ಷಾ ಅನ್ವಯದಲ್ಲಿ, ಭಾರತವು 2027ರ ಡಿಸೆಂಬರ್ 1ರ ವಿಶ್ವ ಏಡ್ಸ್ ದಿನದ ವೇಳೆಗೆ ಎಚ್‌ಐವಿ ನಿಯಂತ್ರಣ ಸಾಧಿಸುವ ಗುರಿ ಹೊಂದಲಿದೆ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯ (ನ್ಯಾಕೊ) ಮಹಾನಿರ್ದೇಶಕ ಡಾ. ರಾಕೇಶ್ ಗುಪ್ತಾ ಹೇಳಿದ್ದಾರೆ.



ದೇಶಾದ್ಯಂತ ಅನುಷ್ಠಾನಗೊಳ್ಳುತ್ತಿರುವ 'ಮಿಷನ್ ಏಡ್ಸ್ ಸುರಕ್ಷಾ' ಭಾಗವಾಗಿ, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯು ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ 'ಸುರಕ್ಷಾ ಸಂಕಲ್ಪ ಕಾರ್ಯಗಾರ'ವನ್ನು ಉದ್ದೇಶಿ ಮಾತನಾಡಿದ ಅವರು, ಭಾರತದಲ್ಲಿ ಎಚ್‌ಐವಿ ಸಾಂಕ್ರಾಮಿಕವನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ತರುವ ಗುರಿ ಹೊಂದಲಾಗಿದೆ. 2027ರ ಡಿಸೆಂಬರ್ 1ರೊಳಗೆ ದೇಶವನ್ನು ಎಚ್‌ಐವಿ ಮುಕ್ತವಾಗಿಸಲು ಕೇಂದ್ರ ಸರ್ಕಾರವು 'ಮಿಷನ್ ಏಡ್ಸ್ ಸುರಕ್ಷಾ' ಮೂಲಕಸಮರೋಪಾದಿಯಲ್ಲಿಕಾರ್ಯನಿರ್ವಹಿಸುತ್ತಿದೆ. ಈ ನಿಟ್ಟಿನಲ್ಲಿ, ಜಾಗತಿಕ ಗುರಿಗಳಾದ 95-95-99 ಸಾಧಿಸುವ ಗುರಿ ಹೊಂದಿದೆ. ಹೆಚ್ಚಿನ ಎಚ್‌ಐವಿ ಪ್ರಭಾವ ಮತ್ತು ಸೋಂಕಿನ ಪ್ರಮಾಣವಿರುವ 219 ಆದ್ಯತೆಯ ಜಿಲ್ಲೆಗಳನ್ನು ದೇಶಾದ್ಯಂತ ಗುರುತಿಸಲಾಗಿದೆ. ಸೋಂಕಿನ ಪ್ರಮಾಣ, ಪ್ರಸ್ತುತತೆ, ರೋಗದ ಹೊರೆ ಮತ್ತು ಹೆಚ್ಚಿನ ಅಪಾಯದ ಗುಂಪುಗಳ ಆಧಾರದ ಮೇಲೆ ಗುರುತಿಸಲಾಗಿದೆ ಎಂದು ತಿಳಿಸಿದರು.

ಕರ್ನಾಟಕದ ಎಚ್‌ಐವಿ ಸ್ಥಿತಿಗತಿ ಬಗ್ಗೆ ವಿಶೇಷ ಗಮನ ಹರಿಸಲಾಗುತ್ತಿದೆ. ರಾಜ್ಯದಲ್ಲಿ ಎಚ್‌ಐವಿ ಪ್ರಸ್ತುತತೆ ಶೇ. 0.44ರಷ್ಟಿದ್ದು, ಇದು ರಾಷ್ಟ್ರೀಯ ಸರಾಸರಿಯಾದ ಶೇ.0.2ಗಿಂತ ಹೆಚ್ಚಾಗಿದೆ ಎಂದಿದ್ದಾರೆ.

ಡೇರಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಖುಲಾಸೆ

ಚಂಡೀಗಢ: 2002ರ ಪತ್ರಕರ್ತ ರಾಮ್ ಚಂದರ್ ಛತ್ರಪತಿ ಕೊಲೆ ಪ್ರಕರಣದಲ್ಲಿ, ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಸಿಂಗ್‌ನನ್ನು ಪಂಜಾಬ್ ಮತ್ತು ಹರ್ಯಾಣ ಹೈಕೋರ್ಟ್ ಶನಿವಾರ ಖುಲಾಸೆ ಮಾಡಿದೆ. ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು ಮತ್ತು ನ್ಯಾಯಮೂರ್ತಿ ವಿಕ್ರಮ್ ಅಗರ್ವಾಲ್ ಅವರನ್ನೊಳಗೊಂಡ ವಿಭಾಗೀಯ ಪೀಠ, 2019ರ ಸಿಬಿಐ ವಿಶೇಷ ನ್ಯಾಯಾಲಯ ನೀಡಿದ್ದ ಜೀವಾವಧಿ ಶಿಕ್ಷೆಯ ತೀರ್ಪನ್ನು ರದ್ದುಗೊಳಿಸಿದೆ. ಡೇರಾದಲ್ಲಿ ನಡೆಯುತ್ತಿದ್ದ ಲೈಂಗಿಕ ಶೋಷಣೆಯನ್ನು ಬಹಿರಂಗಪಡಿಸಿದ್ದಕ್ಕಾಗಿ ಸಿರ್ಸಾದಲ್ಲಿ ಛತ್ರಪತಿ ಮೇಲೆ ಗುಂಡು ಹಾರಿಸಲಾಗಿತ್ತು. ಈ ಪ್ರಕರಣದಲ್ಲಿ ರಾಮ್ ರಹೀಂ ವಿರುದ್ಧ ವಿದ್ದ ಆರೋಪಗಳನ್ನು ಹೈಕೋರ್ಟ್ ವಜಾಗೊಳಿಸಿದೆ. ಆದರೆ, ಪ್ರಕರಣದ ಇತರ ಮೂವರು ಆರೋಪಿಗಳ ಶಿಕ್ಷೆಯನ್ನು ಎತ್ತಿಹಿಡಿಯಲಾಗಿದೆ. ಈ ಪ್ರಕರಣದಲ್ಲಿ ಬಿಡುಗಡೆಯಾಗಿದ್ದರೂ, ಅತ್ಯಾಚಾರ ಪ್ರಕರಣದಲ್ಲಿ 20 ವರ್ಷಗಳ ಜೈಲು ಶಿಕ್ಷೆ ಅನುಭವಿಸುತ್ತಿರುವ ರಾಮ್ ರಹೀಂ, ರೋಹ್ಟಕ್‌ನ ಸುನಾರಿಯಾ ಜೈಲಿನಲ್ಲೇ ಇರಲಿದ್ದಾನೆ.

ಐರಿಸ್ ದೆನಾ ಮುಳುಗಡೆಗೂ ಮುನ್ನ ಕೊಚ್ಚಿಯಲ್ಲಿ ಲವಣ್ ಡಾಕ್

ಮಾನವೀಯ ದೃಷ್ಟಿಯಿಂದ ಲಂಗರಿಗೆ ಅವಕಾಶ

ಹೊಸದಿಲ್ಲಿ: ಇರಾನ್ ಯುದ್ಧನೌಕೆ ಐರಿಸ್ ದೆನಾವನ್ನು ಅಮೆರಿಕ ನೌಕಾಪಡೆ ಹಿಂದು ಮಹಾಸಾಗರದಲ್ಲಿ ಮುಳುಗಿಸಿದ ಬಗ್ಗೆ ಮೊದಲ ಪ್ರತಿಕ್ರಿಯೆ ನೀಡಿದ ವಿದೇಶಾಂಗ ಸಚಿವ ಎಸ್. ಜೈಶಂಕರ್, ಅದೇ ದಿನ ಇರಾನ್‌ನ ಇನ್ನೊಂದು ಯುದ್ಧನೌಕೆ ಲವಣ್‌ಗೆ ಮಾನವೀಯತೆ ದೃಷ್ಟಿಯಿಂದ ನಿಲುಗಡೆಗೆ ಅವಕಾಶ ಮಾಡಿಕೊಟ್ಟಿದ್ದೆವು ಎಂದು ಹೇಳಿದ್ದಾರೆ.

ದಿಲ್ಲಿಯಲ್ಲಿನಡೆದರೈಸಿನಾಸಂವಾದ2026ರಲ್ಲಿ ಮಾತನಾಡಿದ ಸಚಿವ ಜೈಶಂಕರ್, ನಾನೂ ವಿಶ್ವಸಂಸ್ಥೆಯ ಸಮುದ್ರ ಕಾನೂನು ಒಪ್ಪಂದ 1982 ಮತ್ತು ಅಂತಾರಾಷ್ಟ್ರೀಯ ಕಾನೂನು ಬೆಂಬಲಿಸುತ್ತೇವೆ. ಆದರೆ ಇರಾನ್ ಮನವಿ ಮಾಡಿದ್ದರಿಂದ ಮಾನವೀಯ ದೃಷ್ಟಿಯಿಂದ ಕೊಚ್ಚಿಯಲ್ಲಿ ಡಾಕ್ ಮಾಡಲು ಅವಕಾಶ ನೀಡಿದ್ದೆವು ಎಂದು ಹೇಳಿದ್ದಾರೆ.

ಮಾ.1ರಂದು ಅವರಿಗೆ ಒಳಗೆ ಪ್ರವೇಶಿಸಲು ಅನುಮತಿಸಿದ್ದೆವು. ಇಲ್ಲಿಗೆ ತಲುಪಲು ಅವರಿಗೆ ಕೆಲವು ದಿನಗಳು ಬೇಕಾದವು. ನಂತರ ಇರಾನ್ ಹಡಗುಗಳು ಕೊಚ್ಚಿಯಲ್ಲಿ ಲಂಗರು ಹಾಕಿದ್ದವು. ಬಹಳಷ್ಟು ಯುವ ಕ್ಯಾಡೆಟ್‌ಗಳು ಇದ್ದರು. ಐರಿಸ್ ಲವಣ್ ಅಷ್ಟೇ ಅಲ್ಲ, ಇನ್ನೂ ಎರಡು ಯುದ್ಧನೌಕೆಗಳಿದ್ದವು ಎಂದು ಜೈಶಂಕರ್ ತಿಳಿಸಿದ್ದಾರೆ. ಹಡಗುಗಳು ಇಲ್ಲಿಗೆ ಫ್ಲೀಟ್ ರಿವ್ಯೂ ನಡೆಸಲು ಬಂದಾಗ ಮತ್ತು ಇಲ್ಲಿಂದ ಹೊರಟಾಗಿನ ಪರಿಸ್ಥಿತಿ ಸಂಪೂರ್ಣ ಬೇರೆಯದೇ ಆಗಿತ್ತು. ಆದರೆ ಕೆಟ್ಟ ಪರಿಸ್ಥಿತಿಯಲ್ಲಿ ಸಿಲುಕಿದ್ದರು. ಅದರಲ್ಲೊಂದು (ಐರಿಸ್ ದೆನಾ) ಶ್ರೀಲಂಕಾ ಸಮೀಪ ದುರದೃಷ್ಟವಶಾತ್ ದಾಳಿಗೆ ಒಳಗಾಗಿದ್ದು, ಅದರಲ್ಲಿ ಒಬ್ಬರೂ ಉಳಿದಿಲ್ಲ ಎಂದು ಜೈಶಂಕರ್ ವಿವರಿಸಿದರು.

ಹಿಂದು ಮಹಾಸಾಗರದಲ್ಲಿ ಭಾರತವೊಂದೇ ರಕ್ಷಣೆ ನೀಡುತ್ತದೆ. ಆದರೆ ಸತ್ಯಾಂಶ ತಿಳಿಯದೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ. ಕಳೆದ 5 ದಶಕಗಳಿಂದ ಡೀಗೋ ಗಾರ್ಸಿಯಾ (ಬ್ರಿಟನ್-ಅಮೆರಿಕ ಜಂಟಿ ರಹಸ್ಯ ಮಿಲಿಟರಿ ದ್ವೀಪ) ಹಿಂದು ಮಹಾಸಾಗರದಲ್ಲಿದೆ ಎಂದು ಜೈಶಂಕರ್ ಸ್ಪಷ್ಟಪಡಿಸಿದ್ದಾರೆ.

ಆಪರೇಷನ್ ಎಪಿಕ್ ಫ್ಯೂರಿ ಅನ್ವಯದಲ್ಲಿ ದೆನಾ ಯುದ್ಧನೌಕೆಯ ಮೇಲೆ ಅಮೆರಿಕ ಫೆ.28ರಂದು ದಾಳಿ ನಡೆಸಿತ್ತು. ಅದರಲ್ಲಿದ್ದ 80ಕ್ಕೂ ಹೆಚ್ಚು ನಾವಿಕರು ಬಲಿಯಾಗಿದ್ದು, 32 ಮಂದಿಯನ್ನು ಶ್ರೀಲಂಕಾ ನೌಕಾಪಡೆ ರಕ್ಷಿಸಿತ್ತು.

ಭಾರತದ ಪ್ರಗತಿ ತಡೆರಹಿತ

ಭಾರತದ ಪ್ರಗತಿ ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಒಂದು ರಾಷ್ಟ್ರದ ಆರ್ಥಿಕ ಪ್ರಗತಿಯಲ್ಲಿ ಇತರ ರಾಷ್ಟ್ರಗಳು ಪಾತ್ರ ವಹಿಸುತ್ತವೆ. ಆದರೆ ಭಾರತದ ಪ್ರಗತಿಯನ್ನು ಭಾರತವೇ ನಿರ್ಧರಿಸಲಿದೆ ಎಂದು ಸಚಿವ ಜೈಶಂಕರ್ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಭಾರತವನ್ನು ದೂರ ಮಾಡಿ ಪಾಕ್ ಗೆಳೆತನ ಸೂಕ್ತವಲ್ಲ ಎಂದ ಆಸ್ಟ್ರೇಲಿಯಾದ ಮಾಜಿ ಪ್ರಧಾನಿ ಟೋನಿ

ಸಂಬಂಧ ನಿಭಾಯಿಸುವಲ್ಲಿ ಎಡವಿದ ಟ್ರಂಪ್

ಹೊಸದಿಲ್ಲಿ: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದೊಂದಿಗಿನ ಸಂಬಂಧಗಳನ್ನು ನಿಭಾಯಿಸುವಲ್ಲಿ ಭಾರೀ ದೊಡ್ಡ ತಪ್ಪುಗಳನ್ನು ಎಸಗಿದ್ದಾರೆ ಎಂಬುದಾಗಿ ಆಸ್ಟ್ರೇಲಿಯಾದ ಮಾಜಿ ಪ್ರಧಾನಿ ಟೋನಿ ಅಬೋಟ್ ಹೇಳಿದ್ದಾರೆ.



ಭಾರತವನ್ನು ದೂರ ಮಾಡಿ ಪಾಕಿಸ್ತಾನಿ ಸೇನಾ ಮುಖ್ಯಸ್ಥ ಅಸೀಮ್ ಮುನೀರ್‌ಗೆ ಸ್ವಾಗತ ಹೇಳಿದ ಟ್ರಂಪ್ ನಿಲುವು ಭಾರೀ ಪ್ರಮಾದವಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ತಾನು ಟ್ರಂಪ್‌ರ ವಿದೇಶಾಂಗ ನೀತಿಯ ಜಾಗತಿಕ ಅಭಿಮಾನಿಯಲ್ಲ, ಟ್ರಂಪ್ ಎಸಗಿದ ಮೂರು ನಿರ್ದಿಷ್ಟ ತಪ್ಪುಗಳನ್ನು ಅವರು ಎತ್ತಿತೋರಿದ್ದು, ಇದರಲ್ಲಿ ಭಾರತವನ್ನು ಅನಪೇಕ್ಷಿತವಾಗಿ ದೂರವಿಟ್ಟ ನಿಲುವು ಟ್ರಂಪ್ ಎಸಗಿದ ಭಾರೀ ದೊಡ್ಡ ತಪ್ಪು.ಮೊದಲು ಭಾರತದ ಮೇಲೆ ದಂಡನಾ ಸುಂಕ ಹೇರಿದರು. ತಾನು ಭಾರತ -ಪಾಕಿಸ್ತಾನ ಸಂಘರ್ಷವನ್ನು ನಿಲ್ಲಿಸಿದ್ದು ತಾನೇ ಎಂದು ಹೇಳಿಕೊಂಡಿದ್ದು. ಪಾಕಿಸ್ತಾನದ ಸೇನಾ ಮುಖ್ಯಸ್ಥ ಅಸೀಮ್ ಮುನೀರ್‌ಗೆ ಶ್ವೇತಭವನದಲ್ಲಿ ಸ್ವಾಗತ ಕೋರಿದ್ದು ಇವೆಲ್ಲ ಟ್ರಂಪ್ ಮಾಡಿದ ದೊಡ್ಡ ಎಡವಟ್ಟುಗಳು ಎಂದು ಅವರು ಎನ್‌ಡಿಟಿವಿಗೆ ನೀಡಿದ ಸಂದರ್ಶನವೊಂದರಲ್ಲಿ ಬೊಟ್ಟು ಮಾಡಿದರು.ಪಾಕಿಸ್ತಾನ ಭಾರತದ ವಿರುದ್ಧ ಭಯೋತ್ಪಾದನೆಯನ್ನು ಪ್ರಾಯೋಜಿಸುವ ದೇಶ ಎಂಬುದು ನಿಸ್ಸಂದೇಹದ ವಿಷಯವಾಗಿರುವುದಷ್ಟೇ ಅಲ್ಲದೆ, ದೀರ್ಘಕಾಲದಿಂದ ಇಂತಹ ಕೆಲಸವನ್ನು ಮಾಡುತ್ತಾ ಬಂದಿರುವುದುಸರ್ವವೇದ್ಯವಾಗಿರುವಾಗ ಟ್ರಂಪ್ ನಡೆ ದೊಡ್ಡ ಪ್ರಮಾದ ಎಂದರು.

ಭಾರತದೊಂದಿಗೆ ಫೆಬ್ರವರಿಯಲ್ಲಿ ಮುಕ್ತ ವ್ಯಾಪಾರ ಒಪ್ಪಂದವೊಂದನ್ನು ಘೋಷಿಸುವ ಮೂಲಕ ಟ್ರಂಪ್ ಭಾರತದೊಂದಿಗಿನ ಉದ್ವಿಗ್ನತೆಯನ್ನು ಭಾಗಶಃ ಸರಿಪಡಿಸಿಕೊಂಡರು. ಈ ಒಪ್ಪಂದದಂತೆ ಟ್ರಂಪ್ ಭಾರತದ ಅನೇಕ ವಸ್ತುಗಳ ಮೇಲಿನ ಸುಂಕಗಳನ್ನು ಕಡಿಮೆ ಮಾಡಿದರು.ಕೊನೆಗೆ ಹೇಗೋ ತನ್ನ ಮಹಾನ್ ಮಿತ್ರರಲ್ಲಿ ಒಬ್ಬರೆಂದು ಗುರುತಿಸಿದ ಮೋದಿಯವರ ಜೊತೆ ಮರಳಿ ಸ್ನೇಹ ಸಾಧಿಸಿಕೊಂಡರು.ಇದಕ್ಕೂ ಮುನ್ನ ಟ್ರಂಪ್ ಭಾರತದ ವಿರುದ್ಧ ಶೇ.25ರಷ್ಟು ಪ್ರತೀಕಾರದ ಸುಂಕ ವಿಧಿಸಿದ್ದಲ್ಲದೆ, ರಷ್ಯಾದಿಂದ ತೈಲ ಖರೀದಿಸುತ್ತಿರುವುದಕ್ಕಾಗಿ ಭಾರತದ ಮೇಲೆ ಮತ್ತೆ ಶೇ.25ರಷ್ಟು ಹೆಚ್ಚುವರಿ ಸುಂಕ ಹೇರಿದ್ದರು. ಅನಂತರ ಅಮೆರಿಕದ ಸುಪ್ರೀಂಕೋರ್ಟ್ ಕೂಡ ಟ್ರಂಪ್ ಹೇರಿದ ಸುಂಕವನ್ನು ಹಿಂಪಡೆಯುವಂತೆ ಆದೇಶಿಸಿತ್ತು.

ಪ್ರಸಕ್ತ ಮಧ್ಯಪ್ರಾಚ್ಯದ ಸಂಘರ್ಷ ವಿಸ್ತರಿಸುತ್ತಿದ್ದು, ಇದು ಸದ್ಯ ಕೊನೆಗೊಳ್ಳುವ ಸಾಧ್ಯತೆ ಕಂಡು ಬರದಿರುವುದರಿಂದ ಉಂಟಾಗಿರುವ ಅನಿಶ್ಚಿತತೆಯ ಕುರಿತಂತೆ ಅವರನ್ನು ಕೇಳಲಾಯಿತು. ಇರಾನಿನಲ್ಲಿ ಆಡಳಿತ ವ್ಯವಸ್ಥೆ ಬದಲಾಗುವ ಸಾಧ್ಯತೆಯ ಬಗ್ಗೆ ಏನೂ ಹೇಳಲಾಗದು. ಆದಾಗ್ಯೂ ತಕ್ಷಣಕ್ಕೆ ಇಂತಹ ಸಾಧ್ಯತೆ ಇಲ್ಲ. ಯಾಕೆಂದರೆ ಇರಾನಿನ ಈಗಿನ ಆಡಳಿತ ಇನ್ನೂ ಇರಾನಿನ ಕೆಲವು ವರ್ಗಗಳ ಮೇಲೆ ಹಿಡಿತ ಹೊಂದಿದೆ. ಇದನ್ನು ಕೀಳಂದಾಜಿಸಲಾಗದು ಎಂದು ಅವರು ಹೇಳಿದರು. ಆದಾಗ್ಯೂ ಇರಾನಿನಲ್ಲಿನ ಹಾಲಿ ಅಪವಿತ್ರ ಮತೀಯ ನಿರಂಕುಶತೆಯಿಂದ ಹೊರಬರಲು ಸಾಧ್ಯವಾದಲ್ಲಿ ಅದೊಂದು ಪ್ರಮುಖ ಪರಿಣಾಮವಾಗಬಹುದು. ಜತೆಗೆ ಇರಾನಿನಲ್ಲಿ ಇನ್ನು ಹಾಲಿ ಸರಕಾರವೇ ಇರಲಿ ಅಥವಾ ಬದಲಿ ಸರಕಾರವೇ ಬಂದರೂ ಹಿಂದಿನ ಆಕ್ರಮಣಕಾರಿ ಸಾಮರ್ಥ್ಯ ಇರಾನಿಗೆ ಉಳಿಯಲಾರದು ಎಂದರು.

ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಹೇಳಿಕೆ

ಮಳೆನೀರು ಹರಿದುಹೋಗಲು ವ್ಯವಸ್ಥೆ

ಮಹದೇವಪುರ: ಕ್ಷೇತ್ರದ ವಿವಿಧ ಭಾಗಗಳಲ್ಲಿ ಮಳೆ ನೀರು ಹರಿವು ವ್ಯವಸ್ಥೆಯನ್ನು ಸುಧಾರಿಸುವ ಹಾಗೂ ಕೆರೆಗಳ ಸಂಪರ್ಕ ಚರಂಡಿ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ತಡೆಗೋಡೆ ಹಾಗೂ ಯು-ಆಕಾರದ ಚರಂಡಿ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ತಿಳಿಸಿದರು.

ಕ್ಷೇತ್ರದ ಬಿಳಿಶಿವಾಲೆ, ವಾರಣಾಸಿ, ಹೂಡಿ, ಬೆಳತೂರು, ಚನ್ನಸಂದ್ರ, ಪಟ್ಟಂದೂರು ಅಗ್ರಹಾರ, ನಾಗೊಂಡನಹಳ್ಳಿ, ರಾಮಗೊಂಡನಹಳ್ಳಿ ಪ್ರದೇಶಗಳಲ್ಲಿ ಮಳೆನೀರು ಸರಾಗವಾಗಿ ಹರಿಯಲು ಮತ್ತು ಕೆರೆಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ತಡೆಗೋಡೆ ಹಾಗೂ ಯು-ಆಕಾರದ ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಅಡಿಗಲ್ಲು ಹಾಕಲಾಗಿದೆ ಎಂದರು.

ಇದರೊಂದಿಗೆ ದಕ್ಷಿಣ ಪಿನಾಕಿನಿ ನದಿ ಕಡೆಗೆ ಹರಿಯುವ ಮಳೆ ನೀರಿನ ಚರಂಡಿಗಳು, ಸೇತುವೆ ಹಾಗೂ ತಡೆಗೋಡೆ ನಿರ್ಮಾಣ ಮಾಡುವ ಕೆಲಸಗಳನ್ನೂ ಕೈಗೊಳ್ಳಲಾಗುತ್ತಿದೆ. ಇದರಿಂದ ಮಳೆಗಾಲದಲ್ಲಿ ಉಂಟಾಗುವ ನೀರು ನಿಲ್ಲುವ ಸಮಸ್ಯೆ ಹಾಗೂ ಪ್ರವಾಹದ ಸಮಸ್ಯೆ ಕಡಿಮೆಯಾಗಲಿದೆ ಎಂದು ಅವರು ತಿಳಿಸಿದರು.

ಕ್ಷೇತ್ರದ ವಿವಿಧ ಕೆರೆಗಳಿಗೆ ಸಂಪರ್ಕಿಸುವ ಚರಂಡಿಗಳ



ಅಭಿವೃದ್ಧಿ ಮೂಲಕ ಪರಿಸರ ಸಂರಕ್ಷಣೆ ಹಾಗೂ ಮಳೆ ನೀರು ನಿರ್ವಹಣೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಈ ಕಾಮಗಾರಿಗಳು ಪೂರ್ಣಗೊಂಡ ನಂತರ ಸ್ಥಳೀಯ ನಿವಾಸಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಅಭಿವೃದ್ಧಿ ಕಾಮಗಾರಿಗಳನ್ನು ಹಂತ ಹಂತವಾಗಿ ಪೂರ್ಣಗೊಳಿಸಿ ಮಹದೇವಪುರ ಕ್ಷೇತ್ರವನ್ನು ಇನ್ನಷ್ಟು ಅಭಿವೃದ್ಧಿಪಡಿಸುವುದು ತಮ್ಮ ಗುರಿಯಾಗಿದೆ ಎಂದು ಮಂಜುಳಾ ಅರವಿಂದ ಲಿಂಬಾವಳಿ ಹೇಳಿದರು.

ಈ ಸಂದರ್ಭದಲ್ಲಿ ಕ್ಷೇತ್ರದ ಗ್ರಾಮಾಂತರ ಮಂಡಲದ ಅಧ್ಯಕ್ಷ ಹೂಡಿ ಪಿಳ್ಳಪ್ಪ, ರಾಜ್ಯ ಪರಿಷತ್ ಸದಸ್ಯ ಎಲ್. ರಾಜೇಶ್, ಹಗದೂರು ಶ್ರೀನಿವಾಸ್, ಮಧು, ರಮೇಶ್ ಇದ್ದರು.

ನಿರ್ಗಮನ ಪಥಸಂಚಲನ ಸಂಪನ್ನ

ಬೆಂಗಳೂರು: 106 ಏರೋನಾಟಿಕಲ್ ಎಂಜಿನಿಯರಿಂಗ್ ಕೋರ್ಸ್ (ಎಇಸಿ)ನ ವಿದ್ಯುಕ್ತ ಪಾಸಿಂಗ್ ಔಟ್ ಪರೇಡ್ ಶನಿವಾರ ವಾಯುಪಡೆ ತಾಂತ್ರಿಕ ಕಾಲೇಜಿನಲ್ಲಿ ಸಂಪನ್ನಗೊಂಡಿತು. ಸೌಹಾರ್ದ ದೇಶಗಳ 9 ಅಧಿಕಾರಿಗಳು ಸೇರಿದಂತೆ ಒಟ್ಟು 108 ಎಂಜಿನಿಯರಿಂಗ್ ಅಧಿಕಾರಿಗಳು ಕಾಲೇಜಿನಿಂದ ಪದವಿ ಪಡೆದರು.

108 ಎಂಜಿನಿಯರಿಂಗ್ ಅಧಿಕಾರಿಗಳಿಗೆ ಪದವಿ ಪ್ರದಾನ

ಪದವಿ ಪ್ರದಾನ ಪಥಸಂಚಲನದ ಮುಖ್ಯ ಅತಿಥಿ ಮತ್ತು ಪರಿಶೀಲನಾ ಅಧಿಕಾರಿಯಾಗಿ ವಾಯು ಪ್ರಧಾನ ಕಚೇರಿ ಮತ್ತು ಕಮೋಡೋರ್ ಕಮಾಂಡೆಂಟ್ ಏರ್ ಮಾರ್ಷಲ್ ಸಂಜೀವ್ ಘುರಾಟಿಯಾ ಭಾಗವಹಿಸಿದರು. ಈ ವೇಳೆ ಮಾತನಾಡಿದ ಅವರು, ಭಾರತೀಯ ವಾಯುಪಡೆಯ ಎಂಜಿನಿಯರಿಂಗ್ ಅಧಿಕಾರಿಗಳು ಶಾಂತಿಯುತ ವಾತಾವರಣದಲ್ಲಿ ಮತ್ತು ಯುದ್ಧದ ಸಂದರ್ಭದಲ್ಲಿ ವಿಮಾನಗಳು ಮತ್ತು ಇತರ ಶಸ್ತ್ರಾಸ್ತ್ರ ವ್ಯವಸ್ಥೆಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ನಿರಂತರವಾಗಿ ಬದಲಾಗುತ್ತಿರುವ ತಾಂತ್ರಿಕ ವಾತಾವರಣದಲ್ಲಿ ಯುವ ಅಧಿಕಾರಿಗಳು ತಮ್ಮ ಜ್ಞಾನ ಮತ್ತು ಕೌಶಲಗಳನ್ನು ನಿರಂತರವಾಗಿ ನವೀಕರಿಸಿಕೊಳ್ಳಬೇಕು. ಮುಂಚೂಣಿಯಿಂದ ಮುನ್ನಡೆಸಬೇಕು, ಬಲವಾದ ತಂಡಗಳನ್ನು ನಿರ್ಮಿಸಬೇಕು, ಅತ್ಯುನ್ನತ ಮಟ್ಟದ ವೃತ್ತಿಪರತೆಯನ್ನು ಪ್ರದರ್ಶಿಸಬೇಕು. ರಾಷ್ಟ್ರದ ಸೇವೆಯಲ್ಲಿ ಅಚಲ ಬದ್ಧತೆಯೊಂದಿಗೆ ಸಮಗ್ರತೆಯನ್ನು ಕಾಪಾಡಿಕೊಳ್ಳಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದ ವೇಳೆ ಭಾರತೀಯ ವಾಯುಪಡೆಯ ಏರ್ ಡೆವಿಲ್ಸ್ ತಂಡದಿಂದ ಫ್ಲೈಪಾಸ್ಟ್ ಮತ್ತು ಸ್ಕೈ ಡೈವಿಂಗ್ ಪ್ರದರ್ಶನ ಹಾಗೂ ಏರ್ ವಾರಿಯರ್ ಡ್ರಿಲ್ ತಂಡದಿಂದ ಪ್ರೇಕ್ಷಕರಿಗೆ ಅದ್ಭುತ ಪ್ರದರ್ಶನ ನೀಡಲಾಯಿತು.

ಜಾಗೃತಿ ಅಭಿಯಾನ



ಕಂಠೀರವ ಕ್ರೀಡಾಂಗಣದಲ್ಲಿ ಸಾರಿಗೆ ಇಲಾಖೆಯು ಬೆಂಗಳೂರು ಸಂಚಾರ ಪೊಲೀಸ್ ಸಹಯೋಗದೊಂದಿಗೆ ಶನಿವಾರ ಆಯೋಜಿಸಿದ್ದ ನಮ್ಮ ರಸ್ತೆ ನಮ್ಮ ಸುರಕ್ಷತೆ 5ಕೆ ಸೇಫ್ ಎ ಥಾನ್ ವಾಕಿಂಗ್, ರನ್ನಿಂಗ್, ಸೈಕ್ಲಿಂಗ್, ಬೈಕಿಂಗ್ ಜಾಗೃತಿ ಅಭಿಯಾನಕ್ಕೆ ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಚಾಲನೆ ನೀಡಿದರು. 13 ಸಾವಿರಕ್ಕೂ ಹೆಚ್ಚು ಜನ ಸೇಫ್ ಎ ಥಾನ್‌ನಲ್ಲಿ ಭಾಗವಹಿಸಿದ್ದರು.

ಕಿರುಸುದ್ದಿ

ಮಾ.10ಕ್ಕೆ ಭೀಮ ಗಾಯನ ಕಾರ್ಯಕ್ರಮ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬೆಂಗಳೂರು ನಗರ ಜಿಲ್ಲೆ ವತಿಯಿಂದ ಭೀಮ ಗಾಯನ ಕಾರ್ಯಕ್ರಮವನ್ನು ಮಾ.10 ರಂದು ಬೆಳಗ್ಗೆ 10 ಗಂಟೆಗೆ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಕಾಲೇಜು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತೆ ಮಂಜುಶ್ರೀ ಎನ್., ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ ಜಿ., ವಿವಿ ಕುಲಪತಿ ಪ್ರೊ. ರಮೇಶ್ ಬಿ., ಕುಲಸಚಿವ ನವೀನ್ ಜೋಸೆಫ್ ಹಾಗೂ ವಿಶೇಷ ಆಹ್ವಾನಿತರಾಗಿ ಜಾನಪದ ಕಲಾವಿದ ಪಿಚ್ಚಳ್ಳಿ ಶ್ರೀನಿವಾಸ್, ಬೆಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್ ಭಾಗವಹಿಸಲಿದ್ದಾರೆ.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್, ಮಹಾತ್ಮ ಗಾಂಧಿ, ಬುದ್ಧ ಹಾಗೂ ಬಸವಣ್ಣ ಅವರಂತಹ ಸಮಾಜ ಸುಧಾರಕರ ವಿಚಾರಧಾರೆಗಳನ್ನು ಹಾಡುಗಳ ಮೂಲಕ ಜನಮಾನಸದಲ್ಲಿ ಜಾಗೃತಗೊಳಿಸಲು ಭೀಮ ಗಾಯನ ವಿಶೇಷ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕಿ ಪಲ್ಲವಿ ಹೊನ್ನಾಪುರ ತಿಳಿಸಿದ್ದಾರೆ.

ಅಂಬೇಡ್ಕರ್ ಪ್ರಶಸ್ತಿಗೆ ಅರ್ಜಿ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ ರಾಜ್ಯ ಮಟ್ಟದಲ್ಲಿ ಡಾ.ಬಾಬು ಜಗಜೀವನ ರಾಂ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಏ.5 ರಂದು ಹಾಗೂ ಏ.14 ರಂದು ರಾಜ್ಯಾದ್ಯಂತ ಡಾ.ಬಾಬು ಜಗಜೀವನ ರಾಂ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನಾಚರಣೆಗಳನ್ನು ಆಚರಿಸುವ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ ರಾಜ್ಯ ಮಟ್ಟದಲ್ಲಿ ಡಾ.ಬಾಬು ಜಗಜೀವನ ರಾಂ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಆಸಕ್ತರು ಮಾ.15 ರೊಳಗೆ ಕೇಂದ್ರ ಕಚೇರಿ ಅಥವಾ ಸಂಬಂಧಿತ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಾಜ ಕಲ್ಯಾಣ ಅಧಿಕಾರಿಗಳ ಕಚೇರಿಗಳಿಗೆ ಅರ್ಜಿಗಳನ್ನು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಚೇರಿ ಸ್ಥಳಾಂತರ

ಬೆಂಗಳೂರು: ಉತ್ತರ ನಗರ ಪಾಲಿಕೆಯ ವ್ಯಾಪ್ತಿಯ ಸಹಾಯಕ ಕಂದಾಯ ಅಧಿಕಾರಿ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿ, 154-ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ (ಯಶವಂತಪುರ) ಉಪ ವಿಭಾಗ ಕಚೇರಿಯನ್ನು ಸ್ಥಳಾಂತರಗೊಳಿಸಲಾಗಿದೆ. ಈವರೆಗೆ 2ನೇ ಮಹಡಿ, ಆರ್.ಟಿ.ಓ ಕಾಂಪ್ಲೆಕ್ಸ್, ಎಸ್.ಸಿ. ರಸ್ತೆ, ಯಶವಂತಪುರ, ಬೆಂಗಳೂರು – 560022 ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಚೇರಿಯನ್ನು, ಬಿಬಿಎಂಪಿ ವಾಣಿಜ್ಯ ಸಂಕೀರ್ಣ, ಚೌಡೇಶ್ವರಿ ಬಸ್ ನಿಲ್ದಾಣದ ಹತ್ತಿರ, ಮೋಹನಕುಮಾರನಗರ, ಮತ್ತೀಕೆರೆ, ಬೆಂಗಳೂರು – 560054 ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ. ಹೊಸ ಸ್ಥಳದಲ್ಲಿ ಈ ಕಚೇರಿಯು ಮಾ.12 ರಿಂದ ಕಾರ್ಯನಿರ್ವಹಿಸಲಿದೆ. ಯಶವಂತಪುರ ಉಪ ವಿಭಾಗಕ್ಕೆ ಸಂಬಂಧಿಸಿದ ನಾಗರಿಕರು ಆಸ್ತಿತೆರಿಗೆ, ಖಾತಾ ಹಾಗೂ ಮತದಾರರ ನೋಂದಣಿ ಸಂಬಂಧಿತ ಇತರೆ ಸೇವೆಗಳಿಗಾಗಿ ಮೇಲ್ಕಂಡ ಹೊಸ ವಿಳಾಸದಲ್ಲಿರುವ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಅಧಿಕಾರಿಗಳಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ್‌ರಾವ್ ಸೂಚನೆ

ಬ್ಲಾಕ್ ಸ್ಪಾಟ್ ನಿರ್ಮೂಲನೆಗೆ ಕ್ರಮ

ಬೆಂಗಳೂರು: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಸ ಸುರಿಯುವ ಬ್ಲಾಕ್ ಸ್ಪಾಟ್‌ಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಅಗತ್ಯವಿರುವ ಕಡೆ ಸಂಜೆ ವೇಳೆಯಲ್ಲೂ ಆಟೋ ಟಿಪ್ಪರ್‌ಗಳನ್ನು ನಿಯೋಜಿಸಿ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ್‌ರಾವ್ ಅಧಿಕಾರಿಗಳಿಗೆ ಸೂಚಿಸಿದರು.

ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವಿವಿಧ ಸ್ಥಳಗಳಿಗೆ ಭೇಟಿನೀಡಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ರಸ್ತೆ ಬದಿಯಲ್ಲಿ ಕಸ ಬಿಸಾಡುವವರ ಮೇಲೆ ನಿಗಾವಹಿಸಿ ದಂಡ ವಿಧಿಸುವ ಕ್ರಮಕೈಗೊಳ್ಳಬೇಕು. ಬ್ಲಾಕ್ ಸ್ಪಾಟ್ ಉಂಟಾಗುವ ಸ್ಥಳಗಳನ್ನು ಗುರುತಿಸಿ ಶಾಶ್ವತವಾಗಿ ನಿರ್ಮೂಲನೆ ಮಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪೌರಕಾರ್ಮಿಕರಾಗಿ ಕೆಲಸ ಮಾಡುತ್ತಿರುವ ಯುವಕರಲ್ಲಿ ವಾಹನ ಚಾಲನೆ ಮಾಡಲು ಆಸಕ್ತಿ ಇರುವವರ ಪಟ್ಟಿಯನ್ನು ಸಲ್ಲಿಸುವಂತೆ ಸೂಚಿಸಿದ ಅವರು, ಅಂತಹವರಿಗೆ ಬಿಎಂಟಿಸಿ ವತಿಯಿಂದ ತರಬೇತಿ ನೀಡುವ ವ್ಯವಸ್ಥೆ ಮಾಡಲಾಗುವುದು ಎಂದರು. ಮುಂದಿನ ದಿನಗಳಲ್ಲಿ ಪಾಲಿಕೆ ಖರೀದಿಸುವ ಯಾಂತ್ರಿಕ ಕಸ ಗುಡಿಸುವ ಯಂತ್ರಗಳನ್ನು ಪೌರಕಾರ್ಮಿಕರಿಂದಲೇ ಚಾಲನೆ ಮಾಡಿಸುವ ಯೋಜನೆಯೂ ಇದೆ ಎಂದು ಹೇಳಿದರು.

ಶಿರಸಿ ರಸ್ತೆಯ ಮೇಲ್ಸೇತುವೆ ಕೆಳಭಾಗದಲ್ಲಿನ ಪಾದಚಾರಿ ಮಾರ್ಗ ಮತ್ತು ಬಸ್ ತಂಗುದಾಣದ ಬಳಿ ತ್ಯಾಜ್ಯ ಹಾಗೂ ಭಗ್ನಾವಶೇಷಗಳು ಕಂಡುಬಂದ ಹಿನ್ನೆಲೆಯಲ್ಲಿ ಕೂಡಲೇ ಸ್ವಚ್ಛತಾ ಕಾರ್ಯ ಕೈಗೊಳ್ಳುವಂತೆ ಸೂಚಿಸಿದರು. ಪ್ರಸ್ತುತ ಸ್ಥಿತಿ ಮತ್ತು ಸ್ವಚ್ಛಗೊಳಿಸಿದ ಬಳಿಕದ ಛಾಯಾಚಿತ್ರಗಳೊಂದಿಗೆ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದರು.



ನೀರಿನ ಟ್ಯಾಪ್ ತಕ್ಷಣ ಸರಿಪಡಿಸುವಂತೆ ಸೂಚನೆ

ಮರಗಳ ಸುತ್ತಲೂ ಪಾತಿ ನಿರ್ಮಿಸಿ: ಬಿನ್ನಿಮಿಲ್ ರಸ್ತೆಯ ಚರಂಡಿ ಹೂಳೆತ್ತುವ ಹಾಗೂ ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು. ಪಾದಚಾರಿ ಮಾರ್ಗದಲ್ಲಿರುವ ಮರಗಳ ಸುತ್ತ ಪಾತಿಗಳನ್ನು ನಿರ್ಮಿಸಲು ಕೂಡ ನಿರ್ದೇಶನ ನೀಡಿದರು.

ಚಾಮರಾಜಪೇಟೆಯ ರಾಯಪುರಂ ಇಂದಿರಾ ಕ್ಯಾಂಟೀನ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ದುರಸ್ತಿಯಾಗಿದ್ದ ನೀರಿನ ಟ್ಯಾಪ್ ತಕ್ಷಣ ಸರಿಪಡಿಸುವಂತೆ ಸೂಚಿಸಿದರು. ಜೊತೆಗೆ ಆಹಾರದ ಗುಣಮಟ್ಟ ಮತ್ತು ಸ್ವಚ್ಛತೆಯನ್ನು ಕಾಪಾಡಿಕೊಳ್ಳುವಂತೆ ತಿಳಿಸಿದರು.

ಪರಿಶೀಲನೆಯ ವೇಳೆ ಬೆಂ.ಘ.ನಿ.ನಿ. ಸಿಇಒ ಕರೀಗೌಡ, ಸಿಒಒ ರಮಾಮಣಿ, ಕೇಂದ್ರ ನಗರ ಪಾಲಿಕೆಯ ಜಂಟಿ ಆಯುಕ್ತ ಹೇಮಂತ್ ಶರಣ್ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

ತ್ಯಾಜ್ಯ ವಿಂಗಡಣೆ ಕುರಿತು ಜಾಗೃತಿ ಮೂಡಿಸಿ

ಮನೆ-ಮನೆಗೆ ಕಸ ಸಂಗ್ರಹಿಸುವ ವ್ಯವಸ್ಥೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಹೇಳಿದ ಅವರು, ಮೊದಲಹಂತವಾಗಿ ಚಾಮರಾಜಪೇಟೆಯ ಒಂದು ವಾರ್ಡ್ ಆಯ್ಕೆ ಮಾಡಿ ಲಿಂಕ್ ವರ್ಕರ್‌ಗಳ ಮೂಲಕ ನಾಗರಿಕರಲ್ಲಿ ತ್ಯಾಜ್ಯ ವಿಂಗಡಣೆ ಕುರಿತು ಜಾಗೃತಿ ಮೂಡಿಸಲು ಮಹೇಶ್ವರ್ ರಾವ್ ಸೂಚಿಸಿದರು.



ಪೌರಕಾರ್ಮಿಕರೊಂದಿಗೆ ಚಹಾ

ಬೆಳಗ್ಗೆಯೇ ನಗರದಲ್ಲಿ ಸ್ವಚ್ಛತೆಯಲ್ಲಿ ತೊಡಗಿರುವ ಪೌರ ಕಾರ್ಮಿಕರೊಂದಿಗೆ ಚಹಾ ಸೇವನೆ ಮಾಡಿ ಅವರ ಯೋಗಕ್ಷೇಮ ವಿಚಾರಿಸಿದ ಮಹೇಶ್ವರ್ ರಾವ್, ಸ್ವಚ್ಛತಾ ಕಾರ್ಯವನು ಪರಿಶೀಲಿಸಿದರು. ಪೌರಕಾರ್ಮಿಕರು ಪ್ರಸ್ತುತ ಪೊರಕೆಗಳಿಂದ ರಸ್ತೆಗಳನ್ನು ಸ್ವಚ್ಛಗೊಳಿಸುತ್ತಿರುವುದರಿಂದ ಸಿಎಸ್‌ಆರ್ ಅಡಿಯಲ್ಲಿ ಯಾಂತ್ರಿಕ ಕಸ ಗುಡಿಸುವ ವಿದ್ಯುನ್ಮಾನ ಯಂತ್ರಗಳನ್ನು ಖರೀದಿಸಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅಬಲಾಶ್ರಮದಿಂದ ವಿಭಿನ್ನವಾಗಿ ಮಹಿಳಾ ದಿನಾಚರಣೆ

ಬೆಂಗಳೂರು: ಅಬಲಾಶ್ರಮದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿಭಿನ್ನ ಹಾಗೂ ಸಾಂಪ್ರದಾಯಿಕ ಶೈಲಿಯಲ್ಲಿ ಆಚರಿಸಲಾಯಿತು.

ಬಿಬಿಎಂಪಿ ಪೌರಕಾರ್ಮಿಕರು, ಅಂಚೆ ಇಲಾಖೆಯ ಮಹಿಳಾ ಸಿಬ್ಬಂದಿ, ಬಸವನಗುಡಿ ಪೊಲೀಸ್ ಠಾಣೆಯ ಮಹಿಳಾ ಸಿಬ್ಬಂದಿ, ನರ್ಸ್‌ಗಳು, ಹೂವು ಮಾರಾಟಗಾರರು, ಕಾಲೇಜು ಉಪನ್ಯಾಸಕಿಯರು, ಪಿಂಕ್ ಆಟೋ ಚಾಲಕಿಯರು ಸೇರಿದಂತೆ ವಿವಿಧ ವೃತ್ತಿಗಳಲ್ಲಿ ತೊಡಗಿರುವ ಮಹಿಳೆಯರು, ಲಗೋರಿ (ಏಳು ಕಲ್ಲು ಆಟ), ಹಗ್ಗ ಜಗ್ಗಾಟ ಹಾಗೂ ಕುಂಟೆಬಿಲ್ಲೆ ಸೇರಿದಂತೆ ಹಲವು ದೇಶಿ ಆಟಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡು, ತಮ್ಮ ಬಾಲ್ಯವನ್ನು ನೆನಪಿಸಿಕೊಂಡು ಸಂತಸ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಗೆ ಮೌನವಾಗಿ ಅಮೂಲ್ಯ ಕೊಡುಗೆ ನೀಡುತ್ತಿರುವ ಮಹಿಳೆಯರನ್ನು ಈ ಸಂದರ್ಭದಲ್ಲಿ ಗೌರವಿಸಿ ಸನ್ಮಾನಿಸಲಾಯಿತು. ಬಸವನಗುಡಿ ವಿಧಾನಸಭಾ ಕ್ಷೇತ್ರದ ಶಾಸಕ ರವಿ ಸುಬ್ರಮಣ್ಯ, ಡಾ.ಮಂಜುಳಾ ರವಿ ಸುಬ್ರಮಣ್ಯ, ಅಬಲಾಶ್ರಮದ ಗೌರವ ಕಾರ್ಯದರ್ಶಿ ಡಾ. ಆರ್.ಎಸ್.ಭಾರತೀಶ ರಾವ್ ಸೇರಿದಂತೆ ಇತರರಿದ್ದರು.

ಲೋಕಾ ದಾಳಿ: ₹3.19 ಕೋಟಿ ಆಸ್ತಿ ಪತ್ತೆ

ಬೆಂಗಳೂರು: ತಮ್ಮ ಆದಾಯದ ಮೂಲಗಳಿಗಿಂತ ಹೆಚ್ಚಿನ ಆಸ್ತಿ ಹೊಂದಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವಲಯ ಅರಣ್ಯಾಧಿಕಾರಿಯ ಮೇಲೆ ಲೋಕಾಯುಕ್ತ ಪೊಲೀಸರು ಶನಿವಾರ ದಾಳಿ ನಡೆಸಿ 3.19 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಪತ್ತೆ ಹಚ್ಚಿದ್ದಾರೆ.



ಬಿಡಿಎ ವಲಯ ಅರಣ್ಯಾಧಿಕಾರಿಯಾದ ದಾಳೇಶ್ ಎ.ಎಲ್. ಅವರಿಗೆ ಸಂಬಂಧಿಸಿದ ಒಟ್ಟು 4 ಸ್ಥಳಗಳಲ್ಲಿ ಏಕಕಾಲಕ್ಕೆ ಶೋಧನಾ ಕಾರ್ಯ ಕೈಗೊಂಡು, ಆರೋಪಿತ ಅಧಿಕಾರಿಯ ಮನೆ, ಕಚೇರಿ ಹಾಗೂ ಅವರ ಸಂಬಂಧಿಕರ ನಿವಾಸಗಳ ಮೇಲೆ ಈ ದಾಳಿ ನಡೆಸಿದ್ದಾರೆ. ದಾಳಿ ವೇಳೆ 3 ನಿವೇಶನಗಳು, 2 ಮನೆಗಳು, 1 ವಾಣಿಜ್ಯ ಸಂಕೀರ್ಣ ಹಾಗೂ 17 ಎಕರೆ 20 ಗುಂಟೆ ಕೃಷಿ ಜಮೀನು, 1.35 ಲಕ್ಷ ನಗದು, 13 ಲಕ್ಷ ರೂ. ಬೆಲೆಬಾಳುವ ಚಿನ್ನಾಭರಣ ಪತ್ತೆಯಾಗಿದೆ. ಒಟ್ಟು 3.19 ಕೋಟಿ ರೂ. ಮೌಲ್ಯದ ಆಸ್ತಿ ಬೆಳಕಿಗೆ ಬಂದಿದೆ. ಈ ಬಗ್ಗೆ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಹೆಚ್ಚಿನ ತನಿಖೆ ಮುಂದುವರಿಸಿದ್ದಾರೆ.

ನಂದಿ ಬಸವೇಶ್ವರಸ್ವಾಮಿ ದೇವಾಲಯ ಲೋಕಾರ್ಪಣೆ ಇಂದು

ಬೆಂಗಳೂರು: ಮಾಗಡಿ ರಸ್ತೆಯ ನೈಸ್ ರೋಡ್ ಸಮೀಪದ ಎಲೆಕೊಡಿಗೇಹಳ್ಳಿಯಲ್ಲಿ ಚೋಳರ ಕಾಲದ ಇತಿಹಾಸ ಪ್ರಸಿದ್ಧ ಶ್ರೀ ನಂದಿ ಬಸವೇಶ್ವರ ಸ್ವಾಮಿಯ ನೂತನ ದೇವಾಲಯ ಭವ್ಯವಾಗಿ ನಿರ್ಮಾಣಗೊಂಡಿದ್ದು, ಮಾ.8ರಂದು ಲೋಕಾರ್ಪಣೆ ಗೊಳ್ಳಲಿದೆ.

ಪುರಾಣ ಪ್ರಸಿದ್ಧ ದೇವಾಲಯವನ್ನು ಎಲೆಕೊಡಿಗೇಹಳ್ಳಿಯ ಯಜಮಾನ ಡಾ.ಎನ್.ನಂಜುಂಡೇಶ, ಶೆಟ್ಟರಾದ ಎ.ಶಿವಣ್ಣ ನೇತೃತ್ವದಲ್ಲಿ ಗ್ರಾಮಸ್ಥರು ಪುನರುತ್ಥಾನಗೊಳಿಸಿದ್ದಾರೆ. ಶ್ರೀನಂದಿಬಸವೇಶ್ವರ ಸ್ವಾಮಿ ದೇವಾಲಯದ ಜತೆಗೆ ಮಹಾಗಣಪತಿ, ಪಂಚ ಮುಖ ಶಿವಲಿಂಗೇಶ್ವರಸ್ವಾಮಿಯ ಮಂದಿರಗಳೂ ನಿರ್ಮಾಣಗೊಂಡಿವೆ.

ಭಾನುವಾರ ಬೆಳಿಗ್ಗೆ ನೂತನ ದೇವಾಲಯಗಳ ಲೋಕಾರ್ಪಣೆ, ಪ್ರಾಣ ಪ್ರತಿಷ್ಠಾಪನೆ, ವಿಮಾನ ಗೋಪುರ, ಶಿಖರ ಕಳಸಾಭಿಷೇಕ ಮತ್ತು ಪೂಜಾ ಮಹೋತ್ಸವ



ಕಾರ್ಯಕ್ರಮಗಳು ನೆರವೇರಲಿವೆ. ಸಭಾ ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀರಂಭಾಪುರಿ ಪೀಠ, ಉಜ್ಜಯಿನಿ ಪೀಠದ ಜಗದ್ಗುರುಗಳು ಸೇರಿದಂತೆ ನಾಡಿನ ಸಾಧುಸಂತರು, ಮಠಾಧೀಶರು ವಹಿಸಲಿದ್ದಾರೆ. ಉದ್ಘಾಟನೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜ ಯೇಂದ್ರ ನೆರವೇರಿಸಲಿದ್ದಾರೆ. ಯಶವಂತಪುರ ಶಾಸಕ ಎಸ್.ಟಿ. ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಂಜೆ, ಮೈಸೂರು ಮಹಾರಾಜ ಯದುವೀರಕೃಷ್ಣದತ್ತ ಚಾಮರಾಜ ಒಡೆಯರ್, ಅರಣ್ಯ ಸಚಿವ ಈಶ್ವರ ಖಂಡ್ರೆ, ನೈಸ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಅಶೋಕ ಖೇಣಿ ಮತ್ತಿತರ ಆಗಮಿಸಲಿದ್ದಾರೆ ಎಂದು ಎಲೆಕೊಡಿಗೇಹಳ್ಳಿಯ ಯಜಮಾನರಾದ ಡಾ. ಎನ್. ನಂಜುಂಡೇಶ್ ತಿಳಿಸಿದ್ದಾರೆ.

ಭೂಮಿಕಾಗೆ ಶ್ರೀಲೇಖ ಅನುವಾದ ಸಾಹಿತ್ಯ ಪ್ರಶಸ್ತಿ

ಬೆಂಗಳೂರು: ಜೋರಾಮಿಕೃತಿಯ ಲೇಖಕಿ ಭೂಮಿಕಾ ಆರ್. ಅವರು ಕರ್ನಾಟಕ ಲೇಖಕಿಯರ ಸಂಘ ನೀಡುವ ಶ್ರೀಮತಿ ಶ್ರೀಲೇಖ ಅನುವಾದ ಸಾಹಿತ್ಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ಭೂಮಿಕಾ ಪಿ. ಅವರು ನವದೆಹಲಿಯ ಜೆಎನ್‌ಯುನಿಂದ ಪಿಎಚ್‌ಡಿ ಪಡೆದ ಲೇಖಕಿ ಮತ್ತು ಶಿಕ್ಷಣ ತಜ್ಞೆ. ಇವರು ಇಂಗ್ಲಿಷ್‌ನಲ್ಲಿ ಕವನ ಮತ್ತು ಸಣ್ಣ ಕಥೆಗಳನ್ನು ಬರೆದಿದ್ದಾರೆ. ಪ್ರಸ್ತುತ ಬೆಂಗಳೂರಿನ ಶಿವ ನಾಡರ್ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ರಾಜಕಾಲುವೆಗೆ ತಡೆಗೋಡೆ ನಿರ್ಮಾಣಕ್ಕೆ ಆದ್ಯತೆ

ಕೆಂಗೇರಿ: ಗ್ರಾಮೀಣ ಪ್ರದೇಶದಲ್ಲೂ ರಾಜಕಾಲುವೆಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯಲು ತಡೆಗೋಡೆ ಕಾಮಗಾರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಕಗ್ಗಲೀಪುರ ಗ್ರಾಮಪಂಚಾಯಿತಿ ವ್ಯಾಪ್ತಿಯ ಓ.ಬಿ.ಚೂಡಹಳ್ಳಿ ಮತ್ತು ಮುನೇಶ್ವರ ದೇವಸ್ಥಾನ ಬಳಿ ಮತ್ತು ಸರ್ಕಾರಿ ಆರೋಗ್ಯ ಕೇಂದ್ರ ಬಳಿ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಮೂಲ ಸೌಕರ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ, ರಸ್ತೆ ಅಭಿವೃದ್ಧಿ ಡಾಂಬರೀಕರಣ ಜತೆಗೆ ಗ್ರಾಮೀಣ ಭಾಗದಲ್ಲಿರುವ ರಾಜಕಾಲುವೆ ನೀರು ಮಳೆಗಾಲದಲ್ಲಿ ತುಂಬಿ ಗ್ರಾಮದ ಮನೆಗಳು ರಸ್ತೆಗಳಿಗೆ ತೊಂದರೆ ಆಗದಂತೆ ಸರಾಗವಾಗಿ ಹರಿಯುವಂತೆ ಪರಿಪೂರ್ಣವಾದ ಅಭಿವೃದ್ಧಿಯನ್ನು ಸಮರ್ಪಕವಾಗಿ ಪೂರೈಸಿದರೆ ಕ್ಷೇತ್ರ ಪ್ರಗತಿ ಕಾಣಲು ಸಾಧ್ಯ ಎಂದರು.

ಕ್ಷೇತ್ರದ 17 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ



ಹಲವು ಅಭಿವೃದ್ಧಿ ಕಾಮಗಾರಿಗೆ ಈಗಾಗಲೇ ಚಾಲನೆ ನೀಡಲಾಗಿದ್ದು, ಉತ್ತಮ ಗುಣಮಟ್ಟದ ಕಾಮಗಾರಿ ಪ್ರಗತಿಯಲ್ಲಿದ್ದು ಗ್ರಾಮಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ತಿಳಿಸಿದರು.

ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಮಹದೇವಯ್ಯ, ಕಗ್ಗಲೀಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಎಸ್.ಫರ್ವಿಜ್, ಕಗ್ಗಲೀಪುರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವಿಶ್ವನಾಥ್, ಲಕ್ಷ್ಮೀನಾರಾಯಣ, ಮುಖಂಡರಾದ ಜಯರಾಮ, ನಾಗಣ್ಣ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಕಾರ್ಯಾಗಾರದಲ್ಲಿ ಸಚಿವ ಈಶ್ವರ ಬಿ. ಖಂಡ್ರೆ ಕರೆ

ವಿದ್ಯಾರ್ಥಿಗಳ ಮೇಲಿದೆ ಪರಿಸರ ಸಂರಕ್ಷಣೆ ಹೊಣೆ

ಬೆಂಗಳೂರು: ಭವಿಷ್ಯದ ನಾಗರಿಕರಾದ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯಲ್ಲಿ ಹೆಚ್ಚಿನ ಜವಾಬ್ದಾರಿಯಿದೆ. ಪರಿಸರ ಸಂರಕ್ಷಣೆಗಾಗಿ ವಿದ್ಯಾರ್ಥಿಗಳು ಕಾರ್ಯನ್ಮುಖರಾಗಬೇಕು ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಕರೆ ನೀಡಿದರು.

ಬೆಂಗಳೂರು ವಿಶ್ವವಿದ್ಯಾಲಯ ಪರಿಸರ ವಿಜ್ಞಾನ ವಿಭಾಗವು ಗ್ರಾಮೀಣ ಸಾಕ್ಷರತಾ ಮತ್ತು ಆರೋಗ್ಯ ಕಾರ್ಯಕ್ರಮ ಹಾಗೂ ಕರ್ನಾಟಕ ಸ್ಟೇಟ್ ಯೂಥ್ ನೆಟ್ವರ್ಕ್ ಸಹಯೋಗದಲ್ಲಿ ಆಯೋಜಿಸಿದ್ದ ಪರಿಸರ ಸಂರಕ್ಷಣೆಯಲ್ಲಿ ಯುವಜನರ ಪಾತ್ರ ಎಂಬ ರಾಷ್ಟ್ರೀಯ ಕಾರ್ಯಗಾರದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ರಾಜ್ಯದಲ್ಲಿ ಶೇ.33 ರಷ್ಟು ಅರಣ್ಯ ಪ್ರದೇಶವಿರಬೇಕು ಆದರೆ ಕರ್ನಾಟಕದಲ್ಲಿ ಶೇ.21% ಅರಣ್ಯ ಪ್ರದೇಶವಿದ್ದು, ಶೇ.12 ಕೊರತೆಯಿದೆ. ಕಳೆದ 3 ವರ್ಷದಲ್ಲಿ ರಾಜ್ಯದಲ್ಲಿ 11 ಕೋಟಿ ಸಸಿಗಳನ್ನು ನೆಡಲಾಗಿದೆ. ನಗರ ಪ್ರದೇಶದಲ್ಲಿ ಕಾಂಕ್ರೀಟ್ ವಿಸ್ತರಣೆ ಕಡಿಮೆಯಾಗಬೇಕು. ರಾಜ್ಯದಲ್ಲಿ ಕನಿಷ್ಠ ಶೇ.1 ರಷ್ಟು ಹಸಿರು ಹೊದಿಕೆ ಹೆಚ್ಚಿಸಲು 10 ಕೋಟಿ ಸಸಿ ನೆಡುವ ಅಗತ್ಯವಿದೆ. ಈ ಕಾರ್ಯ ಸರ್ಕಾರದಿಂದ ಮಾತ್ರ ಸಾಧ್ಯವಾಗುವುದಿಲ್ಲ ಸಂಘ



ಸಂಸ್ಥೆಗಳು, ಸಾರ್ವಜನಿಕರು, ವಿದ್ಯಾರ್ಥಿಗಳು ಸಹ ಸಸಿ ನೆಡುವ ಸಂಕಲ್ಪ ಮಾಡಬೇಕು, ಪರಿಸರ ಸಂಸ್ಕೃತಿಯನ್ನು ಉಳಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಆಗ ಹಸಿರು ಹೊದಿಕೆ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು.

ಬೆಂಗಳೂರಿನ ವಾಯು ಗುಣಮಟ್ಟ ಸೂಚ್ಯಂಕ (ಎಕ್ಯೂಐ) 100 ದಾಟಿದ್ದು ಹೀಗೆ ಮುಂದುವರೆದರೆ ದೆಹಲಿ ಮಾದರಿಯ ಸಮಸ್ಯೆಗಳು ಎದುರಿಸಬೇಕಾಗಬಹುದು. ಬೆಂಗಳೂರಿನಲ್ಲಿ ಶುದ್ಧ ಮತ್ತು ಆರೋಗ್ಯಕರ ಪರಿಸರ ಹೆಚ್ಚಿಸುವ ಅಗತ್ಯವಿದೆ ಎಂದು ಎಚ್ಚರಿಸಿದರು.

ಪ್ರಕೃತಿ ಸಮತೋಲನಕ್ಕೆ ವನ್ಯ ಜೀವಿಗಳು ಅತ್ಯಂತ ಅವಶ್ಯಕ. ವನ್ಯಜೀವಿ ಸಂರಕ್ಷಣೆಗೆ ಕಾನೂನುಬದ್ಧ ವ್ಯವಸ್ಥೆಯಿದ್ದು ಅವುಗಳ ರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಭೂಮಿಯ ಮೇಲೆ ಹುಟ್ಟಿದ ಪ್ರತಿ ಜೀವಿಗೂ ಬದುಕುವ ಹಕ್ಕಿದೆ. ಕೀಟರಾಶಿ, ಸಸ್ಯ ಪ್ರಭೇದ, ಪ್ರಾಣಿ ಸಂಕುಲ ಎಲ್ಲವೂ ಪ್ರಕೃತಿ ಸಮತೋಲನದ ಭಾಗವಾಗಿದೆ. ಮಾನವ ಜೀವ ಅಮೂಲ್ಯವಾದರೂ ವನ್ಯಜೀವಿಗಳ ರಕ್ಷಣೆಯೂ ಸಮಾನವಾಗಿ ಅಗತ್ಯವಾಗಿದೆ ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಚಿಂತಿಸಬೇಕು ಎಂದು ತಿಳಿಸಿದರು.

ಪ್ಲಾಸ್ಟಿಕ್ ನಿಷೇಧದ ಬಗ್ಗೆ ಜಾಗೃತಿ ಮೂಡಲಿ

ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆಗೊಳಿಸುವುದು ಮತ್ತು ಏಕಬಳಕೆ ಪ್ಲಾಸ್ಟಿಕ್ ನಿಷೇಧದ ಬಗ್ಗೆ ವಿದ್ಯಾರ್ಥಿಗಳು ಸಮಾಜದಲ್ಲಿ ಜಾಗೃತಿ ಮೂಡಿಸಬೇಕು. ಜೊತೆಗೆ ತ್ಯಾಜ್ಯ ಸಂಸ್ಕರಣೆ, ನೀರಿನ ಮರುಬಳಕೆ, ಶಬ್ದ ಮಾಲಿನ್ಯ ಕುರಿತು ಜನರಲ್ಲಿ ಅರಿವು ಮೂಡಿಸುವುದು ಅಗ್ಯವಾಗಿದೆ. ಭವಿಷ್ಯದ ನಾಗರೀಕರಾದ ವಿದ್ಯಾರ್ಥಿಗಳು ಪ್ರಕೃತಿ ಮತ್ತು ಪರಿಸರದ ಬಗ್ಗೆ ಕಾಳಜಿ ವಹಿಸಿ ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ವಿದ್ಯಾರ್ಥಿಗಳಿಗೆ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಮಳಿಗೆಗಳ ಮೇಲೆ ದಾಳಿ: ವಿಶೇಷ ಕಾರ್ಯಾಚಣೆ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವವರ ವಿರುದ್ಧ ಹಾಗೂ ನಿಯಮ ಬಾಹಿರವಾಗಿ ತಂಬಾಕು ಉತ್ಪನ್ನಗಳ ಜಾಹೀರಾತು ಪ್ರದರ್ಶಿಸುವ ಮಳಿಗೆಗಳ ಮೇಲೆ ಉತ್ತರ ವಿಭಾಗದ ಪೊಲೀಸರು ಸಮರ ಸಾರಿದ್ದಾರೆ. ಮಾ.6 ರ ಸಂಜೆಯಿಂದ ಮಾ.7ರ ಬೆಳಗಿನ ಜಾವದವರೆಗೆ ಈ ವಿಶೇಷ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳ ಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ನಿಯಮ ಬಾಹಿರವಾಗಿ ತಂಬಾಕು ಉತ್ಪನ್ನ ಜಾಹೀರಾತು

ಕಾರ್ಯಾಚರಣೆಯ ಸಮಯದಲ್ಲಿ ಪೊಲೀಸರು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿತ ಪ್ರದೇಶಗಳಲ್ಲಿ ಧೂಮಪಾನ ಮಾಡುತ್ತಿದ್ದವರನ್ನು ಪತ್ತೆ ಹಚ್ಚಿ ಸ್ಥಳದಲ್ಲೇ ದಂಡ ವಿಧಿಸಿದ್ದಾರೆ. ಅಲ್ಲದೆ, ತಂಬಾಕು ಉತ್ಪನ್ನಗಳಾದ ಸಿಗರೇಟು ಮತ್ತು ಬೀಡಿಗಳ ಜಾಹೀರಾತುಗಳನ್ನು ಅಂಗಡಿಗಳ ಮುಂಭಾಗದಲ್ಲಿ ಕಾನೂನು ಬಾಹಿರವಾಗಿ ಪ್ರಕಟಿಸಿದ್ದ ಮಳಿಗೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ.

295 ಜನರಿಗೆ ಪೊಲೀಸರಿಂದ ದಂಡ:

ಈ ವಿಶೇಷ ಕಾರ್ಯಾಚರಣೆಯ ಫಲವಾಗಿ ಕೋಟ್ಪಾ ಕಾಯ್ದೆಯ ಉಲ್ಲಂಘನೆಗೆ ಸಂಬಂಧಿಸಿದಂತೆ ಒಟ್ಟು 40 ಪ್ರಕರಣಗಳನ್ನು ದಾಖಲಿಸಲಾಗಿದೆ. ನಿಷೇಧಿತ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದ ಒಟ್ಟು 295



ಜನರಿಗೆ ಪೊಲೀಸರು ದಂಡ ವಿಧಿಸುವ ಮೂಲಕ ಎಚ್ಚರಿಕೆ ನೀಡಿದ್ದಾರೆ. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಈ ರೀತಿಯ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕಾರ್ಯಾಚರಣೆಯ ನೇತೃತ್ವವನ್ನು ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನೇಮಗೌಡ ವಹಿಸಿದ್ದು, ಉತ್ತರ ವಿಭಾಗದ ವ್ಯಾಪ್ತಿಗೆ ಬರುವ ಒಟ್ಟು 13 ಪೊಲೀಸ್ ಠಾಣೆಗಳ ಸರಹದ್ದುಗಳಲ್ಲಿ ಏಕಕಾಲಕ್ಕೆ ಈ ಕಾರ್ಯಾಚರಣೆ ನಡೆಸಲಾಗಿದ್ದು, ಹಿರಿಯ ಅಧಿಕಾರಿಗಳು ಸೇರಿದಂತೆ ಮೂರು ಉಪ-ವಿಭಾಗಗಳ ಎಸಿಪಿ, ಇನ್‌ಸ್ಪೆಕ್ಟರ್‌ಗಳು, ಪಿಎಸ್‌ಐ ಮತ್ತು ಇತರ ಸಿಬ್ಬಂದಿ ಪಾಲ್ಗೊಂಡಿದ್ದರು.

ಇಂದು ನಗರದಲ್ಲಿ...

- ಚೋಳರ ಕಾಲದ ಇತಿಹಾಸ ಪ್ರಸಿದ್ಧ ನಂದಿ ಬಸವೇಶ್ವರಸ್ವಾಮಿ, ಮಹಾಗಣಪತಿ ಮತ್ತು ಪಂಚಮುಖ ಶಿವಲಿಂಗೇಶ್ವರ ಸ್ವಾಮಿಯ ನೂತನ ದೇವಾಲಯಗಳ ಲೋಕಾರ್ಪಣೆ ಕಾರ್ಯಕ್ರಮ, ಸ್ಥಳ: ಎಲೆ ಕೊಡಿಗೇಹಳ್ಳಿ, ಮಾಗಡಿ ರಸ್ತೆ, ನೈಸ್ ರಸ್ತೆ ಸಮೀಪ, ಯಶವಂತಪುರ ಹೋಬಳಿ. ಬೆ.10
- ಯಕ್ಷಗಾನ ತಪಸ್ಸಂಘ: ಮಾಗಧ ವಧೆ ಹಾಗೂ ಭಸ್ಮಾಸುರ ಮೋಹಿನಿ ಪೌರಾಣಿಕ ಯಕ್ಷಗಾನ ಪ್ರದರ್ಶನ, ಸ್ಥಳ: ಜಯರಾಮ ಸೇವಾಮಂಡಳಿ, 1ನೇ ಮುಖ್ಯರಸ್ತೆ, ಜಯನಗರ 8ನೇ ಬ್ಲಾಕ್. ಮಧ್ಯಾಹ್ನ 3
- ಮಹಿಳಾ ದಿನಾಚರಣೆಯ ಅಂಗವಾಗಿ ದೀಪಧಾರಿಣಿ ಶೀರ್ಷಿಕೆಯಡಿ ಮಹಿಳಾ ಕಲಾಪ್ರತಿಭೆಗಳ ಸಂಗೀತ-ನೃತ್ಯ ವಿಶೇಷ ಅನಾವರಣ ಕಾರ್ಯಕ್ರಮ, ಸ್ಥಳ: ನೃತ್ಯ ದರ್ಪಣ ಅಕಾಡೆಮಿ ಸ್ಟುಡಿಯೋ, ಜೆ.ಪಿ.ನಗರ. ಸಂಜೆ 4.30

ಕಿರುಸುದ್ದಿ

ಭಾರತೀಯರ ನಿಶ್ಯಬ್ದವೇ ನಮ್ಮ ಗುರಿ: ಸ್ಯಾಂಟ್ನರ್

• **ಅಹಮದಾಬಾದ್:** ಕ್ರೀಡಾಂಗಣದಲ್ಲಿ ಸೇರುವ ಲಕ್ಷಾಂತರ ಭಾರತದ ಅಭಿಮಾನಿಗಳನ್ನು ನಿಶ್ಯಬ್ದಗೊಳಿಸುತ್ತೇವೆ ಎಂಬ ಎದುರಾಳಿ ನಾಯಕರ ಹೇಳಿಕೆಯ ಸರದಿ ಮುಂದುವರೆದಿದೆ. ಭಾನುವಾರದಂದು ಭಾರತ ಹಾಗೂ ಕಿವೀಸ್ ತಂಡಗಳು ಎದುರಾಗಲಿವೆ. ಇದಕ್ಕೂ ಮುನ್ನ ಶನಿವಾರದಂದು ನಡೆದಿರುವ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿರುವ ನ್ಯೂಜಿಲೆಂಡ್ ನಾಯಕ ಮಿಚೆಲ್ ಸ್ಯಾಂಟ್ನರ್ ಕೂಡ ಅದೇ ಹೇಳಿಕೆ ನೀಡಿದ್ದಾರೆ. 2023ರ ವಿಶ್ವಕಪ್ ವೇಳೆ ಆಸ್ಟ್ರೇಲಿಯಾ ನಾಯಕ ಹೇಳಿದ್ದ ಮಾತೊಂದು ನೆನಪಿಗೆ ಇಟ್ಟುಕೊಂಡಿರುವ ಸ್ಯಾಂಟ್ನರ್ ನಾವು ಅಭಿಮಾನಿಗಳನ್ನು ನಿಬ್ಬರಗಾಗಿಸುವಂತೆ ಮಾಡುತ್ತೇವೆ ಎಂದು ಪ್ರತಿಪಾದಿಸಿದರು. ಈ ಹಿಂದೆ ಇಂಗ್ಲೆಂಡ್‌ನ ಸ್ಯಾಮ ಕರ್ರನ್ ಕೂಡ ಸೆಮಿಫೈನಲ್ ಪಂದ್ಯಕ್ಕೂ ಮುನ್ನ ಇದೇ ಮಾತು ಹೇಳಿದ್ದರು.

ಬೂಮ್ರಾ ಬಗ್ಗೆ ಎಚ್ಚರಿಕೆ: ಬೂಮ್ರಾ ಅವರ ಬೌಲಿಂಗ್‌ಗೆ ನ್ಯೂಜಿಲೆಂಡ್‌ನ ಉತ್ತರವೇನು ಎಂಬ ಪ್ರಶ್ನೆಗೆ ಸ್ಯಾಂಟ್ನರ್ ಉತ್ತರಿಸಿ, ಬೂಮ್ರಾ ಒಬ್ಬರು ವಿಶ್ವದರ್ಜೆ ಬೌಲರ್. ಅವರ ಬಗ್ಗೆ ಚರ್ಚೆಗಳು ತಂಡದಲ್ಲಿ ನಡೆದಿರುತ್ತವೆ, ನಾವು ಕೂಡ ಮಾಡಿದ್ದೇವೆ. ಬೂಮ್ರಾ ಅಲ್ಲದೆ ಭಾರತ ತಂಡದಲ್ಲಿ ಎಲ್ಲರೂ ಬೆಸ್ಟ್ ಬೌಲರ್‌ಗಳೇ ಇದ್ದಾರೆ. ಅವರ ಬಗ್ಗೆ ಕೂಡ ನಾವು ತಯಾರಿ ಮಾಡಿಕೊಂಡಿದ್ದೇವೆ ಎಂದರು.

ಹೊಸದೇನಾದರೂ ಹೇಳಿ: ಸೂರ್ಯಕುಮಾರ್

• **ಅಹಮದಾಬಾದ್:** ಎಲ್ಲರೂ ಅದೇ ಸಾಲುಗಳನ್ನು ಹೇಳುತ್ತಿದ್ದಾರೆ. ಹೊಸದೇನಾದರೂ ಹೇಳಿ ಎಂದು ಸೂರ್ಯಕುಮಾರ್ ಯಾದವ್ ಸ್ಯಾಂಟ್ನರ್ ಅವರ ನಿಶ್ಯಬ್ದ ಹೇಳಿಕೆಗೆ ಪ್ರತ್ಯುತ್ತರ ನೀಡಿದರು. ಮಾಧ್ಯಮಗೋಷ್ಠಿಯಲ್ಲಿ ಮಾತನಾಡುತ್ತಾ ಅವರು, ಫೈನಲ್ ಆಡುವ ಬಗ್ಗೆ ನಮಗೆ ಎಲ್ಲರಿಗೂ ಹೆಮ್ಮೆಯಿದೆ. ಹಾಗೇ ಒಂದು ಉತ್ಸಾಹವಿದೆ. ನಮ್ಮ ತಂಡದಲ್ಲಿ ಉತ್ತಮ ವಾತಾವರಣವಿದ್ದು ನಾವು ದೊಡ್ಡ ಫಲಿತಾಂಶ ಪಡೆಯುತ್ತೇವೆ ಎಂಬ ನಂಬಿಕೆ ನನಗಿದೆ ಎಂದರು. ನಾಯಕನಾಗಿ ನನಗೆ ಒಂದಿಷ್ಟು ಒತ್ತಡಗಳಿರುವುದು ಸಹಜ. ಅದನ್ನು ನಾನು ತಿರಸ್ಕರಿಸಲಾಗುವುದಿಲ್ಲ. ಆದರೆ ಉತ್ತಮ ಆಟವೇ ನಮ್ಮ ಉತ್ತರ ಎಂದು ಪ್ರತಿಪಾದಿಸಿದರು.

10-ಕೆ ಬೆಂಗಳೂರು ಸ್ಪರ್ಧೆಗೆ ಮಹಿಳಾ ತಂಡ ಪ್ರಕಟ

• **ಬೆಂಗಳೂರು:** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಮುಂಚಿತವಾಗಿ, ಪ್ರೊಕ್ಯಾಮ್ ಇಂಟರ್ ನ್ಯಾಷನಲ್ ಏಪ್ರಿಲ್ 26 ರ ಭಾನುವಾರ ನಡೆಯಲಿರುವ ಟಿಸಿಎಸ್ ವರ್ಲ್ಡ್ 10-ಕೆ ಬೆಂಗಳೂರಿನ 18ನೇ ಆವೃತ್ತಿಗೆ ಎಲ್ಲಾ ಮಹಿಳಾ ವೇಗಿಗಳ ತಂಡವನ್ನು ಘೋಷಿಸಿದೆ. ಆವೃತ್ತಿಯಲ್ಲಿ 9,000 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದಾರೆ.

ಸ್ಪರ್ಧಿಗಳ-ಸ್ಪರ್ಧಿಸುವ ಓಟದ ಪಟ್ಟಿ: ಮೆಹ್ವಿಶ್ ಹುಸೇನ್ (ಸಮಯ: 50 ನಿಮಿಷ) (ಮಂಗಳೂರು); ಜಯಶ್ರೀ ವನಮು (55 ನಿಮಿಷ; ತೆಲಂಗಾಣ); ಡಾ.ಬೆನೀತಾ ಕಿರಣ್ (56 ನಿಮಿಷ; ಬೆಂಗಳೂರು); ನಿಯಾತಿ ಕೋಟಿಯಾನ್ (58 ನಿಮಿಷ; ಬೆಂಗಳೂರು); ಪಾಯಲ್ ಅಶರ್ (60 ನಿಮಿಷ; ಮುಂಬೈ); ಇಂದುಮತಿ ನಾಯರ್ (60 ನಿಮಿಷ; ಬೆಂಗಳೂರು); ಲಕ್ಷ್ಮಿ ರೂಪೇಶ್ (65 ನಿಮಿಷ; ಬೆಂಗಳೂರು); ಡಾ.ಮೀನಾಕ್ಷಿ ಹರಿಹರನ್ (70 ನಿಮಿಷ; ಗುವಾಹಟಿ); ಜಾಹ್ನವಿ ಗೌಡ (70 ನಿಮಿಷ) ಬೆಂಗಳೂರು); ದಿವ್ಯ ಮಾದಯ್ಯ (70 ನಿಮಿಷ; ಕೂರ್ಗ್); ಸಂಗೀತಾ ಕುಮಾರಿ (75 ನಿಮಿಷ) ಬೆಂಗಳೂರು); ಸಾರಿಕಾ ಶರ್ಮ (80 ನಿಮಿಷ, ಅಹಮದಾಬಾದ್); ಸೋನಿ ಕುಮಾರಿ (83 ನಿಮಿಷ) ಬೆಂಗಳೂರು); ನರ್ಮದಾ ಜೆ (85 ನಿಮಿಷ; ಬೆಂಗಳೂರು).

ಶಾಟ್‌ಪುಟ್: ತಜೀಂದರ್‌ಪಾಲ್‌ಗೆ ಚಿನ್ನ

• **ಚಂಡೀಗಢ:** ಏಷ್ಯನ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತ ಹಾಗೂ ರಾಷ್ಟ್ರೀಯ ದಾಖಲೆಯ ಧಾರಕ ತಜೀಂದರ್‌ಪಾಲ್ ಸಿಂಗ್ ತೂರ್ ಪಟಿಯಾಲಾದಲ್ಲಿ ನಡೆಯುತ್ತಿರುವ ಇಂಡಿಯನ್ ಓಪನ್ ತ್ರೋಸ್ ಸ್ಪರ್ಧೆಯ ಮೊದಲ ದಿನವೇ ಶಾಟ್‌ಪುಟ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಪಂಜಾಬ್‌ನ ಅಥ್ಲೀಟ್ ತೂರ್ ಮೊದಲ ಪ್ರಯತ್ನದಲ್ಲೇ ಇಪ್ಪತ್ತು ದಶಮಾಂಶ ಐದು ಒಂದು ಮೀಟರ್ ದೂರಕ್ಕೆ ಶಾಟ್‌ಪುಟ್ ಎಸೆದು ಚಿನ್ನದ ಪದಕ ತನ್ನದಾಗಿಸಿಕೊಂಡರು. ಪಟಿಯಾಲಾದ ರಾಷ್ಟ್ರೀಯ ಕ್ರೀಡಾ ಸಂಸ್ಥೆಯ ಮೈದಾನದಲ್ಲಿ ನಡೆಯುತ್ತಿರುವ ಈ ಎರಡು ದಿನಗಳ ಸ್ಪರ್ಧೆಯಲ್ಲಿ ಅವರು ತಮ್ಮ ಈ ವರ್ಷದ ಅತ್ಯುತ್ತಮ ಪ್ರದರ್ಶನ ನೀಡಿದರು. ನನ್ನ ಪ್ರದರ್ಶನದಿಂದ ತೃಪ್ತಿಯಿದೆ, ಎಂದು ತೂರ್ ಸ್ಪರ್ಧೆಯ ಬಳಿಕ ಹೇಳಿದರು. ತೂರ್ ಒಟ್ಟು ಮೂರು ಪ್ರಯತ್ನಗಳಲ್ಲಿ ಇಪ್ಪತ್ತು ಮೀಟರ್ ಗಡಿ ದಾಟಿದರು. ಇಪ್ಪತ್ತು ದಶಮಾಂಶ 02 ಮೀಟರ್ ಮತ್ತು ಇಪ್ಪತ್ತು ದಶಮಾಂಶ 07 ಮೀಟರ್ ದೂರಕ್ಕೆ ಕೂಡ ಎಸೆದು ಉತ್ತಮ ಲಯದಲ್ಲಿರುವುದನ್ನು ತೋರಿಸಿದರು. ಉಳಿದ ಮೂರು ಪ್ರಯತ್ನಗಳಲ್ಲಿ ಮಾನ್ಯ ಅಳತೆ ದಾಖಲಾಗಲಿಲ್ಲ. ಈ ಋತುವಿನಲ್ಲಿ ಅವರ ಪ್ರಮುಖ ಗುರಿ ಜಪಾನ್‌ನಲ್ಲಿ ನಡೆಯಲಿರುವ ಮುಂದಿನ ಏಷ್ಯನ್ ಕ್ರೀಡಾಕೂಟದಲ್ಲಿ ಮತ್ತೆ ಚಿನ್ನದ ಪದಕ ಉಳಿಸಿಕೊಳ್ಳುವುದಾಗಿದೆ. ಅದಕ್ಕಾಗಿ ಈ ವರ್ಷ ನಂತರದ ಹಂತದಲ್ಲಿ ಅತ್ಯುತ್ತಮ ಫಾರ್ಮ್ ತಲುಪುವಂತೆ ತರಬೇತಿ ನಡೆಸುತ್ತಿರುವುದಾಗಿ ಅವರು ತಿಳಿಸಿದ್ದಾರೆ.

ಟಿ20 ವಿಶ್ವಕಪ್ ಗೆದ್ದು ಬೀಗಲಿ ಭಾರತ

ನ್ಯೂಜಿಲೆಂಡ್-ಭಾರತ ಫೈನಲ್ ಪಂದ್ಯ ಇಂದು | ಚೋಕರ್ಸ್ ಪಟ್ಟ ಕಳಚುವುದೇ ಕಿವೀಸ್?

• **ಅಹಮದಾಬಾದ್:** ಒಂದು ತಿಂಗಳು, 20 ತಂಡಗಳು, 55 ಪಂದ್ಯಗಳು, ಸಾವಿರಾರು ರನ್ನುಗಳು, ನೂರಾರು ವಿಕೆಟ್‌ಗಳು, ಕ್ಯಾಚಿನ ರೋಮಾಂಚನ, ವಿಕೆಟ್‌ನ ಅಗ್ರೆಶನ್, ಶತಕದ ಸೆಲಬ್ರೇಶನ್ ಜೊತೆಗೆ ಗೆಲುವಿನ ಹಂಬಲ, ಸೋಲಿನ ಆಘಾತದೊಂದಿಗೆ ಪಂದ್ಯದ ಕೊನೆಯ ಕ್ಷಣದ ಆತಂಕ.. ಇಷ್ಟೆಲ್ಲಾ ನಡೆದಿರುವುದಕ್ಕೆ ಸಾಕ್ಷಿಯಾಗಿರುವ ಜಗತ್ತಿನ ಕೋಟ್ಯಾಂತರ ಕ್ರಿಕೆಟ್ ಅಭಿಮಾನಿಗಳು ಕಾತರದಿಂದ ಕಾಯುತ್ತಿರುವ ದಿನ ಬಂದಿದೆ. ಪ್ರತಿಷ್ಠಿತ ಟಿ20 ವಿಶ್ವಕಪ್ ಪಂದ್ಯಾವಳಿಯ ಅಂತಿಮ ಪಂದ್ಯ ಭಾನುವಾರ ನಡೆಯಲಿದೆ. ಹಾಲಿ ಚಾಂಪಿಯನ್ ಭಾರತ ಹಾಗೂ ಚೋಕರ್ಸ್ ಪಟ್ಟ ಹೊತ್ತಿಕೊಂಡಿರುವ ನ್ಯೂಜಿಲೆಂಡ್ ತಂಡಗಳು ಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ತೀವ್ರ ಹಣಾಹಣಿಯ ನಂತರ ಈ ಮಾದರಿಯ ಕ್ರಿಕೆಟ್‌ನ ಚಾಂಪಿಯನ್‌ಗಳು ಸಿಗಲಿದ್ದಾರೆ. ಕಿರೀಟ ಧರಿಸಿದವರೇ ಈ ಸರ್ತಿಯ ರಾಜ ಎನಿಸಿಕೊಳ್ಳಲಿದ್ದಾರೆ. ಲೀಗ್ ಹಂತದ ನಾಲ್ಕು, ಸೂಪರ್ 8ರಲ್ಲಿ ಮೂರು ಮತ್ತು ಸೆಮಿಫೈನಲ್ ಗೆಲುವಿನೊಂದಿಗೆ ಪಂದ್ಯಾವಳಿಯ ಎರಡು ಬೆಸ್ಟ್ ತಂಡಗಳು ನರೇಂದ್ರ ಮೋದಿ ಕ್ರೀಡಾಂಗಣಕ್ಕೆ ತಲುಪಿವೆ. ಅಭ್ಯಾಸಗಳನ್ನು ನಡೆಸುತ್ತಿವೆ, ಕೋಚ್‌ಗಳು ಪಿಚ್‌ಗೆ ಅಂಟಿಕೊಂಡು ಯೋಜನೆಗಳನ್ನು ರೂಪಿಸುತ್ತಿದ್ದರು. ಅಂಪೈಯರ್‌ಗಳು ಲೆಕ್ಕಾಚಾರ ಮಾಡಿಕೊಳ್ಳುತ್ತಿದ್ದರು. ಮೈದನಾದ ಹೊರಕ್ಕೆ ಅಭಿಮಾನಿಗಳ ದಂಡು, ತಮ್ಮ ತಂಡ ಬೆಂಬಲಿಸಲು ಕಾದು ನಿಂತಿದ್ದರು. ಮೈದಾನದ ತುಂಬಾ ಕ್ಯಾಮೆರಾಗಳು ಡ್ರಿಲ್ ಮಾಡುತ್ತಿದ್ದವು, ಜಾಹೀರಾತಿನ ಭರಾಟೆ ಜೋರಾಗಿಯೇ ಇತ್ತು. ಒಟ್ಟಿನಲ್ಲಿ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಟಿಪಿಕಲ್ ಫೈನಲ್ ಆಯೋಜಿತ ಕ್ರೀಡಾಂಗಣದಂತೆ ಕಾಣಿಸುತ್ತಿತ್ತು. ದೊಡ್ಡ ಹಣಾಹಣಿಗೆ ಅಣಿಯಾಗುತ್ತಿತ್ತು.

ಅಭ್ಯಾಸದಲ್ಲಿ ಮುಳುಗಿದ ಭಾರತ ತಂಡ

ಆಡುವರು ಹನ್ನೊಂದು ಜನರು. ಆದರೆ ಫೈನಲ್ ಪಂದ್ಯಕ್ಕೂ ಮುನ್ನ ನಡೆಯುತ್ತಿದ್ದ ಅಭ್ಯಾಸದಲ್ಲಿ ಭಾರತದ ಪ್ರತಿಯೊಬ್ಬರೂ ಅತ್ಯಂತ ಶ್ರದ್ಧೆಯಿಂದ ಮತ್ತು ನಿಷ್ಠೆಯಿಂದ ಅಭ್ಯಾಸ ಮಾಡುವುದು ಕಂಡುಬಂದಿತ್ತು. ವಿಶೇಷವಾಗಿ ಭಾರತಕ್ಕಾಗಿ ಪ್ರತಿಯೊಂದು ವಿಭಾಗಕ್ಕೂ ಕೋಚ್‌ಗಳಿದ್ದಾರೆ. ಅವರವರ ಕೆಲಸದಲ್ಲಿ ಅವರು ತೊಡಗಿದ್ದರು. ಶಿವಂ ದುಬೆ, ಸೂರ್ಯ, ಸಂಜು ಸ್ಯಾಮ್ಸನ್, ಹಾರ್ದಿಕ್ ಪಾಂಡ್ಯ ಸೇರಿದಂತೆ ವಿವಿಧ ಬ್ಯಾಟರ್‌ಗಳು ಪ್ಯಾಡಿನೊಂದಿಗೆ ಮೈದಾನದಲ್ಲಿ ಅಬ್ಬರಿಸಿದರು. ತಂಡದಲ್ಲಿ ಅವಕಾಶ ಪಡೆಯದ ರಿಂಕು ಸಿಂಗ್ ಮತ್ತು ವಾಷಿಂಗ್ಟನ್ ಸುಂದರ್ ಕೂಡ ಬ್ಯಾಟಿಂಗ್ ಮಾಡಿದರು. ಇಶಾನ್ ಕಿಶನ್ ಮತ್ತು ಅಭಿಷೇಕ್ ಶರ್ಮ ಫೈನಲಿಗಾಗಿ ಹೆಚ್ಚಿನ ಬೆವರು ಸುರಿಸುವುದು ಕಂಡುಬಂದಿತು. ಬೌಲರ್‌ಗಳೂ ಅದೇ ಹಂತದಲ್ಲಿ ಅಭ್ಯಾಸ ನಡೆಸುತ್ತಿದ್ದರು. ಮಾರ್ನೆ ಮಾರ್ಕಲ್ ತಮ್ಮ ವಿಭಿನ್ನ ಯೋಜನೆಗಳೊಂದಿಗೆ ಸಲಹೆಗಳನ್ನು ನೀಡುತ್ತಿದ್ದರು.

ಭಾರತಕ್ಕಿದು ನಾಲ್ಕನೇ ಫೈನಲ್

ಭಾರತ ನಾಲ್ಕನೇ ಬಾರಿ ಫೈನಲ್ ಆಡುತ್ತಿದೆ. ಮೂರನೇ ಟ್ರೋಫಿಗಾಗಿ ಕಾದಾಟ ನಡೆಸುತ್ತಿದೆ.



ದುಬಾರಿಯಾಗದಿರುವುದೇ ಸವಾಲು

ಇನ್ನೊಂದು ಬದಿಯಲ್ಲಿ ಭಾರತ ಉತ್ತಮ ಬೌಲಿಂಗ್ ಮಾಡಿದ್ದರೂ ವರುಣ್ ಚಕ್ರವರ್ತಿ ಸೇರಿದಂತೆ ಪ್ರಮುಖ ಬೌಲರ್‌ಗಳು ದಂಡಿಸಿಕೊಂಡಿದ್ದಾರೆ. ಜಸ್‌ಪ್ರೀತ್ ಬೂಮ್ರಾ ಹಾಗೂ ಹಾರ್ದಿಕ್ ಪಾಂಡ್ಯ ಮಾತ್ರ ದೊಡ್ಡ ಪರಿಣಾಮ ನೀಡುತ್ತಿದ್ದಾರೆ. ಅರ್ಶದೀಪ್ ಸಿಂಗ್ ವೈಡ್‌ಗಳಿಂದ ಹಿನ್ನಡೆ ಅನುಭವಿಸಿದ್ದಾರೆ. ಸ್ಪಿನ್ ವಿಭಾಗದಲ್ಲಿ ಅಕ್ಷರ್ ಪಟೇಲ್ ವಿಕೆಟ್ ಕಿತ್ತರೂ ಕಳೆದೆರಡು ಪಂದ್ಯಗಳಲ್ಲಿ ವರುಣ್ ಚಕ್ರವರ್ತಿ ದಂಡಿಸಿಕೊಂಡಿದ್ದಾರೆ. ಬೌಲಿಂಗ್‌ನಲ್ಲಿ ದುಬಾರಿಯಾಗದಿರುವುದೇ ಭಾರತಕ್ಕೆ ಸವಾಲಾದಂತಿದೆ.

ತಂಡಗಳು

ಭಾರತ: ಸಂಜು ಸ್ಯಾಮ್ಸನ್ (ಕೀಪರ್), ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮ, ಇಶಾನ್ ಕಿಶನ್, ತಿಲಕ್ ವರ್ಮ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ವರುಣ್ ಚಕ್ರವರ್ತಿ, ಜಸ್ಪ್ರೀತ್ ಬುಮ್ರಾ, ಮಹಮ್ಮದ್ ಸಿರಾಜ್, ರಿಂಕು ಸಿಂಗ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್.

ನ್ಯೂಜಿಲೆಂಡ್: ಟಿಮ್ ಸೀಫರ್ಟ್ (ಕೀಪರ್), ಮಿಚೆಲ್ ಸ್ಯಾಂಟ್ನರ್ (ನಾಯಕ), ಫಿನ್ ಅಲೆನ್, ರಚಿನ್ ರವೀಂದ್ರ, ಗ್ಲೆನ್ ಫಿಲಿಪ್ಸ್, ಮಾರ್ಕ್ ಚಾಪ್ಮನ್, ಡೇರಿಲ್ ಮಿಚೆಲ್, ಜೇಮ್ಸ್ ನೀಶಮ್, ಕೋಲ್ ಮೆಕಾಂಚಿ, ಮ್ಯಾಟ್ ಹೆನ್ರಿ, ಲಾಕಿ ಫರ್ಗುಸನ್, ಡೆವೊನ್ ಕಾನ್ವೇ, ಕೈಲ್ ಜೇಮಿಸನ್, ಇಶ್ ಸೋಧಿ, ಜಾಕೋಬ್ ಡಫಿ,

ಅಲ್ಲಿಂದ ಇಲ್ಲಿಯವರೆಗೆ ಭಾರತ	
ಎದುರಾಳಿ	ಫಲಿತಾಂಶ
ಅಮೆರಿಕ	29 ರನ್ ಜಯ
ನಮೀಬಿಯಾ	93 ರನ್ ಜಯ
ಪಾಕಿಸ್ತಾನ	61 ರನ್ ಜಯ
ನೆದರ್ಲೆಂಡ್	17 ರನ್ ಜಯ
ಸೂಪರ್-8 ಪಂದ್ಯಗಳಲ್ಲಿ	
ಎದುರಾಳಿ	ಫಲಿತಾಂಶ
ದ.ಆಫ್ರಿಕಾ	76 ರನ್ ಸೋಲು
ಜಿಂಬಾಬ್ವೆ	72 ರನ್ ಜಯ
ವಿಂಡೀಸ್	5 ವಿಕೆಟ್ ಜಯ
ಸೆಮಿಫೈನಲ್	
ಇಂಗ್ಲೆಂಡ್	7 ರನ್ ಜಯ

ಅಲ್ಲಿಂದ ಇಲ್ಲಿಯವರೆಗೂ ಕಿವೀಸ್	
ಎದುರಾಳಿ	ಫಲಿತಾಂಶ
ಅಫ್ಘಾನ್	5 ವಿಕೆಟ್ ಗೆಲುವು
ಯುಎಇ	10 ವಿಕೆಟ್ ಗೆಲುವು
ದ.ಆಫ್ರಿಕಾ	7 ರನ್ ಸೋಲು
ಕೆನಡಾ	8 ವಿಕೆಟ್ ಗೆಲುವು
ಸೂಪರ್-8	
ಎದುರಾಳಿ	ಫಲಿತಾಂಶ
ಪಾಕಿಸ್ತಾನ	ರದ್ದು
ಶ್ರೀಲಂಕಾ	61 ರನ್ ಗೆಲುವು
ಇಂಗ್ಲೆಂಡ್	4 ವಿಕೆಟ್ ಸೋಲು
ದ.ಆಫ್ರಿಕಾ	9 ವಿಕೆಟ್ ಗೆಲುವು

ಪಿಚ್ ವರದಿ

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಈ ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಉತ್ತಮ ಪ್ರದರ್ಶನ ನೀಡಿದ್ದಾರೆ. ಹೆಚ್ಚಿನ ಬೌನ್ಸ್ ಇರುವುದರಿಂದ ಬ್ಯಾಟರ್‌ಗಳಿಗೆ ಸಹಾಯಕವಾಗಲಿದೆ. ಸ್ಪಿನ್ ಬೌಲರ್‌ಗಳಿಗೆ ಅಲ್ಪ ಲಾಭ ನೀಡಲಿದೆ. ಮಳೆ ಸಾಧ್ಯತೆ ಕಮ್ಮಿ. ಹೆಚ್ಚಿನ ಪಂದ್ಯಗಳಲ್ಲಿ 190 ದಾಟಿದ್ದೇ ಉದಾಹರಣೆ ಇದೆ. ಟಾಸ್ ಗೆದ್ದ ತಂಡ ಬ್ಯಾಟಿಂಗ್ ಆಯ್ದುಕೊಳ್ಳಬಹುದು

ಪಂದ್ಯದ ವಿವರ

ಯಾವಾಗ: ಭಾನುವಾರ, **ಎಲ್ಲಿ:** ಅಹಮದಾಬಾದ್, **ಸಮಯ:** ಸಂಜೆ 7, **ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ನ್ಯೂಜಿಲೆಂಡ್ ಮೇಲೆ ಒತ್ತಡದ ಕಾವು

ಹತ್ತಾರು ವರ್ಷಗಳಿಂದ ವಿಶ್ವಕಪ್ ಅಂತಹ ದೊಡ್ಡ ಟೂರ್ನಿಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡುತ್ತಲೇ ಬಂದಿರುವ ನ್ಯೂಜಿಲೆಂಡ್ ಗಮನ ಸೆಳೆದೇ ಹೊರಹೋಗುತ್ತದೆ. ಆದರೆ ದುರಾದೃಷ್ಟವಷಾತ್ ಕಪ್ ಮಾತ್ರ ತೆಗೆದುಕೊಂಡು ಹೋಗಿಲ್ಲ. ಅದಕ್ಕಾಗಿ ಈ ತಂಡವನ್ನು ಚೋಕರ್ಸ್ ಅನ್ನುತ್ತಾರೆ. ಇದೇ ಮಾತು ಈಗ ನ್ಯೂಜಿಲೆಂಡ್ ತಂಡಕ್ಕೆ ಒಂದು ಕಡೆ ಸವಾಲಾಗಿ ಬರುತ್ತಿದ್ದರೆ ಒಂದು ಕಡೆ ಒತ್ತಡವಾಗಿ ಕಾಡುತ್ತಿದೆ. ಮೊದಲ ಪಂದ್ಯದಿಂದಲೂ ಉತ್ತಮ ಆರಂಭ ಪಡೆಯುತ್ತಿರುವ ಕಿವೀಸ್ ದೊಡ್ಡ ಸ್ಕೋರ್‌ಗಳನ್ನೇ ನಿರ್ಮಿಸುತ್ತಿದೆ. ಹಂಗೆ ಬೌಲಿಂಗ್‌ನಲ್ಲೂ ಸ್ಪಿನ್ ಹಾಗೂ ವೇಗದ ಸಂಯೋಜನೆಯೊಂದಿಗೆ ಎದುರಾಳಿಗಳನ್ನು ಕಾಡುತ್ತಿದೆ. ಕೊಂಚ ವಿಶ್ವಾಸ, ಕೊಂಚ ಪ್ರತಿರೋಧದೊಂದಿಗೆ ವಿಶ್ವಾಸ! ಸಜ್ಜಾಗಿ ನಿಂತಂತಿದೆ ಕಿವೀಸ್.

ಬ್ಯಾಟಿಂಗ್ ಬಲವೇ ಭಾರತದ ಶಕ್ತಿ

ವಿಶ್ವಕಪ್ ಪಂದ್ಯಾವಳಿಯ ಆರಂಭಿಕ ಪಂದ್ಯಗಳಲ್ಲಿ ವಿಫಲವಾಗಿದ್ದ ಬ್ಯಾಟಿಂಗ್ ಪಡೆ ಮತ್ತೆ ತನ್ನ ಲಯಕ್ಕೆ ಬಂದಿದೆ. ಕಳೆದ ಎರಡು ಪಂದ್ಯಗಳಲ್ಲಿ ವಿಂಡೀಸ್ ಹಾಗೂ ಇಂಗ್ಲೆಂಡ್ ಮೇಲೆ ದೊಡ್ಡ ಮೊತ್ತವನ್ನು ಗಳಿಸಿದೆ ಭಾರತ ಬ್ಯಾಟಿಂಗ್ ಪಡೆ. ಆರಂಭಿಕರಾದ ಅಭಿಷೇಕ್ ಶರ್ಮ ಅವರ ಕಳಪೆ ಪ್ರದರ್ಶನದ ಮಧ್ಯಯೂ, ಸಂಜು ಸ್ಯಾಮ್ಸನ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಆಸರೆಯಾಗಿದ್ದಾರೆ. ಕಳೆದ ಎರಡೂ ಪಂದ್ಯಗಳಲ್ಲಿ ಅವರೇ ಪಂದ್ಯಶ್ರೇಷ್ಠ ಆಟಗಾರ. ಇನ್ನು ಮೂರನೇ ಕ್ರಮಾಂಕದಲ್ಲಿ ಇಶಾನ್ ಕಿಶನ್ ಕೂಡ ಅಷ್ಟೇ ಪರಿಣಾಮಕಾರಿ ಆಟವಾಡುತ್ತಿದ್ದಾರೆ. ಇನ್ನು ಮಧ್ಯಮ ಕ್ರಮಾಂಕದಲ್ಲಿ ಶಿವಂ ದುಬೆ ದೊಡ್ಡ ಬಲವನ್ನೇ ನೀಡುತ್ತಿದ್ದಾರೆ. ಸೂರ್ಯ ಸ್ವಲ್ಪ ಹಿನ್ನಡೆ ಅನುಭವಿಸಿದರೂ ಹಾರ್ದಿಕ್ ಪಾಂಡ್ಯ, ತಿಲಕ್ ವರ್ಮಾ ಸಿಕ್ಕ ಅವಕಾಶದಲ್ಲಿ ದೊಡ್ಡ ಪರಿಣಾಮ ಬೀರಿಸುತ್ತಿದ್ದಾರೆ. ಭಾರತಕ್ಕೆ ಬ್ಯಾಟಿಂಗ್ ಚಿಂತೆಯೇ ಇಲ್ಲ.

ಡಬಲ್ಸ್ ಫೈನಲ್‌ನಲ್ಲಿ ಭಾರತೀಯ ಜೋಡಿ ಕಮಾಲ್

ವೈಷ್ಣವಿ-ಅಂಕಿತಾ ಚಾಂಪಿಯನ್ಸ್!

▸ ರಾಚಪ್ಪಾ ಜಂಬಗಿ

• **ಕಲಬುರಗಿ:** ಕಳೆದ ಮೂರನಾಲ್ಕು ದಿನಗಳಿಂದ ಟೆನಿಸ್ ಕ್ರೀಡಾಂಗಣದಲ್ಲಿ ಬಲವಾದ ಪ್ರದರ್ಶನ ನೀಡಿರುವ ವೈಷ್ಣವಿ ಅಡ್ಕರ್ ಹಾಗೂ 8ನೇ ಶ್ರೇಯಾಂಕಿತ ಅಂಕಿತಾ ರೈನಾ ಜೋಡಿಯು ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಪಂದ್ಯದ ಚಾಂಪಿಯನ್ ಪಟ್ಟ ಗೆದ್ದು ಬೀಗಿದೆ.

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲಾನ್ ಟೆನಿಸ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಟಿಎಫ್ ಡಬ್ಲ್ಯು 35 ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಫೈನಲ್ ಪಂದ್ಯದಲ್ಲಿ ಎದುರಾಳಿ ಭಾರತೀಯ ಆಕಾಂಕ್ಷಾ ದಿಲೀಪ್ ನಿಟ್ಟೂರೆ, ಸೋಹಾ ಸಾಧಿಕ್ ಜೋಡಿಯನ್ನು 6-2,6-2 ಅಂತರದಲ್ಲಿ ಮಣಿಸಿ ಮಹಿಳಾ ಡಬಲ್ಸ್ ವಿಭಾಗದ ಚಾಂಪಿಯನ್ ಆಗಿ ಹೊರಹೊಮ್ಮಿತು.

ಪಂದ್ಯದ ಆರಂಭದಲ್ಲೇ ಎರಡೂ ಜೋಡಿಗಳು ತಮ್ಮ ಸರ್ವಿಸ್ ಗೇಮ್‌ಗಳನ್ನು ಉಳಿಸಿಕೊಂಡರೂ, ಬಳಿಕ ನೆಟ್ ಬಳಿ ಅಡ್ಕರ್ ಚುರುಕು ಆಟ ಹಾಗೂ ರೈನಾ ಅವರ ನಿಖರ ಶಾಟ್‌ಗಳ ನೆರವಿನಿಂದ ಎದುರಾಳಿಗಳ ಸರ್ವಿಸ್‌ನ್ನು ಬ್ರೇಕ್ ಮಾಡಿದ ಅಡ್ಕರ್- ರೈನಾ ಜೋಡಿ ಮೊದಲ ಸೆಟ್ ಅನ್ನು 6-2 ಅಂತರದಲ್ಲಿ ಗೆದ್ದು ಮುನ್ನಡೆ ಪಡೆದುಕೊಂಡಿತು. ಮುಂದಿನ ಸೆಟ್‌ಗಳಲ್ಲಿ ಕೂಡ ಗೆಲುವಿನಾಟ ಆಡಿದ ಈ ಜೋಡಿ ಮುನ್ನಡೆ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಯಿತು. ಕೊನೆಯಲ್ಲಿ ನೆಟ್ ಬಳಿ ಅಡ್ಕರ್ ಹೊಡೆದ ಅದ್ಭುತ ಬ್ಯಾಕ್ ಹ್ಯಾಂಡ್ ಶಾಟ್ ಕಿರೀಟವನ್ನು ಖಚಿತಪಡಿಸಿತು.



'ನಮಸ್ಕಾರ ಕಲಬುರಗಿ' ಇಲ್ಲಿ ನಾನು ಎರಡನೇ ಬಾರಿಗೆ ಐಟಿಎಫ್ ಪಂದ್ಯ ಆಡುತ್ತಿದ್ದೇನೆ. ಇಲ್ಲಿಯ ಬಿಸಿಲಿನ ಜೊತೆಗೆ ಅಭಿಮಾನಿಗಳ ಬೆಂಬಲ ಕೂಡ ಚೆನ್ನಾಗಿದೆ. ಫೈನಲ್‌ನಲ್ಲಿ ಆಕಾಂಕ್ಷಾ, ಸಾಧಿಕ್ ಜೋಡಿ ಕೂಡ ಚೆಂದದ ಆಟವಾಡಿದೆ. ಕೆ.ಎಸ್.ಎಲ್.ಟಿ ಹಾಗೂ ಕಲಬುರಗಿ ಮಂದಿಗೆ ತುಂಬಾ ಥ್ಯಾಂಕ್ಸ್.

■ ಅಂಕಿತಾ ರೈನಾ, ಟೆನಿಸ್ ಆಟಗಾರ್ತಿ

ಸಿಂಗಲ್ಸ್‌ನಲ್ಲೂ ಇವರದ್ದೇ ದರ್ಬಾರ್!

ಕೂಟದಲ್ಲಿ ಹೆಡ್‌ಲೈನ್ ಆಗಿ ಮೆರೆಯುತ್ತಿರುವ ಈ ಇಬ್ಬರ ಆಟ ಬರೀ ಡಬಲ್ಸ್‌ಗೆ ಮಾತ್ರ ಸಿಮೀತವಾಗಿರಲೇ ಇಲ್ಲ. ಪರಾಕ್ರಮ ಮೆರೆದು ಉಪಾಂತ್ಯಕ್ಕೆ ತಲುಪಿದ್ದ ಈ ಇಬ್ಬರೂ ವೈಯಕ್ತಿಕ ಆಟಗಳಲ್ಲೂ ಅಷ್ಟೇ ಚೆಂದವಾಗಿ ಆಡಿದರು. ಸಿಂಗಲ್ಸ್ ಸೆಮಿಫೈನಲ್ ಪಂದ್ಯಗಳಲ್ಲಿ ವೈಷ್ಣವಿ ಹಾಗೂ ಅಂಕಿತಾ ಕ್ರಮವಾಗಿ ನೆದರ್ಲ್ಯಾಂಡ್ಸ್ ಅಗ್ರ ಆಟಗಾರ್ತಿ ಜಾಸ್ಮಿನ್ ಗಿಂಬ್ರೇರ್ ಹಾಗೂ ಥೈಲ್ಯಾಂಡಿನ ಥಾಸ್ಪಾರ್ನ್ ವಿರುದ್ಧ ಗೆದ್ದು, ಮುಂದಿನ ಹಂತವಾದ ಸಿಂಗಲ್ಸ್ ಫೈನಲ್ ಪ್ರವೇಶ ಪಡೆದರು. ಜೋಡಿ ಚಾಂಪಿಯನ್ ಈಗ ಎದುರಾಗಲಿರುವುದೇ ವಿಶೇಷ. ಜಾಸ್ಮಿನ್ ಗಿಂಬ್ರೇರ್ ಮಾಡಿದ ಕೆಲ ಅನಗತ್ಯ ದೋಷ ಪ್ರಯೋಜನಪಡಿಸಿಕೊಂಡ ವೈಷ್ಣವಿ ಅಡ್ಕರ್, ಅಂತಿಮವಾಗಿ 6-3, 6-2 ಅಂತರಗಳಿಂದ ನೆದರ್ಲ್ಯಾಂಡ್ಸ್ ಅಗ್ರ ಆಟಗಾರ್ತಿಗೆ ಸೋಲಿಸಿದರು. 8ನೇ ಶ್ರೇಯಾಂಕದ ಅಂಕಿತಾ ರೈನಾ, ಥೈಲ್ಯಾಂಡಿನ ಅನುಭವಿ ಆಟಗಾರ್ತಿ, ಟೂರ್ನಿಯಲ್ಲಿ ಅದ್ಭುತ ಪ್ರದರ್ಶನ ತೋರಿದ ಥಾಸಪಾರ್ನ್ ನಾಕ್ಲೋ ವಿರುದ್ಧ ಬಲಿಷ್ಠ ಹೋರಾಟ ಮತ್ತು ದೃಢ ಮನೋಬಲ ಪ್ರದರ್ಶಿಸಿ ಫೈನಲ್‌ಗೆ ಪ್ರವೇಶ ಪಡೆದರು. ಮೊದಲ ಸೆಟ್ 4-6ನಲ್ಲಿ ಸೋತು ನಿರಾಶೆಗೊಂಡರೂ ಆತ್ಮವಿಶ್ವಾಸ ಮಾತ್ರ ಕಳೆದುಕೊಳ್ಳದೇ ಕೋರ್ಟ್ ಮೇಲಿನ ನಿರ್ಧಾರಾತ್ಮಕ ಆಟದೊಂದಿಗೆ ಮುಂದಿನ ಸೆಟ್‌ಗಳನ್ನು 6-4,6-2 ಅಂತರದಲ್ಲಿ ಗೆದ್ದು ಸಿಂಗಲ್ಸ್ ಫೈನಲ್‌ಗೇರಿದರು.

ಶೀಘ್ರವೇ ತವರಿಗೆ ಕ್ರಿಕೆಟಿಗರು

• **ಮುಂಬೈ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ವಾಣಿಜ್ಯ ವಿಮಾನ ಹಾರಾಟಕ್ಕೆ ನಿರ್ಬಂಧಿಸಿರುವ ನಿಟ್ಟಿನಲ್ಲಿ ವೆಸ್ಟ್ ಇಂಡೀಸ್, ದ.ಆಫ್ರಿಕಾ ಮತ್ತು ಇಂಗ್ಲೆಂಡ್ ಆಟಗಾರರು ಭಾರತದಲ್ಲೇ ಉಳಿದಿದ್ದು, ವಾರಾಂತ್ಯದಲ್ಲಿ ವಿಶೇಷ ವಿಮಾನಗಳ ಮೂಲಕ ಕಳಿಸಿಕೊಡುವ ಯೋಜನೆ ಬಿಸಿಸಿಐ ಹಾಕಿಕೊಂಡಿದೆ. ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಸೋತು ಹೊರಬಿದ್ದಿರುವ ಮೂರೂ ತಂಡದ ಆಟಗಾರರು ಪಂದ್ಯಾವಳಿಯಿಂದ ಹೊರಬಿದ್ದರೂ ಇಲ್ಲೇ ಉಳಿಯಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಗಲ್ಫ್ ಪ್ರದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಐಸಿಸಿ ಉಳಿದ ಆಟಗಾರರನ್ನು ಚಾರ್ಟರ್ ವಿಮಾನದ ಮೂಲಕ ತಲುಪಿಸುವ ಭರವಸೆ ಮೂಡಿಸಿದೆ. ಸುರಕ್ಷತೆಯ ಖಚಿತತೆ ನೀಡಿದೆ.

ಚಾರ್ಟರ್ ವಿಮಾನದಲ್ಲಿ ಪ್ರಯಾಣ: ವರದಿಗಳ ಪ್ರಕಾರ ಬಿಸಿಸಿಐ ಖಾಸಗಿ ಜೆಟ್‌ಗಳ ಮೂಲಕ ಆಟಗಾರರನ್ನು ಕಳಿಸಿಕೊಡುವ ಯೋಜನೆ ಹಾಕಿಕೊಂಡಿದೆ. ಇಂಗ್ಲೆಂಡ್ ತಂಡದ ಆಟಗಾರರು ಭಾನುವಾರದಂದು ಲಂಡನ್‌ಗೆ ನೇರ ವಿಮಾನದ ಮೂಲಕ ಹೋಗಲಿದ್ದಾರೆ. ಆದರೆ ವಿಂಡೀಸ್ ಮತ್ತು ದ.ಆಫ್ರಿಕಾ ತಂಡಗಳ ಆಟಗಾರರು ಇನ್ನೊಂದು ಚಾರ್ಟರ್ ವಿಮಾನದ ಮೂಲಕ ಜೋಹಾನ್ಸ್‌ಬರ್ಗ್‌ಗೆ ತಲುಪಲಿದ್ದಾರೆ. ನಂತರ ಸ್ವದೇಶಕ್ಕೆ ಹೋಗಲಿದ್ದಾರೆ ಎನ್ನಲಾಗಿದೆ.

» ಇಂದು ಇಂಗ್ಲೆಂಡ್ ತಂಡ ಸ್ವದೇಶಕ್ಕೆ ಸಾಧ್ಯತೆ
» ಮರಳಲು ವಿಂಡೀಸ್ ಕೋಚ್ ಸ್ಯಾಮಿ ಚಡಪಡಿಕೆ

ಡೆರೇನ್ ಸ್ಯಾಮಿಗೆ 5 ಸ್ಟಾರ್ ಹೋಟೆಲ್‌ನಲ್ಲಿರಲು ಕಷ್ಟವೇ?

ಯುದ್ಧ ದಿನದಿನಕ್ಕೂ ಭೀಕರ ರೂಪ ಪಡೆದುಕೊಳ್ಳುತ್ತಿದೆ. ಸಾವಿರಾರು ಜನರು ಜೀವ ಕಳೆದುಕೊಳ್ಳುತ್ತಿದ್ದಾರೆ. ಆದರೆ ವೆಸ್ಟ್ ಇಂಡೀಸ್ ತಂಡದ ಪ್ರಧಾನ ತರಬೇತುದಾರ ಡೆರೇನ್ ಸ್ಯಾಮಿ ಅವರಿಗೆ ಮಾತ್ರ 5 ಸ್ಟಾರ್ ಹೋಟೆಲ್‌ನಲ್ಲಿ ಉಳಿದುಕೊಳ್ಳಲು ಕಷ್ಟವಾಗುತ್ತಿದೆಯಂತೆ. ಕಳೆದ ಭಾನುವಾರ ನಡೆದಿದ್ದ ಭಾರತದ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಹೊರಬಿದ್ದಿದ್ದ ವಿಂಡೀಸ್ ಮುಂಬೈನ 5 ಸ್ಟಾರ್ ಹೋಟೆಲ್ ಒಂದರಲ್ಲಿದೆ. ಈ ಮಧ್ಯೆ, ಪರಿಸ್ಥಿತಿ ಬಗ್ಗೆ ಅರಿವಿದ್ದರೂ ಸ್ಯಾಮಿ, ಬಿಸಿಸಿಐ ಅವರಿಗೆ ಬಲವಂತವಾಗಿ ಭಾರತದಲ್ಲಿ ಉಳಿಸಿಕೊಂಡಿರುವಂತೆ ಆಡುತ್ತಿದ್ದಾರೆ. ಟ್ವಿಟ್ಟರ್‌ನಲ್ಲಿ ನನಗೆ ಮನೆಗೆ ಹೋಗುವುದಿದೆ ಎಂದು ಪೋಸ್ಟ್ ಮಾಡಿದ್ದರು. ಶನಿವಾರದಂದು ಆರನೇ ದಿನ ಇಲ್ಲೇ ಉಳಿದಿದ್ದೇವೆ ಎಂದು ಬರೆದುಕೊಂಡಿದ್ದಾರೆ. ಅಷ್ಟೇ ಅಲ್ಲದೆ, ಆಫ್ರಿಕಾದ ಗಿಬ್ಸ್ 7ನೇ ದಿನ ವಿರಾಮ ಸಿಗಬಹುದೇ ಎಂದು ಟ್ವಿಟ್ ಮಾಡಿದ್ದು, ಅದಕ್ಕೆ ಉತ್ತರಿಸಿರುವ ಸ್ಯಾಮಿ, ಆ ದಿನಗಳು ಬೇಗನೇ ಬರಬೇಕೆಂದು ಪ್ರತಿಕ್ರಿಯಿಸಿದ್ದಾರೆ. ಇದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದ್ದು, ಸ್ಯಾಮಿಗೆ 5 ಸ್ಟಾರ್ ಹೋಟೆಲ್‌ನಲ್ಲಿ ಉಳಿಯುವುದು ಕಷ್ಟದ ಕೆಲಸವೇ ಎಂದು ಪ್ರಶ್ನಿಸಿದ್ದಾರೆ.

ಪ್ರಾಗ್ ಚೆಸ್: ಅರವಿಂದ್‌ಗೆ ಎರಡನೇ ಸ್ಥಾನ

• **ಹೊಸದಿಲ್ಲಿ:** ಪ್ರಾಗ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಚೆಸ್ ಉತ್ಸವದ ಮಾಸ್ಟರ್ಸ್ ವಿಭಾಗದಲ್ಲಿ ಭಾರತೀಯ ಗ್ರ್ಯಾಂಡ್ ಮಾಸ್ಟರ್ ಅರವಿಂದ್ ಚಿತಂಬರಂ ಚೆಕ್ ಗಣರಾಜ್ಯದ ಡೇವಿಡ್ ನವಾರಾ ಅವರನ್ನು ಸೋಲಿಸಿ ಐದು ಅಂಕಗಳೊಂದಿಗೆ ಕೂಟದಲ್ಲಿ ಸಂಯುಕ್ತ ದ್ವಿತೀಯ ಸ್ಥಾನ ಪಡೆದರು. ಇರಾನ್‌ನ ವಿಶ್ವ ಚಾಂಪಿಯನ್ ಡಿ. ಗುಕೇಶ್ ಕೊನೆಯ ಸುತ್ತಿನಲ್ಲಿ ಸ್ಪೇನ್‌ನ ಡೇವಿಡ್ ಆಂಟನ್ ಗುಯಿಜಾರೊ ಅವರನ್ನು ಸೋಲಿಸಿ ತಮ್ಮ ನಿರ್ಜಯ ಸರಣಿಗೆ ತೆರೆ ಎಳೆದರು. ಉಜ್ಬೆಕಿಸ್ತಾನದ ನೋದಿರ್ಬೆಕ್ ಅಬ್ದುಸತ್ತೋರೋವ್ ಟೂರ್ನಿ ಗೆದ್ದರು. ಚಾಲೆಂಜರ್ಸ್ ವಿಭಾಗದಲ್ಲಿ ಭಾರತದ ದಿವ್ಯಾ ದೇಶಮುಖ್ ಚೆಕ್ ಗಣರಾಜ್ಯದ ಸ್ಟೆಪಾನ್ ಹ್ರೆಕ್ ಅವರನ್ನು ಸೋಲಿಸಿ ಮೂರನೇ ಸ್ಥಾನ ಪಡೆದರು

ವೀಲ್‌ಚೇರ್ ಟೆನಿಸ್: ಭಾರತಕ್ಕೆ ಕಂಚು

• **ಕೊಲಂಬೋ:** ಕೊಲಂಬೊದಲ್ಲಿ ನಡೆದ ಬಿಎನ್‌ಪಿ ಪರಿಬಾ ವೀಲ್‌ಚೇರ್ ವಿಶ್ವ ತಂಡ ಕಪ್ ಏಷ್ಯಾ ಅರ್ಹತಾ ಸ್ಪರ್ಧೆಯಲ್ಲಿ ಭಾರತೀಯ ಪುರುಷರ ತಂಡ ಐತಿಹಾಸಿಕ ಕಂಚಿನ ಪದಕ ಗೆದ್ದಿದೆ. ತೈವಾನ್ ವಿರುದ್ಧ ನಡೆದ ಪಂದ್ಯದಲ್ಲಿ ಭಾರತ 3-0 ಅಂತರದಲ್ಲಿ ಜಯ ಸಾಧಿಸಿ ಈ ಸಾಧನೆ ಮಾಡಿತು. ಮಾರ್ಚ್ ಎರಡರಿಂದ ಆರರವರೆಗೆ ನಡೆದ ಈ ಸ್ಪರ್ಧೆಯನ್ನು ಅಂತರರಾಷ್ಟ್ರೀಯ ಟೆನ್ನಿಸ್ ಮಹಾಸಂಸ್ಥೆ ಆಯೋಜಿಸಿತ್ತು. ಈ ಟೂರ್ನಿಯನ್ನು ವೀಲ್‌ಚೇರ್ ಟೆನ್ನಿಸ್‌ನ ಡೆವಿಸ್ ಕಪ್ ಎಂದು ಕರೆಯಲಾಗುತ್ತದೆ.




ಪಾಕ್ ವಿರುದ್ಧ ಜಯ: ಭಾರತೀಯ ತಂಡದಲ್ಲಿ ಕರ್ನಾಟಕದ ಶೇಖರ್ ವೀರಸ್ವಾಮಿ ಮತ್ತು ಬಸವರಾಜ ಕುಂದರ್ಗಿ ಜೊತೆಗೆ ತಮಿಳುನಾಡಿನ ಕಾರ್ತಿಕ್ ಕರುಣಾಕರಣ ಇದ್ದರು. ಆರಂಭಿಕ ಪಂದ್ಯದಲ್ಲಿ ಭಾರತ ಕೊರಿಯಾ ಗಣರಾಜ್ಯ ವಿರುದ್ಧ 0-3 ಅಂತರದಲ್ಲಿ ಸೋತಿತು. ನಂತರ ಆತಿಥೇಯ ಶ್ರೀಲಂಕಾ ವಿರುದ್ಧವೂ ತಂಡಕ್ಕೆ 0-3 ಸೋಲು ಎದುರಾಯಿತು. ಆದರೆ ಮೂರನೇ ಪಂದ್ಯದಲ್ಲಿ ಭಾರತ ಭರ್ಜರಿ ಪುನರಾಗಮನ ಮಾಡಿತು. ಪಾಕಿಸ್ತಾನ ವಿರುದ್ಧ ನಡೆದ ಪಂದ್ಯದಲ್ಲಿ ಕಾರ್ತಿಕ್ ಕರುಣಾಕರಣ ಮತ್ತು ಶೇಖರ್ ವೀರಸ್ವಾಮಿ ಸಿಂಗಲ್ಸ್ ಪಂದ್ಯಗಳಲ್ಲಿ ಸುಲಭವಾಗಿ ಗೆದ್ದು ಭಾರತಕ್ಕೆ ಮುನ್ನಡೆ ತಂದರು. ನಂತರ ಡಬಲ್ಸ್ ಪಂದ್ಯದಲ್ಲೂ ಭಾರತೀಯ ಜೋಡಿ 6-0, 6-0 ಅಂತರದಲ್ಲಿ ಗೆದ್ದಿತು.

ನಿರ್ಣಾಯಕ ಪಂದ್ಯದಲ್ಲಿ ಮಿಂಚಿನಾಟ: ಕಂಚಿನ ಪದಕಕ್ಕಾಗಿ ನಡೆದ ನಿರ್ಣಾಯಕ ಪಂದ್ಯದಲ್ಲಿ ಭಾರತ ತೈವಾನ್ ವಿರುದ್ಧ ಮತ್ತೊಮ್ಮೆ ಪ್ರಭಾವಿ ಪ್ರದರ್ಶನ ನೀಡಿತು. ಕಾರ್ತಿಕ್ ಕರುಣಾಕರಣ ಟಾಂಗ್ ಚಾವ್ ಹಾನ್ ಅವರನ್ನು 6-1, ಅಂತರದಲ್ಲಿ ಸೋಲಿಸಿದರು. ಶೇಖರ್ ವೀರಸ್ವಾಮಿ ವಾಂಗ್ ವೆಯ್ ಹುವಾನ್ ವಿರುದ್ಧ 6-2, ಅಂತರದಲ್ಲಿ ಜಯ ಸಾಧಿಸಿದರು. ನಂತರ ಡಬಲ್ಸ್ ಪಂದ್ಯದಲ್ಲೂ ಭಾರತೀಯ ಜೋಡಿ 6-1, 6-0 ಅಂತರದಲ್ಲಿ ಗೆದ್ದು ಭಾರತಕ್ಕೆ ಕಂಚಿನ ಪದಕವನ್ನು ಖಚಿತಪಡಿಸಿತು. ಮುಂದಿನ ಅವಧಿಯಲ್ಲಿ ಭಾರತೀಯ ವೀಲ್‌ಚೇರ್ ಟೆನ್ನಿಸ್ ಆಟಗಾರರು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಮುಂದಿನ ವಿಶ್ವ ತಂಡ ಕಪ್ ಅರ್ಹತಾ ಚಕ್ರಕ್ಕೆ ಸಿದ್ಧತೆ ನಡೆಸಲಿದ್ದಾರೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5917

ಎಡದಿಂದ ಬಲಕ್ಕೆ

1.ವಸು ಒಳಗೊಂಡ ಸಂಪೂರ್ಣವಾಗಿ ತಿಳಿಹೇಳುವಿಕೆ (4)
3.ಉಪವಾಸ ಬಿಟ್ಟ ನಂತರ ಮಾಡಿದ ಭಾಷಣ (4)
5.ಬಿಸಿ ಕಡೆಯಲ್ಲಿಟ್ಟುಕೊಂಡ ಶೌರ್ಯ (3)
6.ರಾಜಿ ಮಾಡಿಕೊಳ್ಳದೆ ಸೋಲು (4)
8.ಆಂಜನೇಯನ ಒಂದು ಹೆಸರು (4)
10.ವಿಪರೀತವಾಗಿ ವರ್ತಿಸು (4)
12.ವ್ಯವಸ್ಥಿತವಾಗಿರುವಂಥಾದ್ದು ತಿರುಗಿದೆ (4)
14.ವೇತನವು ಕಡೆಯಲ್ಲಿ ದೀರ್ಘವಾಗಿದೆ (3)
15.ಕಲಾಪತ್ತಿನ ಅಂಚುಳ್ಳ ರುಮಾಲು (4)
16.ಪರ್ಣದ ನಡುವೆ ಸಮಗ್ರವಾದುದಿದೆ (4)

ಮೇಲಿನಿಂದ ಕೆಳಕ್ಕೆ

1.ಕೃಷ್ಣನ ವಿರಾಟ ದರ್ಶನ (4)
2.ಸುತನು ಈ ನಡುವೆ ಹೇಳಿದ ಗುಡ್-ಮಾರ್ನಿಂಗ್ (4)
3.ದೊಡ್ಡ ಆಕಾಶಕಾಯದ ಸುತ್ತ ಸುತ್ತುತ್ತಿರುವುದು (4)
4.ಒಮ್ಮತ-ಏಕಾಭಿಪ್ರಾಯ (4)
7.ಸೀತೆ ಹೀಗೆ ದಶರಥ ಪುತ್ರನ ಹೆಂಡತಿಯಾಗಿ (4)
9.ಮೆಲುವಾಗಿ ಬೀರಿದ ನಗೆ (4)
10.ಆಡಿನ ನಡುವೆ ಅಣ್ಣನಿದ್ದಾನೆ (3)
11.ಪಟ ಕಡೆಯಲ್ಲಿರುವ ಮೋಸದಿಂದ ಕೂಡಿದ್ದು (3)
12.ಅಗಲವಾದ ತಟ್ಟೆ ತಲೆಕೆಳಗಾಗಿದೆ (3)
13.ಒಳ್ಳೆಯ ಬಣ್ಣವುಳ್ಳ ಬಂಗಾರ (3)

5916 ಉತ್ತರ

ಎಡದಿಂದ ಬಲಕ್ಕೆ:
2.ಮೆಲ್ಲುಸಿರು 4.ಹರ
5.ಚತುರ 6.ತರುಣಾತಪ
9.ಕಿರುಗೆಜ್ಜೆ
10.ದೇವದಾಸ
13.ರಸಾನುಭವ
15.ಜಹಜು 17.ಸ್ವರ
18.ಕಾಸದಾರ

ಮೇಲಿನಿಂದ ಕೆಳಕ್ಕೆ :
1.ಮಂಚ 2.ಮೆರವಣಿಗೆ
3.ಸಿರಿತನ 4.ಹರಿತ
7.ಪರಿಸರ 8.ಬಾಕಿದಾರ
11.ವಜ್ರಪಂಜರ
12.ನವರಸ 14.ಸಾಕಾರ
16.ಜುಟ್ಟು

25ರ ಸಂಭ್ರಮದಲ್ಲಿ ಮಗ್ಗಿಪುಸ್ತಕದ ಲೆಕ್ಕಾಚಾರ



ಹರಿವರಾಸನಂ ಅವರ ನಿರ್ದೇಶನದ ಪ್ರಥಮ ಚಿತ್ರ ಮಗ್ಗಿ ಪುಸ್ತಕ. ಇದೀಗ 25 ದಿನಗಳನ್ನು ಯಶಸ್ವಿಯಾಗಿ ಪೂರೈಸಿದೆ. ವಿಶೇಷವಾಗಿ ಈ ಚಿತ್ರವನ್ನು ಮಹಿಳಾ ಪ್ರೇಕ್ಷಕರೇ ಹೆಚ್ಚಾಗಿ ಬಂದು ವೀಕ್ಷಿಸುತ್ತಿದ್ದು ಹತ್ತಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ 25 ದಿನಗಳನ್ನು ಪೂರೈಸಿದೆ. ಬೆಂಗಳೂರು, ಮೈಸೂರು ಅಲ್ಲದೆ ಶಿವಮೊಗ್ಗ ಭಾಗದಲ್ಲಿ ಮಗ್ಗಿಪುಸ್ತಕ ಚಿತ್ರವು ಹೆಚ್ಚು ಕಲೆಕ್ಷನ್ ಮಾಡುತ್ತಿದೆ. ಜತೆಗೆ ರಾಜ್ಯಾದ್ಯಂತ ಶಾಲಾ ವಿದ್ಯಾರ್ಥಿಗಳು ಕೂಡ ಈ ಚಿತ್ರವನ್ನು ವೀಕ್ಷಿಸಿ ಮೆಚ್ಚಿಕೊಂಡಿದ್ದಾರೆ.

ಶುಕ್ರವಾರದಿಂದ ಉತ್ತರ ಕರ್ನಾಟಕ ಭಾಗದಲ್ಲಿ 25ಕ್ಕೂ ಹೆಚ್ಚು ಥೇಟರುಗಳಲ್ಲಿ ಮಗ್ಗಿ ಪುಸ್ತಕ ಚಿತ್ರವನ್ನು ರಿಲೀಸ್ ಮಾಡಲಾಗಿದೆ. ಹರಿವರಾಸನಂ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಮಗ್ಗಿಪುಸ್ತಕ ಚಿತ್ರವು ಕಳೆದ ತಿಂಗಳು ರಿಲೀಸಾಗಿದ್ದ ರಾಜ್ಯಾದ್ಯಂತ ಯಶಸ್ವಿ ಪ್ರದರ್ಶನ ಕಾಣುತ್ತಿದೆ, ಈ ಚಿತ್ರವೀಗ 25 ದಿನಗಳ ಸಂಭ್ರಮದಲ್ಲಿದೆ.

ಚಿನ್ನಸ್ವಾಮಿ ಫಿಲಂಸ್ ಬ್ಯಾನರ್ ಅಡಿ ಎತಿರಾಜ್ ಸ್ನೇಹಿತರ ಜತೆಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಜತೆಗೆ ನಿರ್ದೇಶಕರೂ ಕೈಜೋಡಿಸಿದ್ದಾರೆ. ಮಗ್ಗಿ ಪುಸ್ತಕ ಬದುಕಿನ ಲೆಕ್ಕಾಚಾರ, ನಮ್ಮ ಜೀವನವೇ ಒಂದು ಮಗ್ಗಿಪುಸ್ತಕ ಇದ್ದಂತೆ, ಇದರಲ್ಲಿ ಒಳ್ಳೆಯದನ್ನು ಕೂಡಬೇಕು, ಕೆಟ್ಟದ್ದನ್ನು ಕಳೆಯಬೇಕು,ಜ್ಞಾನವನ್ನು ಗುಣಿಸಬೇಕು, ಅಜ್ಞಾನವನ್ನು ಭಾಗಿಸಬೇಕು. ಅವನಿ ಎಂಬ ಕಾದಂಬರಿಯನ್ನು ಆಧರಿಸಿ ಮಾಡಿದ ಈ ಚಿತ್ರವು ನಾಲ್ಕು ಆಯಾಮಗಳಲ್ಲಿ ನಡೆಯುವ ಹೈಪರ್‌ಲಿಂಕ್ ಸ್ಟೋರಿ ಆಗಿದೆ, ಜೀವನದ ಲೆಕ್ಕಾಚಾರ ಇದರಲ್ಲಿದೆ.



ಬೆಂಗಳೂರು, ಮೈಸೂರು, ಮಂಗಳೂರು, ನಂಜನಗೂಡು, ಶ್ರೀರಂಗಪಟ್ಟಣ, ಹೆಚ್.ಡಿ. ಕೋಟೆ ಸುತ್ತಮುತ್ತಲ ಪ್ರದೇಶಗಳಲ್ಲಿ ಸುಮಾರು 80ಕ್ಕೂ ಹೆಚ್ಚು ದಿನಗಳ ಕಾಲ ಚಿತ್ರದ ಚಿತ್ರೀಕರಣ ನಡೆಸಲಾಗಿದೆ, ಮಗ್ಗಿಪುಸ್ತಕ ಚಿತ್ರದಲ್ಲಿ ಒಟ್ಟಿ 7 ಹಾಡುಗಳಿದ್ದು ಎಸ್.ಎಸ್. ನಾಚಪ್ಪ ಅವರ ಸಂಗೀತ ಸಂಯೋಜನೆಯಿದೆ. ಡಾ. ವಿಷ್ಣುವರ್ಧನ್ ಅಭಿನಯದ ಅಪ್ಪಾಜಿ, ಜಮೀನ್ದಾರ್ರು ಚಿತ್ರಗಳಿಗೆ ಸಂಗೀತ ನೀಡಿದ್ದ ಎಂ.ಎಂ. ಕೀರವಾಣಿ ಅವರು ಬಹಳ ದಿನಗಳ ನಂತರ ಮಗ್ಗಿ ಪುಸ್ತಕ ಚಿತ್ರದ ಹಾಡೊಂದಕ್ಕೆ ದನಿಯಾಗಿರುವುದು ವಿಶೇಷ. ಉಳಿದಂತೆ ಕನ್ನಡ ಗಾಯಕರಾದ ರಾಜೇಶ್ ಕೃಷ್ಣನ್, ವಿಜಯ ಪ್ರಕಾಶ್, ಕಂಭದ ರಂಗಯ್ಯ, ನವೀನ್ ಸಜ್ಜು, ಇಂದು ನಾಗರಾಜ್, ಗುರುರಾಜ್ ಹೊಸಕೋಟೆ, ಸೈಂಧವಿ, ವೈಕಂ ವಿಜಯಲಕ್ಷ್ಮಿ ಹಾಗೂ ರವೀಂದ್ರ ಸೊರಗಾವಿ ಸೇರಿದಂತೆ 17 ಜನ ಈ ಚಿತ್ರದಲ್ಲಿ ಹಾಡಿರುವುದು ಮತ್ತೊಂದು ವಿಶೇಷ.



ಮಗ್ಗಿ ಪುಸ್ತಕ ಚಿತ್ರವನ್ನು ಎಂ.ಪಿ. ಫಿಲಂಸ್ ಮೂಲಕ ಕೆ. ಮುನೀಂದ್ರ ಅವರು ರಾಜ್ಯಾದ್ಯಂತ ಬಿಡುಗಡೆ ಮಾಡಿದ್ದರು. ಮುನೀಂದ್ರ ಅವರ ಸಂಸ್ಥೆಯಿಂದ ಬಿಡುಗಡೆಯಾದ ಎರಡನೇ ಚಿತ್ರ ಮಗ್ಗಿಪುಸ್ತಕ 25 ದಿನಗಳನ್ನು ಪೂರೈಸಿದೆ, ಈ ಹಿಂದೆ ಇವರದೇ ವಿತರಣೆಯ ಕಂಗ್ರಾಚುಲೇಶನ್ಸ್ ಬ್ರದರ್ ಕೂಡ 50 ದಿನ ಪ್ರದರ್ಶನಗೊಂಡಿತ್ತು, ಜತೆಗೆ ಇವರೇ ರಿಲೀಸ್ ಮಾಡಿರುವ ಮತ್ತೊಂದು ಚಿತ್ರ ಮರಳಿ ಮನಸಾಗಿದೆ ಕೂಡ 25 ದಿನಗಳನ್ನು ಪೂರೈಸಿದೆ, ಇವರ ವಿತರಣೆಯ ಮೂರೂ ಚಿತ್ರಗಳು ಯಶಸ್ವಿಯಾಗಿದ್ದು ಇವರ ಹೆಗ್ಗಳಿಕೆಯಾಗಿದೆ,

ಇನ್ನು ಈ ಚಿತ್ರದಲ್ಲಿ ಸರ್ಕಾರಿ ಹಿರಿಯ ಪಾಠಶಾಲೆ ಖ್ಯಾತಿಯ ರಂಜನ್ ಕಾಸರಗೋಡು, ಯಶಿಕಾ, ರಾನ್ವಿ ಶೇಖರ್, ಶೋಭರಾಜ್, ಗಿರಿಜಾ ಲೋಕೇಶ್, ಮೇಘನಾ, ಮೈಸೂರು ರಮಾನಂದ್, ಮೇಘಶ್ರೀ, ಮಿಮಿಕ್ರಿ ಗೋಪಿ, ಚಂದ್ರಪ್ರಭ, ರಘು ರಮನಕೊಪ್ಪ ಹಾಗೂ ಇನ್ನಿತರರು ನಟಿಸಿದ್ದಾರೆ. ಈ ಚಿತ್ರಕ್ಕೆ ನಂದಕುಮಾರ್ ಅವರ ಛಾಯಾಗ್ರಹಣ, ಶಿವಕುಮಾರ್ ಅವರ ಸಂಕಲನವಿದೆ.

ಚಿತ್ರ ಪ್ರೇಕ್ಷಕರಿಗೆ ಪಾರ್ಕಿಂಗ್ ಶುಲ್ಕ ವಿಧಿಸುವಂತಿಲ್ಲ: ತೆಲಂಗಾಣ ಹೈಕೋರ್ಟ್

ಸಿನಿಮಾ ನೋಡಲು ಹೋಗುವ ಪ್ರೇಕ್ಷಕನಿಗೆ ಸಿಂಗಲ್ ಸ್ಕ್ರೀನ್, ಮಲ್ಟಿಪ್ಲೆಕ್ಸ್‌ಗಳಲ್ಲಿ ಪಾರ್ಕಿಂಗ್ ಶುಲ್ಕ ವಿಧಿಸುವ ಬಗ್ಗೆ ಹಲವು ವರ್ಷಗಳಿಂದ ವಾದ-ಪ್ರತಿವಾದ ನಡೆಯುತ್ತಲೇ ಇದೆ. ಟಿಕೆಟ್ ಖರೀದಿ ಮಾಡಿದಾಗಲೇ ಚಿತ್ರಮಂದಿರದ ಅಥವಾ ಮಲ್ಟಿಪ್ಲೆಕ್ಸ್ ಗ್ರಾಹಕ ಆಗಿರುವ ಪ್ರೇಕ್ಷಕನಿಗೆ ಪಾರ್ಕಿಂಗ್ ಉಚಿತವಾಗಿ ಅಥವಾ ಸೇವೆಯ ರೂಪದಲ್ಲಿ ಕೊಡಬೇಕು ಎಂಬ ವಾದ ನಡೆಯುತ್ತಲೇ ಇತ್ತು. ಇದೀಗ ಈ ಕುರಿತು ತೆಲಂಗಾಣ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

ಒಂದು ಚಿತ್ರನೋಡಲು ಹೋದಾಗ ಖರ್ಚಾಗುವ ಹಣ ತುಂಬಾ ಹೆಚ್ಚಾಗಿದೆ ಎಂದು ಸಿನಿ ಪ್ರೇಕ್ಷಕರು ಹಲವು ವರ್ಷಗಳಿಂದ ದೂರುತ್ತಲೇ ಬಂದಿದ್ದಾರೆ. ಟಿಕೆಟ್ ದರ ಅಲ್ಲದೆ ಚಿತ್ರಮಂದಿರಗಳಲ್ಲಿ ಸಿಗುವ ಪಾಪ್‌ಕಾರ್ನ್, ತಂಪು ಪಾನೀಯ ಇದೆಲ್ಲದರ ಜೊತೆಗೆ ಚಿತ್ರವೀಕ್ಷಣೆಗೆ ಹೋದ ಪ್ರೇಕ್ಷಕ ನೂರಾರು ರೂ.ಗಳ ಪಾರ್ಕಿಂಗ್ ಶುಲ್ಕವನ್ನೂ ಸಹ ಭರಿಸಬೇಕಿದೆ. ಹಾಗಾಗಿ ಚಿತ್ರವೀಕ್ಷಣೆಗೆಂದು ಥೇಟರಿಗೆ ಬರುವ ಗ್ರಾಹಕರಿಗೆ ಚಿತ್ರಮಂದಿರ ಅಥವಾ ಮಲ್ಟಿಪ್ಲೆಕ್ಸ್‌ಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಲು ಉಚಿತವಾಗಿ ಅವಕಾಶ ನೀಡಬೇಕು ಅಥವಾ ಸೇವೆಯ ರೂಪದಲ್ಲಿ ಕೊಡಬೇಕು ಎಂಬ ವಾದ ನಡೆಯುತ್ತಲೇ ಇತ್ತು. ಇದೀಗ ಈ ಬಗ್ಗೆ ತೆಲಂಗಾಣ ಹೈಕೋರ್ಟ್ ಮಹತ್ವದ ಆದೇಶವನ್ನು ಹೊರಡಿಸಿದೆ.


ಇನ್ನು ಮುಂದೆ ಸಿನಿಮಾ ನೋಡಲು ಬರೋ ಪ್ರೇಕ್ಷಕನಿಂದ ಸಿಂಗಲ್‌ಸ್ಕ್ರೀನ್ ಥೇಟರ್ ಅಥವಾ ಮಲ್ಟಿಪ್ಲೆಕ್ಸ್‌ಗಳಲ್ಲಿ ಯಾವುದೇ ರೀತಿಯ ಪಾರ್ಕಿಂಗ್ ಶುಲ್ಕವನ್ನು ಪಡೆಯುವಂತಿಲ್ಲ ಎಂದು ತೆಲಂಗಾಣ ಹೈಕೋರ್ಟ್ ಮಹತ್ವದ ಆದೇಶವನ್ನ ಹೊರಡಿಸಿದೆ, ಆದರೆ ಇದು ಸದ್ಯಕ್ಕೆ ಕರ್ನಾಟಕದಲ್ಲಿ ಜಾರಿಯಲ್ಲಿಲ್ಲ. ಇದು ಜಾರಿಯಲ್ಲಿರುವುದು ತೆಲಂಗಾಣದಲ್ಲಿ ಮಾತ್ರ. ಈ ಹಿಂದೆ ಈ ಹಿಂದೆ ತೆಲಂಗಾಣದಲ್ಲಿ ಸಿಂಗಲ್ ಸ್ಕ್ರೀನ್ ಮತ್ತು ಮಲ್ಟಿಪ್ಲೆಕ್ಸ್‌ಗಳಲ್ಲಿ ಬೇಕಾಬಿಟ್ಟಿ ಪಾರ್ಕಿಂಗ್ ಶುಲ್ಕವನ್ನು ಪಡೆಯಲಾಗುತ್ತಿತ್ತು. ಆನಂತರ ಸರ್ಕಾರವು ಸಿಂಗಲ್ ಸ್ಕ್ರೀನ್ ಮತ್ತು ಮಲ್ಟಿಪ್ಲೆಕ್ಸ್ ಎರಡರಲ್ಲೂ ಸಿನಿಮಾ ನೋಡಲು ಬರುವ ಪ್ರೇಕ್ಷಕರಿಂದ ಪಾರ್ಕಿಂಗ್ ಶುಲ್ಕವನ್ನು ಪಡೆಯುವಂತಿಲ್ಲ ಎಂದು ಹೈಕೋರ್ಟ್ ಆದೇಶ ನೀಡಿತು.

ಆದರೆ ಕೋವಿಡ್ ನಂತರ ಸಿಂಗಲ್‌ಸ್ಕ್ರೀನ್ ಚಿತ್ರಮಂದಿರಗಳ ಮಾಲೀಕರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಆ ಆದೇಶದಿಂದ ವಿನಾಯಿತಿ ಪಡೆದರು. ಆದರೆ ಮಲ್ಟಿಪ್ಲೆಕ್ಸ್‌ಗಳಲ್ಲಿ ಮಾತ್ರ ಪಾರ್ಕಿಂಗ್ ಶುಲ್ಕ ವಿನಾಯಿತಿ ಚಾಲ್ತಿಯಲ್ಲಿತ್ತು. ಇತ್ತೀಚೆಗೆ ತೆಲಂಗಾಣ ಹೈಕೋರ್ಟ್‌ಗೆ ಈ ಸಂಬಂಧ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿ, ಸಿಂಗಲ್ ಸ್ಕ್ರೀನ್ ಹಾಗೂ ಮಲ್ಟಿಪ್ಲೆಕ್ಸ್ ಎರಡರಲ್ಲೂ ಸಿನಿಮಾ ನೋಡಲು ಬರುವ ಪ್ರೇಕ್ಷಕನಿಂದ ಕಡ್ಡಾಯವಾಗಿ ಪಾರ್ಕಿಂಗ್ ಶುಲ್ಕವನ್ನು ತೆಗೆದುಕೊಳ್ಳುವಂತಿಲ್ಲ ಎಂದು ಆದೇಶ ಹೊರಡಿಸಿದೆ. ಆ ಮೂಲಕ ಈ ಹಿಂದಿದ್ದ ಆದೇಶವನ್ನು ರದ್ದು ಮಾಡಿದೆ.

ಕರ್ನಾಟಕದಲ್ಲಿನ್ನೂ ಈ ನಿಯಮ ಜಾರಿಯಾಗಿಲ್ಲ. ಬಹಬೇಗನೇ ನಮ್ಮಲ್ಲೂ ಆ ನಿಯಮ ಜಾರಿಯಾಗಬೇಕೆನ್ನುವುದು ರಾಜ್ಯದ ಎಲ್ಲಾ ಚಿತ್ರ ಪ್ರೇಮಿಗಳ ಆಶಯ, ಈ ಬಗ್ಗೆ ಫಿಲಂ ಚೇಂಬರ್ ಹಾಗೂ ನಿರ್ಮಾಪಕರ ಸಂಘ ಪ್ರಯತ್ನ ಮಾಡಬೇಕಿದೆ, ಕರ್ನಾಟಕದಲ್ಲಿ ಸಿಂಗಲ್ ಸ್ಕ್ರೀನ್ ಚಿತ್ರಮಂದಿರ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ ಸಿನಿಮಾ ವೀಕ್ಷಣೆಗೆಂದು ಹೋಗುವ ಪ್ರೇಕ್ಷಕ 500-800ರೂ. ಟಿಕೆಟ್ ದರ ನೀಡುವ ಜತೆಗೆ 200-300ರೂ. ಪಾರ್ಕಿಂಗ್ ಶುಲ್ಕವನ್ನು ಭರಿಸುವ ವೇಳೆಗೆ ಹೈರಾಣಾಗಿ ಹೋಗಿರುತ್ತಾನೆ, ಸದ್ಯ ನಮ್ಮ ಬೆಂಗಳೂರಿನ ಕೆಲ ಮಲ್ಟಿಪ್ಲೆಕ್ಸ್‌ಗಳಲ್ಲಿ ಒಂದು ಗಂಟೆಗೇ 80ರಿಂದ 100 ರೂ. ಪಾರ್ಕಿಂಗ್ ಶುಲ್ಕ ಭರಿಸಬೇಕಿದೆ.



ಒಂದು ಸಿನಿಮಾ ನೋಡಿಕೊಂಡು ಹೊರಬರುವಷ್ಟರಲ್ಲಿ ಕಾರ್, ಬೈಕಿನ ಪಾರ್ಕಿಂಗ್ ಶುಲ್ಕವೇ 200ರಿಂದ 300ರೂ. ದಾಟಿರುತ್ತದೆ. ಆತ ಇನ್ನೊಂದು ತಿಂಗಳವರೆಗೆ ಥೇಟರ್ ಕಡೆ ತಲೆ ಹಾಕಲ್ಲ, ತೆಲಂಗಾಣ ರೀತಿಯಲ್ಲಿಯೇ ಕರ್ನಾಟಕದಲ್ಲೂ ಈ ನಿಯಮವನ್ನು ಜಾರಿಗೆ ತರಲು ಚಲನಚಿತ್ರ ವಾಣಿಜ್ಯ ಮಂಡಳಿ ಪ್ರಯತ್ನ ನಡೆಸಬೇಕಿದೆ, ಈಗೀಗ ಎಲ್ಲರ ಬಳಿಯೂ ಬೈಕ್, ಕೆಲವರಲ್ಲಿ ಕಾರು ಇದ್ದೇ ಇರುತ್ತದೆ, ಇಂಥ ಅನಗತ್ಯ ವೆಚ್ಚ ಕಡಿಮೆಯಾದರೆ, ಚಿತ್ರದ ಕಲೆಕ್ಷನ್ ಸ್ವಲ್ಪವಾದರೂ ಹೆಚ್ಚಾಗಬಹುದು.



ಕಡಲ್‌ಕೋಟೆ ಕಡಲಕಿನಾರೆಯ ಗ್ಯಾಂಗ್‌ಸ್ಟರ್ ಕಥೆ

ಕರಾವಳಿ ಪ್ರದೇಶದಲ್ಲಿ ನಡೆಯುವ ಮತ್ತೊಂದು ಗ್ಯಾಂಗ್‌ಸ್ಟರ್ ಕಥೆಯನ್ನಿಟ್ಟುಕೊಂಡು ರಂಜಿತ್ ಕುಮಾರ್‌ಗೌಡ ಅವರು ಕಡಲ್ ಕೋಟೆಯ ಕಥೆಯನ್ನು ಹೇಳಲು ಹೊರಟಿದ್ದಾರೆ, ಧರ್ಮೇಂದ್ರ ಅವರು ನಿರ್ಮಿಸುತ್ತಿರುವ, ರಂಜಿತ್‌ಕುಮಾರ್‌ಗೌಡ ಕಥೆ,ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ ಈ ಚಿತ್ರದ ಮುಹೂರ್ತ ಸಮಾರಂಭ ಸುರತ್ಕಲ್‌ನ ಗಣೇಶಪುರದ ಶ್ರೀಮಹಾಗಣಪತಿ ದೇವಸ್ಥಾನದಲ್ಲಿ ನೆರವೇರಿತು. ನಟ ವಸಿಷ್ಠಸಿಂಹ ಈ ಚಿತ್ರದ ನಾಯಕನಾಗಿ ನಟಿಸುತ್ತಿದ್ದಾರೆ,

ಭಾಗವತರಾದ ಪಟ್ಲ ಸತೀಶ್ ಶೆಟ್ಟಿ ಅವರು ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿದರೆ, ಮಂಗಳೂರಿನ ಲೋಕಾಯುಕ್ತ ಎಸ್.ಪಿ. ಬಿ.ಪಿ.ದಿನೇಶ್‌ಕುಮಾರ್ ಕ್ಯಾಮೆರಾ ಚಾಲನೆ ಮಾಡಿದರು. ಈ ಸಂದರ್ಭದಲ್ಲಿ ನಿವೃತ್ತ ಲೋಕಾಯುಕ್ತ ಕಮಿಷನರ್ ನಟರಾಜ್, ಬಿರುವೆರ್ ಕುಡ್ಲದ ಉದಯ್ ಪೂಜಾರಿ ಉಪಸ್ಥಿತರಿದ್ದರು,

ನಿರ್ದೇಶಕ ರಂಜಿತ್‌ಕುಮಾರ್‌ಗೌಡ ಮಾತನಾಡುತ್ತ ನಮ್ಮ ಚಿತ್ರದಲ್ಲಿ ಫ್ಯಾಮಿಲಿ ಸೆಂಟಿಮೆಂಟ್, ಸ್ನೇಹ, ಪ್ರೀತಿ ಎಲ್ಲವೂ ಇರುತ್ತದೆ. ಮನುಷ್ಯ ದುಡ್ಡಿನ ಹಿಂದೆ ಹೋದರೆ, ಅಂಥವನ ಜೀವನದಲ್ಲಿ ಏನೇನೆಲ್ಲಾ ಘಟಿಸುತ್ತದೆ ಎಂಬುದನ್ನು ಈ ಚಿತ್ರದಲ್ಲಿ ತೋರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಹಾರ್ಬರ್ ಮೇಲೆ ಹಿಡಿತ ಸಾಧಿಸುವ ಕಥೆಯಿದು. ಹಾರ್ಬರ್‌ನಲ್ಲಿ ನಡೆಯುವ ಶೋಷಣೆ ಮತ್ತು ಸಂಘರ್ಷ, ಇದರ ನಡುವೆ ಬೆಂಕಿಯಲ್ಲಿ ಅರಳಿದ ಹೂವು ಎನ್ನುವಂತೆ ನಾಯಕ ಹೇಗೆ ಎದ್ದು ಬರುತ್ತಾನೆ ಎಂದು ಈ ಚಿತ್ರದಲ್ಲಿ ಹೇಳುತ್ತಿದ್ದೇವೆ. ಇದೊಂದು ಪಕ್ಕಾ ಕಮರ್ಷಿಯಲ್ ಚಿತ್ರ. ಒಂದಿಷ್ಟು ನೈಜ ಘಟನೆಗಳನ್ನು ಆಧರಿಸಿ ಈ ಕಥೆ ಮಾಡಿದ್ದೇವೆ. ಉಡುಪಿ, ಸುರತ್ಕಲ್, ಮಂಗಳೂರು ಹಾರ್ಬರ್, ಬೇಂಗ್ರೆ ಮುಂತಾದ ಕಡೆ ಸುಮಾರು 65 ದಿನಗಳ ಚಿತ್ರೀಕರಣ ನಡೆಸುವ ಯೋಚನೆಯಿದೆ ಎಂದು ಹೇಳಿದರು.

ಚಿತ್ರದ ನಾಯಕ ವಸಿಷ್ಠ ಸಿಂಹ ಮಾತನಾಡಿ, ಈ ಚಿತ್ರದಲ್ಲಿ ನಿರ್ದೇಶಕರು ಪ್ರತಿಯೊಂದು ಪಾತ್ರವನ್ನೂ ಬಹಳ ಅಚ್ಚುಕಟ್ಟಾಗಿ ಬರೆದಿದ್ದಾರೆ, ಮತ್ತು ಒಳ್ಳೆಯ ಬರವಣಿಗೆಯೇ ನಾನು ಈ ಚಿತ್ರವನ್ನು ಒಪ್ಪಿಕೊಳ್ಳುವುದಕ್ಕೆ ಮುಖ್ಯ ಕಾರಣ. ಈ ಸುತ್ತಮುತ್ತಲಿನ ಭಾಗದಲ್ಲಿ ನಡೆದ ಹಲವಾರು ಘಟನೆಗಳನ್ನಾಧರಿಸಿ ಈ ಕಥೆಯನ್ನು ಮಾಡಿದ್ದಾರೆ. ಇಲ್ಲಿ ಕಥೆ ವಿಭಿನ್ನವಾಗಿದೆ ಎನ್ನುವುದಕ್ಕಿಂತ ಹೆಚ್ಚು ನೈಜವಾಗಿದೆ ಮತ್ತು ಮನಸ್ಸಿಗೆ ಬಹಳ ಹತ್ತಿರವಾಗುವಂತಿದೆ ಎಂಬ ಕಾರಣಕ್ಕೆ ಒಪ್ಪಿಕೊಂಡೆ. ಇದು ಗ್ಯಾಂಗ್ ಸ್ಟರ್ ಕಥೆಯಾದರೂ, ಚಿತ್ರದಲ್ಲಿ ಒಳ್ಳೆಯ ಮೌಲ್ಯಗಳಿವೆ. ಬಹಳ ದಿನಗಳ ನಂತರ ನಾನು ಒಂದು ಮಾಸ್ ಪಾತ್ರವನ್ನು ಮಾಡುತ್ತಿದ್ದೇನೆ. ರವಿಶಂಕರ್ ಅವರ ಜೊತೆ ಇದು ನನ್ನ ಮೂರನೇ ಚಿತ್ರ ಎಂದರು.

ನಿರ್ಮಾಪಕ ಧರ್ಮೇಂದ್ರ, ಅವರಿಗೆ ಕಡಲ್ ಕೋಟೆ ಮೊದಲ ಚಿತ್ರ. ಅವರು ಮಾತನಾಡುತ್ತ ನಾನು ನೋಡಿದ ಮತ್ತು ಕೇಳಿದ ಒಂದಿಷ್ಟು ಘಟನೆಗಳನ್ನು, ನಿರ್ದೇಶಕ ರಂಜಿತ್ ಅವರಿಗೆ ಹೇಳಿದಾಗ ಈ ಕಥೆ ರೂಪುಗೊಂಡಿತು, ಈ ಚಿತ್ರದಲ್ಲಿ ಒಂದು ಅದ್ಭುತವಾದ ತಾರಾಬಳಗವಿದೆ. ಅದರ ಜೊತೆಗೆ ನಮ್ಮ ತಂಡದಲ್ಲಿ ಒಂದಿಷ್ಟು ಒಳ್ಳೆಯ ಕಲಾವಿದರಿದ್ದಾರೆ. ಅವರಿಗೆಲ್ಲಾ ಒಳ್ಳೆಯದಾಗಬೇಕೆಂಬ ನಿಟ್ಟಿನಲ್ಲಿ ನಾನು ಈ ಚಿತ್ರವನ್ನು ನಿರ್ಮಿಸುತ್ತಿದ್ದೇನೆ. ಇದೊಂದು ಒಳ್ಳೆಯ ಚಿತ್ರವಾಗುತ್ತದೆ ಎಂಬ ನಂಬಿಕೆ ನನಗಿದೆ. ಮುಂದೆಯೂ ಸಹ ಇನ್ನಷ್ಟು ಉತ್ತಮ ಚಿತ್ರಗಳನ್ನು ನಿರ್ಮಿಸುವ ಆಸೆಯಿದೆ ಎಂದರು.

ನಟ ರವಿಶಂಕರ್ ಈ ಚಿತ್ರದಲ್ಲಿ ಸೂತ್ರಧಾರನ ಪಾತ್ರ ಮಾಡುತ್ತಿದ್ದಾರಂತೆ. ರಂಜಿತ್ ನನಗೆ ಈ ಕಥೆ ಹೇಳಿದಾಗ, ಅವರ ಕ್ಲಾರಿಟಿ ಬಹಳ ಇಷ್ಟವಾಯಿತು. ಚಿತ್ರದಲ್ಲಿ ನನಗೆ ಒಂದು ಮುಖ್ಯವಾದ ಪಾತ್ರವಿದೆ. ನನ್ನ ಪಾತ್ರವನ್ನು ಹೇಳಿದರೆ, ಕಥೆಯನ್ನೇ ಬಿಟ್ಟುಕೊಟ್ಟಂತಾಗುತ್ತದೆ. ನನ್ನ ಪಾತ್ರದ ಮೂಲಕ ಇಡೀ ಚಿತ್ರದಕಥೆ ನಡೆಯುತ್ತದೆ. ನನಗೆ ಇನ್ನೊಂದು ಒಳ್ಳೆಯ ಚಿತ್ರ ಇದಾಗುತ್ತದೆ ಎಂಬ ನಂಬಿಕೆಯಿದೆ ಎಂದವರು ಹೇಳಿದರು.

ಈ ಚಿತ್ರದಲ್ಲಿ ವಸಿಷ್ಠಸಿಂಹ ಜತೆ ನಾಯಕಿಯಗಿ ಸುಷ್ಮಿತಾ ಭಟ್ ನಟಿಸುತ್ತಿದ್ದು, ಮಿಕ್ಕಂತೆ ಅಚ್ಯುತ್‌ಕುಮಾರ್, ಸ್ವರಾಜ್ ಶೆಟ್ಟಿ, ಶರತ್ ಲೋಹಿತಾಶ್ವ, ತಾರಾ, ಬಲ ರಾಜವಾಡಿ, ಯಶ್ ಶೆಟ್ಟಿ ಮುಂತಾದವರು ನಟಿಸುತ್ತಿದ್ದಾರೆ. ಕಡಲ್‌ಕೋಟೆ ಚಿತ್ರದಲ್ಲಿ ಒಟ್ಟು ಐದು ಹಾಡುಗಳಿದ್ದು ಶಶಾಂಕ್ ಶೇಷಗಿರಿ ಅವರು ಸಂಗೀತ ಸಂಯೋಜಿಸುತ್ತಿದ್ದಾರೆ. ವೀನಸ್ ನಾಗರಾಜ ಮೂರ್ತಿ ಅವರ ಛಾಯಾಗ್ರಹಣ ಮತ್ತು ಪವನ್‌ಗೌಡ ಅವರ ಸಂಕಲನ ಈ ಚಿತ್ರಕ್ಕಿದ್ದು, ಕಾರ್ಯಕಾರಿ ನಿರ್ಮಾಪಕರಾಗಿ ಪವನ್‌ಕುಮಾರ್ ಉಡುಪಿ ಜತೆಯಾಗಿದ್ದಾರೆ.

ಮಾರ್ಚ್ 9ಕ್ಕೆ ಜನ ನಾಯಗನ್ ಭವಿಷ್ಯ



ಕೆವಿಎನ್ ಸಂಸ್ಥೆಯ ನಿರ್ಮಾಣದ ಎರಡು ದೊಡ್ಡ ಸಿನಿಮಾಗಳು ಒಂದರ ಹಿಂದೊಂದರಂತೆ ಬಿಡುಗಡೆ ಮುಂದಕ್ಕೆ ಹೋಗಿದೆ. ಕೆವಿಎನ್ ಮತ್ತು ಯಶ್ ಅವರ ಮಾನ್‌ಸ್ಟರ್ ಮೈಂಡ್ಸ್ ಒಟ್ಟಿಗೆ ನಿರ್ಮಿಸಿರುವ ಟಾಕ್ಸಿಕ್ ಮಾರ್ಚ್ 19ಕ್ಕೆ ರಿಲೀಸಾಗಬೇಕಿತ್ತು, ಅದೀಗ ಜೂನ್ 4ಕ್ಕೆ ಮುಂದೂಡಲ್ಪಟ್ಟಿದೆ. ಇದರ ಜತೆ ಕೆವಿಎನ್ ಪ್ರೊಡಕ್ಷನ್ ನಿರ್ಮಿಸಿರುವ ದಳಪತಿ ವಿಜಯ್ ನಟನೆಯ ಜನ ನಾಯಗನ್ ಸಿನಿಮಾ ಕೂಡ ಹಲವಾರು ಕಾರಣಗಳಿಂದಾಗಿ ಬಿಡುಗಡೆಯಾಗದೆ ಡಬ್ಬದಲ್ಲೇ ಕುಳಿತಿದೆ. ಇದೀಗ ಮಾರ್ಚ್ 9ಕ್ಕೆ ಜನ ನಾಯಗನ್ ಸಿನಿಮಾದ ಭವಿಷ್ಯ ನಿರ್ಧಾರವಾಗಲಿದೆ.

ಕಳೆದ ಜನವರಿ 23ಕ್ಕೇ ಬಿಡುಗಡೆಯಾಗಬೇಕಿದ್ದ ಜನ ನಾಯಗನ್ ಚಿತ್ರಕ್ಕೆ ಸೆನ್ಸಾರ್ ಸಮಸ್ಯೆ ಎದುರಾಗಿತ್ತು. ಅದರ ವಿರುದ್ಧ ಕೆವಿಎನ್ ನ್ಯಾಯಾಲಯದ ಮೆಟ್ಟಿಲೇರಿತ್ತು. ಆದರೆ ಅಲ್ಲಿಯೂ ಸಹ ವಿಳಂಬವಾದ ಕಾರಣಕ್ಕೆ ಸಿನಿಮಾವನ್ನು ಸೆನ್ಸಾರ್ ರಿವೈಸಿಂಗ್ ಕಮಿಟಿಗೆ ಕಳಿಸಲು ಕೆವಿಎನ್ ಒಪ್ಪಿಕೊಂಡಿತ್ತು. ಅದರಂತೆ ಮಾರ್ಚ್ 09ರಂದು ರಿವೈಸಿಂಗ್ ಕಮಿಟಿಯವರು ಜನ ನಾಯಗನ್ ಚಿತ್ರವನ್ನು ವೀಕ್ಷಿಸಲಿದ್ದು, ನಂತರ ಒಂದಷ್ಟು ಸಲಹೆ ನೀಡಿ ಸೆನ್ಸಾರ್ ಪ್ರಮಾಣ ಪತ್ರ ನೀಡಲಿದ್ದಾರೆ ಎನ್ನಲಾಗುತ್ತಿದೆ. ಮಾರ್ಚ್ 09ರಂದು ಎರಡು ಗಂಟೆಗೆ ಸೆನ್ಸಾರ್ ಮಂಡಲಿ ಮುಂದೆ ಜನನಾಯಗನ್ ಚಿತ್ರ ಪ್ರದರ್ಶನಗೊಳ್ಳಲಿದೆ. ಸಿನಿಮಾ ನೋಡಿದ ಸೆನ್ಸಾರ್ ಮಂಡಳಿಯ ಸದಸ್ಯರು ಸಿನಿಮಾದ ಯಾವ ದೃಶ್ಯಗಳಿಗೆ ಕತ್ತರಿ ಹಾಕಿಸಲಿದ್ದಾರೆ. ಸಿನಿಮಾಕ್ಕೆ ಯಾವ ಪ್ರಮಾಣ ಪತ್ರವನ್ನು ನೀಡಲಿದ್ದಾರೆ ಎಂಬುದು ಸಹಜವಾಗಿಯೇ ಕುತೂಹಲ ಮೂಡಿಸಿದೆ. ಹಾಗೂ ಚಿತ್ರಕ್ಕೆ ಸೆನ್ಸಾರ್ ಪ್ರಮಾಣ ಪತ್ರ ದೊರೆತಲ್ಲಿ ಒಂದೆರಡು ವಾರಗಳಲ್ಲಿಯೇ ಜನ ನಾಯಗನ್ ಚಿತ್ರವನ್ನು ದೇಶಾದ್ಯಂತ ಬಿಡುಗಡೆ ಮಾಡಲು ಕೆವಿಎನ್ ಸಂಸ್ಥೆ ಸಿದ್ಧತೆ ಮಾಡಿಕೊಂಡಿದೆ. ಆದರೆ ರಿವೈಸಿಂಗ್ ಕಮಿಟಿಯಲ್ಲಿ ಮಾರ್ಚ್ 09ರಂದು ಇನ್ನೇನು ಕಿರಿಕ್ ಆಗುತ್ತದೋ ಎಂಬ ಆತಂಕ ವಿಜಯ್ ಅಭಿಮಾನಿಗಳಲ್ಲಿ ಕಾಡುತ್ತಿದೆ,

ಜನ ನಾಯಗನ್ ಚಿತ್ರವು ತೆಲುಗು ಸಿನಿಮಾವೊಂದರ ರೀಮೇಕ್ ಆಗಿದೆ. ಆದರೆ ದಳಪತಿ ವಿಜಯ್ ಅವರು ತಮ್ಮ ರಾಜಕೀಯ ಪಕ್ಷದ ಅಜೆಂಡವನ್ನು ಸಹ ಈ ಸಿನಿಮಾದಲ್ಲಿ ಸೇರಿಸಿದ್ದಾರೆ. ವಿಪಕ್ಷಗಳನ್ನು ಟೀಕೆ ಮಾಡುವ ಸಂಭಾಷಣೆಗಳು, ತಮ್ಮ ಪಕ್ಷವನ್ನು ಕೊಂಡಾಡುವ ಸಂಭಾಷಣೆಗಳು, ಈ ಥರದ ದೃಶ್ಯಗಳು ಜನ ನಾಯಗನ್ ಸಿನಿಮಾದಲ್ಲಿರುವ ಕಾರಣ ಜನನಾಯಗನ್ ಚಿತ್ರ ಬಿಡುಗಡೆಯಾಗದಂತೆ ಇತರೆ ರಾಜಕೀಯ ಪಕ್ಷಗಳು ಪ್ರಭಾವ ಬೀರಿವೆ ಎನ್ನಲಾಗುತ್ತಿದೆ.

ಜನ ನಾಯಗನ್ ಸಿನಿಮಾವನ್ನು ಎಚ್ ವಿನೋದ್ ಅವರು ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾದಲ್ಲಿ ನಾಯಕಿಯಾಗಿ ಪೂಜಾ ಹೆಗ್ಡೆ ನಟಿಸಿದ್ದಾರೆ. ಅಲ್ಲದೆ ಮಲಯಾಳಂ ನಟಿ ಮಮಿತಾ ಬಿಜು ಸಹ ಈ ಚಿತ್ರದಲ್ಲಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

IN THE COURT OF THE PRINCIPAL JUDGE, FAMILY COURT AT BANGALORE
MC. NO.1858/2021

BETWEEN: Smt. Vandana Kalyan Ram ... PETITIONER
AND: Sri. R. Shivaram Krishnan @ Prakash ... RESPONDENT

NOTICE TO THE RESPONDENT
ADDRESS OF THE RESPONDENT

To, **Sri. R. Shivaram Krishnan @ Prakash,** aged about 41 years, S/o. Ramachandran, R/at No.62, Nagaram Apartment, Door No. 203, 2nd Floor, 4th Main Road, 18th Cross, Malleshwaram, Bangalore - 560055.

Whereas the above named petitioner has instituted the above case against the respondent for decree for divorce of the marriage and such other relief's. You are hereby summoned to, appear in person or through a pleader duly instructed before the Hon'ble Principal Judge, Family Court, Bengaluru.

Take notice that in default of your appearance on the **21/04/2026** at **11:00 A.M,** the petition will be heard and determined in your absence, placing you as exparte.

Issued under my hand and the seal of the Court on this 07/03/2026

By order of the Court, Sheristedar, Family Court, Bengaluru

V. DALAPATHY, Advocate
Office at No. 108, 4th Main, 12th block, Nagarabhavi 2nd Stage, Bengaluru-560072.
PH: 9845127367.

ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ ಉಪ ವಿಭಾಗ, ದೊಡ್ಡಬಳ್ಳಾಪುರ
ಆರ್.ಎ. (ಡಿ.ಬಿ.ಪಿ) ನಂ.: 376/2025

ಶ್ರೀ ಎಂಜಾರ ಮೂರ್ತಿ ... ಮೇಲ್ಮನವಿದಾರರು
ವಿರುದ್ಧ
ತಹಶೀಲ್ದಾರರು, ದೊಡ್ಡಬಳ್ಳಾಪುರ ತಾಲ್ಲೂಕು ಮತ್ತು ಇತರರು ... ಎದುರುದಾರರು

ಪ್ರತಿವಾದಿ ನಂ:2:- ಶ್ರೀ.ಚನ್ನಬಸಪ್ಪ ಬಿನ್ ಬಸಪ್ಪ, ವಿಳಾಸ:-ಕೊನೇನಹಳ್ಳಿ ಗ್ರಾಮ, ದೊಡ್ಡಬೆಳವಂಗಲ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಸಾರ್ವಜನಿಕ ಪ್ರಕಟಣೆ

ಈ ಮೇಲ್ಮನವಿಯನ್ನು ಮೇಲ್ಮನವಿದಾರರು ಪ್ರತಿವಾದಿಗಳಾದ ನಿಮ್ಮ ವಿರುದ್ಧ ಮಾನ್ಯ ವಿಶೇಷ ಉಪವಿಭಾಗಾಧಿಕಾರಿಗಳು-05, ದೊಡ್ಡಬಳ್ಳಾಪುರ ರವರ ನ್ಯಾಯಾಲಯದಲ್ಲಿ ಆರ್.ಎ(ಡಿಬಿಪಿ) 376/2025 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು, ಆದರೇ, ಈ ಮೇಲ್ಮನವಿಯ ಪ್ರತಿವಾದಿಗಳು 2 ರವರು ಈ ಘನ ನ್ಯಾಯಾಲಯವು ಕಳುಹಿಸಿರುವ ಈ ಮೇಲ್ಮನವಿಯ ಸಮನ್ಸ್‌ಗಳನ್ನು ಪಡೆಯುತ್ತಿಲ್ಲ.

ಆದ್ದರಿಂದ, ಈ ಪ್ರಕಟಣೆಯಂತೆ ಪ್ರತಿವಾದಿಗಳು 2ರವರು ವೈಯಕ್ತಿಕವಾಗಿ ಅಥವಾ ಅವರ ವಕೀಲರ ಮೂಲಕವಾಗಿ ದಿನಾಂಕ: 25.03.2026 ರಂದು 3.00 ಗಂಟೆಗೆ ಈ ಘನ ನ್ಯಾಯಾಲಯದಲ್ಲಿ ಹಾಜರಾಗಲು ಸೂಚಿಸಲಾಗಿದೆ. ತಪ್ಪಿದ್ದಲ್ಲಿ, ಈ ಮೇಲ್ಮನವಿಯು ಅವರ ಗೈರು ಹಾಜರಿನಲ್ಲಿ ತೀರ್ಮಾನಿಸಲಾಗುವುದು.

ನ್ಯಾಯಾಲಯದ ಆದೇಶದ ಮೇರೆಗೆ
ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ ಉಪವಿಭಾಗ, ದೊಡ್ಡಬಳ್ಳಾಪುರ
ವಕೀಲರು: ಬಿ ಎನ್ ರವಿಶಂಕರ್, ದೊಡ್ಡಬಳ್ಳಾಪುರ
ದಿನಾಂಕ: 07.03.2026, ದೊಡ್ಡಬಳ್ಳಾಪುರ

IN THE COURT OF THE HON'BLE LXXV ADDL. CITY CIVIL & SESSION JUDGE AT BANGALORE (CCH-76)
O.S. No. 6344/2025

BETWEEN : THE STATE BANK OF INDIA, KUMARA PARK BRANCH (1626), No. 159, 1st MAIN ROAD, NEAR BHIMAS HOTEL, SHESHADRI PURAM BANGALORE-560020 Represented by its Manger **Mr. SUNIL .R ...PLAINTIFF**
AND: Mr. PUNITH KUMAR .R ...DEFENDANT

SUMMONS TO DEFENDANT BY WAY OF PAPER PUBLICATION

Mr. PUNITH KUMAR .R, S/o. RAJU .P, AGED ABOUT: 33 Years, No. 83, GURUR MAIN ROAD, SHANKARLINGA GOWDA COLONY, RAMABAL NAGAR, MYSORE - 570008. Ph: 7676478301.

Whereas, the Plaintiff has filed a suit Recovery of money instituted the present suit, for sum of **Rs. 10,77,824/- (Rupees Ten Lakhs Seventy-Seven Thousand Eight Hundred and Twenty-Four Only)**, and future interest at contractual rate together with other applicable expenses, charges from the date of NPA till closure of loan. Hence you are hereby summoned to appear before court, person or through a Pleader **on 16.04.2026 at 11.00 A.M.** to answer the same failing which suit be heard and Disposed of as Ex-parte.

Given under my hand and the seal of the court this 05th day of March 2026.

By Order of the Court, Senior Sheristedar, City Civil Court, Bengaluru.
Advocate for Plaintiff :
J. SATHISH KUMAR, Advocate
EWS 16/2, 1st Cross, 2nd Main, 2nd Stage, KHB (AD Hhlli) Basaveshwaranagar, Bengaluru-560 079. Mob : 9448448238
Email : gsnadvocates@yahoo.com

ಘನವೆತ್ತ ಅಪರ ಸಿವಿಲ್ ಜಡ್ಜ್ ನ್ಯಾಯಾಲಯ, ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ. ಶಿಡ್ಲಘಟ್ಟ
ಕ್ರಿಮಿನಲ್ ಮಿಸ್ ಸಂಖ್ಯೆ: 52/2026

ಅರ್ಜಿದಾರರು : 1)ಶ್ರೀ ಚಿಕ್ಕ ಮುನಿವೆಂಕಟಪ್ಪ ಬಿನ್ ಲೇಟ್ ದೊಡಪಯ್ಯ, ವಯಸ್ಸು ಸುಮಾರು 78 ವರ್ಷ, 2) ಶ್ರೀ ನಾಗರಾಜ ಬಿನ್ ಲೇಟ್ ದೊಡ್ಡ ಮುನಿವೆಂಕಟಪ್ಪ, ವಯಸ್ಸು ಸುಮಾರು 54 ವರ್ಷ, 3) ಶ್ರೀ ಮಂಜುನಾಥ ಬಿನ್ ಲೇಟ್ ಮುನಿವೆಂಕಟಪ್ಪ, ವಯಸ್ಸು ಸುಮಾರು 39 ವರ್ಷ, ಎಲ್ಲಾರು ವಾಸ: ಬಚ್ಚೆಟ್ಟಹಳ್ಳಿ ಗ್ರಾಮ ಮತ್ತು ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. -ವಿರುದ್ಧ-
ಎದುರುದಾರರು: ತಹಶೀಲ್ದಾರ್, ಶಿಡ್ಲಘಟ್ಟ ತಾಲ್ಲೂಕು, ಶಿಡ್ಲಘಟ್ಟ.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಪ್ರಕರಣದಲ್ಲಿ 1ನೇ ಅರ್ಜಿದಾರರ ದೊಡ್ಡಮ್ಮ ಮತ್ತು ಅರ್ಜಿದಾರರ ಸಂಖ್ಯೆ: 2 ರಿಂದ 3ರ ಅಜ್ಜಿ ಬೈಯಮ್ಮ ಕೋಂ ಲೇಟ್ ವೆಂಕಟರಾಯಪ್ಪ ರವರು ದಿನಾಂಕ: 05.04.1970 ರಂದು, ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಬಚ್ಚೆಟ್ಟಹಳ್ಳಿ ಹೋಬಳಿ, ಬಚ್ಚೆಟ್ಟಹಳ್ಳಿ ಗ್ರಾಮದಲ್ಲಿ ನಿಧನರಾಗಿದ್ದು, ಸದರಿರವರ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿಕೊಂಡಿದ್ದು, ಆದರಂತೆ ಸಂಬಂಧಪಟ್ಟ ವಾರಸುದಾರರು ಇದ್ದಲ್ಲಿ, ಸದರಿರವರು ತಮ್ಮ ವಕೀಲರ ಮುಖಾಂತರ ಅಥವಾ ಖುದ್ದಾಗಿ ತಮ್ಮ ತಕರಾರು ಇದ್ದಲ್ಲಿ ದಿನಾಂಕ: 09.04.2026 ರಂದು ಸಲ್ಲಿಸಲು ಈ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಶಿಡ್ಲಘಟ್ಟ ನ್ಯಾಯಾಲಯ, ಶಿಡ್ಲಘಟ್ಟ
ಅರ್ಜಿದಾರರ ಪರ ವಕೀಲರು
ವಿ.ಎಂ. ಬೈರಾರೆಡ್ಡಿ ಬಿ.ಎ. ಎಲ್.ಎಲ್.ಬಿ.ವಕೀಲರು, ಶಿಡ್ಲಘಟ್ಟ.

ಘನವೆತ್ತ ಅಪರ ಸಿವಿಲ್ ಜಡ್ಜ್ ನ್ಯಾಯಾಲಯ, ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ. ಶಿಡ್ಲಘಟ್ಟ
ಕ್ರಿಮಿನಲ್ ಮಿಸ್ ಸಂಖ್ಯೆ: 53/2026

ಅರ್ಜಿದಾರರು : 1)ಶ್ರೀ ಚಿಕ್ಕ ಮುನಿವೆಂಕಟಪ್ಪ ಬಿನ್ ಲೇಟ್ ದೊಡಪಯ್ಯ, ವಯಸ್ಸು ಸುಮಾರು 78 ವರ್ಷ, 2) ಶ್ರೀ ನಾಗರಾಜ ಬಿನ್ ಲೇಟ್ ದೊಡ್ಡ ಮುನಿವೆಂಕಟಪ್ಪ, ವಯಸ್ಸು ಸುಮಾರು 54 ವರ್ಷ, 3) ಶ್ರೀ ಮಂಜುನಾಥ ಬಿನ್ ಲೇಟ್ ಮುನಿವೆಂಕಟಪ್ಪ, ವಯಸ್ಸು ಸುಮಾರು 39 ವರ್ಷ, ಎಲ್ಲಾರು ವಾಸ: ಬಚ್ಚೆಟ್ಟಹಳ್ಳಿ ಗ್ರಾಮ ಮತ್ತು ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. -ವಿರುದ್ಧ-
ಎದುರುದಾರರು: ತಹಶೀಲ್ದಾರ್, ಶಿಡ್ಲಘಟ್ಟ ತಾಲ್ಲೂಕು, ಶಿಡ್ಲಘಟ್ಟ.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಪ್ರಕರಣದಲ್ಲಿ 1ನೇ ಅರ್ಜಿದಾರರ ತಾಯಿ ಮತ್ತು ಅರ್ಜಿದಾರರ ಸಂಖ್ಯೆ: 2 ರಿಂದ 3ರ ಅಜ್ಜಿ ಗಂಗಮ್ಮ ಕೋಂ ಲೇಟ್ ದೊಡಪಯ್ಯ ರವರು ದಿನಾಂಕ: 10.03.1985 ರಂದು, ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಬಚ್ಚೆಟ್ಟಹಳ್ಳಿ ಹೋಬಳಿ, ಬಚ್ಚೆಟ್ಟಹಳ್ಳಿ ಗ್ರಾಮದಲ್ಲಿ ನಿಧನರಾಗಿದ್ದು, ಸದರಿರವರ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿಕೊಂಡಿದ್ದು, ಆದರಂತೆ ಸಂಬಂಧಪಟ್ಟ ವಾರಸುದಾರರು ಇದ್ದಲ್ಲಿ, ಸದರಿರವರು ತಮ್ಮ ವಕೀಲರ ಮುಖಾಂತರ ಅಥವಾ ಖುದ್ದಾಗಿ ತಮ್ಮ ತಕರಾರು ಇದ್ದಲ್ಲಿ ದಿನಾಂಕ: 09.04.2026 ರಂದು ಸಲ್ಲಿಸಲು ಈ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಶಿಡ್ಲಘಟ್ಟ ನ್ಯಾಯಾಲಯ, ಶಿಡ್ಲಘಟ್ಟ
ಅರ್ಜಿದಾರರ ಪರ ವಕೀಲರು
ವಿ.ಎಂ. ಬೈರಾರೆಡ್ಡಿ ಬಿ.ಎ. ಎಲ್.ಎಲ್.ಬಿ.ವಕೀಲರು, ಶಿಡ್ಲಘಟ್ಟ.

ಘನವೆತ್ತ ಅಪರ ಸಿವಿಲ್ ಜಡ್ಜ್ ನ್ಯಾಯಾಲಯ, ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ. ಶಿಡ್ಲಘಟ್ಟ
ಕ್ರಿಮಿನಲ್ ಮಿಸ್ ಸಂಖ್ಯೆ: 49/2026

ಅರ್ಜಿದಾರರು : 1)ಶ್ರೀ ಚಿಕ್ಕ ಮುನಿವೆಂಕಟಪ್ಪ ಬಿನ್ ಲೇಟ್ ದೊಡಪಯ್ಯ, ವಯಸ್ಸು ಸುಮಾರು 78 ವರ್ಷ, 2) ಶ್ರೀ ನಾಗರಾಜ ಬಿನ್ ಲೇಟ್ ದೊಡ್ಡ ಮುನಿವೆಂಕಟಪ್ಪ, ವಯಸ್ಸು ಸುಮಾರು 54 ವರ್ಷ, 3) ಶ್ರೀ ಮಂಜುನಾಥ ಬಿನ್ ಲೇಟ್ ಮುನಿವೆಂಕಟಪ್ಪ, ವಯಸ್ಸು ಸುಮಾರು 39 ವರ್ಷ, ಎಲ್ಲಾರು ವಾಸ: ಬಚ್ಚೆಟ್ಟಹಳ್ಳಿ ಗ್ರಾಮ ಮತ್ತು ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. -ವಿರುದ್ಧ-
ಎದುರುದಾರರು: ತಹಶೀಲ್ದಾರ್, ಶಿಡ್ಲಘಟ್ಟ ತಾಲ್ಲೂಕು, ಶಿಡ್ಲಘಟ್ಟ.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಪ್ರಕರಣದಲ್ಲಿ 1ನೇ ಅರ್ಜಿದಾರರ ತಾತ ಮತ್ತು ಅರ್ಜಿದಾರರ ಸಂಖ್ಯೆ: 2 ರಿಂದ 3ರ ಮುತ್ತಾತ ಚಿಕ್ಕಗಂಗ ಬಿನ್ ಲೇಟ್ ವೆಂಕಟಿಗ ರವರು ದಿನಾಂಕ: 01.04.1950 ರಂದು, ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಬಚ್ಚೆಟ್ಟಹಳ್ಳಿ ಹೋಬಳಿ, ಬಚ್ಚೆಟ್ಟಹಳ್ಳಿ ಗ್ರಾಮದಲ್ಲಿ ನಿಧನರಾಗಿದ್ದು, ಸದರಿರವರ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿಕೊಂಡಿದ್ದು, ಆದರಂತೆ ಸಂಬಂಧಪಟ್ಟ ವಾರಸುದಾರರು ಇದ್ದಲ್ಲಿ, ಸದರಿರವರು ತಮ್ಮ ವಕೀಲರ ಮುಖಾಂತರ ಅಥವಾ ಖುದ್ದಾಗಿ ತಮ್ಮ ತಕರಾರು ಇದ್ದಲ್ಲಿ ದಿನಾಂಕ: 09.04.2026 ರಂದು ಸಲ್ಲಿಸಲು ಈ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಶಿಡ್ಲಘಟ್ಟ ನ್ಯಾಯಾಲಯ, ಶಿಡ್ಲಘಟ್ಟ
ಅರ್ಜಿದಾರರ ಪರ ವಕೀಲರು
ವಿ.ಎಂ. ಬೈರಾರೆಡ್ಡಿ ಬಿ.ಎ. ಎಲ್.ಎಲ್.ಬಿ.ವಕೀಲರು, ಶಿಡ್ಲಘಟ್ಟ.

IN THE COURT OF THE 42nd ADDL. CITY CIVIL AND SESSIONS JUDGE AT BENGALURU
O.S. No. 7970/2025 (CCH-43)

BETWEEN : The Commissioner, BDA, T. Chowdaiah Road, Kumara Park West, Bengaluru-20. Rep. by its Deputy Secretary Guddar Murugendrappa Ravindra. **...Plaintiff**
AND : Farida ...Defendant

SERVICE OF SUMMONS TO DEFENDANT THROUGH PAPER PUBLICATION

Farida, W/o Mohammed Hanif, Aged about 37 years, R/at No.52, Thanisandra Main Road, Vidyasagara, Dr. Shivaramakarantha Post, Bengaluru-560077.

Whereas, the Plaintiff have instituted suit for the relief of cancelation of Sale Deed before this Hon'ble Court and you, are Defendant in the above suit, hence, you are hereby summoned to appear before the Hon'ble XLII ADDL. City Civil and Sessions Judge at Bengaluru (CCH-43) **on 25.03.2026 at 11.00 A.M.**, either in person of through an advocate duly instructed to answer all the material of facts filing which the matter will be heard in your absence, placing the Ex-parte.

SCHEDULE

All the piece and parcel of the residential house property bearing House List No. 1094, situated at Hennur, Ballary Road, 1st Stage, 5th Block, Bengaluru-560043, measuring East to West: 60 feet, North to South: 40 feet totally measuring 2400 Sq.feet and bounded on:-

East by: Site No. 1091, **West by:** Road, **North by:** Site No. 1095(A), **South by:** Site No. 1093.

Giving under my name and seal of this Court on this 25.02.2026.

By Order of the Court, Senior Sheristedar, City Civil Court, Bengaluru.
Advocate for Plaintiff :
Mohan Kumar. K.T, Advocate
Office at 1051, 20th Main, 53rd Cross, 5th Block, Rajajinagar, Bengaluru-560010.
Mob: 98451 72742

IN THE COURT OF THE II ND ADDITIONAL SENIOR CIVIL JUDGE AND J.M.F.C AT CHICKABALAPUR
O.S. No. 612 Of 2024

Plaintiffs: Smt. Muniyamma Daughter of Late Narasimhappa Wife of Pilla Venkatappa Aged about 68 years, R/at, Anemodagu villge, Dibburahalli Hobli, Shidlaghatta Taluk, Chickaballapur District. And another. -V/s-

Defendants : Kum. Narayanamma D/o Late Gangappa Aged about 65 years, R/at, Musturu Village, Kasaba Hobli, Chickaballapur Taluk and District. And others

PAPER PUBLICATION

Notice to the Defendant No.3

Sri. Muninarayanappa S/o Late Narasimhappa, Aged 70 years, R/at Bommanahalli Village, Shidlaghatta Taluk, Chickballapur District.

Under Order 5 Rule 20 (1-A) of the Code of Civil Procedure.

The Plaintiffs has filed the above suit for Partition and Separate Possession against the defendants.

You are in Defendant No.3 hereby directed to appear in the above said court in person or through a pleader duly instructed and able to answer all material questions raised in the plaint or accompanied by some persons able to answer all such questions on the day of on 06.04.2026 At 11 AM clock in the morning.

Take notice that in default of your appearance on the date before mentioned in this plaint, it will be heard and determined ex-parte.

SCHEDULE

1. All that piece and parcel of the Property bearing Survey number 28 totally measuring to an extent of 96 acres 34 guntas, out of which 4 acres situated at Badaniganahalli village, Kasaba Hobli, chickballapur Taluk and District, and bounded on:- East by: Remaining Property in Sy.No.28. West by: Remaining Property in Sy.No.28. North by: Remaining Property in Sy.No.28. South: Remaining Property in Sy.No.28
2. All that piece and parcel of the property bearing khata No.385, measuring to an extent of East to west 19 feet, North to South 40 feet, situated at Musturu village, Kasaba Hobli, Chickballapur Taluk and District, and bounded on:- East by: Gangaraju site. West by: Now Church Property. North by: Vanke. South by: Road

Given my hand seal of the court on the day of 04.03.2026.

By order of the court.
Chief Ministerial Officer Senior Civil Judge & C.J.M.Court, Chickallapur
Advocate for service: **Sri. Ravindra .B,** Advocate, KAR 996/2021 # Court Complex, Chickballapur.
Mob-6363795562.

ಕರ್ನಾಟಕ ಸರ್ಕಾರ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಮಹಾತ್ಮಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು-22

ನಂ: ಕೃಉಮಾಸ(ಬೆಂ)ಮಳಿಗೆ-5426/2025-26 ದಿ: 07.03.2026

ಪ್ರಕಟಣೆ

ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವ ಸಮಸ್ತ ರೈತಬಾಂಧವರು, ಪೇಟೆ ಕಾರ್ಯಕರ್ತರು ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೆ:ಶೇಠ್ ಜುಮ್ ಡಮಲ್ ಟ್ರೇಡರ್ಸ್, ಸಂಸ್ಥೆಗೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಬೆಳ್ಳುಳ್ಳಿ ಸಂಕೀರ್ಣದಲ್ಲಿನ ಮಳಿಗೆ ಸಂಖ್ಯೆ:9/20ನ್ನು ಮಾಸಿಕ ಲೀವ್ & ಲೈಸೆನ್ಸ್ ಶುಲ್ಕದ ಆಧಾರದ ಮೇಲೆ ಹಂಚಿಕೆ ಮಾಡಿದ್ದು ಸದರಿ ಸಂಸ್ಥೆಯ ಪಾಲುದಾರರಾದ ಶ್ರೀ ಬ್ರಿಜಲ್ ಜುಮ ಡಮಲ್ ಸಚ್ ದೇವ್, ಇವರು ಪಾಲುದಾರರಾದ ಶ್ರೀ ಭಾವಿನ್ ಹೆಚ್.ಸೋನ ಇವರನ್ನು ನಿವೃತ್ತಿಗೊಳಿಸಲು ಹಾಗೂ ವ್ಯಾಪಾರ ವಹಿವಾಟು ಮುಂದುವರಿಸಿಕೊಂಡು ಹೋಗಲು ಆರ್ಥಿಕ ಸಮಸ್ಯೆ ಇರುವುದರಿಂದ ಸಂಸ್ಥೆಯ ವ್ಯಾಪಾರಾಭಿವೃದ್ಧಿಗಾಗಿ ಶ್ರೀ ಭಾರತ್ ಕುಮಾರ್ ಕಾಲರ ಬಿನ್ ದಿಲೀಪ್ ಕಾಲರ ಮತ್ತು ಶ್ರೀ ಷರತ್ ಕಾಲರ ಬಿನ್ ದಿಲೀಪ್ ಕಾಲರ, ನಂ.24/26, ಮೋಹಿನಿ ನಿವಾಸ್, ಸೆಂಟ್ರಲ್ ಸ್ಟ್ರೀಟ್, ಕುಮಾರ ಪಾರ್ಕ್ ಪಶ್ಚಿಮ ಶೇಷಾದ್ರಿಪುರಂ, ಬೆಂಗಳೂರು ಉತ್ತರ ಹಾಗೂ ಶ್ರೀ ರಾಜ್ ಸಂಜಯ್ ಚಾವಲ ಬಿನ್ ಶ್ರೀ ಸಂಜಯ್ ಚಾವಲ ಓಕ್, ನಂ.601, ಗೋದ್ರೇಜ್ ವುಡ್‌ಶೈನ್ ಎಸ್ಟೇಟ್, ಕೊಲಂಬಿಯಾ ಏಶಿಯಾ ಆಸ್ಪತ್ರೆ ಹತ್ತಿರ, ಹೆಬ್ಬಾಳ, ಬೆಂಗಳೂರು, ಇವರುಗಳನ್ನು ಹೊಸದಾಗಿ ಪಾಲುದಾರರನ್ನಾಗಿ ಸೇರ್ಪಡೆಮಾಡಿಕೊಳ್ಳಲು ಅನುಮತಿ ನೀಡಲು ಕೋರಿರುತ್ತಾರೆ.

ಆದುದರಿಂದ ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಯಾರಿಂದಲಾದರೂ ಆಕ್ಷೇಪಣೆ / ತಕರಾರುಗಳಿದ್ದಲ್ಲಿ ಈ ಪ್ರಕಟಣೆಯು ದಿನ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ದಾಖಲೆ ಸಹಿತ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಬೆಂಗಳೂರು, ಇವರಿಗೆ ಸಲ್ಲಿಸಲು ತಿಳಿಸಲಾಗಿದೆ ಮತ್ತು ನಿಗಧಿತ ಅವಧಿ ಮುಗಿದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/- ಕಾರ್ಯದರ್ಶಿ

IN THE COURT OF THE 4TH ADDL. SENIOR CIVIL JUDGE BANGALORE RURAL DISTRICT AT BANGALORE
O.S.No.1279/2024

BETWEEN: 1. Sri. Deepak.S, S/o Late H.P.Sathya, Aged about 48 years, R/at No.S.3, Seindia Garden, 11th Cross, Near Sadashiv Temple Road, R.S.Palya, Bangalore-560033.
2. Smt. Nandani Hansraj, W/o Hansraj, D/o Late H.P.Sathya, Aged about 52 years, R/at No.34, 1st Street, Kamaraj Nagar, Tiruvallur, Tamilnadu-600071.
Represented by GPA holder
Sri. Nirmal Kumar, S/o Late G.H.Prasad (Partner Denim Developer and brother of H.P.Sathya) Aged about 73 years, R/at No.337/M, 13th A Main, HAL 2nd Stage, Bangalore-560008. ... **Plaintiffs**

AND

1. Sri. Manjunath, S/o Late Muniyappa, Aged about 46 years, R/at Kithaganur Village, Bidrahalli Hobli, Krishnarajapuram, Bangalore-560036.
2. Sri.Singa Reddy, S/o B.Siddareddy, Aged about 60 yers, C/o Denim Developer, R/at No.330G, 13th Cross, 9th Cross, HAL 2nd Stage, Bangalore-560008.
3. Sri. Muniraju.M, S/o Muniyappa.K, Aged about 38 years, R/at No.337, Seegehalli Village, Virgonagar Post, Bangalore-560049.
4. Sri. Arun Pradeep.F, S/o Francis, Aged about 33 years, R/at No.11, Beerappa Layout, Virgonagar Post, Bangalore-560049.
5. Sri. Madhu Kumar.A.N. S/o Nagarj, Aged about 39 years, R/at No.263, Venkateshwara Tent Road, K.R.Puram, Bangalore-560036. ... **Defendants**

SUMMONS TO DEFENDANT NO.1 TO 5

Whereas plaintiff has filed above suit for the relief of declaration and injunction against defendants in respect of schedule properties, hence you are hereby summoned to appear before this Hon'ble court in person, or by a pleader duly instructed and be able to answer all material questions related to the execution petition, on the day **09.04.2026 at 11 A.M.** and submit your objections/ defense if any. Take note that failure to appearance on the day mentioned above, the execution petition will be heard and determined in your absence.

SCHEDULE PROPERTY

All that piece and parcel of the agricultural land bearing Sy.No.212, consist of 1 acre 36 guntas situated at Kitaganur Village, Bidrahalli Hobli, Bangalore East Taluk, bounded on:
East by: Remaining portion same Survey number belonging to Abdul Samad consist of 13 guntas
West by: Remaining property of Sy.No.213
North by: Sy.No.211
South by: Private property

Given under my hand and seal of the court on this 26.02.2026.

By Order of the Court Chief Ministerial Officer Senior Civil Judge Court Bengaluru Rural Dist. Bengaluru
Advocate for Plaintiffs: **Mohamed Shafiulla**
No.9, H.H.S. Complex, Cubbonpet Main Road, Bangalore-560002.

IN THE COURT OF THE PRINCIPAL SENIOR CIVIL JUDGE BANGALORE RURAL DISTRICT AT BANGALORE
O.S.No.1101/2014

BETWEEN: Smt.Reshma Taj, W/o Sri.M.S.Iqbal Ahmed ... **PLAINTIFF**
AND: Sri.A.Sahabuddin, S/o Sri.Abdul Qudus and others. ... **DEFENDANTS**

ISSUE OF SUMMONS/NOTICE TO PROPOSED DEFENDANT NO.3

Smt.Indumathi.P, W/o Sri.Prem Kumar, Aged about 38 years, R/at Flat No.A-106, Elite Epitome, 2nd Cross, MLA Layout, Kalenagrahara P.G.Road, Near Hellokids School, Bengaluru

Whereas, the Plaintiff above named has filed a suit for SPECIFIC performance of the sale agreement dated 05.08.2011 executed by the 1st Defendant and also declare that the Sale Deed executed by the 2nd Defendant in favour of proposed Defendant No.3. Therefore you are hereby summoned/notice to appear before this Hon'ble Court in person or through an advocate duly instructed on **23-04-2026** at 11.00 am to answer the claim.

Take notice the default of your appearance on the day above mentioned, the suit will be heard and determined in your absence.

SCHEDULE

Flat bearing No.G-5, situated in the Ground Floor of the multi storied residential apartment building known as "Prince & Princes Palace" constructed on the converted land bearing Sy.No.59/1C, with super built up area of 1080 Sq.ft. consisting of one hall, 2 bedrooms, i.e. one bed room with toilet and another bedroom, toilet, kitchen, with common right in the passages, balconies etc., along with one car parking space on the basement floor of the multi storied apartment building with undivided 443 Sq.ft. share, right, title and interest and possession in the schedule 'A' of the suit agreement constructed on the schedule 'A' land situated at Gottigere Village, Uttarahalli Hobli, Bangalore South Taluk, Bangalore, bounded on the: East by: Sri.Ramanashree Compound, West by: Road, North by: Remaining portion of Sy.No.59/1C & thereafter Sy.No.59/1B, South by: Land bearing Sy.No.45/7 of Sri.Narayanappa and Land bearing Sy.No.45/6 of Sri.G.S.Manjunath.

Give under my hand and seal of the court on 07-03-2026

By order of the court, Chief Ministerial Officer, Senior Civil Judge Court, bangalore Rural District, Bangalore.

Sri.R.B. SADASIVAPPA,
Sri. MERAVEGOWDA, Advocates
No.4, Corporation Building, Opposite Movie Land Theater, S.C. Road, Bengaluru-560 009.

IN THE COURT OF THE I ADDITIONAL DISTRICT AND SESSIONS JUDGE AND MACT AT KOLAR
MVC No.194/2025

BETWEEN: Sri. Narayanaswamy ... PETITIONER
AND: Sri. Rajeev Kumar Singh ... RESPONDENT

NOTICE TO 1ST RESPONDENT

Sri. Rajeev Kumar Singh, S/o Sukhdev Singh, Major by age, R/at: No.59, Kanekal, Hosakote Taluk, Bengaluru Rural District. Pincode-562114.

Whereas, the petitioner herein above has filed the above claim petition under section 166 of IMV Act against you, claiming compensation of Rs.50,00,000/- (Rs. Fifty Lakhs only) for the injuries sustained by the petitioner in a R.T.A, caused by your ambulance vehicle bearing Reg.KA-05-AK-6835 on 02-06-2025 at about 4:00 P.M., near Veerabhadra Swamy Temple, on Kolar - Bengaluru NH-75 road, at Mugabagala village, Hosakote Taluk, Bengaluru Rural District.

Wherefore, you are here by summoned to appear before this Hon'ble Court on **09/04/2026** at **11:00 A.M.** in person or through advocate duly instructed. Otherwise the petition will be disposed off in your absence.

Given under my hand and seal at this court on this 02/03/2026

By order of the Court, Chief Administrative Officer, Prl. District & Sessions Court, Kolar

N. MANJUNATH, Advocate
No.778, 8th Cross, 'B' Block, Jayanagar, Kolar-563101

IN THE COURT OF THE I ADDITIONAL DISTRICT AND SESSIONS JUDGE AND MACT AT KOLAR
MVC No.193/2025

BETWEEN: Sri. Narayanaswamy ... PETITIONER
AND: Sri. Rajeev Kumar Singh ... RESPONDENT

NOTICE TO 1ST RESPONDENT

Sri. Rajeev Kumar Singh, S/o Sukhdev Singh, Major by age, R/at: No.59, Kanekal, Hosakote Taluk, Bengaluru Rural District. Pincode-562114.

Whereas, the petitioner herein above has filed the above claim petition under section 166 of IMV Act against you, claiming compensation of Rs.5,00,000/- (Rs. Five Lakhs only) for the injuries sustained by the petitioner in a R.T.A, caused by your ambulance vehicle bearing Reg.KA-05-AK-6835 on 02-06-2025 at about 4:00 P.M., near Veerabhadra Swamy Temple, on Kolar - Bengaluru NH-75 road, at Mugabagala village, Hosakote Taluk, Bengaluru Rural District.

Wherefore, you are here by summoned to appear before this Hon'ble Court on **09/04/2026** at **11:00 A.M.** in person or through advocate duly instructed. Otherwise the petition will be disposed off in your absence.

Given under my hand and seal at this court on this 02/03/2026

By order of the Court, Chief Administrative Officer, Prl. District & Sessions Court, Kolar

N. MANJUNATH, Advocate
No.778, 8th Cross, 'B' Block, Jayanagar, Kolar-563101

IN THE COURT OF THE SMALL CAUSES JUDGE AND M.A.C.T. AT BANGALORE CITY
M.V.C. No. 9135/2025 (SCCH-13)

BETWEEN: S. Ramesh, Reptd by his wife R. Latha as Next Friend ... **PETITIONER/S**
AND: Randhir Singh & Another .. RESPONDENT/S

NOTICE TO RESPONDENT No.1

Randhir Singh, S/o. Nafe Singh, No.76/1, Gunduraj Estate, Dupasipalya main road, Valagerahalli, Kengeri, Bangalore-560060.

WHEREAS, the above named Next Friend of petitioner have filed the claim petition against you as one of the Respondents, claiming compensation of Rs.2,00,00,000/- (Rupees Two Crores only) together with costs and interest for the Head injuries of the petitioner in a Road Traffic Accident caused by your TATA Intra Vehicle bearing Reg. No. KA-41-D-7143 on 06-09-2025 at about 08.00 A.M near Nandini Booth, Wonder Blue Garments in a Mylasandra main road, Bangalore. Hence you are hereby summoned to appear in this court in person or by a pleader duly instructed and able to answer all material questions relating to the cases on the **01/04/2026** at **11:00 A.M.**, in default of your appearance on the day mentioned above, the petition will be heard and determined in your absence.

Given under my hand and seal of the court on this 27/02/2026

By order of the Court, Assistant Registrar, Court of Small Causes, Bangalore

K.B. ROOPA, Advocate
No.14, Basement, Amar Towers (Behind Olympic Sports) 1st Cross, Gandhinagar, Bangalore-560 009

IN THE COURT OF THE ASSISTANT COMMISSIONER AT MADHUGIRI
RRT (A)(P) 55/2025

Appellant : Nagappa -Vs-
Respondents : Srinivas

To, R3) Smt.B.N.Bharathi D/o B. K. Narayana, Balele village, Virajpet taluk, Kodagu Dist.

NOTICE

Whereas the appellant Nagappa has instituted the above appeal against you and others claiming khata and pahani in respect of S.No.154 of Kamsana halli village, Kodigena hali hobli, Madhugiri taluk.

The said appeal has been registered as above and the said appeal is posted to : 16-03-2026. You, the respondent is hereby directed to appear on the above said date at 11 a.m. before this court. Failing which the matter will be heard and determined in your absence. Given under my hand and the seal of this Court on this the 23rd Day of February 2026.

By Order of the Court,
Office of the Assistant Commissioner
Madhugiri sub Division.
Advocate for appellant:
Sri B.H.Panchaksharaiah, Advocate
Madhugiri. Tumakukru Dist.

ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕೋಲಾರ
ಪಿ & ಎಸ್.ಸಿ.ಸಂಖ್ಯೆ 33/2026

ಅರ್ಜಿದಾರರು : ಶಿವಕುಮಾರ್ ಬಿನ್ ಲೇಟ್ ವೆಂಕಟರವಣಪ್ಪ, ವಯಸ್ಸು 37 ವರ್ಷ ವಾಸ: ಬಸವನತ್ತ ಗ್ರಾಮ, ಕಸಬಾ ಹೋಬಳಿ, ಕೋಲಾರ ತಾಲ್ಲೂಕು.
ವಿರುದ್ಧ
ಎದುರುದಾರರು : ಇಲ್ಲ

ಸಾರ್ವಜನಿಕ ಪ್ರಕಟಣೆಗಾಗಿ

ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಪಟ್ಟಂತೆ ಮುನಿವೆಂಕಟಪ್ಪ ಬಿನ್ ವೆಂಕಟರವಣಪ್ಪ ರವರು ದಿನಾಂಕ: 07-06-1994 ರಂದು ರಿಜಿಸ್ಟರ್ ವಿಲ್ ಯಾ ಮರಣ ಶಾಸನವನ್ನು ತಯಾರು ಮಾಡಿ ಬರೆದಿರುತ್ತಾರೆ. ಸದರಿ ಮೇಲ್ಕಂಡ ಮುನಿವೆಂಕಟಪ್ಪ ಬಿನ್ ವೆಂಕಟರವಣಪ್ಪ ರವರು ದಿನಾಂಕ: 01-03-2010 ರಂದು ಮನೆಯಲ್ಲಿ ಘವತಿಯಾಗಿರುತ್ತಾರೆ. ಸದರಿ ಲೇಟ್ ಮುನಿವೆಂಕಟಪ್ಪ ಬಿನ್ ವೆಂಕಟರವಣಪ್ಪ ರವರು ಅರ್ಜಿದಾರರ ಹೆಸರಿಗೆ ಬರೆದಿಟ್ಟಿರುವ ವಿಲ್‌ಗೆ ಸಂಬಂಧಪಟ್ಟಂತೆ ಪ್ರೊಬೇಟ್ ಕೋರಿ ಅರ್ಜಿದಾರರು ಈ ಘನ ನ್ಯಾಯಾಲಯದಲ್ಲಿ ಹಿಂದೂ ಉತ್ತಾಧಿಕಾರ ಅಧಿನಿಯಮದ ಕ್ರಮಾದೇಶ 276 ರಡಿಯಲ್ಲಿ ಪಿ ಅಂಡ್ ಎಸ್.ಸಿ 33 /2026 ರಂತೆ ದಾವೆಯನ್ನು ಸಲ್ಲಿಸಿದ್ದು, ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಪಟ್ಟಂತೆ ದಿನಾಂಕ: 17-04-2026 ರಂದು ಹಾಜರಾತಿಗಾಗಿ ನಿಗದಿ ಪಡಿಸಿದ್ದು ಆ ದಿನ ಬೆಳಗ್ಗೆ 11.00 ಗಂಟೆಗೆ ಖುದ್ದಾಗಿ ಆಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ತಕರಾರು ಏನಾದರೂ ಇದ್ದಲ್ಲಿ ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಕಾನೂನು ಅನುಸರಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

ಈ ನೋಟೀಸನ್ನು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಡನೆ ದಿನಾಂಕ:07-03-2026 ನೇ ದಿನದಂದು ನೀಡಲಾಗಿದೆ.

ಷೆಡ್ಯೂಲ್

1) ಕೋಲಾರ ತಾಲ್ಲೂಕು, ಕಸಬಾ ಹೋಬಳಿ, ಸೀಪೂರು ಗ್ರಾಮದ ಸರ್ವೆ ನಂ.46 ರ ವಿಸ್ತೀರ್ಣ 4-15 ಎಕರೆ ಜಮೀನು ಸ್ವತ್ತಿಗೆ ಚೆಕ್ಕುಬಂಧಿ: ಪೂರ್ವಕ್ಕೆ ದೊಡ್ಡೀರಪ್ಪ ರವರ ಸ್ವತ್ತು, ಪಶ್ಚಿಮಕ್ಕೆ ಸರ್ವೆ ನಂ.56 ಉತ್ತರಕ್ಕೆ - ರಾಜಕಾಲುವೆ, ದಕ್ಷಿಣಕ್ಕೆ - ಹೊಗರಿ ಗ್ರಾಮದ ಗಡಿ.

ನ್ಯಾಯಾಲಯದ ಆದೇಶದ ಮೇರೆಗೆ,
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.
ಎನ್. ಮೈಲಾರಿಗೌಡ, ವಕೀಲರು, ಕೋಲಾರ.

IN THE COURT OF THE HON'BLE LXXV ADDL. CITY CIVIL & SESSION'S COURT AT BANGALORE (CCH-76)
O.S. No. 6374/2025

BETWEEN : THE STATE BANK OF INDIA, RAJAJI NAGAR 'E' BLOCK (15322) NO. 80, 3RD MAIN, "E' BLOCK, SUBRAMANYANAGAR ROAD, 2ND STAGE, RAJAJI NAGAR, BENGALURU - 560010. Represented by its Manger **...PLAINTIFF**
AND : Mr. PRASAD B P, ...DEFENDANT

SUMMONS TO DEFENDANT BY WAY OF PAPER PUBLICATION

Mr. PRASAD B P, Aged about 39 Years S/O PARAMESH ACHAR No. 05, MADAVI NILAYAM, 4TH CROSS, S M ROAD, AYYAPPA NAGARA, JALAHALLI WEST, BANGALORE-560015. Ph : 8904340194. **...DEFENDANT**

Whereas, the Plaintiff has filed a suit Recovery of money instituted the present suit, for sum of **Rs. 2,30,789/- (Rupees Two Lakhs Thirty Thousand seven Hundred and Eighty Nine Rupees Only),** and future interest at contractual rate together with other applicable expenses, charges from the date of NPA till closure of loan. Hence you are hereby summoned to appear before court, person or through a Pleader **on 28.04.2026 at 11.00 A.M.** to answer the same failing which suit will be Disposed of Ex-parte.

Given under my hand and the seal of the court this 4th day of March 2026.

By Order of the Court, Senior Sheristedar, City Civil Court, Bengaluru.
Advocate for Plaintiff :
J. SATHISH KUMAR, Advocate
EWS 16/2, 1st Cross, 2nd Main, 2nd Stage, KHB (AD Halli) Basaveshwaranagar, Bengaluru-560 079. Mob : 9448448238
Email : gsnadvocates@yahoo.com

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಮಲ್ಲೇಶ್ವರಂ ವಲಯ, ಕಾರ್ಯಪಾಲಕ ಅಭಿಯಂತರರ ಕಛೇರಿ,
ರಾಜಾಜಿನಗರ ವಿಭಾಗ, ಬೆಪನಪಾ ಕಟ್ಟಡ, ನಂ.161, 1ನೇ ಮಹಡಿ, 19ನೇ ಮುಖ್ಯರಸ್ತೆ,
2ನೇ ಬ್ಲಾಕ್, ಹಳೆ ನವರಂಗ ಬಸ್ ನಿಲ್ದಾಣ ಹತ್ತಿರ, ರಾಜಾಜಿನಗರ, ಬೆಂಗಳೂರು-560010.

ಸಂಖ್ಯೆ:ಕಾಅ(ಆರ್‌ಎನ್‌ಆರ್)/ಕೆಪಿಪಿ/ಟೆಂಡರ್/06/2025-26/ಕರೆ-3 ದಿನಾಂಕ: 06-03-2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ - (ಐಎಫ್‌ಟಿ)
(ಏಕ ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ಬೆಂಪನಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗೆ ಜಿಬಿಎನಲ್ಲಿ ನೋಂದಾಯಿತ ಗುತ್ತಿಗೆದಾರರು ಅಥವಾ ಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ದರ್ಜೆಯಲ್ಲಿ ನೋಂದಾಯಿಸಿರುವ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ - ಕೆಡಬ್ಲ್ಯೂ-1)

ಕ್ರ ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ಬಸವೇಶ್ವರನಗರ ವಾರ್ಡ್ ಸಂಖ್ಯೆ 133, ಬಸವೇಶ್ವರನಗರದ ಭೋವಿ ಕಾಲೋನಿಗೆ ಹೊಸ ಪ್ರವೇಶ ಕಮಾನು (ನ್ಯೂ ಎಂಟ್ರೆನ್ಸ್ ಆರ್ಚ್) ಒದಗಿಸುವುದು. (ಎಸ್.ಸಿ). (3ನೇ ಕರೆ) - ಟೆಂಡರಿಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) (ರೂ. ಲಕ್ಷಗಳಲ್ಲಿ): 21.18, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,000/-

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **07-03-2026** ರಂದು **17.30** ಗಂಟೆಯ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **12-03-2026.** 3) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: **16-03-2026** ರಂದು **17.00** ಗಂಟೆವರೆಗೆ. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **17-03-2026** ರಂದು **17.30** ಗಂಟೆಗೆ. 5) ಆರ್ಥಿಕ ಬಿಡ್‌ನ್ನು **ತಾಂತ್ರಿಕ ಬಿಡ್ ಅನುಮೋದನೆ ನಂತರ ಕೆ.ಪಿ.ಪಿ. ಪೋರ್ಟಲ್ ಮೂಲಕ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ರಾಜಾಜಿನಗರ ವಿಭಾಗ, ಮಲ್ಲೇಶ್ವರಂ ವಲಯ, ಬೆಂಪನಪಾ.

ಮಹಾನಗರ ಪಾಲಿಕೆ, ಕಲಬುರಗಿ
ದೂರವಾಣಿ: 08472-278675, ಫಾಕ್ಸ್ : 08472-260776, ಇ-ಮೇಲ್:itstaff_ulb_gulbarga@yahoo.com

No: KMP/EE/TS-02/15th FC/2025-26 Date : 07.03.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್
ಪ್ರಕಟಣೆ. ಸಂಖ್ಯೇ : /2025-26

1) ಕಾಮಗಾರಿಯ ವಿವರ : **ಕಲಬುರಗಿ ಮಹಾನಗರ ಪಾಲಿಕೆಯಿಂದ 2024-25ನೇ ಸಾಲಿನ 15ನೇಹಣಕಾಸು ಯೋಜನೆಯಡಿ** ಉಳಿತಾಯವಾದ ಮೊತ್ತದಲ್ಲಿ ಮತ್ತು 2024-25 & 2025-26 ನೇ ಸಾಲಿನ 15ನೇ ಹಣಕಾಸು ಆಯೋಗದ ಪರಿಷ್ಕೃತ ಕ್ರಿಯಾ ಯೋಜನೆಯ ಅನುದಾನದಲ್ಲಿ ಹಾಗೂ 2025-26ನೇ ಸಾಲಿನ 15ನೇ ಹಣಕಾಸು ಆಯೋಗದ ಕ್ರಿಯಾ ಯೋಜನೆಯ ಅನುದಾನದಲ್ಲಿ ಅನುಮೋದನೆಗೊಂಡ ಒಟ್ಟು (24) ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್ -20 ನಲ್ಲಿ ಕೆ.ಟಿ.ಪಿ.ಪಿ. ರ ಪ್ರಕಾರ ಕೆ.ಡಬ್ಲ್ಯೂ-1,2,3,&4 ರ ಮೂಲಕ 15 ದಿನಗಳ ಟೆಂಡರನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in/ ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಕನಿಷ್ಠ ಮೊತ್ತ ರೂ.4.00 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ.121.00 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ:3&4ನೇ ದರ್ಜೆ ಮತ್ತು ಹೆಚ್ಚು 4) ಟೆಂಡರ ಅರ್ಜಿಯ ಬೆಲೆ ರೂ.ಕೆ.ಪಿ.ಪಿ.ಪಿ. ಪ್ರೋರ್ಟಲ್ -2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಕನಿಷ್ಠ ರೂ.5,200.00 ಗಳು ಹಾಗೂ ಗರಿಷ್ಠ ರೂ.1,87,700.00ಗಳು 5) ಪೂರ್ವಭಾವಿ ಸಭೆ ದಿನಾಂಕ: 25.03.2026 ರಂದು ಬೆಳಿಗ್ಗೆ 11.00 ಗಂಟೆಗೆ 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 25.03.2026 ರಂದು ಸಾಯಂಕಾಲ 4.30 ಗಂಟೆಗೆ 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: 26.03.2026 ರಂದು ಸಾಯಂಕಾಲ 4.35 ಗಂಟೆಗೆ 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: 27.03.2026 ರಂದು ಬೆಳಿಗ್ಗೆ 11.30 ಗಂಟೆಗೆ ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ **http://www.kalaburagicity.mrc.gov.in**

Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

ಸಹಿ/- ಕಾರ್ಯಪಾಲಕ ಅಭಿಯಂತರರು
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/1146/ದೇಶಪಾಂಡೆ ಪಬ್ಲಿಸಿಟಿ/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-6/2025-26/6564 ದಿನಾಂಕ: 05.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https://kppp.karnataka.gov.in/ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2025-26/BR/WORK_INDENT33717	200.00
2)	PWD/2025-26/BD/WORK_INDENT34339	300.00
3)	PWD/2025-26/BD/WORK_INDENT34340	200.00
4)	PWD/2025-26/BD/WORK_INDENT34367	235.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **09.03.2026** ರಂದು **12.00** ಗಂಟೆಯ ವರೆಗೆ. ಆ)ಕೆಪಿಪಿ-ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **13.03.2026** ರಂದು **16.00** ಗಂಟೆಯ ವರೆಗೆ
ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **14-03-2026** ರಂದು **16.30** ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1102/ಕೆಎಸ್‌ಎಂಸಿಎ/2025-26

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ- 561203

ಸಂ.: DPA/TP/CLU/100/2025-26 ದಿನಾಂಕ: 07.03.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ-ಗು)	ಸರ್ಕಾರದ ಅಧಿಸೂಚನೆಯಂತೆ ಪರಿಗಣಿಸಲಾದ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಚೇತನ್ ಹೆಚ್.ಆರ್. ಬಿನ್ ರಾಮಚಂದ್ರಯ್ಯ ಹೆಚ್.ಸಿ.	ದೊಡ್ಡಬಳ್ಳಾಪುರ	ಮಧುರೆ	ಕೆಂಜಿಗನಹಳ್ಳಿ	44/6	0-14	ವ್ಯವಸಾಯ	ವಸತಿ
2.		ದೊಡ್ಡಬಳ್ಳಾಪುರ	ಮಧುರೆ	ಕೆಂಜಿಗನಹಳ್ಳಿ	45/4	0-34	ವ್ಯವಸಾಯ	ವಸತಿ
3.		ದೊಡ್ಡಬಳ್ಳಾಪುರ	ಮಧುರೆ	ಕೆಂಜಿಗನಹಳ್ಳಿ	46/2	2-10	ವ್ಯವಸಾಯ	ವಸತಿ
4.	ಶ್ರೀ ರಾಮಚಂದ್ರಯ್ಯ ಹೆಚ್.ಸಿ. ಬಿನ್ ಚನ್ನಂಕಯ್ಯ ಹೆಚ್.ವಿ.	ದೊಡ್ಡಬಳ್ಳಾಪುರ	ಮಧುರೆ	ಕೆಂಜಿಗನಹಳ್ಳಿ	46/1	2-18	ವ್ಯವಸಾಯ	ವಸತಿ
5.		ದೊಡ್ಡಬಳ್ಳಾಪುರ	ಮಧುರೆ	ಕೆಂಜಿಗನಹಳ್ಳಿ	47/2	00-25	ವ್ಯವಸಾಯ	ವಸತಿ
6.		ದೊಡ್ಡಬಳ್ಳಾಪುರ	ಮಧುರೆ	ಕೆಂಜಿಗನಹಳ್ಳಿ	56/2	2-06	ವ್ಯವಸಾಯ	ವಸತಿ
7.		ದೊಡ್ಡಬಳ್ಳಾಪುರ	ಮಧುರೆ	ಕೆಂಜಿಗನಹಳ್ಳಿ	58/1	2-12.50	ವ್ಯವಸಾಯ	ವಸತಿ
8.	ಶ್ರೀ ಉಮೇಶ್ ಹೆಚ್.ಸಿ. ಬಿನ್ ಚನ್ನಂಕಯ್ಯ ಹೆಚ್.ವಿ.	ದೊಡ್ಡಬಳ್ಳಾಪುರ	ಮಧುರೆ	ಕೆಂಜಿಗನಹಳ್ಳಿ	56/1	2-15	ವ್ಯವಸಾಯ	ವಸತಿ
9.		ದೊಡ್ಡಬಳ್ಳಾಪುರ	ಮಧುರೆ	ಕೆಂಜಿಗನಹಳ್ಳಿ	56/3	1-35	ವ್ಯವಸಾಯ	ವಸತಿ
10.		ದೊಡ್ಡಬಳ್ಳಾಪುರ	ಮಧುರೆ	ಕೆಂಜಿಗನಹಳ್ಳಿ	58/2	3-15	ವ್ಯವಸಾಯ	ವಸತಿ
11.	ಶ್ರೀ ರಾಮಚಂದ್ರಯ್ಯ ಹೆಚ್.ಸಿ. ಬಿನ್ ಚನ್ನಂಕಯ್ಯ ಹೆಚ್.ವಿ., ಶ್ರೀ ಉಮೇಶ್ ಹೆಚ್.ಸಿ. ಬಿನ್ ಚನ್ನಂಕಯ್ಯ ಹೆಚ್.ವಿ.	ದೊಡ್ಡಬಳ್ಳಾಪುರ	ಮಧುರೆ	ಕೆಂಜಿಗನಹಳ್ಳಿ	58/3	2-12.50	ವ್ಯವಸಾಯ	ವಸತಿ

ಷರಾ: ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಕಾನೂನುಬದ್ಧವಾದ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಗೌರವಾನ್ವಿತ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮದ್ದೂರು
ಅಸಲು ದಾವಾ ಸಂಖ್ಯೆ: 148/2024

ವಾದಿ: ಹೆಚ್.ಎಲ್. ಯೋಗೇಶ್ ಬಿನ್ ಲೇಟ್.ಟಿ.ಲಿಂಗಯ್ಯ ವಯಸ್ಸು 51 ವರ್ಷ, ವಾಸ: ಹಳ್ಳಿಕೆರೆ ಗ್ರಾಮ, ಕಸಬಾ ಹೋಬಳಿ, ಮದ್ದೂರು ತಾಲ್ಲೂಕು. ---ವಿರುದ್ಧ---
ಪ್ರತಿವಾದಿಗಳು 1. ಹೆಚ್.ಎಲ್. ಸತೀಶ್ ಮತ್ತು ಇತರರು
ಪ್ರತಿವಾದಿಗಳು: 4. ರಾಜಶೇಖರ್.ಸಿ. ಜಕ್ಕ ಬಿನ್ ಚನ್ನಬಸಪ್ಪ ಜಕ್ಕ ವಯಸ್ಸು 48 ವರ್ಷ, ವಾಸ: ನಂ. 103, ಸ್ಕಾಯಿನ್ ಎನ್‌ಕ್ಲೇವ್, 10ನೇ ಕ್ರಾಸ್, ಕೋಡಿಹಳ್ಳಿ, ಲೀಲಾ ಪ್ಯಾಲೇಸ್ ಹಿಂಭಾಗ, ಹೆಚ್.ಎ.ಎಲ್. 2ನೇ ಹಂತ, ಬೆಂಗಳೂರು-560008. 5.ಎಂ.ಸಂಪ್ರೀತ್ ಕುಮಾರ್ ಬಿನ್ ಲೇಟ್. ಮಲ್ಲೇಗೌಡ ವಯಸ್ಸು 50 ವರ್ಷ, 6. ಜಿ.ಬಿ. ಸುಧಾ ಕೋಂ ಎಂ.ಸಂಪ್ರೀತ್ ಕುಮಾರ್ ವಯಸ್ಸು 49 ವರ್ಷ, 5 ಮತ್ತು 6 ರವರ ವಾಸ: ತೊರೆಚಾಕನಹಳ್ಳಿ ಗ್ರಾಮ, ಸಿ.ಎ.ಕೆರೆ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. 7. ಎಂ.ಪ್ರಕಾಶ್ ಬಿನ್ ಮುನಿರಾಜಪ್ಪ ವಯಸ್ಸು 46 ವರ್ಷ, ವಾಸ: ಮಾಲೂರು ಗ್ರಾಮ, ಕಾರ್‌ಮಲರಾಮ್ ಅಂಚೆ, ವರ್ತೂರ್ ಹೋಬಳಿ, ಸರ್ಜಾಪುರ ಮೇನ್ ರೋಡ್, ಬೆಂಗಳೂರು ಪೂರ್ವ ತಾಲ್ಲೂಕು-560035. 9. ಕೆ.ಎಸ್. ಗೋಪಾಲ್ ಬಿನ್ ಲೇಟ್. ಸಿದ್ದೇಗೌಡ ವಯಸ್ಸು 61 ವರ್ಷ, ವಾಸ: ಕರನಗರ ಗ್ರಾಮ, ಮಳೂರು ಹೋಬಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ. 16. ಎಸ್.ಕೆ. ಶಾಮಾಚಾರಿ ಬಿನ್ ಕಾಳಚಾರಿ.ಎಂ.ಎಸ್. ವಯಸ್ಸು 67 ವರ್ಷ, 17. ಶ್ರೀಮತಿ. ಕೆ.ಭಾಗ್ಯಮ್ಮ ಕೋಂ ಎಸ್.ಕೆ. ಶಾಮಾಚಾರಿ, ವಯಸ್ಸು 57 ವರ್ಷ, 18. ಎಸ್.ವಿಶ್ವನಾಥ್ ಬಿನ್ ಎಸ್.ಕೆ. ಶಾಮಾಚಾರಿ ವಯಸ್ಸು 25 ವರ್ಷ, 16 ರಿಂದ 18 ರವರ ವಾಸ 62/19, 4ನೇ ಕ್ರಾಸ್, ಜೈನ್ ದೇವಸ್ಥಾನ ಕರುಣಾಶ್ರೀ ಲೇಔಟ್, ಮೇಧಹಳ್ಳಿ, ಬೆಂಗಳೂರು ಉತ್ತರ -560049 20. ರಾಜೇಶ್ ಪಟ್ಟಾಭಿ ಬಿನ್ ಪಟ್ಟಾಭಿ ರಾಮನ್ ವಯಸ್ಸು 54 ವರ್ಷ, ವಾಸ: 379, ಬಿ.ಹೆಚ್.ಇ.ಎಲ್, ಲೇಔಟ್ ದಕ್ಷಿಣ, ಪಟ್ಟಣಗೆರೆ, ಆರ್.ಆರ್. ನಗರ, ಬೆಂಗಳೂರು ದಕ್ಷಿಣ-560098. 21. ವಸಂತ.ವಿ.ಡಿ. ಬಿನ್ ದಾಸೇಗೌಡ ವಯಸ್ಸು 53 ವರ್ಷ, ವಾಸ: ವಳಗೆರೆಹಳ್ಳಿ ಗ್ರಾಮ, ಕಸಬಾ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ 22. ಮಾನಸ.ಎಂ.ಎ. ಕೋಂ ರಾಜೇಶ್.ಎ.ಎಂ. ವಯಸ್ಸು 32 ವರ್ಷ, ವಾಸ: ನಂ. 10, 3ನೇ ಮೇನ್, ಇ-ಕ್ರಾಸ್, ಸರ್ಕಾರಿ ಎಲೆಕ್ಟ್ರಿಕಲ್ ಫ್ಯಾಕ್ಟರಿ ಹತ್ತಿರ, ಮೈಸೂರು ರೋಡ್, ಬ್ಯಾಟರಾಯನಪುರ, ಬೆಂಗಳೂರು ದಕ್ಷಿಣ -560026. 25. ಎಸ್.ಬಲರಾಮು ಬಿನ್ ಸುಬ್ಬಾಶೆಟ್ಟಿ ವಯಸ್ಸು 62 ವರ್ಷ, ವಾಸ: ನಲ್ಲೂರು ಗ್ರಾಮ, ಚಂದಕವಾಡಿ ಹೋಬಳಿ, ಚಾಮರಾಜನಗರ ತಾಲ್ಲೂಕು, ಚಾಮರಾಜನಗರ ಜಿಲ್ಲೆ. 28. ಚೈತ್ರಸಿ.ಎಸ್. ಕೋಂ ರವೀಶ.ಎಂ.ಕೆ. ವಯಸ್ಸು 30 ವರ್ಷ, ವಾಸ: ಮಾಕಳಿ ಗ್ರಾಮ, ಮಾಕಳಿ ಹೋಬಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ. 31. ಗೋಪಾಲ್.ಎಂ. ಬಿನ್ ಮುನಿಶಾಮಪ್ಪ ವಯಸ್ಸು 53 ವರ್ಷ, ವಾಸ: 53/2, ಗಣೇಶ ಪ್ರಾವಿಷನ್ ಸ್ಟೋರ್ ಎದುರು, ಕರ್‌ಮೇಲಾರಮ್ ಮುತ್ತೂರು, ವರ್ತೂರ್ ಹೋಬಳಿ, 230-560035. 32. ರವಿಕುಮಾರ್.ಜೆ. ಬಿನ್ ಜಯರಾಮಯ್ಯ ವಯಸ್ಸು 44 ವರ್ಷ, ವಾಸ: ಮೇಗಳದೊಡ್ಡಿ ಗ್ರಾಮ, ಉರಗಹಳ್ಳಿ ದಾಖಲೆ ಗ್ರಾಮ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ. 42. ಶ್ರೀಮತಿ, ಕೆಂಪಮ್ಮ ಕೋಂ ಲೇಟ್.ಸಿದ್ದೇಗೌಡ ವಯಸ್ಸು 75 ವರ್ಷ, 43. ಶ್ರೀಮತಿ, ಕೌಸಲ್ಯಎನ್.ಎಸ್ ಬಿನ್ ಪುಟ್ಟಬೋರೇಗೌಡ ವಯಸ್ಸು 53 ವರ್ಷ, 42 ಮತ್ತು 43 ರವರ ವಾಸ: ನಂ. 198, 5ನೇ ಕ್ರಾಸ್, ಕವಿಕಾ ಲೇಔಟ್, ಬಿನ್ನಿಪೇಟೆ, ಬೆಂಗಳೂರು ದಕ್ಷಿಣ. 44. ಶ್ರೀಮತಿ. ಹೇಮಾವತಿ ಕೋಂ ಪುಟ್ಟಲಿಂಗಯ್ಯ ವಯಸ್ಸು 43 ವರ್ಷ, ವಾಸ: ಕನ್ನಲಿ ಗ್ರಾಮ, ಕಸಬಾ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. 45. ಸ್ವಾಮಿ.ಹೆಚ್.ಆರ್. ಬಿನ್ ರಾಜಣ್ಣ ವಯಸ್ಸು 32 ವರ್ಷ, ವಾಸ: ವಳಗೆರೆದೊಡ್ಡಿ ಗ್ರಾಮ, ಕಸಬಾ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. 46. ಸಿದ್ದೇಗೌಡ.ಕೆ.ಹೆಚ್. ಬಿನ್ ಹೊನ್ನೇಗೌಡ ವಯಸ್ಸು 44 ವರ್ಷ, ವಾಸ: ಕೂಳಗೆರೆ ಗ್ರಾಮ, ಸಿ.ಎ.ಕೆರೆ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. 48. ಶ್ರೀಮತಿ. ಅನಿತಾ ಕೋಂ ಗೋಪಾಲ್ ಜಾಧವ ವಯಸ್ಸು 55 ವರ್ಷ, ವಾಸ: ಶೋರಪುರ ಗ್ರಾಮ, ಯಲಗಿ ತಂಡ ತಾಲ್ಲೂಕು, ಯದಗಿರಿ ಜಿಲ್ಲೆ. 53.ಶಶಿಕಲಾ ಕೋಂ, ರಾಮನಂದ ರಾವ್, ವಯಸ್ಸು 65 ವರ್ಷ, ವಾಸ: ನಂ.2288, 8ನೇ ಮೈನ್, 2ನೇ ಕ್ರಾಸ್, ಎಂ.ಸಿ.ಸಿ.ಎ ಬ್ಲಾಕ್, ಸಾಯಿ ದೇವಸ್ಥಾನ ಹತ್ತಿರ, ದಾವಣಗೆರೆ ಟೌನ್, ದಾವಣಗೆರೆ ಜಿಲ್ಲೆ 54. ಶ್ರೀಮತಿ ಚೇತನ ಏಡೆನ್ ಕೋಂ.ಮಹದೇವರಾಜು ಎಂ. ಅರಸು, ವಯಸ್ಸು 38 ವರ್ಷ, ವಾಸ: 4ನೇ ಕ್ರಾಸ್, ವಿ.ವಿ ನಗರ, ಮದ್ದೂರು ಟೌನ್, ಮದ್ದೂರು ತಾಲ್ಲೂಕು. 56. ಶ್ರೀಮತಿ ಗೀತಾ ರಾಘವನ್ ಕೊಂ. ರಾಘವನ್, ವಯಸ್ಸು 48 ವರ್ಷ, ವಾಸ: ನಂ.266, 2ನೇ ಮಹಡಿ, 14ನೇ ಕ್ರಾಸ್, ದೊಮ್ಮಲೂರು ಲೇಔಟ್, ಬೆಂಗಳೂರು ಉತ್ತರ, ಬೆಂಗಳೂರು, 58. ಶ್ರೀಮತಿ ಬಿ.ಎಂ.ಪುಷ್ಪ ಕೋಂ, ಬಿ.ಸಿ. ಗುರುಪ್ರಸಾದ್, ವಯಸ್ಸು 60 ವರ್ಷ, ವಾಸ: ನಂ.411/2, 18ನೇ ಮೈನ್, 4ನೇ ಟಿ-ಬ್ಲಾಕ್, ಜಯನಗರ, ಬೆಂಗಳೂರು. 59. ಶ್ರೀಮತಿ ವಿಜಯ ಕೋಂ. ವೆಂಕಟೇಶ, ವಯಸ್ಸು 52 ವರ್ಷ, ವಾಸ: ಹನುಮನಹಳ್ಳಿ ಗ್ರಾಮ, ಕೂಟಗಲ್ ಹೋಬಳಿ, ರಾಮನಗರ ತಾಲ್ಲೂಕು, 60. ಶ್ರೀಮತಿ ಬಕ್ಕೀರಿದ್ದು ಕೋಲ ಈರಯ್ಯ ವಯಸ್ಸು 49 ವರ್ಷ, ವಾಸ: ಚೊಟ್ಟಗಹಳ್ಳಿ ಗ್ರಾಮ, ಕಸಬಾ ಹೋಬಳಿ, ಮದ್ದೂರು ತಾಲ್ಲೂಕು, ಮಲದ್ಯ ಜಿಲ್ಲೆ 61. ಶ್ರೀಮತಿ, ರತ್ನ ಕೋಂ ನರಸಿಂಹ ಮೂ ವಯಸ್ಸು 55 ವರ್ಷ, ವಾಸ: ನಂ. 6, 2ನೇ ಮೇನ್, 1ನೇ ಬ್ಲಾಕ್, 3ನೇ ಕ್ರಾಸ್, ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ, ಬೈರಸಂದ್ರ, ಜಯನಗರ, ಬೆಂಗಳೂರು. 62. ಶ್ರೀಮತಿ, ಪುಟ್ಟಮಾದಮ್ಮ ಕೋಂ ಎಲ್.ಶಿವಲಿಂಗಯ್ಯ ವಯಸ್ಸು 53 ವರ್ಷ, ವಾಸ: ಜಯಚಾಮರಾಜರ, ಕಿರುಗಾವಲು ಗ್ರಾಮ ಮತ್ತು ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, 63, ರತ್ನಮ್ಮ ಕೋಂ ವೆಂಕಟರಮಣೇಗೌಡ ವಯಸ್ಸು 47 ವರ್ಷ, ಬೆಳತೂರು ಗ್ರಾಮ, ಕೊಪ್ಪ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ, 66, ಟಿ.ಎಂ. ಸೋಮರಾಜು ಬಿನ್ ಮಾಯಿಗೌಡ ವಯಸ್ಸು 50 ವರ್ಷ ವಾಸ: ನಂ. 21, 80 ಅಡಿ ರಸ್ತೆ, ಕರ್ನಾಟಕ ಬ್ಯಾಂಕ್ ಎದುರು, 2ನೇ ಹಂತ, ಬೆಂಗಳೂರು -560085.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿಗಳ ವಿರುದ್ಧ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ದಾವೆ ಹೂಡಿರುತ್ತಾರೆ. ಸದರಿ ದಾವೆಯಲ್ಲಿ ಪ್ರತಿವಾದಿಗಳಾದ 4 ರಿಂದ 7, 9, 16 ರಿಂದ 18, 20 ರಿಂದ 22, 25, 28, 31, 32, 42 ರಿಂದ 46 48, 53, 54, 56, 58 ರಿಂದ 63 ಮತ್ತು 66ನೇ ಪ್ರತಿವಾದಿಗಳಿಗೆ ನ್ಯಾಯಾಲಯದ ಮೂಲಕ ಸಮನ್ಸ್ / ನೋಟೀಸ್ ಹೊರಡಿಸಿದ್ದು, ತಮ್ಮಗಳಿಗೆ ಸಮನ್ಸ್ । ನೋಟೀಸ್ ತಲುಪಿರುವುದಿಲ್ಲ. ಆದ ಕಾರಣ ತಮಗೆ ಈ ಪತ್ರಿಕಾ ಪ್ರಕಟಣೆಯ ಮೂಲಕ ಸಮನ್ಸ್ ಪ್ರಕಟಿಸುತ್ತಿದ್ದು, ಸದರಿ ದಾವೆಯ ಸುನಾವಣೆ ದಿನಾಂಕ: 06-04-2026 ರಂದು ಇರುತ್ತದೆ. ಆ ದಿನ ಬೆಳಿಗ್ಗೆ 11.00 ಗಂಟೆಗೆ ನೀವುಗಳು ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ತಕರಾರು ಇದ್ದರೆ ಸಲ್ಲಿಸುವುದು, ತಪ್ಪಿದ್ದಲ್ಲಿ ದಾವೆಯನ್ನು ನಿಮ್ಮಗಳ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯುವುದು.

ಈ ಪ್ರಕಟಣೆಯನ್ನು ನ್ಯಾಯಾಲಯದ ಅಪ್ಪಣೆ ಮತ್ತು ಮೊಹರಿನೊಂದಿಗೆ ದಿನಾಂಕ: 01.03.2026 ರಂದು ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶೀರಸ್ತೆದಾರರು, ಅಪರ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮದ್ದೂರು
ಅರ್ಜಿದಾರರ ಪರ ವಕೀಲರು: ಪಿ.ಮಲ್ಲೇಶ ಬಿ.ಎ ಎಲ್.ಎಲ್.ಬಿ., ವಕೀಲರು, ಮದ್ದೂರು

ಆಡಳಿತ ಕಛೇರಿ : 22110072, 22110073 ಪ್ರಧಾನ ಕಛೇರಿ ಶಾಖೆ : 22354637, 22208634 | ಶ್ರೀನಗರ ಶಾಖೆ : 22426054 ರಾಜಾಜಿನಗರ ಶಾಖೆ : 29513161

ಸುವರ್ಣ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಆಡಳಿತ ಕಛೇರಿ : ನಂ.62, ಸಂಜೀವಪ್ಪ ಲೇನ್, ಅವಿನ್ಯೂ ರಸ್ತೆ ಕ್ರಾಸ್, ಬೆಂಗಳೂರು-560002.
ಶಾಖಾ ಪ್ರಧಾನ ಕಛೇರಿ : # 612, ಚಂದ್ರ ಬಿಲ್ಡಿಂಗ್, ಅವಿನ್ಯೂ ರಸ್ತೆ, ಬೆಂಗಳೂರು-560002
ಇ-ಮೇಲ್: suvarnacoopbank@gmail.com

ಸ್ವಾಧೀನ ಸೂಚನೆ ಸೂಚನೆ ನಿಯಮ 8(1) (ಸ್ಥಿರಾಸ್ತಿಗಳಿಗಾಗಿ)

ಕೆಳಸಹಿದಾರರು, **ಸುವರ್ಣ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್** ಇದರ ಅಧಿಕೃತ ಅಧಿಕಾರಿಯವರು ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅನ್ವಯ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ ನಿಯಮ 3ನ್ನು ಒಡಗೊಂಡಂತೆ ಪ್ರಕರಣ 13(12) ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ **ಅರವತ್ತು (60)** ದಿನಗಳ ಒಳಗೆ ಸೂಚನೆಯಲ್ಲಿನ ಮೊಬಲಗು ಮತ್ತು ಬಡ್ಡಿಯನ್ನು ಮರುಪಾವತಿ ಮಾಡಲು ಕೆಳಗೆ ಸೂಚಿಸಿರುವ ಸಾಲಗಾರರಿಗೆ/ ಜಾಮೀನುದಾರರಿಗೆ/ ಅಡಮಾನದಾರರಿಗೆ ಕೆಳಗೆ ತಿಳಿಸಿದ ದಿನಾಂಕ ದಂದು ನೀಡಿದ ಡಿಮ್ಯಾಂಡ್ ನೋಟೀಸಿನಲ್ಲಿ ಸೂಚಿಸಲಾಗಿತ್ತು. ಸಾಲಗಾರರು ಸದರಿ ಮೊಬಲಗನ್ನು ಮರು ಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಗಳನ್ನು ಈ ಮೇಲೆ ತಿಳಿಸಿದ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ಕಾಯಿದೆಯ 2002 ಕಲಂ (4) ರೊಂದಿಗೆ ಕಲಂ 13ರ ನಿಯಮ 8ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬ್ಯಾಂಕಿಗೆ ಅಡಮಾನ ಮಾಡಿರುವ ಆಸ್ತಿಯನ್ನು ಕೆಳಕಂಡ ದಿನಾಂಕದಂದು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ಸಾರ್ವಜನಿಕರು ಹಾಗೂ ನಿರ್ದಿಷ್ಟವಾಗಿ ಸಾಲಗಾರರಿಗೆ ಈ ಕೆಳಗೆ ವಿವರಿಸಿದ ಆಸ್ತಿಗಳೊಂದಿಗೆ ಯಾರು ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಸದರಿ ಸ್ವತ್ತಿನ ಬಗ್ಗೆ ವ್ಯವಹಾರ ನಡೆಸಿದ್ದೇ ಆದರೆ **ಸುವರ್ಣ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್**, ಅವಿನ್ಯೂ ರಸ್ತೆ, ಬೆಂಗಳೂರು ಇವರಿಗೆ ಸಂದಾಯವಾಗತಕ್ಕ ಮೊಬಲಗು ಹಾಗೂ ಅದರ ಮೇಲಿನ ಬಡ್ಡಿ ಹಾಗೂ ಇತರ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8) ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು.

(1) ಸಾಲಗಾರರ / ಸಹ-ಸಾಲಗಾರರ / ಜಾಮೀನುದಾರರ / ಅಡಮಾನುದಾರರ ಹೆಸರು ಮತ್ತು ವಿಳಾಸ: **1.ಶ್ರೀ ಹೆಚ್.ಆರ್.ಗೋಪಾಲಸ್ವಾಮಿ,** S/o ಲೇಟ್ ರಂಗನಾಯಕ್, **2.ಶ್ರೀಮತಿ ಜಯಶೀಲಾ.ಎನ್.ಜಿ** W/o ಹೆಚ್.ಆರ್.ಗೋಪಾಲಸ್ವಾಮಿ, ನಂ.7/6, ವಿನಾಯಕ ಲೇಔಟ್, ನಾಯಂಡಹಳ್ಳಿ, ಬೆಂಗಳೂರು -560 039.
ನೋಟೀಸ್‌ನಲ್ಲಿ ತಿಳಿಸಿದಂತೆ ಬಾಕಿಯಿರುವ ಒಟ್ಟು ಮೊತ್ತ : ರೂ.12,77,427.00 (ಹನ್ನೆರಡು ಲಕ್ಷದ ಎಪ್ಪತ್ತೇಳು ಸಾವಿರದ ನಾನ್ನೂರ ಇಪ್ಪತ್ತೇಳು ರೂಪಾಯಿಗಳು ಮಾತ್ರ) ದಿನಾಂಕ **04.03.2026** ರಿಂದ ಒಪ್ಪಂದದ ಬಡ್ಡಿ ದರದಲ್ಲಿ ಭವಿಷ್ಯದ ಬಡ್ಡಿಯೊಂದಿಗೆ ಮತ್ತು ಅನುಷ್ಠಾನದ ದಿನಾಂಕವರೆಗೆ ವೆಚ್ಚದ ಶುಲ್ಕಗಳು.
ಡಿಮ್ಯಾಂಡ್ ನೋಟೀಸ್ ದಿನಾಂಕ : 02.01.2026 ಸ್ವಾಧೀನ ತೆಗೆದುಕೊಂಡ ದಿನಾಂಕ : 04.03.2026
ಸ್ಥಿರಾಸ್ತಿ ವಿವರ : ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಿರುವ ಮುನಿಸಿಪಾಲ್ ಸಂಖ್ಯೆ 6, ಖಾತಾ ನಂ.7, 2ನೇ ಕ್ರಾಸ್, ನಾಯಂಡಹಳ್ಳಿ ಪಶ್ಚಿಮ, ಬೆಂಗಳೂರು, ಕೆಂಗೇರಿ ಹೋಬಳಿ, ಬಿ.ಎಂ.ಪಿ ವಾರ್ಡ್ ನಂ.39, ಪಿ.ಐ.ಡಿ ನಂ.39-45-7/6 ಮತ್ತು ಸ್ಥಿರಾಸ್ತಿ ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 15 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 30 ಅಡಿಗಳು, ಚೆಕ್ಕುಬಂದಿ : ಪೂರ್ವಕ್ಕೆ : ಆರ್ ಮುನಿಯಪ್ಪನ ಮನೆ, ಪಶ್ಚಿಮಕ್ಕೆ : ಮನೆ ನಂ.5, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಮುನಿಸಾಲಪ್ಪರವರ ಮನೆ.

(2) ಸಾಲಗಾರರ / ಸಹ-ಸಾಲಗಾರರ / ಜಾಮೀನುದಾರರ / ಅಡಮಾನುದಾರರ ಹೆಸರು ಮತ್ತು ವಿಳಾಸ: **1 ಶ್ರೀ ಕೆ.ನರೇಶ್** S/o ಕೆ.ನಾಗೇಶರಾವ್, ನಂ.21/1, 1ನೇ ಮುಖ್ಯ ರಸ್ತೆ, ಸಿ.ಕೆ.ಸಿ.ಗಾರ್ಡನ್, ಮಿಷನ್ ರಸ್ತೆ, ಬೆಂಗಳೂರು- 560 027.
ನೋಟೀಸ್‌ನಲ್ಲಿ ತಿಳಿಸಿದಂತೆ ಬಾಕಿಯಿರುವ ಒಟ್ಟು ಮೊತ್ತ : ರೂ.4,29,155.00 (ನಾಲ್ಕು ಲಕ್ಷದ ಇಪ್ಪತ್ತೊಂಭತ್ತು ಸಾವಿರದ ನೂರ ಐವತ್ತೈದು ರೂಪಾಯಿಗಳು ಮಾತ್ರ) ದಿನಾಂಕ **04.03.2026** ರಿಂದ ಒಪ್ಪಂದದ ಬಡ್ಡಿ ದರದಲ್ಲಿ ಭವಿಷ್ಯದ ಬಡ್ಡಿಯೊಂದಿಗೆ ಮತ್ತು ಅನುಷ್ಠಾನದ ದಿನಾಂಕವರೆಗೆ ವೆಚ್ಚದ ಶುಲ್ಕಗಳು.
ಡಿಮ್ಯಾಂಡ್ ನೋಟೀಸ್ ದಿನಾಂಕ : 02.01.2026 ಸ್ವಾಧೀನ ತೆಗೆದುಕೊಂಡ ದಿನಾಂಕ : 04.03.2026
ಸ್ಥಿರಾಸ್ತಿ ವಿವರ : ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಿರುವ ಮುನಿಸಿಪಾಲ್ ನಂ.21/1, 1ನೇ ಮುಖ್ಯರಸ್ತೆ, ಸಿಕೆಸಿ ಗಾರ್ಡನ್, ವಾರ್ಡ್ ನಂ.48, ಸುಧಾಮನಗರ, ಬೆಂಗಳೂರು ಮತ್ತು ಸ್ಥಿರಾಸ್ತಿ ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ : 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 18 ಅಡಿಗಳು, ಚೆಕ್ಕುಬಂದಿ : ಪೂರ್ವಕ್ಕೆ : ಕೆ.ಎನ್.ಮಹೇಶ್‌ರವರ ಸ್ವತ್ತು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಕೆ.ಎನ್.ನರೇಶ್ ಮತ್ತು ಕೆ.ಎನ್.ಮಹೇಶ್‌ರವರ ಪ್ಯಾಸೇಜ್, ದಕ್ಷಿಣಕ್ಕೆ : ಕೃಷ್ಣಪ್ಪರವರ ಮನೆ.

(3) ಸಾಲಗಾರರ / ಸಹ-ಸಾಲಗಾರರ / ಜಾಮೀನುದಾರರ / ಅಡಮಾನುದಾರರ ಹೆಸರು ಮತ್ತು ವಿಳಾಸ: **1 ಶ್ರೀ ಸುರೇಶ್‌ಕುಮಾರ್.ಎಸ್** S/o ಎಂ.ಶ್ರೀನಿವಾಸ್(ಲೇಟ್), ನಂ.43, 6ನೇ ಕ್ರಾಸ್, ಸುಧಾಮನಗರ, ಬೆಂಗಳೂರು-560027.
ನೋಟೀಸ್‌ನಲ್ಲಿ ತಿಳಿಸಿದಂತೆ ಬಾಕಿಯಿರುವ ಒಟ್ಟು ಮೊತ್ತ : ರೂ.21,08,417.00 (ಇಪ್ಪತ್ತೊಂದು ಲಕ್ಷದ ಎಂಟು ಸಾವಿರದ ನಾನೂರ ಹದಿನೇಳು ರೂಪಾಯಿಗಳು ಮಾತ್ರ) ದಿನಾಂಕ **04.03.2026** ರಿಂದ ಒಪ್ಪಂದದ ಬಡ್ಡಿ ದರದಲ್ಲಿ ಭವಿಷ್ಯದ ಬಡ್ಡಿಯೊಂದಿಗೆ ಮತ್ತು ಅನುಷ್ಠಾನದ ದಿನಾಂಕವರೆಗೆ ವೆಚ್ಚದ ಶುಲ್ಕಗಳು.
ಡಿಮ್ಯಾಂಡ್ ನೋಟೀಸ್ ದಿನಾಂಕ : 02.01.2026 ಸ್ವಾಧೀನ ತೆಗೆದುಕೊಂಡ ದಿನಾಂಕ : 04.03.2026
ಸ್ಥಿರಾಸ್ತಿ ವಿವರ : ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಿರುವ ನಂ.4, ಪಿ.ಐ.ಡಿ.ನಂ.48-28-4, 6ನೇ ಕ್ರಾಸ್, ಸುಧಾಮನಗರ, ಬೆಂಗಳೂರು, ಕೆಳಮಹಡಿ, ಒಂದನೇ ಮಹಡಿ ಮತ್ತು ಎರಡನೇ ಮಹಡಿ ಅಂತಸ್ತಿನ ಕಟ್ಟಡ ಒಳಗೊಂಡ ಸ್ಥಿರಾಸ್ತಿ ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ : 46 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 14ಅಡಿಗಳು ಕೆಳಮಹಡಿ, ಒಂದನೇ ಮಹಡಿ, ಎರಡನೇ ಮಹಡಿ ಅಂತಸ್ತಿನ, ಚೆಕ್ಕುಬಂದಿ : ಪೂರ್ವಕ್ಕೆ : ಶ್ರೀಮತಿ ರಂಗಮ್ಮ ರವರ ಒಳಗೊಂಡಿರುವ ಇದೇ ಸ್ವತ್ತು, ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ಡಿ.ಶಂಕರಪ್ಪನವರ ಸ್ವತ್ತು, ದಕ್ಷಿಣಕ್ಕೆ : ಸೈಟ್ ಸಂಖ್ಯೆ ನಂ.43.

(4) ಸಾಲಗಾರರ / ಸಹ-ಸಾಲಗಾರರ / ಜಾಮೀನುದಾರರ / ಅಡಮಾನುದಾರರ ಹೆಸರು ಮತ್ತು ವಿಳಾಸ: **1 ಶ್ರೀ ನಾಗರಾಜು.ಸಿ** S/o ಚಂದ್ರಹಾಸ, 2. **ಶ್ರೀ ಭೋಜರಾಜು.ಸಿ** S/o ಚಂದ್ರಹಾಸ, ನಂ.15, ಯೇರಪ್ಪಗೌಡರ ಗಲ್ಲಿ, ತಿಗಳರಪೇಟೆ, ಬೆಂಗಳೂರು-560 002.
ನೋಟೀಸ್‌ನಲ್ಲಿ ತಿಳಿಸಿದಂತೆ ಬಾಕಿಯಿರುವ ಒಟ್ಟು ಮೊತ್ತ : ರೂ.66,43,354.00 (ಅರವತ್ತಾರು ಲಕ್ಷದ ನಲವತ್ತಮೂರು ಸಾವಿರದ ಮೂನ್ನೂರ ಐವತ್ತಾ ನಾಲ್ಕು ರೂಪಾಯಿಗಳು ಮಾತ್ರ) ದಿನಾಂಕ **04.03.2026** ರಿಂದ ಒಪ್ಪಂದದ ಬಡ್ಡಿ ದರದಲ್ಲಿ ಭವಿಷ್ಯದ ಬಡ್ಡಿಯೊಂದಿಗೆ ಮತ್ತು ಅನುಷ್ಠಾನದ ದಿನಾಂಕವರೆಗೆ ವೆಚ್ಚದ ಶುಲ್ಕಗಳು.
ಡಿಮ್ಯಾಂಡ್ ನೋಟೀಸ್ ದಿನಾಂಕ : 02.01.2026 ಸ್ವಾಧೀನ ತೆಗೆದುಕೊಂಡ ದಿನಾಂಕ : 04.03.2026
ಸ್ಥಿರಾಸ್ತಿ ವಿವರ : ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಿರುವ ಮುನಿಸಿಪಾಲ್ ನಂ.15, ಮತ್ತು ಸ್ಥಿರಾಸ್ತಿ ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ : 10 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 26 ಅಡಿಗಳು, ಮುನಿಸಿಪಾಲ್ ನಂ.16, ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ : 9 ಅಡಿ 6" ಮತ್ತು ಉತ್ತರದಿಂದ ದಕ್ಷಿಣಕ್ಕೆ : 28 ಅಡಿಗಳು 6", ಸ್ವತ್ತಿನ ಸಂಖ್ಯೆ ನಂ.17, ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 15 ಅಡಿ 6" ಮತ್ತು ಉತ್ತರದಿಂದ ದಕ್ಷಿಣಕ್ಕೆ 30, ಈ ವಿಸ್ತೀರ್ಣದೊಂದಿಗೆ ಬಾತರೂಂ ಅಳತೆ 10 x 8.06 ಅಡಿಗಳು, ಎಲ್ಲಾ ವಿಸ್ತೀರ್ಣದೊಂದಿಗೆ ಒಳಗೊಂಡಿದ್ದು, ಈರಪ್ಪ ಗೌಡಗಲ್ಲಿ, ವಾರ್ಡ್ ನಂ.47, ಬೆಂಗಳೂರು ಸಿಟಿ ಮತ್ತು ಸಾಮಾನ್ಯ ವಿಸ್ತೀರ್ಣದೊಂದಿಗೆ ಚೆಕ್ಕುಬಂದಿ : ಪೂರ್ವಕ್ಕೆ : ಎಂ.ದೇವರಾಜು ರವರ ಸ್ವತ್ತಿನ ಸಂಖ್ಯೆ 14, ಪಶ್ಚಿಮಕ್ಕೆ :ಶ್ರೀ ವೇಣುಗೋಪಾಲ್ S/o ಪಿಳ್ಳಪ್ಪರವರ ಸ್ವತ್ತು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ : ಶ್ರೀ ವೇಣುಗೋಪಾಲ್ S/o ಪಿಳ್ಳಪ್ಪರವರ ಸ್ವತ್ತು.

(5) ಸಾಲಗಾರರ / ಸಹ-ಸಾಲಗಾರರ / ಜಾಮೀನುದಾರರ / ಅಡಮಾನುದಾರರ ಹೆಸರು ಮತ್ತು ವಿಳಾಸ: **1. ಶ್ರೀ ಮನೋಹರ.ಬಿ.ಎಂ** S/o ಮಹದೇವಚಾರಿ, ನಂ.201, ಹೆಚ್‌ಐಜಿ ಬಿಲ್ಡಿಂಗ್, ನಂ.106, ಕೆ.ಹೆಚ್‌ಬಿ ಅಪಾರ್ಟ್‌ಮೆಂಟ್, ಕೆ.ಎಸ್.ಟೌನ್, ಬೆಂಗಳೂರು-560 060.
ನೋಟೀಸ್‌ನಲ್ಲಿ ತಿಳಿಸಿದಂತೆ ಬಾಕಿಯಿರುವ ಒಟ್ಟು ಮೊತ್ತ : ರೂ.8,41,751.00 (ಎಂಟು ಲಕ್ಷದ ನಲವತ್ತೊಂದು ಸಾವಿರಾದ ಏಳ್ನೂರ ಐವತ್ತೊಂದು ರೂಪಾಯಿಗಳು ಮಾತ್ರ) ದಿನಾಂಕ **04.03.2026** ರಿಂದ ಒಪ್ಪಂದದ ಬಡ್ಡಿ ದರದಲ್ಲಿ ಭವಿಷ್ಯದ ಬಡ್ಡಿಯೊಂದಿಗೆ ಮತ್ತು ಅನುಷ್ಠಾನದ ದಿನಾಂಕವರೆಗೆ ವೆಚ್ಚದ ಶುಲ್ಕಗಳು.
ಡಿಮ್ಯಾಂಡ್ ನೋಟೀಸ್ ದಿನಾಂಕ : 17.01.2026 ಸ್ವಾಧೀನ ತೆಗೆದುಕೊಂಡ ದಿನಾಂಕ : 04.03.2026
ಸ್ಥಿರಾಸ್ತಿ ವಿವರ : ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಿರುವ ಮುನಿಸಿಪಾಲ್ ಸಂಖ್ಯೆ ನಂ.1485/1643/201, ಜಿಎಫ್, ಹೆಚ್‌ಐಜಿ, ಅಪಾರ್ಟ್‌ಮೆಂಟ್ ನಂ.201, ಕೆಳಮಹಡಿ, ಕರ್ನಾಟಕ ಹೌಸಿಂಗ್ ಬೋರ್ಡ್, ವಲಗೇರಹಳ್ಳಿ, ಕೆಂಗೇರಿ ಹೋಬಳ್ಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬಿಬಿಎಂಪಿ ಪಿಐಡಿ ನಂ.ಹೆಚ್‌ಐಜಿ-ಬಿ2, ಕೆಳಮಹಡಿ-201, ಬ್ಲಾಕ್ ನಂ.106, ಮೂರು ಬೆಡರೂಂ ಒಳಗೊಂಡ, ಅಡುಗೆಮನೆ, ಬಾತರಂ, ಟಾಯ್ಲೆಟ್, ಅಂದಾಜು ವಿಸ್ತೀರ್ಣ 77.18 ಚದರ ಮೀಟರ್, 16.37% ಅವಿಭಜಿತ ಪಾಲು 272.25 ಚದರ ಮೀಟರ್, ಸಾಮಾನ್ಯ ಜಾಗ ಮತ್ತು ಸಂಕೀರಣ ಚೆಕ್ಕುಬಂದಿ : ಪೂರ್ವಕ್ಕೆ : ಒಳಅಂಗಳ ಪ್ರದೇಶ, ಪಶ್ಚಿಮಕ್ಕೆ : ಕಟ್ಟಡದ ಸಂಖ್ಯೆ 93, ಉತ್ತರಕ್ಕೆ : ಕಟ್ಟಡದ ಸಂಖ್ಯೆ 105, ದಕ್ಷಿಣಕ್ಕೆ : ಪ್ರವೇಶದ್ವಾರ.

ದಿನಾಂಕ : 04.03.2026 ಸಹಿ/- ಅಧಿಕೃತ ಅಧಿಕಾರಿ
ಸ್ಥಳ : ಬೆಂಗಳೂರು ಸುವರ್ಣ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಗರಿಷ್ಠ 34° ಕನಿಷ್ಠ 20°

ಹೊಸ ದಿಗಂತ

ಭಾನುವಾರ 8 ಮಾರ್ಚ್ 2026

ಮೈಸೂರು

ಶರಣಪ ಹಲಸೆಗೆ ಭಾರತರತ್ನ



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಬೆಂಗಳೂರಿನ ಸ್ವದೇಶಿ ವಿಜ್ಞಾನ ಆಂದೋಳನ-ಕರ್ನಾಟಕ ವತಿಯಿಂದ ಕುಲಪತಿ ಪ್ರೊ. ಶರಣಪ್ಪವಿ. ಹಲಸೆ ಅವರಿಗೆ ಭಾರತರತ್ನ ಡಾ. ಸಿ.ಎನ್.ಆರ್. ರಾಮನ್ ವಿಜ್ಞಾನ ಪುರಸ್ಕಾರ-2026 ಪ್ರದಾನ ಮಾಡಲಾಯಿತು.

ಒಳಮೀಸಲಾತಿ ಜಾರಿಗೆ ಮನವಿ | ೨ ಎಲ್ಲರೂ ಸಾಮರಸ್ಯದಿಂದ ಬದುಕಿ | ೩ ಆತ್ಮಾವಲೋಕನ ಅಗತ್ಯ: ರುದ್ರಣ್ಣ ಹರ್ತಿಕೋಟೆ | ೪

ಕಿರುಸುದ್ದಿ

ನೌಕರನಿಂದ 900 ಗ್ರಾಂ ಗಟ್ಟಿ ಚಿನ್ನ ವಂಚನೆ

ಮೈಸೂರು: ಆಭರಣ ಮಾಡಿಕೊಡುವುದಾಗಿ ನಂಬಿಸಿ ನೌಕರನೊಬ್ಬ 900 ಗ್ರಾಂ ಚಿನ್ನದ ಗಟ್ಟಿ ಪಡೆದು ನಾಪತ್ತೆಯಾಗಿರುವ ಪ್ರಕರಣ ಮೈಸೂರಿನಲ್ಲಿ ನಡೆದಿದೆ. ಚಿನ್ನದಗಟ್ಟಿ ಪಡೆದ ಪಶ್ಚಿಮ ಬಂಗಾಳದ ಸುದೀಪ್ ಮೇಟಿ ಸುಜಯ್ ಹಾಗೂ ಕೆಲಸಕ್ಕೆ ಶಿಫಾರಸು ಮಾಡಿದ ಪಶ್ಚಿಮ ಬಂಗಾಳದ ಗಣೇಶ್ ಗುಚಿತ್ ಎಂಬುವರ ಮೇಲೆ ಮಾಲೀಕ ಔಲಿಯಾ ಆಲಿ ಶೇಕ್ ಮಂಡಿ ಪೊಲೀಸ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಿಸಿದ್ದಾರೆ. ಪಶ್ಚಿಮ ಬಂಗಾಳದವರೇ ಆದ ಔಲಿಯಾ ಆಲಿ ಶೇಕ್, ಕಳೆದ 18 ವರ್ಷಗಳಿಂದ ಮೈಸೂರಿನಲ್ಲಿ ಗೋಲ್ಡ್ ಸ್ಮಿತ್ ಆಗಿದ್ದಾರೆ.ಕೆಲವು ತಿಂಗಳ ಹಿಂದೆ ಪರಿಚಯಸ್ಥರಾದ ಗಣೇಶ್ ಗುಚಿತ್ ರವರು ಸುದೀಪ್ ಮೇಟಿಯನ್ನ ಶಿಫಾರಸು ಮಾಡಿ, ಔಲಿಯಾ ಆಲಿ ಶೇಖ್ ಬಳಿ ಕೆಲಸಕ್ಕೆ ಸೇರಿಸಿದ್ದಾರೆ.ಚಿನ್ನಾಭರಣ ಮಾಡಲು ಸುದೀಪ್ ಮೇಟಿಗೆ ಔಲಿಯಾ ಶೇಕ್ 900 ಗ್ರಾಂ ಚಿನ್ನದ ಗಟ್ಟಿ ನೀಡಿದ್ದಾರೆ.ನಿಗದಿತ ಸಮಯದಲ್ಲಿ ಆಭರಣ ತಂದು ಕೊಟ್ಟಿಲ್ಲ.ಸಂಪರ್ಕಿಸಲು ಪ್ರಯತ್ನಿಸಿದಾಗ ಸುದೀಪ್ ಮೇಟಿ ಮೊಬೈಲ್ ಸ್ವಿಚ್ ಆಫ್ ಆಗಿದೆ.ನಂತರ ಗಣೇಶ್ ಗುಚೀತ್ ಗೆ ಸಂಪರ್ಕಿಸಲು ಪ್ರಯತ್ನಿಸಿದಾಗ ಆತನ ಮೊಬೈಲ್ ಸಹ ಸ್ವಿಚ್ ಆಫ್ ಆಗಿದೆ.ಇಬ್ಬರೂ ಸಂಚು ರೂಪಿಸಿ ವಂಚಿಸಿದ್ದಾರೆಂದು ಆರೋಪಿಸಿ ಮಂಡಿ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಿಸಿದ್ದಾರೆ.

ಬೀದಿ ಕಾಳಗ: ಇಬ್ಬರು ಪೊಲೀಸರು ಸಸ್ಪೆಂಡ್

ಮೈಸೂರು: ಕ್ಷುಲ್ಲಕ ಕಾರಣಕ್ಕೆ ಬೀದಿ ಕಾಳಗ ನಡೆಸ ಇಬ್ಬರು ಪೊಲೀಸ್ ಸಿಬ್ಬಂದಿಯನ್ನು ಮೈಸೂರು ನಗರ ಪೊಲೀಸ್ ಆಯುಕ್ತರು ಅಮಾನತ್ತುಗೊಳಿಸಿದ್ದಾರೆ. ಮೈಸೂರಿನ ದೇವರಾಜ ಪೊಲೀಸ್ ಠಾಣೆಯ ಮುಖ್ಯ ಪೇದೆ ಉಮೇಶ್ ಮತ್ತು 112 ತುರ್ತು ವಾಹನದ ಚಾಲಕನಾಗಿ ನಿಯೋಜಿಸಲ್ಪಟ್ಟ ನಗರ ಸಶಸ್ತ್ರ ಮೀಸಲು ಪಡೆ ಕಾನ್‌ಸ್ಟೆಬಲ್ ಧನಂಜಯ ಸಸ್ಪೆಂಡ್ ಆದರು.

ಉಮೇಶ್ ಮತ್ತು ಧನಂಜಯ 112 ತುರ್ತು ವಾಹನದಲ್ಲಿ ಗಸ್ತು ತಿರುಗಲು ಹೊರಟಿದ್ದಾರೆ. ನಜರ್ ಬಾದ್‌ನ ವಸಂತ ಮಹಲ್ ಬಳಿ ಆದರೆ, ಅವರು ಡ್ಯೂಟಿ ಚಾರ್ಟ್ ತರಲು ಮರೆತಿರುವುದು ಗೊತ್ತಾಗಿದೆ. ಇದು ಉಮೇಶ್ ಅವರನ್ನು ಕೆರಳಿಸಿತು, ಡ್ಯೂಟಿ ಚಾರ್ಟ್ ತರಲು ಮರೆತಿದ್ದಕ್ಕಾಗಿ ಉಮೇಶ್ ಅವರು ಧನಂಜಯ ಅವರನ್ನು ನಿಂದಿಸಿದರು. ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದ್ದು, ಅದು ವಿಕೋಪಕ್ಕೆ ಹೋಗುತ್ತಿದ್ದಂತೆ ಇಬ್ಬರೂ ಬೈದಾಡಿಕೊಂಡು ಪರಸ್ಪರ ತಳ್ಳಾಡಿದ್ದಾರೆ. ಇದನ್ನು ನೋಡುತ್ತಿದ್ದ ಸಾರ್ವಜನಿಕರಲ್ಲಿ ಕೆಲವರು ಇದನ್ನು ಮೊಬೈಲ್ ಮೂಲಕ ಚಿತ್ರೀಕರಿಸಿದ್ದಾರೆ. ಇದರ ವೀಡಿಯೋ ದೃಶ್ಯಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿವೆ. ನಂತರ ಇಬ್ಬರೂ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪರಸ್ಪರ ದೂರು ದಾಖಲಿಸಿದ್ದಾರೆ. ಈ ವಿಡಿಯೋಗಳು ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ ವೈರಲ್ ಆಗುತ್ತಿದ್ದಂತೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಇಬ್ಬರನ್ನೂ ಅಮಾನತ್ತುಗೊಳಿಸಿದರು.

ವಿದ್ಯುತ್ ವ್ಯತ್ಯಯ ಇಂದು

ಮೈಸೂರು: ನಗರದ ಹೂಟಗಳ್ಳಿ ಉಪ ವಿಭಾಗ ವ್ಯಾಪ್ತಿಯ 66/11 ಕೆ.ವಿ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿವಿಪ್ರೋ ಮತ್ತು 11 ಕೆ.ವಿವರ್ಥಿಹಾಗೂ 11 ಕೆ.ವಿ ಗೋಪಾಲನ್ ವಿದ್ಯುತ್ ಮಾರ್ಗಗಳು ಮತ್ತು 220/66/11 ಕೆ.ವಿ.ಎಸ್.ಆರ್.ಎಸ್ ಹೂಟಗಳ್ಳಿ ಸ್ವೀಕರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ ಎಲ್ ಟಿ ವಿದ್ಯುತ್ ಮಾರ್ಗಗಳಲ್ಲಿ ಮಾರ್ಚ್ 08 ರಂದು ನಿರ್ವಹಣಾ ಕೆಲಸವನ್ನು ಕೈಗೊಳ್ಳಲಾಗಿದೆ. ಈ ಹಿನ್ನಲೆಯಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಓಯಾಸಿಸ್ ಹೋಟೆಲ್, ಟೈಕೂನ್, ಡಾಲರ್‌ಬರ್ಡ್, ವಾಟರ್‌ಟೆಕ್ ರಸ್ತೆ, ಪಟ್ಟಾಭಿ, ಪ್ರೇಮ್ ಇಂಡಸ್ಟ್ರೀಸ್, ವಿಷ್ಣು ಕನ್‌ಸೆಂಟ್, ಜ್ಯೋತಿ ಕೇಬಲ್, ಸಿ-5 ಕೋಲ್ಡ್, ಸುಸಾಟ್‌ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಬಿ.ಇ.ಎಂ.ಎಲ್ ವೃತ್ತ, ವರ್ಥಿ ಇಂಜಿನಿಯರಿಂಗ್, ಸುತ್ತಮುತ್ತಲ್ಲಿನ ಪ್ರದೇಶಗಳು. ಬ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ., ವಿ.ವಿ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದಿಶಕ್ತ್ಯಾತ್ಮಕ ದಂಡಿಮಾರಮ್ಮ ದೇವಾಲಯದ ಪ್ರತಿಷ್ಠಾಪನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಶಕ್ತಿ ತುಂಬುವುದೇ ನನ್ನ ಕಾಯಕ

ಮೈಸೂರು: ಜನರ ಆಶೀರ್ವಾದವಿದ್ದರೆ ಮಾತ್ರ ಮುಖ್ಯ ಮಂತ್ರಿಯಾಗಲು ಸಾಧ್ಯ. ಸಮಾಜದ ಬಡವರು ಹಾಗೂ ಅಶಕ್ತರಿಗೆ ಶಕ್ತಿ ತುಂಬುವುದೇ ನನ್ನ ಕಾಯಕ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶನಿವಾರ ಮೈಸೂರು ತಾಲೂಕಿನ ವರುಣ ಕ್ಷೇತ್ರದ ವ್ಯಾಪ್ತಿಗೆ ಬರುವ ಪಿಲ್ಲಹಳ್ಳಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಶ್ರೀ ಆದಿಶಕ್ತ್ಯಾತ್ಮಕ ದಂಡಿಮಾರಮ್ಮ ದೇವಾಲಯದ ಪ್ರತಿಷ್ಠಾಪನೆ ಮಹೋತ್ಸವ ಹಾಗೂ ಕುಂಭಕಳಶದ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಮಾಜದ ಅಸಮಾನತೆ ಕಡಿಮೆಯಾಗಬೇಕು. ಸಮಾನತೆಯ ಸ್ಥಾಪಿಸುವ ಉದ್ದೇಶವನ್ನು ಸರ್ಕಾರದ ಎಲ್ಲ ಯೋಜನೆಗಳು ಹೊಂದಿವೆ. ಸಮಾಜದ ಎಲ್ಲ ಜಾತಿ ಧರ್ಮ, ವರ್ಗಗಳಿಗೆ ಆರ್ಥಿಕ ಸಾಮಾಜಿಕ ಶಕ್ತಿ ದೊರೆಯಬೇಕು ಎಂದು ಹೇಳಿದರು.

ಇದೇ ವೇಳೆ ಶ್ರೀ ದಂಡಿಮಾರಮ್ಮ ದೇವಸ್ಥಾನಕ್ಕೆ ಬಾಲ್ಯದಿಂದಲೂ ಭೇಟಿ ನೀಡುತ್ತಿದ್ದ ನೆನಪನ್ನು ಮೆಲುಕು ಹಾಕಿದ ಸಿಎಂ ಸಿದ್ದರಾಮಯ್ಯ, ದೇವರನ್ನು ಕಷ್ಟ ಬಂದಾಗ ನೆನಪಿಸಿಕೊಳ್ಳದೇ, ಎಲ್ಲ ಸಂದರ್ಭದಲ್ಲಿಯೂ ಸ್ಮರಿಸಬೇಕು. 'ದೇವನೊಬ್ಬ ನಾಮ ಹಲವು' ಎಂದು ನಂಬಿ, ದೇವರು ನಮ್ಮೊಳಗೂ ಸೇರಿದಂತೆ ಎಲ್ಲ ಕಡೆಯೂ ಇದ್ದಾನೆ. ಎಲ್ಲರಿಗೂ ಒಳಿತನ್ನು ಬಯಸುವುದೇ ಮುಖ್ಯ. ಯಾವೊಂದು ಧರ್ಮ ಜಾತಿಗಳು ಪ್ರೀತಿಯನ್ನು ಬೋಧಿಸುತ್ತದೆಯೇ ಹೊರತು ದ್ವೇಷಿಸುವುದನ್ನು ಬೋಧಿಸುವುದಿಲ್ಲ ಎಂದರು.

ದೇವರು ದೇಗುಲಗಳಲ್ಲಿ ಇರುತ್ತಾರೆಂಬುದು ನಮ್ಮ ನಂಬಿಕೆ. ದೇವರ ಆರಾಧನೆಯಿಂದ ಒಳಿತಾಗುತ್ತದೆ ಎಂಬ ನಂಬಿಕೆಯನ್ನು ನಾನು ವಿರೋಧಿಸುವುದಿಲ್ಲ, ಆದರೆ ದೇವರು ಎಲ್ಲೆಡೆಯೂ ಇದ್ದಾನೆ ಎಂದು ನಾನು ನಂಬುವವನು ಮತ್ತು ಆಚರಿಸುವವನು. 1978 ರಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಪ್ರಥಮ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಇಲ್ಲಿನ ಜನರ ಆಶೀರ್ವಾದ ನನಗೆ ದೊರೆತಿತ್ತು. ನಂತರ ವಿಧಾನಸಭಾ ಚುನಾವಣೆಯಲ್ಲಿ ಜನರ ಸಹಕಾರ ದೊರೆಯಿತು. ಮೈಸೂರು ತಾಲ್ಲೂಕಿನ ಚಾಮುಂಡೇಶ್ವರಿ ಹಾಗೂ ವರುಣಾ ಕ್ಷೇತ್ರದ ಜನರ ಆಶೀರ್ವಾದದಿಂದ ಈವರೆಗೆ 8 ಚುನಾವಣೆಗಳಲ್ಲಿ ಗೆಲುವು ಸಾಧಿಸಿದ್ದು, ರಾಜ್ಯದ ಮುಖ್ಯಮಂತ್ರಿಯಾಗಲು ಸಾಧ್ಯವಾಗಿದೆ. ಜನರ ಆಶೀರ್ವಾದವಿದ್ದರೆ ಮಾತ್ರ ಮುಖ್ಯಮಂತ್ರಿಯಾಗಲು ಸಾಧ್ಯ. ಪಿಲ್ಲಹಳ್ಳಿ ಜನರ ಪ್ರೀತಿಯಿಂದಾಗಿ ಇಲ್ಲಿನ ದೇವಸ್ಥಾನದ ಉದ್ಘಾಟನೆಗೆ ಆಗಮಿಸಿದ್ದೇನೆ. 1978 ರಿಂದ ಇಂದಿನವರೆಗೂ ಹಾಗೂ ಮುಂದೆಯೂ ಈ ಭಾಗದ ಜನರ ಸಹಕಾರ ದೊರೆಯುವ ವಿಶ್ವಾಸವಿದೆ ಎಂದರು. ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ಡಿ.ತಿಮ್ಮಯ್ಯ, ಗ್ಯಾರಂಟಿ ಯೋಜನೆಯ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರ್‌ನಾಥ್ ಮತ್ತಿತರರು ಉಪಸ್ಥಿತರಿದ್ದರು.



ಲಿಂಗ ತಾರತಮ್ಯ ಹೋಗಲಾಡಿಸಿ

ಲಿಂಗ ತಾರತಮ್ಯ ಹೋಗಲಾಡಿಸಿ, ಮಹಿಳೆಯರಿಗೆ ಶಕ್ತಿ ತುಂಬಲು ಶಕ್ತಿ ಯೋಜನೆ ಜಾರಿಗೊಳಿಸಲಾಗಿದೆ. ಸಮಾಜದ ಬಡವರು, ಅಶಕ್ತರಿಗೆ ಶಕ್ತಿ ತುಂಬುವುದೇ ನನ್ನ ಉದ್ದೇಶ. ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸೌಲಭ್ಯಗಳು ದೊರೆತಾಗ ಮಾತ್ರ ಸಮಾಜಿಕ ನ್ಯಾಯ ಒದಗಿಸಲು ಸಾಧ್ಯ.

- ಜನರ ಆಶೀರ್ವಾದವಿದ್ದರೆ ಮಾತ್ರ ಮುಖ್ಯಮಂತ್ರಿಯಾಗಲು ಸಾಧ್ಯ
- ಯಾವ ಜಾತಿ, ಧರ್ಮವೂ ದ್ವೇಷವನ್ನು ಬೋಧಿಸುವುದಿಲ್ಲ
- ಸಮಾಜದ ಎಲ್ಲ ವ್ಯಕ್ತಿಗೆ ಸೌಲಭ್ಯ ದೊರೆತಾಗ ಮಾತ್ರ ಸಮಾಜಿಕ ನ್ಯಾಯ ಒದಗಿಸಲು ಸಾಧ್ಯ

ಗಾಂಧಿ ಶಿಲ್ಪ ಬಜಾರ್ ಮೇಳಕ್ಕೆ ಚಾಲನೆ



ಮೈಸೂರು: ನಗರದ ಹೆಬ್ಬಾಳ್‌ನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಆಯೋಜಿಸಲಾಗಿರುವ ಗಾಂಧೀ ಶಿಲ್ಪ ಬಜಾರ್ ಮೇಳಕ್ಕೆ ಚಾಲನೆ ನೀಡಲಾಯಿತು. 152 ನೇ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ- ಗಾಂಧೀ ಶಿಲ್ಪ ಬಜಾರ್ ಮೇಳಕ್ಕೆ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ನಿರ್ದೇಶಕಿ ಡಾ. ಪಿ. ದೀಪಾ ಚಾಲನೆ ನೀಡಿದರು. ಈ ವೇಳೆ ಮೈಸೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ. ಡಿ. ಸುದರ್ಶನ್, ಕರಕುಶಲ ಸೇವಾ ಕೇಂದ್ರ, ಜವಳಿ ಮಂತ್ರಾಲಯದ ಸಹಾಯಕ ನಿರ್ದೇಶಕ ವಿನೋದ್ ಕುಮಾರ್ ಎಸ್, ಮೇಳದ ಸಂಯೋಜಕ ರಾಕೇಶ್ ರೆ, ಸುಂದರಪ್ಪ ಮತ್ತಿತರರು ಹಾಜರಿದ್ದರು. ಮೇಳವು ಮಾ.15ರ ತನಕ ನಡೆಯಲಿದ್ದು, 70 ಮಳಿಗೆಗಳಲ್ಲಿ ದೇಶದ ವಿವಿಧ ರಾಜ್ಯಗಳ ಕರಕುಶಲಕರ್ಮಿಗಳು ಹಾಗೂ ಕೈಮಗ್ಗ ನೇಕಾರರು ಕರಕುಶಲ ಮತ್ತು ಕೈಮಗ್ಗ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡುತ್ತಿದ್ದಾರೆ. ಮೇಳಕ್ಕೆ ಎಲ್ಲರಿಗೂ ಉಚಿತ ಪ್ರವೇಶವಿದೆ.

ಟಿ 20 ವಿಶ್ವಕಪ್ ಭಾರತ ಗೆದ್ದು ಬರಲಿ: ಶಾಸಕ

ಮೈಸೂರು: ಟಿ.20 ವಿಶ್ವ ಕಪ್ ಫೈನಲ್ ಪಂದ್ಯಾವಳಿಯಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತ ಉತ್ತಮ ಪ್ರದರ್ಶನ ನೀಡುವ ಮೂಲಕ ಭಾರತ ಜಯಗಳಿಸಲಿ ಎಂದು ಕೋಟ್ಯಂತರ ಅಭಿಮಾನಿಗಳ ಆಶಯಕೆ ಫಲಿಸಲಿ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು. ನಗರದ ಕೆ ಜಿ ಕೊಪ್ಪಲ್ ನಲ್ಲಿರುವ ಮರುಳೇಶ್ವರ ಕ್ರೀಡಾಂಗಣದಲ್ಲಿ ಟಿ.20 ವಿಶ್ವ ಕಪ್ ಫೈನಲ್ ಪಂದ್ಯಾವಳಿಯಲ್ಲಿ ಭಾರತ ಗೆದ್ದು ಬರಲಿ ಎಂದು ಬ್ಯಾಟ್ ಬೀಸಿದ ಅವರು, ಭಾರತದ ಧ್ವಜ ಹಿಡಿದು ಗೆದ್ದು ಬರಲಿ ಗೆದ್ದು ಬರಲಿ ಭಾರತ ಗೆದ್ದು ಬರಲಿ ಎಂದು ಈ ಸಲ ಕಪ್ ನಮ್ದೇ. ತಾಯಿ ಚಾಮುಂಡೇಶ್ವರಿ ಭಾರತದ ಕ್ರಿಕೆಟ್ ತಂಡದ ಆಟಗಾರರ ಮೇಲೆ ಆಶೀರ್ವಾದವಿರಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಎಲ್. ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್,ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ,ಗೋಪಾಲ್ ರಾಜ್ ಅರಸ್,ಜೋಗಿ ಮಂಜು ,ಎಚ್.ಜಿ ಗಿರಿಧರ್,ಪ್ರದೀಪ್ ಕುಮಾರ್ ,ಕನ್ನಡಪರ ಹೋರಾಟಗಾರರಾದ ರಾಮೇಗೌಡ,ಚೇತನ್, ಲೋಹಿತ್,ಹೇಮಂತ್, ಕೀರ್ತಿ, ಕಿಶೋರ್, ಸುರೇಶ್ ಗೋಲ್ಡ್ ಹಾಗೂ ಇನ್ನಿತರರು ಹಾಜರಿದ್ದರು.



ಕಾಮಗಾರಿಗೆ ಚಾಲನೆ



ಮೈಸೂರು: ಇಲ್ಲಿನ ಕೆ.ಆರ್. ಕ್ಷೇತ್ರದ ವ್ಯಾಪ್ತಿಗೆ ಬರುವ ಶಿವಪುರದಲ್ಲಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಟಿ ಎಸ್ ಶ್ರೀವತ್ಸ ಅವರು ಶನಿವಾರ ಚಾಲನೆ ನೀಡಿದರು. ಕೆ ಆರ್ ಕ್ಷೇತ್ರದ ವಾರ್ಡ್ ನಂಬರ್ 65ರಲ್ಲಿ ಬರುವ ಶಿವಪುರ ಗ್ರಾಮದಲ್ಲಿ 180 ಲಕ್ಷ ರೂಗಳ ಸಿ.ಸಿ ಬಾಕ್ಸ್ ಡ್ರೈನ್ ಹಾಗೂ ಸಿ ಸಿ ರಸ್ತೆ ಕಾಮಗಾರಿಗೆ ಶಾಸಕರಾದ ಟಿ ಎಸ್ ಶ್ರೀವತ್ಸ ರವರು ಗುದ್ದಲಿ ಪೂಜೆ ಮಾಡುವ ಮೂಲಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ವಾರ್ಡ್ ಅಧ್ಯಕ್ಷ ಸತೀಶ್, ನಗರ ಪಾಲಿಕೆಯ ಮಾಜಿ ಸದಸ್ಯರಾದ ಗೀತಾ ಯೋಗಾನಂದ, ಕೆ ಆರ್ ಕ್ಷೇತ್ರದ ಅಧ್ಯಕ್ಷ ಗೋಪಾಲ್ ರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಬಿಜೆಪಿ ಮುಖಂಡರಾದ ಗಿರೀಶ್‌ಗೌಡ, ಜಯಂತಿ, ಯೋಗಾನಂದ, ಪ್ರದೀಪ್ ಕುಮಾರ್, ಗ್ರಾಮದ ಮುಖಂಡರುಗಳಾದ ಎಚ್ ಮಾದಯ್ಯ, ಗಂಗಾಧರ್, ಭರತ್, ನಾಗರಾಜು, ಮಲ್ಲಿಕಾರ್ಜುನ ಸ್ವಾಮಿ, ಹರ್ಷ ಹಾಗೂ ನಿರ್ಮಿತಿ ಕೇಂದ್ರದ ಅಧಿಕಾರಿಗಳಾದ ಮಹೇಶ್, ಮೇಘರಾಜ್ ಮುಂತಾದವರು ಇದ್ದರು.

ರೇಷ್ಮೆ ಕಾರ್ಖಾನೆ ಮುಚ್ಚಲ್ಲ: ಯತೀಂದ್ರ

ಮೈಸೂರು: ಟಿ.ನರಸೀಪುರದಲ್ಲಿ ಸಿಲ್ಕ್ ಫ್ಯಾಕ್ಟರಿ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವುದಕ್ಕಾಗಿ ಯಾವುದೇ ಕಾರಣಕ್ಕೂ ರೇಷ್ಮೆ ಕಾರ್ಖಾನೆ ಮುಚ್ಚುವುದಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟಿ.ನರಸೀಪುರದಲ್ಲಿ ರೇಷ್ಮೆ ಕಾರ್ಖಾನೆಯನ್ನು ಮುಚ್ಚಲ್ಲ. ನಮ್ಮ ಕ್ಷೇತ್ರದ ಜನರೇ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ ನಾವು ಯಾಕೆ ಕಾರ್ಖಾನೆ ಮುಚ್ಚುತ್ತೇವೆ. ಸುಮ್ಮನೆ ಕೆಲವರು ಸುಳ್ಳು ಹೇಳಿ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ಈ ವಿಚಾರವಾಗಿ ಅಧಿಕಾರಿಗಳಿಂದ ತಾಂತ್ರಿಕ ವರದಿ ಕೇಳಿದ್ದೇವೆ. ಕ್ರೀಡಾಂಗಣದಿಂದ ತೊಂದರೆಯಾದರೆ, ಬೇರೆ ಜಾಗ ಹುಡುಕುತ್ತೇವೆ ಎಂದರು. ನಮಗೆ ಕಾರ್ಖಾನೆಯೂ ಮುಖ್ಯ, ಕ್ರೀಡಾಂಗಣವೂ ಮುಖ್ಯ. ಹಾಗಾಗಿ ಕ್ರೀಡಾಂಗಣಕ್ಕಾಗಿ ಕಾರ್ಖಾನೆಯನ್ನ ಎಂದಿಗೂ ಮುಚ್ಚಲ್ಲ ಎಂದು ತಿಳಿಸಿದರು.

ಮಹಿಳೆ ಹುಟ್ಟುತ್ತಲೇ ಸ್ವತಂತ್ರಳು: ಶಿವರಾಜು

ಮೈಸೂರು: ಮಹಿಳೆಯರಿಗೆ ಸ್ವಾತಂತ್ರ್ಯವನ್ನು ಪುರುಷರು ಕೊಡುವುದಿಲ್ಲ, ಅವರು ಹುಟ್ಟುತ್ತಲೇ ಸ್ವತಂತ್ರರಾಗಿರುತ್ತಾರೆ. ಪುರುಷರು ಮಹಿಳೆಯರಿಗೆ ಸ್ವಾತಂತ್ರ್ಯ ಕೊಡುತ್ತೇವೆ ಎನ್ನುವುದು ಪುರುಷ ಪ್ರಧಾನ ಮನೋಭಾವದ ಅವಶೇಷವಾಗಿದೆ ಎಂದು ಸಮರ್ಥನಂ ಸಂಸ್ಥೆ ಮುಖ್ಯಸ್ಥ ಶಿವರಾಜು ಹೇಳಿದರು.

ಸಮರ್ಥನಂ ಸಂಸ್ಥೆ ವತಿಯಿಂದ ವಿಶ್ವ ಮಹಿಳಾ ದಿನಾಚರಣೆಯನ್ನು ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಪಾರ್ಕ್‌ನಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳೆಯರ ಗೌರವ, ಅವರ ಸಾಧನೆಗಳು ಮತ್ತು ಸಮಾಜದಲ್ಲಿ ಅವರ ಪಾತ್ರವನ್ನು ಸ್ಮರಿಸಿ ಮಾತನಾಡಿ, ಪ್ರಕೃತಿಯೇ ಮಹಿಳಾ ಪ್ರಧಾನವಾಗಿದೆ. ಪ್ರಾಣಿ-ಪಕ್ಷಿಗಳಲ್ಲಿಯೂ ಮಹಿಳಾ ನಾಯಕತ್ವ ಕಾಣಬಹುದು. ಆದರೆ ಕಾಲಕ್ರಮೇಣ ಮನುಷ್ಯ ಸಮಾಜದಲ್ಲಿ ಮಹಿಳೆಯನ್ನು ಕಡೆಗಣಿಸುವ ಪ್ರವೃತ್ತಿ ಹೆಚ್ಚಾಗಿದೆ ಎಂದು ತಿಳಿಸಿದರು.



ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಯು.ಬಿ. ಉದಯ್ ಕುಮಾರ್ ಮಾತನಾಡಿ, ವಿಶ್ವ ಮಹಿಳಾ ದಿನವು ಪ್ರಪಂಚದಾದ್ಯಂತ ಪ್ರೀತಿ ಮತ್ತು ಸಂತೋಷದಿಂದ ಆಚರಿಸಲ್ಪಡುವ ದಿನವಾಗಿದೆ. ನಮ್ಮ ಜೀವನದಲ್ಲಿ ಮಹಿಳೆಯರ ಅಸ್ತಿತ್ವ ಮತ್ತು ಅವರ ಮಹತ್ವವನ್ನು ಅರಿತು ಗೌರವಿಸುವ ಸಂದರ್ಭವೂ ಇದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಘದ ನಿರ್ದೇಶಕರಾದ ಸೀತಾರಾಮು, ಭ್ರಮಾರಂಭ, ಬೃಂದಾಬಾಯಿ, ಸುಬ್ರಮಣಿ, ಮಹಾಂತೇಶ್, ಸ್ಪರ್ಶ, ಲತಾ, ಲಕ್ಷ್ಮೀ, ಹೇಮಲತಾ, ಮಹದೇವ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬಜೆಟ್ ಕುರಿತು ರಾಜ್ಯ ರೈತ ಸಂಘಟನೆ ಒಕ್ಕೂಟ ರಾಜ್ಯಾಧ್ಯಕ್ಷ ಪ್ರತಿಕ್ರಿಯೆ

ರೈತರ ಪಾಲಿಗೆ ನಿರಾಸೆ: ಶಾಂತಕುಮಾರ್

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್ ರೈತರ ಪಾಲಿಗೆ ನಿರಾಶೆಯನ್ನುಂಟು ಮಾಡಿದೆ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಹೇಳಿದ್ದಾರೆ.

ಬಜೆಟ್ ಕುರಿತು ಪ್ರತಿಕ್ರಿಯಿಸಿ ಹೇಳಿಕೆ ನೀಡಿರುವ ಅವರು, ರೈತರ ಆತ್ಮಹತ್ಯೆ ಸ್ಥಾನದಲ್ಲಿ ಕರ್ನಾಟಕ ರಾಜ್ಯ ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದೆ. ಇದನ್ನು ತಡೆಗಟ್ಟಲಿಕ್ಕೆ ಬಜೆಟ್‌ನಲ್ಲಿಯಾವುದೇ ಯೋಜನೆಗಳಿಲ್ಲ. ರೈತರ ಮಕ್ಕಳು ಕೃಷಿ ಕ್ಷೇತ್ರದ ಬಗ್ಗೆ ಬೇಸರಗೊಂಡು ವಲಸೆ ಹೋಗುತ್ತಿದ್ದಾರೆ. ಮದುವೆಯಾಗಲು ಹೆಣ್ಣುಗಳು ಸಿಗುತ್ತಿಲ್ಲ, ಇದು ಭೀಕರವಾದ ಸಮಸ್ಯೆ. ಇದನ್ನ ತಡೆಗಟ್ಟಲು ಯಾವುದೇ ಯೋಜನೆಗಳಿಲ್ಲ. ಕೃಷಿ ಕ್ಷೇತ್ರ ಮತ್ತಷ್ಟು ದುರ್ಬಲವಾಗಲು ಕಾರಣವಾಗುತ್ತದೆ, ರೈತರ ಪಾಲಿಗೆ ಬಜೆಟ್ ನಿರಾಸೆ ತಂದಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಹಸು, ಎಮ್ಮೆ ಖರೀದಿಸಲು ಶೇಕಡಾ 25 ರಷ್ಟು ಪ್ರೋತ್ಸಾಹ ಧನ, ಹೈನುಗಾರಿಕೆ ಸ್ವಲ್ಪ ಹೊತ್ತು ನೀಡಿದ್ದಾರೆ. 16 ವರ್ಷದ ಮಕ್ಕಳಿಗೆ ಮೊಬೈಲ್‌ನಲ್ಲಿ ಸಾಮಾಜಿಕ ಜಾಲತಾಣ ಬಳಕೆ ನಿಷೇಧ ಮಾಡಿದ್ದಾರೆ. ಕೃಷಿಕ್ಷೇತ್ರದಲ್ಲಿ ಎಐ ತಂತ್ರಜ್ಞಾನ ಬಳಕೆ ಅಭಿವೃದ್ಧಿಗೆ ಪೂರಕ ಒಳ್ಳೆಯ ಚಿಂತನೆಯಾಗಿದೆ. ಮೈಸೂರಿನಲ್ಲಿ ಜಯದೇವ ಆಸ್ಪತ್ರೆ ಉನ್ನತಿಕರಣಕ್ಕೆ 180 ಕೋಟಿ ಹಣ ಮೀಸಲಿಟ್ಟಿರುವುದು ಉತ್ತಮ ನಿರ್ಧಾರ ಎಂದು ಹೇಳಿದ್ದಾರೆ.

ಬಜೆಟ್ ಅಭಿವೃದ್ಧಿಗೆ ಪೂರಕವಲ್ಲ: ಭಾಗ್ಯರಾಜ್



ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್ ರಾಜ್ಯದ ರೈತರ ಅಭಿವೃದ್ಧಿಗೆ ಪೂರಕವಲ್ಲದ ರಾಜ್ಯ ಬಜೆಟ್ ಆಗಿದೆ ಎಂದು ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಡಿ ಭಾಗ್ಯರಾಜ್ ಹೇಳಿದರು. ಬಜೆಟ್ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಸಿದ್ದರಾಮಯ್ಯನವರು 17ನೇ ದಾಖಲೆಯ ಬಜೆಟ್ ಮಂಡಿಸಿದ್ದಾರೆ. ರೈತ ಅಭಿವೃದ್ಧಿಗೆ ಪೂರಕವಲ್ಲದ ಹಾಗೂ ಹಳೆ ಮದ್ಯವನ್ನು ಹೊಸ ಬಾಟಲಿಗೆ ಹಾಕಿದ ರೀತಿ ಬಜೆಟ್ ಅನ್ನು ಮಂಡಿಸಿದ್ದಾರೆ ಎಂದು ಲೇವಡಿ ಮಾಡಿದ್ದಾರೆ. ರಾಜ್ಯದಲ್ಲಿರುವ ಸುಮಾರು 25,000 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಪಡೆದಿರುವ ಸುಮಾರಿ 28 ಸಾವಿರ ಕೋಟಿ ರೂಪಾಯಿ ಸಾಲವನ್ನು ಮನ್ನಾ ಮಾಡುವಲ್ಲಿ ಸರ್ಕಾರ ವಿಫಲವಾಗಿದೆ. ಪ್ರತಿ ಎಕರೆಗೆ ಒಂದು ಲಕ್ಷ ಸಾಲ ನೀಡುವ ಘೋಷಣೆಯನ್ನು ಮಾಡಿಲ್ಲ. ಕೃಷಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 10 ಲಕ್ಷದವರೆಗೆ ಬಡ್ಡಿ ರಹಿತ ಸಾಲ ನೀಡುವ ಯೋಜನೆಯನ್ನು ಘೋಷಣೆ ಮಾಡಿಲ್ಲ. ಯಶಸ್ವಿನಿ ಆರೋಗ್ಯ ಯೋಜನೆ ಅಡಿಯಲ್ಲಿ 5 ಲಕ್ಷದವರೆಗೆ ಉಚಿತ ಆರೋಗ್ಯ ನೀಡುವಲ್ಲಿ ಕ್ರಮ ಕೈಗೊಂಡಿಲ್ಲ ಕಳೆದ ಎರಡು ವರ್ಷದ ಬಾಕಿ 950 ಕೋಟಿ ಕಬ್ಬು ಬೆಳೆಗಾರರ ಬಾಕಿ ನೀಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಟೀಕಿಸಿದ್ದಾರೆ.

ಕಾಲುವೆ ಆಧುನಿಕರಣ ಕಾಮಗಾರಿಗೆ ಸಚಿವ ಕೆ. ವೆಂಕಟೇಶ್ ಗುದ್ದಲಿಪೂಜೆ

ಪಿರಿಯಾಪಟ್ಟಣ ಅಭಿವೃದ್ಧಿಯೇ ನನ್ನ ಗುರಿ

ಪಿರಿಯಾಪಟ್ಟಣ: ತಾಲೂಕಿನ ಸರ್ವಾಂಗೀಣ ಅಭಿವೃದ್ಧಿಗಾಗಿ ದುಡಿದಿದ್ದೇನೆ ಹಾಗೂ ತಾಲೂಕಿನ ಅಭಿವೃದ್ಧಿಯೇ ನನ್ನ ಗುರಿಯಾಗಿದೆ ಎಂದು ಪಶು ಸಂಗೋಪನ ಮತ್ತು ರೇಷ್ಮೆ ಖಾತೆ ಸಚಿವ ಕೆ ವೆಂಕಟೇಶ್ ತಿಳಿಸಿದರು.

ತಾಲೂಕಿನ ಚನ್ನಕೇಶವಪುರದಲ್ಲಿ ಕರಡಿಲಕ್ಕನ ಕೆರೆ ಏತ ನೀರಾವರಿ ಯೋಜನೆಯ ಕಾಲುವೆ ಆಧುನಿಕರಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿ, ನಾನು ತಾಲೂಕಿನಲ್ಲಿ ಸುಮಾರು 42 ವರ್ಷಗಳಿಂದ ರಾಜಕಾರಣ ಮಾಡುತ್ತಾ ಬಂದಿದ್ದೇನೆ. ಎಂಎಲ್‌ಎ ಆಗಿದ್ದಾಗಲೂ ಕೆಲಸ ಮಾಡಿದ್ದೇನೆ ಮಂತ್ರಿಯಾಗಿದ್ದಾಗಲೂ ಕೆಲಸ ಮಾಡಿದ್ದೇನೆ ಹಿಂದೆ ರಾಜ್ಯದ ಮಂತ್ರಿಗಳಾಗಿದ್ದ ತಾಲೂಕಿನ ಚನ್ನಬಸಪ್ಪ ನವರು ಅತ್ಯಂತ ಪ್ರಭಾವಿ ರಾಜಕಾರಣಿಯಾಗಿದ್ದರು ಅವರ ಪರವಾಗಿ ಚುನಾವಣಾ ಪ್ರಚಾರ ಮಾಡಿದ್ದೇನೆ. ಸಭೆಗಳಲ್ಲಿ ಕೆಲವು ಯೋಜನೆಗಳ ಬಗ್ಗೆ ಮಾತನಾಡುತ್ತಿದ್ದಾಗ ಅವರು ಹೇಳುತ್ತಿದ್ದ ಯೋಜನೆಗಳ ಬಗ್ಗೆ ಕುತೂಹಲ ವಹಿಸಿ ಕರಡಿಲಕ್ಕನ ಕೆರೆ ಏತ ನೀರಾವರಿಗೆ ಯೋಜನೆ ಸೇರಿದಂತೆ ಇನ್ನಿತರ ಯೋಜನೆಗಳ ಬಗ್ಗೆ ಅಧಿಕಾರಿಗಳನ್ನು ಕೇಳಿದಾಗ ಅದು ಹಾಗೇ ಹೀಗೆ ಎಂದು ಹೇಳುತ್ತಿದ್ದರು, ನಂತರ ನಾನು ಶಾಸಕನಾಗಿ ಬಂದ ಮೇಲೆ ರಾಮಕೃಷ್ಣ ಹೆಗಡೆ ಹಾಗೂ ದೇವೇಗೌಡರಲ್ಲಿ ಕರಡಿಲಕ್ಕನ ಕೆರೆ ಏತ ನೀರಾವರಿ ಯೋಜನೆ ಜಾರಿಗೊಳಿಸಲು ಸಾಧ್ಯವಾಯಿತು. ತಾಲೂಕಿನ ಅಭಿವೃದ್ಧಿಗಾಗಿ ಚನ್ನಬಸಪ್ಪ ನವರು ಕೆಲಸ ಮಾಡಿದ್ದಾರೆ. ಕಾಳು ಮರೀಗೌಡರು ಕೆಲಸ ಮಾಡಿದ್ದಾರೆ, ಬಸವರಾಜು ಅವರು ಕೆಲಸ ಮಾಡಿದ್ದಾರೆ. ನಾನೂ ಕೂಡ ಶಾಸಕನಾಗಿದ್ದಾಗಲೂ ಸಾವಿರಾರು ಕೋಟಿ ಅನುದಾನ ತುಂದು ತಾಲೂಕಿಗೆ ಅಗತ್ಯವಾದ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಮಂತ್ರಿಯಾದ ಮೇಲೂ ಶಾಲಾ ಕಾಲೇಜು, ಕುಸುಮ್ ಯೋಜನೆ, ನೀರಾವರಿ ಸೇರಿದಂತೆ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದೇನೆ ಜನತೆ ಎಲ್ಲಿಯವರೆಗೆ ಅವಕಾಶ ನೀಡುತ್ತಾರೋ ಅಲ್ಲಿಯ ತನಕ ತಾಲೂಕಿನ ಅಭಿವೃದ್ಧಿಗಾಗಿ ದುಡಿಯುತ್ತೇನೆ ಎಂದರು. ಈ ಸಂದರ್ಭದಲ್ಲಿ ನಿತೀನ್ ವೆಂಕಟೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಡಿ ಟಿ ಸ್ವಾಮಿ, ರಹಮತ್ ಜಾನ್ ಬಾಬು, ಪಿ ಎಲ್ ಡಿ ಬ್ಯಾಂಕ್ ಅಧ್ಯಕ್ಷ ಹೊಲದಪ್ಪ, ಸದಸ್ಯ ಹಿಟ್ನಳ್ಳಿ ಪರಮೇಶ್,ಮೈಮುಲ್ ನಿರ್ದೇಶಕ ಬಿ ಎ ಪ್ರಕಾಶ್, ಬಿ ಜೆ ಬಸವರಾಜು, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಲೋಕೇಶ್, ಮುಖಂಡರಾದ ಪ್ರಕಾಶ್, ಅನಿಲ್ ಕುಮಾರ್, ಮಾದೇವ್, ಪಿ ಮಹದೇವ್, ಪುಟ್ಟರಾಜು, ರಾಮಚಂದ್ರ, ಅಶೋಕ್ ಗೌಡ, ವಿಷಕಂಠಯ್ಯ, ಅಯಿತನಹಳ್ಳಿ ಮಹದೇವ್, ಇಂಜಿನಿಯರ್ ಗಳಾದ ಸತೀಶ್, ಪುಟ್ಟಸ್ವಾಮಿ, ಗೋಕುಲ್, ಮೋಹನ್, ಗುತ್ತಿಗೆದಾರ ರಘುಪತಿ ಇದ್ದರು.



ಕಿರುಸುದ್ದಿ

ನಾಳೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಚಾಮರಾಜನಗರ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ನ್ಯಾಯಾಂಗ ಇಲಾಖೆ ಮತ್ತು ಜಿಲ್ಲಾ ವಕೀಲರ ಸಂಘದ ಸಹಯೋಗದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಮಾರ್ಚ್ 9 ರಂದು ಸಂಜೆ 4 ಗಂಟೆಗೆ ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಎಡಿಆರ್ ಕಟ್ಟಡದಲ್ಲಿ ಹಮ್ಮಿಕೊಳ್ಳಲಾಗಿದೆ. ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿ. ಪ್ರಭಾವತಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಪುಟ್ಟಸ್ವಾಮಿ ಅವರು ಅಧ್ಯಕ್ಷತೆ ವಹಿಸುವರು. ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಎಸ್.ಜೆ. ಕೃಷ್ಣ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು. ಸಿ.ಜೆ.ಎಂ ಹಾಗೂ ಪ್ರಧಾನ ಹಿರಿಯ ಸಿವಿಲ್ ನ್ಯಾಯಧೀಶರಾದ ಸಿ.ಡಿ. ಪ್ರಕಾಶ್, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ, ಜೆ.ಎಂ.ಎಫ್.ಸಿ ಹಾಗೂ ಒಂದನೇ ಅಪರ ಸಿವಿಲ್ ನ್ಯಾಯಾಧೀಶರಾದ ಆರ್. ಸುನೀಲ್, ಜೆ.ಎಂ.ಎಫ್.ಸಿ ಮತ್ತು ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸ್ಮಿತಾ ನಾಗಲಾಪುರ್, ಜೆ.ಎಂ. ಎಫ್.ಸಿ ಮತ್ತು ಅಪರ ಸಿವಿಲ್ ನ್ಯಾಯಾಧೀಶರಾದ ಪ್ರತಿಭಾ, ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಶಿವರಾಂ, ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿ ಸುರೇಶ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ನಿರಾಶಾದಾಯಕ ಬಜೆಟ್: ಶಾಸಕ ಹರೀಶ್‌ಗೌಡ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಮೈಸೂರು ಜಿಲ್ಲೆಯ ಜನತೆ ದೊಡ್ಡ ನಿರೀಕ್ಷೆ ಇಟ್ಟಿದ್ದರೂ ಈ ಬಾರಿಯ ಬಜೆಟ್ ನಿರಾಶಾದಾಯಕವಾಗಿದೆ ಎಂದು ಶಾಸಕ ಹಾಗೂ ಜೆಡಿಎಸ್ ಪಕ್ಷದ ವಿಧಾನಸಭೆಯ ಮುಖ್ಯ ಸಚೇತಕ ಜಿ.ಡಿ. ಹರೀಶ್‌ಗೌಡ ಟೀಕಿಸಿದ್ದಾರೆ.



ಬಜೆಟ್ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಹಿಂದಿನ ಬಜೆಟ್‌ನಲ್ಲಿ ಘೋಷಿಸಲಾದ ಹಲವು ಯೋಜನೆಗಳನ್ನು ಮತ್ತೆ ಉಲ್ಲೇಖಿಸಲಾಗಿದ್ದು, ಹೊಸದಾಗಿ ಘೋಷಿಸಿದ ಅನೇಕ ಯೋಜನೆಗಳಿಗೆ ಸ್ಪಷ್ಟ ಅನುದಾನ ನಿಗದಿಯಾಗಿಲ್ಲ. ರಾಜ್ಯ ಸರ್ಕಾರ ಈಗಾಗಲೇ ಸುಮಾರು 8.24 ಲಕ್ಷ ಕೋಟಿ ಸಾಲ ಮಾಡಿರುವುದೇ ಈ ಸರ್ಕಾರದ ದೊಡ್ಡ ಸಾಧನೆಯಾಗಿದೆ. ಅಭಿವೃದ್ಧಿ ಹಾಗೂ ಜನಸಾಮಾನ್ಯರ ಹಿತ ಕಾಪಾಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಹೇಳಿದ್ದಾರೆ.

ತ್ಯಾಜ್ಯ ಸಂಗ್ರಹಣೆ ವಾಹನಗಳು ಸ್ಥಗಿತ

ಮೈಸೂರು: ಘನ ತ್ಯಾಜ್ಯ ನಿರ್ವಹಣಾ ಎಕ್ಸ್‌ಪೋ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಗಳನ್ನು ನಗರದ ವಿವಿಧ ಸ್ಥಳಗಳಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮಗಳಲ್ಲಿ ನಗರಪಾಲಿಕೆಯ ಅಧಿಕಾರಿಗಳು, ಸಿಬ್ಬಂದಿ ಮತ್ತು ಪೌರಕಾರ್ಮಿಕರು ಹಾಗೂ ಪಾಲಿಕೆ ವಾಹನ ವಿಭಾಗವನ್ನು ಸಹ ಸಂಪೂರ್ಣವಾಗಿ ಭಾಗವಹಿಸಲಿರುವ ಹಿನ್ನೆಲೆಯಲ್ಲಿ ಮಾರ್ಚ್ 08 ರಂದು ಮನೆ ಮನೆಗಳಿಂದ ಜ್ಯಾಜ್ಯ ಸಂಗ್ರಹಣೆ ಕಾರ್ಯವನ್ನು ಕೈಗೊಳ್ಳಲು ಅಡಚಣೆ ಉಂಟಾಗಲಿದ್ದು ಪಾಲಿಕೆಯು ವಿಷಾದ ವ್ಯಕ್ತಪಡಿಸಿದೆ. ಆದ್ದರಿಂದ ಮೈಸೂರು ನಗರದ ಸಾರ್ವಜನಿಕರು ತಮ್ಮ ಮನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಒಂದು ದಿನ ತಮ್ಮಲ್ಲೇ ಸಂಗ್ರಹಿಸಿಕೊಂಡು, ಮರು ದಿನ ನಗರಪಾಲಿಕೆಯ ವಾಹನಗಳು ಬಂದಾಗ ವಿಂಗಡಿಸಿದ ತ್ಯಾಜ್ಯವನ್ನು ನೀಡುವಂತೆ ಮೈಸೂರು ನಗರಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

ಕೊಳ್ಳೇಗಾಲ: ಮಾ.8ರ ಭಾನುವಾರದಂದು 66/11 ಕೆ.ವಿ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ, ಈ ಕೇಂದ್ರದಿಂದ ಹೊರಹೊಮ್ಮುವ 11ಕೆವಿ ಫೀಡರ್ ಗಳಾದ ಕೊಳ್ಳೇಗಾಲ ಪಟ್ಟಣದ ಭೀಮನಗರ, ನೂರ್ ಮೊಹಲ್ಲಾ, ಆದರ್ಶನಗರ, ಆಶ್ರಯ ಬಡಾವಣೆ, ದೇವಾಂಗಪೇಟೆ, ದೊಡ್ಡನಾಯಕರ ಬೀದಿ, ಬೆಂಡ್ರಳ್ಳಿ- ಬೂದಿತಿಟ್ಟು, ಮುಡಿಗುಂಡ, ಶಂಕನಪುರ, ಬಾಪುನಗರ, ಕೊಳ್ಳೇಗಾಲ ಮೋಳೆ,ದಾಸನಪುರ, ಹರಳೆ, ಹಳೆ ಅಣಗಳ್ಳಿ ಹಾಗೂ ತಾಲ್ಲೂಕಿನ ಉತ್ತಂಬಳ್ಳಿ, ತೇರಂಬಳ್ಳಿ, ಗೊಬ್ಬಳಿಪುರ, ಕುಣಗಳ್ಳಿ, ಸೂರಪುರ, ಮುಳ್ಳೂರು, ಹಳೇ ಹಂಪಾಪುರ, ಹೊಸ ಹಂಪಾಪುರ ಗ್ರಾಮಗಳಿಗೆ ಸದರಿ ದಿನದಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಎಂದಿನಂತೆ ನಿಗಮದ ಜತೆ ಸಹಕರಿಸಬೇಕೆಂದು ಸೆಸ್ಕ್ ಎಇಇ ರಾಜು.ಎಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹನೂರು ತಾಲೂಕಿನ ಮಂಗಲ ಪ್ರೌಢಶಾಲೆಯಲ್ಲಿ ಹನೂರು ಬಫರ್ ವಲಯ ವತಿಯಿಂದ ವಿಶ್ವವನ್ಯಜೀವಿ ದಿನ ಕಾರ್ಯಕ್ರಮವನ್ನು ಅಪರ ಸಿವಿಲ್ ನ್ಯಾಯಾಧೀಶ ರಂಜಿತ್ ಕುಮಾರ್ ಎಂ. ಉದ್ಘಾಟಿಸಿದರು.

ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ

ಚಾಮರಾಜನಗರ: ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗಗಳು ವಾಸಿಸುವ ಕಾಲೋನಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಹೆಚ್ಚಿನ ಒತ್ತು ನೀಡಿದ್ದು, ಕ್ಷೇತ್ರದಲ್ಲಿ ಬಹುತೇಕ ಬಡಾವಣೆಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಎಂಎಸ್ಐಎಲ್ ಅಧ್ಯಕ್ಷ, ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ತಾಲೂಕಿನ ಅಮಚವಾಡಿ ಗ್ರಾಮದ ನಾಯಕರ ಬೀದಿಯಲ್ಲಿ ಟಿಎಸ್‌ಪಿ ಯೋಜನೆಯಡಿಯಲ್ಲಿ 80 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲುದ್ದೇಶಿಸಿರುವ ಸಿಮೆಂಟ್ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ವಿಶೇಷವಾಗಿ ಗಿರಿಜನರು ಹಾಗೂ ಸೋಲಿಗರು ವಾಸಿಸುವ ಪ್ರದೇಶಗಳಿಗೆ ವಿಶೇಷ ಯೋಜನೆಯಡಿಯಲ್ಲಿ ಮೂಲಭೂತ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. ಬೆಜ್ಜಲಪಾಳ್ಯ ಗ್ರಾಮಕ್ಕೆ ಇದುವರೆಗೂ ಡಾಂಬರು ರಸ್ತೆ ಇರಲಿಲ್ಲ. ರಾಷ್ಟ್ರೀಯ ಹೆದ್ದಾರಿಯಿಂದ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಡಾಂಬರೀಕರಣ ಗೊಳಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯ ಅರಕಲವಾಡಿ ಸೋಮನಾಯಕ, ತಾಲೂಕು ಗ್ಯಾರಂಟಿ ಸಮಿತಿ ಸದಸ್ಯ ಆರ್ ರಾಜು, ಕಾಂಗ್ರೆಸ್ ಮುಖಂಡ ಲಿಂಗರಾಜು, ಯಜಮಾನರಾದ ಮಾದನಾಯಕ, ಮಹೇಂದ್ರ, ಮಹೇಶ್‌ನಾಯಕ, ಮಹೇಶಕುಮಾರ್, ಎ.ಎಲ್. ಮಹೇಶ್, ಪ್ರಜ್ವಲ್ ನಾಯಕ, ಯ.ಸಿದ್ದಾಪ್ಪಾಜಿ, ಮಹೇಶ, ಮಹದೇವ್ ಶೆಟ್ಟಿ, ಮಹೇಶ್, ಡಿ. ಬಸವಣ್ಣ, ಇಂಜಿನಿಯರ್ ಭೀಮಾಸಾಗರ್, ಶಿವಣ್ಣ ಇದ್ದರು.



ಚಾಮರಾಜನಗರದ ಅಮಚವಾಡಿ ಗ್ರಾಮದ ನಾಯಕರ ಬೀದಿಯಲ್ಲಿ ಟಿಎಸ್‌ಪಿ ಯೋಜನೆಯಲ್ಲಿ 80 ಲಕ್ಷ ರೂ. ವೆಚ್ಚದಲ್ಲಿ ಸಿಮೆಂಟ್ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಒಳಮೀಸಲಾತಿರಹಿತ ಹಳೆ ಮೀಸಲಾತಿ ಜಾರಿಗೊಳಿಸಲು ಒತ್ತಾಯ

ಜಿಲ್ಲೆಯ ಶಾಸಕರಿಗೆ ಮನವಿ

ಚಾಮರಾಜನಗರ: ಒಳ ಮೀಸಲಾತಿ ಬಗ್ಗೆ ಇರುವ ಗೊಂದಲ, ಸಮಸ್ಯೆಗಳು ಹಾಗೂ ನ್ಯಾಯಾಲಯದ ಅಡೆತಡೆಗಳು ನಿವಾರಣೆಯಾಗುವವರೆಗೆ ಒಳ ಮೀಸಲಾತಿ ರಹಿತ ಹಳೆ ಮೀಸಲಾತಿಯನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿ ಬಲಗೈ ಸಮುದಾಯದ ಮುಖಂಡರಿಂದ ಜಿಲ್ಲೆಯ ಶಾಸಕರ ನಿವಾಸಕ್ಕೆ ತೆರಳಿ ಮನವಿ ಸಲ್ಲಿಸಲಾಯಿತು.



ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ, ಗಡಿಕಟ್ಟೆ ಯಜಮಾನರು, ಹಾಗೂ ಅದಿ ಕರ್ನಾಟಕ ಅಭಿವೃದ್ಧಿ ಸಂಘದ ಅಸ್ತಿ ಸಂರಕ್ಷಣಾ ಸಮಿತಿಯ ಪದಾಧಿಕಾರಿಗಳು ಹಾಗೂ ಮುಖಂಡರು ಜಿಲ್ಲೆಯ ಶಾಸಕರಾದ ಕೊಳ್ಳೇಗಾಲ ಕ್ಷೇತ್ರದ ಎ.ಆರ್. ಕೃಷ್ಣಮೂರ್ತಿ, ಚಾ.ನಗರ ಕ್ಷೇತ್ರದ ಸಿ. ಪುಟ್ಟರಂಗಶೆಟ್ಟಿ, ಗುಂಡ್ಲುಪೇಟೆ ಕ್ಷೇತ್ರದ ಎಚ್.ಎಂ. ಗಣೇಶಪ್ರಸಾದ್ ಹಾಗೂ ಹನೂರು ಕ್ಷೇತ್ರದ ಮಂಜುನಾಥ್ ಅವರನ್ನು ಅವರ ಕ್ಷೇತ್ರಗಳಲ್ಲಿಯೇ ಭೇಟಿ ಮಾಡಿ ಮನವಿ ಸಲ್ಲಿಸುವ ಮೂಲಕ ಬಲಗೈ ಸಮುದಾಯದ ಪರವಾಗಿ ಧ್ವನಿ ಎತ್ತಬೇಕು. ಸಮುದಾಯಕ್ಕೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ವಿಧಾನಸಭಾ ಅಧಿವೇಶದಲ್ಲಿ ಬಲಗೈ ಸಮುದಾಯದ ಪರದ ಧ್ವನಿ ತಮ್ಮದಾಗಬೇಕು ಎಂದು ಒತ್ತಾಯಿಸಿದರು.

ಈಗ ಜಾರಿ ಮಾಡಿರುವ ಒಳ ಮೀಸಲಾತಿಯಲ್ಲಿ ಬಲಗೈ ಸಮುದಾಯದ 101 ಜಾತಿಗಳಿಗೆ ಭಾರಿ ಅನ್ಯಾಯವಾಗಿದ್ದು, ನೇಮಕಾತಿ ಬಿಂದು ಪದ್ಧತಿಯಲ್ಲಿ ಭಾರಿ ನ್ಯಾಯವಾಗಿದೆ. ಎಬಿಸಿ ಪ್ರವರ್ಗಗಳಿಗೆ ನಿಗಧಿ 'ಡಿಸುವ ಉದ್ಯೋಗದಲ್ಲಿ ಅನ್ಯಾಯವಾಗುತ್ತದೆ. ವಿವಿಧ ಇಲಾಖೆಯ ಹಾಗೂ ವಿಭಾಗದಲ್ಲಿ ಕಡಿಮೆ ಸಂಖ್ಯೆಯಲ್ಲಿ ಹುದ್ದೆಗಳು ನೇಮಕಾತಿ ನಡೆದಾಗ ಪರಿಶಿಷ್ಟ ಜಾತಿಯಲ್ಲಿಯೇ ಪ್ರವರ್ಗ ಎಗೆ ಹೆಚ್ಚು ಹುದ್ದೆಗಳು ಹೋಗುವ ಜತೆಗೆ ಇತರೇ ಬಿ ಮತ್ತು ಸಿ ವರ್ಗಗಳಿಗೆ ಅನ್ಯಾಯವಾಗುತ್ತಿದೆ. ಇದರಿಂದಸಾಮಾಜಿಕನ್ಯಾಯದ ಬದಲಾಗಿ ಪರಿಶಿಷ್ಟ ಜಾತಿ ಬಲಗೈ ಸಮುದಾಯಕ್ಕೆ ಅನ್ಯಾಯವಾಗುತ್ತದೆ. ಅಂಬೇಡ್ಕರ್ ಅವರಆಶಯದಂತೆ ಸಮಾನ ಅವಕಾಶಗಳು ದೊರೆಯುವುದಿಲ್ಲ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಮನವಿ ಸ್ವೀಕರಿಸಿ, ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಒಳಮೀಸಲಾತಿ ನೀಡುವಲ್ಲಿ ಆಗಿರುವ ಎಡವಟ್ಟಿನಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ಇದನ್ನು ವಿರೋಧಿಸಿ ನಾನು ಒಳಮೀಸಲಾತಿ ವರ್ಗೀಕರಣದ ಬಗ್ಗೆ ಅಪಸ್ವರ ವ್ಯಕ್ತಪಡಿಸಿ, ಅಂದಿನ ಅದಿವೇಶನದಲ್ಲಿ ಸಹಿ ಹಾಕದೇ ಪ್ರತಿಭಟನೆ ವ್ಯಕ್ತಪಡಿಸಿ ಹೊರ ಬಂದೆ. ಈ ಬಗ್ಗೆ ಮುಖ್ಯಮಂತ್ರಿಗಳ ಗಮನವನ್ನು ಸೆಳೆದಿದ್ದೇನೆ. ನಿಮ್ಮ ಹೋರಾಟಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ಅಧಿವೇಶನದಲ್ಲಿ ಬಲಗೈ ಸಮುದಾಯದ ಶಾಸಕರು ಒಗ್ಗಟ್ಟಿನಿಂದ ಇದನ್ನು ವಿರೋಧಿಸುವುದಾಗಿ ತಿಳಿಸಿದರು. ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎಚ್.ಎಂ. ಗಣೇಶ್‌ಪ್ರಸಾದ್, ಎಂ. ಆರ್. ಮಂಜುನಾಥ್ ಮನವಿ ಸ್ವೀಕಿಸಿಕೊಂಡು ಮಾತನಾಡುವ ಭರವಸೆಯನ್ನು ನೀಡಿದರು.

ಸಮಿತಿಯ ಅಧ್ಯಕ್ಷ ಅಯ್ಯನಪುರ ಶಿವಕುಮಾರ್, ತಾ.ಪಂ. ಮಾಜಿ ಅಧ್ಯಕ್ಷ ಆರ್. ಮಹದೇವ್, ತಾಲೂಕು ಗ್ಯಾರಂಟಿ ಸಮಿತಿಯ ಅಧ್ಯಕ್ಷ ನಲ್ಲೂರು ಸೋಮೇಶ್ವರ, ನಲ್ಲೂರು ಮಹದೇವಸ್ವಾಮಿ, ನಾಗವಳ್ಳಿ ನಾಗಯ್ಯ, ನಗರಸಭಾ ಮಾಜಿ ಸದಸ್ಯ ಆರ್.ಪಿ. ನಂಜುಂಡಸ್ವಾಮಿ, ಡಿ. ನಾರಾಯಣಸ್ವಾಮಿ, ಯ. ಹೊಂಗನೂರು ವೀರಣ್ಣ, ಸೋಮಣ್ಣ, ಮಲ್ಲೇದೇವರು, ಸಿದ್ದಯ್ಯನಪುರ ಗೋವಿಂದರಾಜು, ಚನ್ನಂಜಯ್ಯ, ದಡದಹಳ್ಳಿ ಗೋವಿಂದರಾಜು, ಹೊಸಹಳ್ಳಿ ಮಧುಸೂದನ್, ರಂಗಸ್ವಾಮಿ, ಇದ್ದರು.

ಮಹಿಳಾ ದಿನ ಅಂಗವಾಗಿ ವಿವಿಧ ಸ್ಪರ್ಧೆ ಆಯೋಜನೆ

ಗಮನ ಸೆಳೆದ ರಂಗೋಲಿ

ಚಾಮರಾಜನಗರ: ಅಂತಾ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, ಹಗ್ಗ-ಜಗ್ಗಾಟ, ಲೆಮನ್ ಅಂಡ್ ಸ್ಪೂನ್ ಮತ್ತು ಮ್ಯೂಸಿಕಲ್ ಚೇರ್ ಇನ್ನಿತರ ಸ್ಪರ್ಧೆಗಳು ನಡೆದವು.



ಇದೇ ತಿಂಗಳ ಮಾರ್ಚ್ 10ರಂದು ನಡೆಯಲಿರುವ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ಮಹಿಳೆಯರು ಬಹಳ ಉತ್ಸುಕತೆಯಿಂದ ಪಾಲ್ಗೊಂಡು ಗಮನ ಸೆಳೆದರು.

ಜಿಲ್ಲಾಡಳಿತ ಭವನದ ಆವರಣದಲ್ಲಿ ಬೆಳಗ್ಗೆ ಆಕರ್ಷಕವಾಗಿ ಬಿಡಿಸಿದ್ದ ರಂಗೋಲಿಯನ್ನು ಜಿಲ್ಲಾಧಿಕಾರಿ ಶ್ರೀರೂಪಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ವೀಕ್ಷಿಸಿದರು.

ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿ ಸ್ಪರ್ಧಿಗಳು ಬಿಡಿಸಿದ್ದ ರಂಗೋಲಿಗಳನ್ನು ಆಸಕ್ತಿಯಿಂದ ವೀಕ್ಷಿಸುವುದರ ಜತೆಗೆ ರಂಗೋಲಿ ಸ್ಪರ್ಧೆಯ ತೀರ್ಪುಗಾರರಾಗಿಯೂ ಕಾರ್ಯನಿರ್ವಹಿಸಿದರು. ಮಹಿಳೆಯರ ರಂಗೋಲಿ ಕಲೆಗೆ ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೋನಾ ರೋತ್ ಮೆಚ್ಚುಗೆ ವ್ಯಕ್ತಪಡಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಡಿ.ಸಿ. ಶೃತಿ, ಜಿಲ್ಲಾ ಖಜಾನೆಯ ಉಪ ನಿರ್ದೇಶಕರಾದ ರಾಜೇಶ್ವರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಸುರೇಶ್, ಜಿಲ್ಲಾ ಪಂಚಾಯತ್ ಮೌಲ್ಯಮಾಪನ ಅಂದಾಜು ಅಧಿಕಾರಿ ದೀಪಾ, ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ವಾರ್ತಾ ಇಲಾಖೆಯ ವಾರ್ತಾ ಸಹಾಯಕರಾದ ಸುರೇಶ್‌ಕುಮಾರ್, ಜಿಲ್ಲಾಧಿಕಾರಿ ಕಚೇರಿಯ ಶಿರಸ್ತೇದಾರರಾದ ರಂಗರಾಜು, ರಕ್ಷಿತಾ ಇದ್ದರು.

ಮೌಲ್ಯವರ್ಧನ ತರಬೇತಿ ಕಾರ್ಯಕ್ರಮ

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ), ಚಾಮರಾಜನಗರ ಇವರ ಆಶ್ರಯ ದಲ್ಲಿ ಆಯೋಜಿಸಿದ್ದ ಬಾಳೆ ದಿಂಡಿನ ಮೌಲ್ಯವರ್ಧನ ತರಬೇತಿ ಕಾರ್ಯಕ್ರಮವನ್ನು ಮೇಲುಕಾಮನಹಳ್ಳಿಯ ಸಫಾರಿ ಕ್ಯಾಂಪಸ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತ್ತು.

ಮೇಲುಕಾಮನಹಳ್ಳಿ ಮಗುವಿನಹಳ್ಳಿ, ಲಕ್ಕೀಪುರ ಮತ್ತು ಹಗ್ಗದಹಳ್ಳಿ ಹಾಡಿಗಳಿಂದ ಒಟ್ಟು 25 ಮಹಿಳಾ ಸ್ಪರ್ಧಿಗಳು ಸ್ವಹಿತಾಸಕ್ತಿಯಿಂದಭಾಗವಹಿಸಿದ್ದತರಬೇತಿದಾರರಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು .

ತರಬೇತಿಯಲ್ಲಿ ಬಾಳೆ ದಿಂಡಿನ ನಾರುಗಳಿಂದ ತಯಾರಿಸುವ ವಿಧಾನ ಹಾಗೂ ಆ ನಾರುಗಳಿಂದ ಬುಟ್ಟಿ, ಮ್ಯಾಟ್, ಪೆನ್ ಸ್ಟ್ಯಾಂಡ್, ಕಾಫಿ ಮಗ್ ಸೇರಿದಂತೆ ದೈನಂದಿನ ಗೃಹ ಬಳಕೆಗೆ ಉಪಯೋಗವಾಗುವ ವಿವಿಧ ವಸ್ತುಗಳನ್ನು ತಯಾರಿಸುವ ಕುರಿತು ಪ್ರಾಯೋಗಿಕ ತರಬೇತಿ ನೀಡಲಾಯಿತು.

ಪರಿಸರ ಸಂರಕ್ಷಣೆ ದೃಷ್ಟಿಯಿಂದ ಪ್ಲಾಸ್ಟಿಕ್ ನಿರ್ಮೂಲನೆ ಮಾಡುವುದು ಹಾಗೂ ಪ್ಲಾಸ್ಟಿಕ್ ಬಳಕೆಯ ಬದಲಿಗೆ ಬಾಳೆ ದಿಂಡಿನಿಂದ ತಯಾರಿಸಿದ ಪರಿಸರ ಸ್ನೇಹಿ ವಸ್ತುಗಳನ್ನು ಬಳಸುವ ಮಹತ್ವವನ್ನು ಮಹಿಳೆಯರಿಗೆ ತಿಳಿಸಲಾಯಿತು.

ಮುಂದಿನ ದಿನಗಳಲ್ಲಿ ಬಾಳೆ ದಿಂಡಿನಿಂದ ಉತ್ಪನ್ನಗಳನ್ನು ತಯಾರಿಸಲು ಅಗತ್ಯವಿರುವ ಯಂತ್ರೋಪಕರಣಗಳು ಹಾಗೂ ಇತರ ಉಪಕರಣಗಳನ್ನು ಬಂಡೀಪುರ ಪ್ರತಿಷ್ಠಾನ ನಿಧಿಯಿಂದ ಒದಗಿಸಿ, ಮಹಿಳೆಯರ ಸ್ವಾವಲಂಬನೆ ಹಾಗೂ ಶಕ್ತೀಕರಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು ಎಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ನಿರ್ದೇಶಕರು ಎಸ್ ಪ್ರಭಾಕರನ್ ತಿಳಿಸಿದ್ದಾರೆ.



ಸಿಡಿಪಿಒ ವಿರುದ್ಧ ಭ್ರಷ್ಟಾಚಾರ ಆರೋಪ: ಡಿಸಿಗೆ ದೂರು

ಗುಂಡ್ಲುಪೇಟೆ: ಗುಂಡ್ಲುಪೇಟೆ ಶಿಶು ಅಭಿವೃದ್ಧಿ ಇಲಾಖೆಯಲ್ಲಿ ಸಿಡಿಪಿಒ ಹೇಮಾವತಿಯವರು ಹಣ ವಸೂಲಿಗೆ ಇಳಿದು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿ ಜಿಲ್ಲಾಧಿಕಾರಿ ಶ್ರೀರೂಪ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಸುರೇಶ್ ಅವರಿಗೆ ಜಾರಕಿಹೊಳಿ ಬ್ರಿಗೇಡ್ ವತಿಯಿಂದ ದೂರು ಸಲ್ಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿಗೆ ಜಾರಕಿಹೊಳಿ ಬ್ರಿಗೇಡ್ ಪಧಾದಿಕಾರಿಗಳು ತೆರಳಿ ಜಿಲ್ಲಾಧಿಕಾರಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಮನವಿ ಸಲ್ಲಿಸಿ, ಗುಂಡ್ಲುಪೇಟೆ ತಾಲ್ಲೂಕು ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿ ಹೇಮಾವತಿ ರವರು ಕಳೆದ 3 ವರ್ಷಗಳಿಂದಲೂ ತಾಲ್ಲೂಕಿನಲ್ಲೇ ಜಾಂಡಾ ಹೂಡಿದ್ದಾರೆ. ಈ ಮೂಲಕ ಇಲ್ಲಿನ ಆಳ ಅಗಲ ಅರಿತು ಪ್ರತಿ ಅಂಗನವಾಡಿ ಕೇಂದ್ರಗಳಿಂದ 1500 (2024-25 ರ ಸಾಲಿನ ವರೆಗೆ 1000 ದಂತೆ ಪ್ರಸ್ತುತ 1500.ಪ್ರತಿ ಮಾಹೆಯಂತೆ ಹಣ ವಸೂಲಿ ಮಾಡುತ್ತಿದ್ದಾರೆ ಭಾಗ್ಯಲಕ್ಷ್ಮಿ ಬಾಂಡ್‌ಗಾಗಿ 5 ಸಾವಿರ ರೂ ಲಂಚ ಪಡೆಯುತ್ತಿದ್ದಾರೆ ಎಂದು ದೂರಿದರು.

ಅಂಗನವಾಡಿ ಕಾರ್ಯಕರ್ತೆ ಯರಿಗೆ ಮೊಟ್ಟೆ ಹಣವನ್ನು ನೀಡುತ್ತಿದ್ದು, ಈ ವಿಚಾರದಲ್ಲಿ ಕಾರ್ಯಕರ್ತೆ ಯರಿಗೆ ಕಡಿಮೆ ಮೊಟ್ಟೆ ಕೊಡುವಂತೆ ನಿರ್ದೇಶಿಸಿ ಮಾಸಿಕ ಕಮಿಷನ್ ಪಡೆಯುವುದರ ಜೊತೆಗೆ ಹಾಲಿನ ಪೌಡಗಳನ್ನು ಅಕ್ರಮವಾಗಿ ಮೈಸೂರಿನ ಐಸ್‌ಕ್ರೀಮ್ ಫ್ಯಾಕ್ಟರಿಗಳಿಗೆ ಮಾರಾಟ ಮಾಡಿಸುತ್ತಿರುವುದು ಕಂಡು ಬಂದಿದೆ. ಇಲಾಖೆ ಯಿಂದ ನೀಡಿರುವ ವಾಹನವನ್ನು ದುರುಪಯೋಗಪಡಿಸಿಕೊಂಡಿದ್ದು, ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಹಾಗೂ ಸಹಾಯಕಿಯರ ನೇಮಕಾತಿಯಲ್ಲಿ ಜಿಲ್ಲಾಧಿಕಾರಿಗಳ ಹಾಗೂ ಉಪನಿರ್ದೇಶಕರ ಹೆಸರೇಳಿ ತಲಾ ಒಬ್ಬೊಬ್ಬರಿಂದ 1.5 ಲಕ್ಷದಿಂದ 2 ಲಕ್ಷದವರೆವಿಗೂ ಲಂಚ ಪಡೆದಿದ್ದಾರೆ.

ಈ ಸಂದರ್ಭದಲ್ಲಿ ಜಾರಕಿಹೊಳಿ ಬ್ರಿಗೇಡ್ ಸಂಸ್ಥಾಪಕ ಗೋವಿನಾಯಕ್, ರಮೇಶ್, ಗಿರೀಶ್, ಚಾಮರಾಜನಗರ ತಾಲೂಕು ಅಧ್ಯಕ್ಷ ಪ್ರಜ್ವಲ್ ನಾಯಕ್ ಇತರರು ಇದ್ದರು.

ಶಕ್ತಿ ಮಾರಮ್ಮನ ಜಾತ್ರೆ: ಗುಂಡು ಎತ್ತುವ ಸ್ಪರ್ಧೆ

ಹನೂರು: ತಾಲೂಕಿನ ಪುದುರಾಮಾಪುರ ಗ್ರಾಮದಲ್ಲಿ ನೂರಾರು ವರ್ಷಗಳ ಇತಿಹಾಸ ಹೊಂದಿರುವ ಶ್ರೀ ಶಕ್ತಿ ಮಾರಮ್ಮನ ಜಾತ್ರಾ ಮಹೋತ್ಸವದ ಅಂಗವಾಗಿ ವಿನೂತನವಾದ ಗುಂಡು ಎತ್ತುವ ಸ್ಪರ್ಧೆ ಆಯೋಜಿಸಲಾಗಿತ್ತು.



ಜಾತ್ರೆಗೆ ಆಗಮಿಸಿದ ಭಕ್ತರು ಹಾಗೂ ಯುವಕರಲ್ಲಿ ಈ ಸ್ಪರ್ಧೆ ವಿಶೇಷ ಆಕರ್ಷಣೆಯಾಗಿತ್ತು. ಜಾತ್ರೆಯ ವಿಶೇಷವೆಂದರೆ ಮದುವೆಗೆ ಸಿದ್ಧವಾಗಿರುವ ಯುವಕರು ಈ ಸ್ಪರ್ಧೆಯಲ್ಲಿ ಭಾಗವಹಿಸುವುದು ವಾಡಿಕೆಯಾಗಿದೆ.

ಅಲ್ಲದೆ ಸುಮಾರು 100 ಕೆಜಿ ತೂಕದ ಇಲವತ್ತಕಲ್ಲನ್ನು (ಗುಂಡು) ಎತ್ತಿ ಕೆಳಗಿಳಿಸಿದರೆ ಮದುವೆಗೆ ಹೆಣ್ಣು ಸಿಗುತ್ತದೆ ಎಂಬ ನಂಬಿಕೆ ಇದೆ. ಈ ನಂಬಿಕೆ ಹಿನ್ನೆಲೆ ಸುತ್ತಮುತ್ತಲ ಗ್ರಾಮಗಳಿಂದ ಬಂದ ಹಲವಾರು ಯುವಕರು ಸ್ಪರ್ಧೆಯಲ್ಲಿ ಭಾಗವಹಿಸಿ ತಮ್ಮ ಶಕ್ತಿಯನ್ನು ಪ್ರದರ್ಶಿಸಿದರು.

ಜಾತ್ರೆ ಸಂದರ್ಭದಲ್ಲಿ ನಡೆದ ಕುಣಿತ, ಸಂಪ್ರದಾಯಿಕ ಕಾರ್ಯಕ್ರಮಗಳು ಹಾಗೂ ಯುವಕರ ಮೈ ನವಿರೇಳಿಸುವ ಸ್ಪರ್ಧೆಗಳು ಭಕ್ತರ ಗಮನ ಸೆಳೆದವು. ನೂರಾರು ಭಕ್ತರು ದೇವಸ್ಥಾನಕ್ಕೆ ಆಗಮಿಸಿ ದೇವಿಯ ದರ್ಶನ ಪಡೆದು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿದರು.

ಈ ವೇಳೆ ಪುದುರಾಮಾಪುರ ಗ್ರಾಮದ ಶ್ರೀ ಶಕ್ತಿ ಮಾರಮ್ಮನ ದೇವಸ್ಥಾನದಲ್ಲಿ ಯುವಕರು ಸುಮಾರು 100 ಕೆಜಿ ಗುಂಡು ಕಲ್ಲನ್ನು ಎತ್ತುವ ದೃಶ್ಯ ಎಲ್ಲರ ಗಮನ ಸೆಳೆಯಿತು.

ಲೈನ್‌ಮ್ಯಾನ್ ದಿವಸ್ ಕಾರ್ಯಕ್ರಮದಲ್ಲಿ ರಮೇಶ್ ಬಂಡಿಸಿದ್ದೇಗೌಡ

ಸುರಕ್ಷತೆ, ಎಚ್ಚರಿಕೆಯ ಕೆಲಸ ಅತ್ಯಂತ ಮುಖ್ಯ

ಮೈಸೂರು: ಗ್ರಾಹಕರಿಗೆ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಲು ಸಿಬ್ಬಂದಿ ಸುರಕ್ಷತೆ ಮತ್ತು ಎಚ್ಚರಿಕೆಯ ಕೆಲಸ ಅತ್ಯಂತ ಮುಖ್ಯವಾಗಿದೆ ಎಂದು ಸೆಸ್ಕ್ ಅಧ್ಯಕ್ಷರಾದ ಶಾಸಕ ರಮೇಶ್ ಬಂಡಿಸಿದ್ದೇಗೌಡ ಹೇಳಿದರು.



ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವತಿಯಿಂದ ಮೈಸೂರಿನ ವಿ.ವಿ.ಮೊಹಲ್ಲಾದಲ್ಲಿರುವ ಸೆಸ್ಕ್‌ನ ಕಾರ್ಯ ಮತ್ತು ಪಾಲನಾ ವಿಭಾಗದ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಲೈನ್‌ಮ್ಯಾನ್ ದಿವಸ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು,

ವಿದ್ಯುತ್ ಕ್ಷೇತ್ರದಲ್ಲಿ ಕೆಲಸ ಮಾಡುವ ಸಿಬ್ಬಂದಿ ಯಾವುದೇ ಅವಘಡಗಳು ಸಂಭವಿಸದಂತೆ ಹೆಚ್ಚಿನ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕಿದೆ. ಆದ್ದರಿಂದ ವಿದ್ಯುತ್ ಅವಘಡಗಳನ್ನು ತಗ್ಗಿಸುವಲ್ಲಿ ಹಾಗೂ ಲೈನ್‌ಮ್ಯಾನ್‌ಗಳ ಸುರಕ್ಷತೆಯ ದೃಷ್ಟಿಯಿಂದ ಎಲ್ಲಾ ಫೀಡರ್‌ಗಳ ನಿರ್ವಹಣೆಗೆ ಕ್ರಮಕೈಗೊಳ್ಳಲಾಗಿದೆ. ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ವಿದ್ಯುತ್ ಅವಘಡಗಳನ್ನು ತಪ್ಪಿಸಬಹುದು ಎಂದು ಅವರು ತಿಳಿಸಿದರು.

'ನಮ್ಮ ಒಂದು ತಪ್ಪು ಅಥವಾ ದುಡುಕಿನ ನಿರ್ಧಾರದಿಂದ ವಿದ್ಯುತ್ ಅವಘಡಗಳು ಸಂಭವಿಸಿದರೆ ಅದು ಸಿಬ್ಬಂದಿಯ ಕುಟುಂಬಕ್ಕೆ ದೊಡ್ಡ ನಷ್ಟವಾಗುವುದರ ಜತೆಗೆ ಸಂಸ್ಥೆಗೂ ಕಪ್ಪುಚುಕ್ಕೆ ಆಗಲಿದೆ. ಆದ್ದರಿಂದ ಲೈನ್‌ಮ್ಯಾನ್‌ಗಳು ತಮ್ಮ ಸುರಕ್ಷತೆ ಜತೆಗೆ ಕುಟುಂಬ ಮತ್ತು ಸಂಸ್ಥೆಯ ಹಿತವನ್ನು ಗಮನದಲ್ಲಿಟ್ಟುಕೊಂಡು ಜವಾಬ್ದಾರಿಯಿಂದ ಕೆಲಸ ಮಾಡಬೇಕು.

ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು ಮಾತನಾಡಿ, ಸೆಸ್ಕ್ ವತಿಯಿಂದ ಮಾ.4ರಿಂದ 10ರವರೆಗೆ ಸುರಕ್ಷತಾ ಸಪ್ತಾಹವನ್ನು ಆಚರಿಸಲಾಗುತ್ತಿದೆ. ಸಿಬ್ಬಂದಿಯ ಸುರಕ್ಷತೆ ಮಾತ್ರವಲ್ಲದೆ ಸಾರ್ವಜನಿಕರ ಸುರಕ್ಷತೆಯೂ ಅತ್ಯಂತ ಮುಖ್ಯವಾಗಿದ್ದು, ಯಾವುದೇ ವಿದ್ಯುತ್ ಅವಘಡಗಳು ಸಂಭವಿಸದಂತೆ ಎಲ್ಲರೂ ಹೆಚ್ಚಿನ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕಿದೆ ಎಂದು ಹೇಳಿದರು.

ಸೆಸ್ಕ್ ತಾಂತ್ರಿಕ ನಿರ್ದೇಶಕ ಡಿ.ಜೆ. ದಿವಾಕರ್, ವಿವಿ ಮೊಹಲ್ಲಾ ವಿಭಾಗದ ಕಾರ್ಯಪಾಲಕ ಅಭಿಯಂತರ ಡಿ. ಸಂದೀಪ್, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘದ ಉಪಾಧ್ಯಕ್ಷ ಎಚ್.ವಿ. ಸಂದೀಪ್ ಇದ್ದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಪ್ರಭಾವತಿ ಮಾಹಿತಿ

ಮಾ.14ರಂದು ಲೋಕ್ ಅದಾಲತ್

ಚಾಮರಾಜನಗರ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳ ಸಹಯೋಗದಲ್ಲಿ ಮಾರ್ಚ್ 14 ರಂದು ಜಿಲ್ಲೆಯಾದ್ಯಂತ ರಾಷ್ಟ್ರೀಯ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಜಿ. ಪ್ರಭಾವತಿ ತಿಳಿಸಿದರು.



ನಗರದ ಜಿಲ್ಲಾ ನ್ಯಾಯಲಯದ ಆವರಣದಲ್ಲಿರುವ ಎ.ಡಿ.ಆರ್ ಕಟ್ಟಡದಲ್ಲಿಂದು ಲೋಕ್ ಅದಾಲತ್ ಸಂಬಂಧ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನಿರ್ದೇಶನದಂತೆ ಇದೇ ತಿಂಗಳ 14ರಂದು ಜಿಲ್ಲಾದ್ಯಂತ ಲೋಕ್ ಅದಾಲತ್ ಏರ್ಪಡಿಸಲಾಗಿದೆ. ಲೋಕ್ ಅದಾಲತ್ ಅಂಗವಾಗಿ ನ್ಯಾಯಾಲಯಗಳಲ್ಲಿ ಬಾಕಿ ಇರುವ ರಾಜೀಯೋಗ್ಯ ಪ್ರಕರಣಗಳ ಶೀಘ್ರ ಹಾಗೂ ಪರಿಣಾಮಕಾರಿ ತೀರ್ಮಾನಕ್ಕೆ ಎ.ಡಿ.ಆರ್. ಕಟ್ಟಡದಲ್ಲಿ ಪೂರ್ವಭಾವಿ ಸಮಾಲೋಚನಾ ಕೇಂದ್ರ ತೆರೆಯಲಾಗಿದೆ. ಸಾರ್ವಜನಿಕರು ತಮ್ಮ ವ್ಯಾಜ್ಯ ಪೂರ್ವ ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಿಗೆ ತಕ್ಷಣ ಪರಿಹಾರ ಪಡೆಯಲು ಇದೊಂದು ಸುವರ್ಣ ಅವಕಾಶವಾಗಿದೆ ಎಂದರು.

ಕರ್ನಾಟಕ ಉಚ್ಚ ನ್ಯಾಯಾಲಯದ ಮಾರ್ಗಸೂಚಿ ಅನ್ವಯ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಯಳಂದೂರು, ಕೊಳ್ಳೇಗಾಲ ಹಾಗೂ ಗುಂಡ್ಲುಪೇಟೆಗಳಲ್ಲಿ ಲೋಕ್ ಅದಾಲತ್‌ಗೆ ಸಂಬಂಧಿಸಿದಂತೆ ಪ್ರತಿದಿನ ಪೂರ್ವಭಾವಿ ಬೈಠಕ್‌ಗಳು ಭೌತಿಕ ಹಾಗೂ ವಿ.ಸಿ. ಮೂಲಕ ನಡೆಯುತ್ತಿದ್ದು, ಈ ಮೂಲಕವೂ ಅರ್ಜಿ ಸಲ್ಲಿಸಿ ಸಾರ್ವಜನಿಕರು ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಿಕೊಳ್ಳಬಹುದಾಗಿದೆ ಎಂದರು.

ಹೆಚ್ಚಿನ ಮಾಹಿತಿಗಾಗಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಸಹಾಯವಾಣಿ ಸಂಖ್ಯೆ 15100, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ 1800-425-90900, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಚಾಮರಾಜನಗರ 08226-226022, ತಾಲೂಕು ಕಾನೂನು ಸೇವಾ ಸಮಿತಿಗಳಾದ ಯಳಂದೂರು 08226-224029, ಕೊಳ್ಳೇಗಾಲ 08224-256788, ಗುಂಡ್ಲುಪೇಟೆ 08229-223279, dlsachnagar2021@gmail.com. ಸಂಪರ್ಕಿಸಬಹುದು ಎಂದು ಜಿಲ್ಲಾ ನ್ಯಾಯಾಧೀಶೆ ಜಿ. ಪ್ರಭಾವತಿ ತಿಳಿಸಿದರು.

ಕಿರುಸುದ್ದಿ

ಮಾದರ ಮಹಾಸಭಾ ಪದಾಧಿಕಾರಿಗಳಿಂದ ಪ್ರತಿಭಟನೆ

ಪಾಂಡವಪುರ: ಸುಪ್ರೀಂಕೋರ್ಟ್ ಆದೇಶದಂತೆ ಒಳ ಮೀಸಲಾತಿಯನ್ನು ಜಾರಿಗೊಳಸದೆ ಒಂದು ಜಾತಿಗೆ ಸೀಮಿತವಾಗಿ ರಾಜ್ಯ ಸರ್ಕಾರ ನಡೆದುಕೊಳ್ಳುತ್ತಿದೆ ಎಂದು ಆರೋಪಿಸಿ ಪಟ್ಟಣದಲ್ಲಿ ಕರ್ನಾಟಕ ಮಾದರ ಮಹಾಸಭಾ ತಾಲೂಕು ಘಟಕದ ಪದಾಧಿಕಾರಿಗಳ ಪ್ರತಿಭಟನೆ ನಡೆಸಿದರು. ಪಟ್ಟಣದ ಪಾಂಡವ ಕ್ರೀಡಾಂಗಣದ ಮುಂಭಾಗ ಜಮಾವಣೆಗೊಂಡ ಸಮುದಾಯದ ಮುಖಂಡರು ಹಾಗೂ ಕಾರ್ಯಕರ್ತರು ಅಲ್ಲಿಂದ ಮೆರವಣಿಗೆ ಮೂಲಕ ಪಟ್ಟಣದ ಡಾ.ರಾಜ್ ಕುಮಾರ್ ವೃತ್ತದ ಮೂಲಕ ಐದು ದೀಪ ವೃತ್ತದಲ್ಲಿ ಸೇರಿ ಶ್ರೀರಂಗಪಟ್ಟಣ-ಜೇವರ್ಗಿ ಮುಖ್ಯ ರಸ್ತೆಯಲ್ಲಿ ಮಾನವ ಸರಪಳಿ ನಿರ್ಮಿಸಿ ರಾಜ್ಯ ಸರ್ಕಾರ, ಸಿಎಂ ಸಿದ್ದರಾಮಯ್ಯ, ಸಚಿವ ಎಚ್.ಸಿ. ಮಹದೇವಪ್ಪ, ಡಾ.ಜಿ.ಪರಮೇಶ್ವರ್, ಪ್ರಿಯಾಂಕ ಖರ್ಗೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ತಹಸೀಲ್ದಾರ್ ಬಸವರಡ್ಡೆಪ್ಪ ರೋಣದ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಒಳಮಿಸಲಾತಿ ಜಾರಿಯಾಗದಿದ್ದರೆ ಉಗ್ರ ಹೋರಾಟ: ರಾಜ್ಯ ಸರ್ಕಾರ, ಸಿಎಂ ಸಿದ್ದರಾಮಯ್ಯ ಅವರು ಒಳ ಮೀಸಲಾತಿ ಜಾರಿಗೊಳಿಸಿ ಮಾದರ ಸಮುದಾಯಕ್ಕೆ ನ್ಯಾಯ ದೊರಕಿಸಿಕೊಡದಿದ್ದರೆ ಮುಂದಿನ ದಿನಗಳಲ್ಲಿ ಸರ್ಕಾರದ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಈ ವೇಳೆ ಕರ್ನಾಟಕ ಮಾದರ ಮಹಾಸಭಾದ ತಾಲೂಕು ಅಧ್ಯಕ್ಷ ಎಸ್.ಎಚ್.ರವಿಕುಮಾರ್ ಶಂಭೂನಹಳ್ಳಿ, ಉಪಾಧ್ಯಕ್ಷ ಪಿ.ಮಲ್ಲಿಕಾರ್ಜುನ, ಪ್ರಧಾನ ಕಾರ್ಯದರ್ಶಿ ಎಸ್.ರವಿ ಬೆಳ್ಳಾಳೆ, ಖಜಾಂಚಿ ರಾಜೇಶ್, ಸದಸ್ಯರಾದ ಎಸ್.ರಾಚಯ್ಯ, ಆಟೋ ಮಲ್ಲೇಶ್, ಯೋಗೇಶ್, ಅರ್ಚನಾ ಚಂದ್ರು, ರಾಜೇಶ್, ಕುಮಾರ್, ತುಕಾರಾಂ, ಶಶಿಕುಮಾರ್, ಟೌನ್ ಚಂದ್ರು ಸೇರಿದಂತೆ ಹಲವರಿದ್ದರು.

ಫಲಿತಾಂಶ ಉತ್ತಮಪಡಿಸಿ

ಶ್ರೀರಂಗಪಟ್ಟಣ: ಪ್ರಸಕ್ತ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಈ ತಾಲ್ಲೂಕು ಜಿಲ್ಲೆಯಲ್ಲಿ ಮೊದಲ ಸ್ಥಾನ ಪಡೆಯಲು ಅಧಿಕಾರಿಗಳು ಮತ್ತು ಶಿಕ್ಷಕರು ಶ್ರಮಿಸಬೇಕು ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಾಕೀತು ಮಾಡಿದರು. ಪಟ್ಟಣದ ಪುರಸಭೆ ಕಚೇರಿ ಸಭಾಂಗಣದಲ್ಲಿ ಶನಿವಾರ ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಫಲಿತಾಂಶ ಹೆಚ್ಚಿಸಲು ಬೇಕಾದ ಎಲ್ಲ ಸಹಾಯ ನೀಡಲಾಗುವುದು. ಅಧಿಕಾರಿಗಳು ಆಸಕ್ತಿಯಿಂದ ಕೆಲಸ ಮಾಡಬೇಕು ಎಂದು ಹೇಳಿದರು. ತಾಲ್ಲೂಕಿನ ವಿವಿಧ ಸರ್ಕಾರಿ ಹಾಸ್ಟೆಲ್ ಗಳಲ್ಲಿರುವ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳ ಫಲಿತಾಂಶ ಸುಧಾರಣೆಗೆ ವಾರ್ಡನ್‌ಗಳು ಕ್ರಮ ವಹಿಸಬೇಕು ಎಂದು ತಾ.ಪಂ. ಆಡಳಿತಾಧಿಕಾರಿ ಪಿ. ಲಕ್ಷ್ಮಿ ಸೂಚಿಸಿದರು. ಬೇಸಿಗೆ ಆರಂಭವಾಗಿದ್ದು ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಉಂಟಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ತಾಲ್ಲೂಕಿನ ಚನ್ನನಕೆರೆ, ಕೋಡಿಶೆಟ್ಟಿಪುರ ಹಾಗೂ ಅರಕೆರೆ ಹೋಬಳಿಯ ಗ್ರಾಮಗಳಲ್ಲಿ ಕುಡಿಯುವ ನೀರಿನ ಲಭ್ಯತೆ ಬಗ್ಗೆ ನಿಗಾ ವಹಿಸಬೇಕು. ಗ್ರಾ.ಪಂ. ಆಡಳಿತಾಧಿಕಾರಿಗಳು ಎರಡು ವಾರಕ್ಕೊಮ್ಮೆ ಗ್ರಾಮಗಳಿಗೆ ಭೇಟಿ ನೀಡಬೇಕು. ಸ್ವಚ್ಛತಾ ಕಾರ್ಯ ನಡೆಸಬೇಕು. ಆಸ್ಪತ್ರೆಗಳಲ್ಲಿ ಔಷಧ ಕೊರತೆಯಾಗದಂತೆ ನೋಡಿಕೊಳ್ಳಬೇಕು ಎಂದು ರಮೇಶ ಬಂಡಿಸಿದ್ದೇಗೌಡ ತಿಳಿಸಿದರು. ತಹಶೀಲ್ದಾರ್ ಚೇತನಾ ಯಾದವ್, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಚಂದ್ರ, ತಾಲ್ಲೂಕು ಯೋಜನಾಧಿಕಾರಿ ಎಂ.ಎಂ. ತ್ರಿವೇಣಿ, ಪುರಸಭೆ ಮುಖ್ಯಾಧಿಕಾರಿ ಎಂ. ರಾಜಣ್ಣ, ಟಿಎಪಿಸಿಎಂಎಸ್ ಅಧ್ಯಕ್ಷ ಎಸ್.ಎನ್. ನಾಗರಾಜು, ಸಿಪಿಐ ಬಿ.ಜಿ. ಕುಮಾರ್, ಬಿಇಒ ಬಿ.ವಿ. ನಂದೀಶ್ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಸುಮಾಗೆ ಪಿಎಚ್‌ಡಿ

ಮಂಡ್ಯ: ತಾಲೂಕಿನ ಉಮ್ಮಡಹಳ್ಳಿ ಗ್ರಾಮದ ಯು.ಎಸ್. ಸುಮಾ ಅವರು ಔಷಧ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಅಭಿಷೇಕ್ ಅವರ ಮಾರ್ಗದರ್ಶನದಲ್ಲಿ ಫಾರ್ಮುಲೇಷನ್ ಅಂಡ್ ಡೆವಲಪ್‌ಮಂಟ್ ಆಫ್ ನೋವಲ್ ಡಿಸೈನಿಂಗ್ ಆಫ್ ಪೊಸೊಕೊನಜೋಲ್ ಹೇರ್ ಜೆಲ್ ಎಂಬ ವಿಷಯದ ಕುರಿತು ಮಂಡಿಸಿದ ಮಹಾ ಪ್ರಬಂಧಕ್ಕೆ ರಾಜಸ್ಥಾನದ ಸನ್ ರೈಸ್ ಯೂನಿವರ್ಸಿಟಿ ಪಿಎಚ್‌ಡಿ ಪದವಿಗೆ ಅಂಗೀಕರಿಸಿ, ಕಳದೆ ಫೆ. 25ರಂದು ನಡೆದ ವಿವಿ ಘಟಿಕೋತ್ಸವದಲ್ಲಿ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಗಿದೆ.



ಬೆಂಗಳೂರಿನ ಮಲ್ಲಿಗೆ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಯು.ಎಸ್. ಸುಮಾ ಅವರು ಉಮ್ಮಡಹಳ್ಳಿಯ ಸಿದ್ದರಾಮಯ್ಯ ಎಸ್. ಹಾಗೂ ಮಾದೇವಿ ಪುತ್ರಿಯಾಗಿದ್ದಾರೆ.



ಕಾರ್ಯನಿಮಿತ್ತ ಹುಣಸೂರಿನಿಂದ ಬೆಂಗಳೂರಿಗೆ ತೆರಳುತಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನ ಬಿಜೆಪಿ ಮುಖಂಡ ಇಂಡವಾಳು ಸಚ್ಚಿದಾನಂದ ಅವರ ನೇತೃತ್ವದಲ್ಲಿ ಮುಖಂಡರು ಶ್ರೀರಂಗಪಟ್ಟಣದಲ್ಲಿ ಭೇಟಿ ಮಾಡಿ ಸನ್ಮಾನಿಸಿದರು.

ಮಕ್ಕಳಿಗೆ ಲೇಖನ ಸಾಮಗ್ರಿ ವಿತರಣೆ

ಕೃಷ್ಣರಾಜಪೇಟೆ: ಸರ್ಕಾರದಿಂದ ಅಂಗನವಾಡಿ ಮಕ್ಕಳಿಗೆ ಪೌಷ್ಟಿಕ ಆಹಾರ, ಆರೋಗ್ಯ ತಪಾಸಣೆ, ಮತ್ತು ಪ್ರಾಥಮಿಕ ಶಿಕ್ಷಣ ನೀಡಲಾಗುತ್ತದೆ. ಅಂಗನವಾಡಿ ಕೇಂದ್ರಗಳು ಮಕ್ಕಳ ಬೆಳವಣಿಗೆಗೆ ಸಹಾಯ ಮಾಡುತ್ತವೆ ಮತ್ತು ಅವರ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ರಾಜಲಾಂಛನ ಚಂದಾಪುರ ಸಂಸ್ಥೆಯ ಕಾರ್ಯದರ್ಶಿ ಹೊನ್ನೇನಹಳ್ಳಿ ಶೇಖರ್ ಹೇಳಿದರು. ಅವರು ಕೃಷ್ಣರಾಜಪೇಟೆ ತಾಲೂಕಿನ ಬೊಮ್ಮೇನಹಳ್ಳಿ, ಬೂಕನಕೆರೆ, ಗುಡುಗನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ತಟ್ಟೆ-ಲೋಟ, ಲೇಖನ ಸಾಮಗ್ರಿಗಳನ್ನು ರಾಜಲಾಂಛನ ಸಂಸ್ಥೆಯ ವತಿಯಿಂದ ವಿತರಣೆ ಮಾಡಿ ಮಾತನಾಡಿದರು. ಹೊನ್ನೇನಹಳ್ಳಿ ಶೇಖರ್ ಮಾತನಾಡಿ ಅಂಗನವಾಡಿ ಕೇಂದ್ರಗಳು ಗರ್ಭಿಣಿಯರಿಗೆ, ಬಾಣಂತಿಯರಿಗೆ ಕಾಲ ಕಾಲಕ್ಕೆ ಆರೋಗ್ಯ ಇಲಾಖೆಯಿಂದ ನೀಡಬೇಕಾದ ಎಲ್ಲಾ ಲಸಿಕೆಗಳು ಹಾಗೂ ಚುಚ್ಚು ಮದ್ದುಗಳನ್ನು ನೀಡಲು ಸಹಕಾರ ನೀಡುತ್ತವೆ. ಪ್ರತಿಯೊಂದು ಗ್ರಾಮದಲ್ಲಿಯೂ ಅಂಗನವಾಡಿ ಕೇಂದ್ರ ತೆರೆಯುವುದರಿಂದ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ನಮ್ಮ ರಾಜಲಾಂಛನ ಸಂಸ್ಥೆಯ ವತಿಯಿಂದ ರಾಜ್ಯದ ವಿವಿಧೆಡೆ ಸಾವಿರಾರು ಸಸಿಗಳನ್ನು ನೆಡುವ ಮೂಲಕ ಪರಿಸರ ಉಳಿಸಲು ಅಗತ್ಯ ಕ್ರಮ ವಹಿಸಲಾಗಿದೆ. ಇದೇ ರೀತಿ ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಸಮುದಾಯದ ಅಭಿವೃದ್ಧಿಗೆ ನಮ್ಮ ರಾಜಲಾಂಛನ ಸಂಸ್ಥೆಯು ಕೈಜೋಡಿಸಿ ನಿಸ್ವಾರ್ಥದಿಂದ ಕೆಲಸ ಮಾಡುತ್ತಿದೆ ಎಂದು ಹೇಳಿದರು.



ಕೃಷ್ಣರಾಜಪೇಟೆ ತಾಲೂಕಿನ ಬೊಮ್ಮೇನಹಳ್ಳಿ, ಬೂಕನಕೆರೆ, ಗುಡುಗನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ತಟ್ಟೆ-ಲೋಟ, ಲೇಖನ ಸಾಮಗ್ರಿಗಳನ್ನು ರಾಜಲಾಂಛನ ಸಂಸ್ಥೆಯ ವತಿಯಿಂದ ಸಂಸ್ಥೆಯ ಕಾರ್ಯದರ್ಶಿ ಹೊನ್ನೇನಹಳ್ಳಿ ಶೇಖರ್ ನೇತೃತ್ವದಲ್ಲಿ ವಿತರಣೆ ಮಾಡಲಾಯಿತು.

ಅಸ್ಪೃಶ್ಯತೆ ನಿರ್ಮೂಲನೆ ಕುರಿತು ವಿಚಾರಗೋಷ್ಠಿಯಲ್ಲಿ ಸಚಿವ ಚಲುವರಾಯಸ್ವಾಮಿ

ಎಲ್ಲರೂ ಸಾಮರಸ್ಯದಿಂದ ಬದುಕಿ



ಮಂಡ್ಯ: ಎಲ್ಲರೂ ಸಾಮರಸ್ಯದಿಂದ ಮತ್ತು ಸಮಾನತೆಯಿಂದ ಬದುಕಬೇಕು ಮತ್ತು ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಬಾಳಬೇಕು. ಇದರಿಂದ ಮಾದರಿ ಸಮಾಜ ನಿರ್ಮಾಣ ಮಾಡೋಣ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಸಮಾಜ ಕಲ್ಯಾಣ ಇಲಾಖೆ ಹಾಗು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮಂಡ್ಯ ಜಿಲ್ಲಾ ಸಂಯುಕ್ತಾಶ್ರಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳ ಮೇಲೆ ಉಂಟಾಗುತ್ತಿರುವ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟುವ ಬಗ್ಗೆ ಹಾಗೂ ಅಸ್ಪೃಶ್ಯತೆ ನಿರ್ಮೂಲನೆ ಕುರಿತು ವಿಚಾರಗೋಷ್ಠಿ ಮತ್ತು ಕಾರ್ಯಗಾರವನ್ನು ಜಿಲ್ಲಾ ಡಾ. ಬಿ.ಆರ್ ಅಂಬೇಡ್ಕರ್ ಭವನದಲ್ಲಿ ದೀಪ ಬೆಳಗಿಸಿ ಡಾ. ಬಿ. ಆರ್. ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಮ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮವ ಉದ್ಘಾಟಿಸಿ ಮಾತನಾಡಿ, ಮಾನವಕುಲ ಒಂದೇ, ಜಾತಿ ಎಂಬುದು ಹಳೆಯ ಕಾಲದಿಂದಲೂ ಬಂದಿದೆ. ಇಂದಿಗೂ ನಾವು ದೌರ್ಜನ್ಯ ಹಾಗೂ ಅಸ್ಪೃಶ್ಯತೆ ಬಗ್ಗೆ ಮಾತನಾಡುತ್ತೇವೆ ಎಂದರೆ ಬೇಸರದ ಸಂಗತಿ. ಒಂದೆರಡು ಕಡೆ ದೌರ್ಜನ್ಯ ಪ್ರಕರಣ ಕಂಡುಬರುತ್ತಿದೆ ಅದು ಕೂಡ ತಲೆ ತಗ್ಗಿಸುವ ಕೆಲಸವಾಗಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ. ಕುಮಾರ ಮಾತನಾಡಿ, ಮಂಡ್ಯ ಜಿಲ್ಲೆಯಲ್ಲಿ ವರ್ಷದಲ್ಲಿ 50ರಿಂದ 60 ದೌರ್ಜನ್ಯ ಪ್ರಕರಣ ದಾಖಲಾಗುತ್ತಿದೆ. ಕಳೆದ 10 ವರ್ಷದಲ್ಲಿ 850 ಪ್ರಕರಣ ದಾಖಲಾಗಿದ್ದು 12 ಕೋಟಿ ಪರಿಹಾರ ನೀಡಲಾಗಿದೆ ಎಂದು ತಿಳಿಸಿದರು. ಇದುವರೆಗೂ 37ಪ್ರಕರಣ ಅಂತಿಮ ತೀರ್ಪು ಪಡೆದಿದ್ದು ಶೇ. 5 ರಷ್ಟು ಪ್ರಮಾಣದಲ್ಲಿ ಶಿಕ್ಷೆಯಾಗಿದೆ. ದೌರ್ಜನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯದಲ್ಲಿ 33 ಪ್ರತ್ಯೇಕವಾಗಿ ಪೊಲೀಸ್ ಠಾಣೆಯನ್ನು ತೆರೆದಿದೆ. ಇದರಿಂದ ತ್ವರಿತವಾಗಿ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಹಲವು ಸಭೆಯನ್ನು ಮಾಡಲಾಗಿದೆ ಎಂದು ಹೇಳಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಬಾಬು ಜಗಜೀವನ್ ರಾಮ್ ಸಮಾನತೆಯ ಸಂದೇಶವನ್ನು ಸಾರಿದ ಇಬ್ಬರು ಆದರ್ಶನೀಯರ ಗುಣವನ್ನು ಮೈಗೂಡಿಸಿಕೊಂಡು ಹೋಗಬೇಕು. ಮಾನವೀಯತೆ, ಅಂತಕರಣ, ವೈಜ್ಞಾನಿಕ ಮನೋಭಾವ ದಿಂದ ಅಸ್ಪೃಶ್ಯತೆಯನ್ನು ಹೋಗಲಾಡಿಸಬಹುದು ಸಂವಿಧಾನದ ಮಹತ್ವವನ್ನು ಅರಿತು ನಡೆಯಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್. ನಂದಿನಿ ಸಂವಿಧಾನ ಪೀಠಿಕೆ ಬೋಧನೆ ಮಾಡಿದರು. ಮಂಡ್ಯ ವಿಧಾನ ಸಭಾ ಕ್ಷೇತ್ರದ ಶಾಸಕ ಎಂ. ರವಿಕುಮಾರ್, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ಸತ್ಯಕೀರ್ತಿ ಮಹಾಸ್ವಾಮೀಜಿ, ಚಿತ್ರದುರ್ಗದ ಶ್ರೀ ಶಿವಶರಣ ಮಾದರಚನ್ನಯ್ಯ ಸ್ವಾಮೀಜಿ, ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ವಿ.ಜೆ. ಶೋಭಾರಾಣಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಧೀಶ ಎಂ. ಆನಂದ್, ಮೈಶುಗರ್ ಅಧ್ಯಕ್ಷ ಸಿ. ಡಿ ಗಂಗಾಧರ್, ಮೂಡ ಅಧ್ಯಕ್ಷ ಬಿ. ಪಿ. ಪ್ರಕಾಶ್, ಉಪಾಧ್ಯಕ್ಷೆ ವಿಜಯಲಕ್ಷ್ಮೀ ರಘುನಂದನ್ ಇದ್ದರು.

> **ದೌರ್ಜನ್ಯ ಆಗದಂತೆ ಕ್ರಮ ವಹಿಸಿ**
> ಮಂಡ್ಯ ಜಿಲ್ಲೆಯಲ್ಲಿ ಅಸ್ಪೃಶ್ಯತೆಯನ್ನು ಮುಕ್ತಗೊಳಿಸಿ ಕಾನೂನು ದುರ್ಬಳಕೆ ಆಗದಂತೆ, ದೌರ್ಜನ್ಯಗಳು ಆಗದಂತೆ ಅಧಿಕಾರಿಗಳು ಕ್ರಮ ವಹಿಸಿಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ಪ್ರಕರಣವನ್ನು ತಕ್ಷಣದಲ್ಲಿ ಬಗೆಹರಿಸುವ ಸಲುವಾಗಿ ಹಾಗೂ ವಿಲೇವಾರಿ ಮಾಡಲು ನಮ್ಮ ಸರ್ಕಾರ ಮುಂದಾಗಿದೆ.

ನಗರಸಭೆ ಸೇರ್ಪಡೆಯಿಂದ ಗ್ರಾಪಂ ಕೈಬಿಡಲು ಆಗ್ರಹ



ಮದ್ದೂರು: ಮದ್ದೂರು ನಗರಸಭೆ ಸೇರ್ಪಡೆಯಿಂದ ಗೆಜ್ಜಲಗೆರೆ ಗ್ರಾಪಂ ವ್ಯಾಪ್ತಿಯನ್ನು ಕೈಬಿಡುವಂತೆ ಆಗ್ರಹಿಸಿ ಕಳೆದ ಎರಡು ತಿಂಗಳಿನಿಂದ ನಡೆಯುತ್ತಿರುವ ನಿರಂತರ ಧರಣಿ ಸ್ಥಳಕ್ಕೆ ಸಚಿವ ಎನ್.ಚಲುವರಾಯಸ್ವಾಮಿ ಶನಿವಾರ ಜಿಲ್ಲಾಧಿಕಾರಿಗಳ ನೇತೃತ್ವದ ಜಿಲ್ಲಾ ಮಟ್ಟದ ಅಧಿಕಾರಿಗಳ ತಂಡದೊಡನೆ ಭೇಟಿ ನೀಡಿ ಸಮಾಲೋಚನೆ ನಡೆಸಿದರು.

ಪುರಸಭೆಯನ್ನು ಮೇಲ್ದರ್ಜೆಗೇರಿಸುವ ಸಂಬಂಧ ಗೆಜ್ಜಲಗೆರೆ ಸೇರಿದಂತೆ ಚಾಮನಹಳ್ಳಿ, ಗೊರವನಹಳ್ಳಿ ಮತ್ತು ಸೋಮನಹಳ್ಳಿ ಗ್ರಾ.ಪಂ. ವ್ಯಾಪ್ತಿಯ 8 ಹಳ್ಳಿಗಳನ್ನು ಮದ್ದೂರು ನಗರಸಭೆಗೆ ಸೇರ್ಪಡೆಗೊಳಿಸಿ ಈಗಾಗಲೇ ಸರಕಾರದ ಮಟ್ಟದಲ್ಲಿ ಆದೇಶ ಹೊರಬಿದ್ದಿದ್ದು ಇದನ್ನು ಪ್ರಶ್ನಿಸಿ ಗೆಜ್ಜಲಗೆರೆಯ ಗ್ರಾಪಂ ಬಳಿ ನಿರಂತರ ಧರಣಿ ಸಾಗಿದ್ದು ಸ್ಥಳಕ್ಕೆ ಭೇಟಿ ನೀಡಿದ ಸಚಿವರಿಗೆ ಪ್ರತಿಭಟನಾ ನಿರತರು ತಮ್ಮ ಅಹವಾಲು ಸಲ್ಲಿಸಿದರು. ಧರಣಿ ನಿರತರನ್ನು ಭೇಟಿ ಮಾಡಿದ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ ಮೇಲ್ದರ್ಜೆಗೇರಿಸುವ ಕುರಿತಾದ ಪ್ರಕ್ರಿಯೆ ಜತೆಗೆ ಚುನಾವಣಾ ಆಯೋಗವು ಈಗಾಗಲೇ ಸ್ಥಳೀಯ ಸಂಸ್ಥೆಗಳ ಮುಂಬರುವ ಚುನಾವಣೆಗಳ ಸಂಬಂಧ ಕ್ಷೇತ್ರ ಪರಿಷ್ಕರಣೆ ಕಾರ್ಯ ಕೈಗೊಂಡಿದ್ದು ಈ ಎಲ್ಲಾ ಕಾರಣಗಳಿಂದ ತಮ್ಮ ಬೇಡಿಕೆ ಈಡೇರಿಕೆಗೆ ತಾವುಗಳು ಒತ್ತು ನೀಡಿದ್ದ ಪ್ರಕರಣ ನ್ಯಾಯಾಲಯದಲ್ಲಿ ಇರುವ ಕಾರಣ ಮುಂದಿನ ದಿನಗಳಲ್ಲಿ ಕೋರ್ಟ್ ತೀರ್ಪಿನನ್ವಯ ಮುಂದುವರೆಯುವ ಕುರಿತು ತಿಳಿ ಹೇಳಿದರು.

ಮದ್ದೂರು ಶಾಸಕ ಕೆ.ಎಂ.ಉದಯ, ಮಂಡ್ಯ ಶಾಸಕ ರವಿಕುಮಾರ್ ಗಣಿಗ, ಪ್ರಥಮ ಅವಧಿಯ ಶಾಸಕತ್ವದಲ್ಲೇ ನಿರೀಕ್ಷೆಗೂ ಮೀರಿದ ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಜನರಿಗೆ ಸ್ಪಂದಿಸುವ ಉತ್ತಮ ನಡೆ ರೂಡಿಸಿಕೊಂಡಿದ್ದು ಇಂತಹ ಯುವ ಶಾಸಕರಿಗೆ ಬೆನ್ನೆಲುಬಾಗಿ ನಿಲ್ಲುವ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಚಿವ ಎನ್.ಚಲುವರಾಯಸ್ವಾಮಿ ರವರ ಸಲಹೆಯನ್ನು ಸಾರಸಗಟಾಗಿ ತಿರಸ್ಕರಿಸಿದ ಧರಣಿ ನಿರತರು ಪ್ರತಿಭಟನೆ ಹಿಂಪಡೆಯುವ ಕುರಿತಾಗಿ ವಿರೋಧ ವ್ಯಕ್ತಪಡಿಸಿದರಲ್ಲದೆ ತಮ್ಮ ಬೇಡಿಕೆ ಈಡೇರುವ ವರೆವಿಗೂ ನಿರಂತರ ಧರಣಿ ಮುಂದುವರೆಸುವ ಅಭಿಪ್ರಾಯ ವ್ಯಕ್ತಪಡಿಸಿದರು. ಈ ವೇಳೆ ಜಿಲ್ಲಾಧಿಕಾರಿ ಡಾ. ಕುಮಾರ್, ಜಿಪಂ ಸಿಇಒ ಕೆ.ಆರ್.ನಂದಿನಿ, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಡಾ. ಶೋಭರಾಣಿ, ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ರವಿಕುಮಾರ್,ಜಿ.ಎ.ಶಂಕರ್ ಇತರರಿದ್ದರು.

ಅಧ್ಯಕ್ಷರಾಗಿ ಸುಂದರಮ್ಮ ರವಿ ಅವಿರೋಧ ಆಯ್ಕೆ



ಕೃಷ್ಣರಾಜಪೇಟೆ: ತಾಲ್ಲೂಕಿನ ಬೂಕನಕೆರೆ ಹೋಬಳಿಯ ಮಾಚಗೋನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಸುಂದರಮ್ಮರವಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅದೇ ರೀತಿ ಉಪಾಧ್ಯಕ್ಷರಾಗಿ ಪ್ರಭಾವತಿ ಸ್ವಾಮಯ್ಯ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನ ಬಯಸಿ ಸುಂದರಮ್ಮ ರವಿ, ಉಪಾಧ್ಯಕ್ಷ ಸ್ಥಾನ ಬಯಸಿ ಪ್ರಭಾವತಿ ಸ್ವಾಮಯ್ಯ ಅವರನ್ನು ಹೊರತು ಪಡಿಸಿ ಬೇರೆ ಯಾವುದೇ ನಿರ್ದೇಶಕರು ನಾಮಪತ್ರ ಸಲ್ಲಿಸದೇ ಇರುವ ಕಾರಣ ಅವಿರೋಧ ಆಯ್ಕೆ ನಡೆಯಿತು ಎಂದು ಚುನಾವಣಾಧಿಕಾರಿ ಕೆ.ಹೇಮಲತಾ ತಿಳಿಸಿದರು. ಗ್ರಾಮ ಪಂಚಾಯಿತಿ ಸದಸ್ಯ ಎಂ.ಕೆ.ಯೋಗೇಂದ್ರ ಮಾತನಾಡಿ ನಮ್ಮ ಕ್ಷೇತ್ರದ ಶಾಸಕರಾದ ಹೆಚ್.ಟಿ.ಮಂಜು ಅವರ ಪೂರ್ಣ ಸಹಕಾರದೊಂದಿಗೆ ನಮ್ಮ ಡೇರಿಯ ಎಲ್ಲಾ 11ಸ್ಥಾನಮಗಳಲ್ಲಿಯೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಜಯ ಗಳಿಸಿದ್ದರು. ಇಂದು ನಡೆದ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ಶಾಸಕರ ಸಲಹೆಯಂತೆ ಮೊದಲ ಅವಧಿಗೆ ಸಂಘದ ನೂತನ ಅಧ್ಯಕ್ಷರಾದ ಸುಂದರಮ್ಮರವಿ ಹಾಗೂ ಉಪಾಧ್ಯಕ್ಷರಾದ ಪ್ರಭಾವತಿ ಸ್ವಾಮಯ್ಯ ಅವರನ್ನು ಆಯ್ಕೆ ಮಾಡಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ನೂತನ ಅಧ್ಯಕ್ಷರು-ಉಪಾಧ್ಯಕ್ಷರು ಹಾಗೂ ನಿರ್ದೇಶಕರು ಸಂಘದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಗುಣಮಟ್ಟದ ಹಾಲನ್ನು ಮಾತ್ರ ಖರೀದಿ ಮಾಡಬೇಕು. ಕಲಬರಕೆ ಹಾಲನ್ನು ಯಾವುದೇ ಮುಲಾಜಿಗೆ ಒಳಗಾಗದೇ ಕಡ್ಡಾಯವಾಗಿ ತಿರಸ್ಕರಿಸಬೇಕು ಈ ಮೂಲಕ ಸಂಘದ ಅಭಿವೃದ್ಧಿಗೆ ನೂತನ ಆಡಳಿತ ಮಂಡಳಿ ಶ್ರಮಿಸಬೇಕು ಎಂದು ಹೇಳಿದರು.

ಶೀಘ್ರದಲ್ಲೇ ರಾಜ್ಯ ಪ್ರವಾಸ: ದೇವರಾಜ್‌ಗೌಡ

ಪಾಂಡವಪುರ: ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲೂ ಅಖಿಲ ಕರ್ನಾಟಕ ಒಕ್ಕಲಿಗರ ಒಕ್ಕೂಟದ ಸಂಘಟನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಶೀಘ್ರವೇ ರಾಜ್ಯ ಪ್ರವಾಸ ಕೈಗೊಳ್ಳಲಾಗುವುದು ಎಂದು ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ವಿ.ದೇವರಾಜ್ ಗೌಡ ಹೇಳಿದರು.

ಗೌರಿಬಿದನೂರು ನಗರದಲ್ಲಿರುವ ವಿಶ್ವ ಮಾನವ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಕಚೇರಿಯಲ್ಲಿ ಒಕ್ಕೂಟದ ರಾಜ್ಯ ಸಂಚಾಲಕ ಜನಾರ್ಧನ್ ಮೂರ್ತಿ ಗೌರಿಬಿದನೂರು ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಒಕ್ಕಲಿಗ ಸಮುದಾಯದ ವಿರುದ್ಧದ ದೌರ್ಜನ್ಯ ಹಾಗೂ



ಶೋಷಣೆ ತಪ್ಪಿಸುವ ಸಲುವಾಗಿ ಸಂಘಟನೆಯನ್ನು ಬಲಗೊಳಿಸಬೇಕಾದ ತುರ್ತು ಅಗತ್ಯವಿದೆ. ಹೀಗಾಗಿ ರಾಜ್ಯ ಪ್ರವಾಸ ಕೈಗೊಂಡು ಸಂಘಟನೆ ಚುರುಕುಗೊಳಿಸಲಾಗುವುದು. ಜತೆಗೆ ಒಕ್ಕಲಿಗ ಸಮುದಾಯದ ಅಭಿವೃದ್ಧಿಯನ್ನು ನಿರ್ಲಕ್ಷಿಸಿರುವ ರಾಜ್ಯ ಸರ್ಕಾರದ ವಿರುದ್ಧ ಕೂಡಲೇ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ರಾಜ್ಯಾಧ್ಯಕ್ಷ ಬಿ ಎಂ ಮಧುಸೂದನ್, ಲೆಕ್ಕ ಪರಿಶೋಧನಾಧಿಕಾರಿ ನೆಲಮಂಗಲ ಕೆಂಪಯ್ಯ, ರಾಜ್ಯ ಗೌರವಾಧ್ಯಕ್ಷ ಕೆನಲಿ ಗೌಡ, ಖಜಾಂಚಿ ಕೊಡಗಿನ ಪೊನ್ನಪ್ಪ ಅಮ್ಮಾಜೀರ, ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ವಿ.ದೇವರಾಜ್ ಗೌಡ, ಸಾಮಾಜಿಕ ಜಾಲತಾಣದ ರಾಗಿಮುದ್ದನಹಳ್ಳಿ ನಾಗೇಶ್, ರಾಜ್ಯ ಮಾಧ್ಯಮ ಸಂಯೋಜಕ ಎನ್.ಕೃಷ್ಣೇಗೌಡ, ಸಹ ಕಾರ್ಯದರ್ಶಿ ಎಚ್.ವಿ.ವೆಂಕಟೇಶ್ ಚಿಕ್ಕಬಳ್ಳಾಪುರ , ರಾಜ್ಯ ನಿರ್ದೇಶಕ ಚೆನ್ನಯ್ಯ ನೆಲಮಂಗಲ, ಒಕ್ಕೂಟದ ಗೌರಿಬಿದನೂರು ಘಟಕದ ಸದಸ್ಯರಾದ ಸೂರ್ಯಪ್ರಕಾಶ್, ಧನಂಜಯ, ಲಕ್ಷ್ಮೀ ನರಸಿಂಹ, ಸುಕನ್ಯಾ ಸೇರಿದಂತೆ ಹಲವಾರು ಭಾಗವಹಿಸಿದ್ದರು.

ಸಿಡಿಎಸ್ ನಾಲೆಯಲ್ಲಿ ಅರ್ಚಕನ ಶವ ಪತ್ತೆ

ಶ್ರೀರಂಗಪಟ್ಟಣ: ತಾಲೂಕಿನ ಮರಳಾಗಾಲ ಗ್ರಾಮದ ಬಳಿಯ ಸಿಡಿಎಸ್ ನಾಲೆಯಲ್ಲಿ ಅರ್ಚಕನ ಬೈಕ್ ಮತ್ತು ಶವ ಪತ್ತೆಯಾಗಿದ್ದು, ಯಾರೋ ಕೊಲೆ ಮಾಡಿ ನಾಲೆಗೆ ಎಸೆದಿರುವ ಬಗ್ಗೆ ಸಂಶಯ ವ್ಯಕ್ತವಾಗಿದೆ.




ತಾಲೂಕಿನ ಮರಳಗಾಲ ಗ್ರಾಮದ ನಿವಾಸಿ ಅರ್ಚಕ ಸಿದ್ದಲಿಂಗಪ್ಪ (46) ಎಂಬುವರ ಶವವು ಅನುಮಾನಾಸ್ಪದ ರೀತಿಯಲ್ಲಿ, ಗ್ರಾಮದ ಬಳಿ ಹರಿಯುತ್ತಿರುವ ಸಿಡಿಎಸ್ ನಾಲೆಯಲ್ಲಿ ಪತ್ತೆಯಾಗಿದ್ದು, ಸಿದ್ದಲಿಂಗಪ್ಪ ಅವರನ್ನು ಹಲ್ಲೆ ನಡೆಸಿ ಬೈಕ್ ಸಮೇತ ನಾಲೆಗೆ ನೂಕಿರುವುದಾಗಿ ಅನುಮಾನ ವ್ಯಕ್ತವಾಗಿದೆ. ಶುಕ್ರವಾರ ಸಂಕಷ್ಟ ಚತುರ್ಥಿಯ ಅಂಗವಾಗಿರಾತ್ರಿ 9ರ ಸಮಯದಲ್ಲಿ ಕೆ.ಶೆಟ್ಟಹಳ್ಳಿ ಬಳಿಯ ದೇವಾಲಯದಲ್ಲಿ ಪೂಜೆ ಮುಗಿಸಿ, ವಾಪಸ್ ರಾತ್ರಿ ಮನೆಗೆ ತೆರಳುತ್ತಿದ್ದ ವೇಳೆ ಮರಳಗಾಲದ ಬಳಿಯ ಸಿಡಿಎಸ್ ನಾಲೆಯಲ್ಲಿ ಅಪಘಾತವಾಗಿ ನಾಲೆಗೆ ಬಿದ್ದು, ನೀರಿನಲ್ಲಿ ಕೊಚ್ಚಿಕೊಂಡು ಹೋಗಿರುವ ಊಹೆಯನ್ನು ಶನಿವಾರ ಬೆಳಗಿನ ಜಾವದಲ್ಲಿ ಸಾರ್ವಜನಿಕರಿಂದ ವ್ಯಕ್ತವಾಗಿತ್ತು. ಆದರೆ ಕಾಲುವೆ ದಡದ ಮೇಲೆ ಚಪ್ಪಲಿ ಮತ್ತು ರಕ್ತದ ಗುರುತು ಇರುವುದರಿಂದ ಯಾರೋ ರಸ್ತೆಯಲ್ಲಿ ಹೊಡೆದು ನಂತರ ನಾಲೆಯಲ್ಲಿ ತಳ್ಳಿರಬಹುದು ಎಂಬುದು ಸಾರ್ವಜನಿಕವಾಗಿ ಅನುಮಾನಗಳು ಮೂಡಿದ್ದು, ಸ್ಥಳಕ್ಕೆ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ ಪೊಲೀಸರು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭರಾಣಿ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಆಗಮಿಸಿ ಸ್ಥಳ ಪರಿಶೀಲಿಸಿ ಪ್ರಕರಣದ ತನಿಖೆ ಹಾಗೂ ಆರೋಪಿ ಪತ್ತೆಗಾಗಿ ತನಿಖಾಧಿಕಾರಿಗಳ ತಂಡ ರಚಿಸಿದ್ದಾರೆ. ಈ ಸಂಬಂಧ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಂದಿನ ಪೀಳಿಗೆಗೂ ಜಾನಪದ ಕಲೆ ಪರಿಚಯಿಸಿ: ಸವಿತಾ ಚೇರುಕುನ್ನಯ್ಯ

ಮಾ.10ರಂದು ಮಹಿಳಾ ಜಾನಪದ ಸಂಭ್ರಮ

ಮಂಡ್ಯ: ಶ್ರೀ ಚೇರುಕುನ್ನಯ್ಯ ಪೂಜಾ ಕುಣಿತ ಕಲಾ ಟ್ರಸ್ಟ್ ಹಾಗೂ ಶ್ರೀ ಉಮಾ ಮಹೇಶ್ವರಿ ಪೂಜಾ ಕುಣಿತ ಯುವಜನ ಕಲಾ ಸಂಘದ ವತಿಯಿಂದ ಮಾ. 10ರಂದು ಸಂಜೆ 4 ಕ್ಕೆ ಮಳವಳ್ಳಿ ತಾಲೂಕಿನ ತಳಗವಾದಿ ಗ್ರಾಮದಲ್ಲಿ ಮಹಿಳಾ ಜಾನಪದ ಸಂಭ್ರಮ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶ್ರೀ ಚೇರುಕುನ್ನಯ್ಯ ಪೂಜಾ ಕುಣಿತ ಕಲಾ ಟ್ರಸ್ಟ್ ಅಧ್ಯಕ್ಷೆ ಸವಿತಾ ಚೇರುಕುನ್ನಯ್ಯ ತಿಳಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಜಾನಪದ ಕಲೆಗಳು ನಶಿಸಿ ಹೋಗುತ್ತಿವೆ. ಇಂತಹ ಸಂದರ್ಭದಲ್ಲಿ ಜಾನಪದ ಕಲೆಗಳನ್ನು ಜೀವಂತವಾಗಿಟ್ಟುಕೊಂಡು, ಮುಂದಿನ ಪೀಳಿಗೆಗೂ ಪರಿಚಯಿಸುವ ದೃಷ್ಟಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳಾ ಜಾನಪದ ಸಂಭ್ರಮ ಕಾರ್ಯಕ್ರಮ ನಡೆಯುತ್ತಿದೆ. ಈ ಕಾರ್ಯಕ್ರಮದಲ್ಲಿ ಜಾನಪದ ನೃತ್ಯ, ಲಂಬಾಣಿ ನೃತ್ಯ, ಮಹಿಳಾ ವೀರಗಾಸೆ, ಕಂಸಾಳೆ, ನಗಾರಿ, ಡೊಳ್ಳು ಕುಣಿತ, ಪಟ ಕುಣಿತ, ಕೋಲಾಟ, ಪೂಜಾ ಕುಣಿತ, ಕೊಂಬು ಕಹಳೆ, ದೊಣ್ಣೆ ವರಸೆ, ಗೊರವರ ಕುಣಿತ ಸೇರಿದಂತೆ ಇನ್ನಿತರ ಜಾನಪದ ಕಲಾ ತಂಡಗಳು ನಾಡಿನ ವಿವಿಧ ಭಾಗಗಳಿಂದ ಆಗಮಿಸಿ



ಪ್ರದರ್ಶನ ನೀಡಲಿದೆ ಎಂದು ತಿಳಿಸಿದರು. ಟ್ರಸ್ಟ್ ಉಪಾಧಕ್ಷೆ ಸಿದ್ದರಾಜು ಮಾತನಾಡಿ, ನಮ್ಮ ತಂದೆ ಚಿರುಕುನ್ನಯ್ಯ ಪೂಜಾ ಕುಣಿತದ ಕಲಾವಿದರಾಗಿದ್ದರು. ತಮ್ಮ ಜೀವಿತಾವಧಿಯಲ್ಲಿ ಹಲವರಿಗೆ ಜಾನಪದ ಕಲೆಗಳನ್ನು ಕಲಿಸಿ, ಸಮಾಜಕ್ಕೆ ನೀಡಿದ್ದಾರೆ. ಅವರ ನಂತರ ಜಾನಪದ ಕಲೆಗಳನ್ನು ನಮ್ಮ ಕುಟುಂಬ ಉಳಿಸಿ ಬೆಳೆಸುತ್ತಿದೆ. ಮುಂದಿನ ಪೀಳಿಗೆಗೂ ಜಾನಪದ ಕಲೆಗಳನ್ನು ತಿಳಿಸಿಕೊಡುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದರು.ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ವಹಿಸುತ್ತಿದ್ದು, ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಮೆರವಣಿಗೆ ಉದ್ಘಾಟನೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೃಷಿ ಸಚಿವ ಚಲುವರಾಯಸ್ವಾಮಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಭಾಗವಹಿಸಲ್ದಾರೆ. ಚೇರು ಕುನ್ನಯ್ಯ ಪೂಜಾ ಕುಣಿತ ಕಲಾ ಟ್ರಸ್ಟ್ ಉದ್ಘಾಟನೆಯನ್ನು ಕರ್ನಾಟಕ ಗೃಹ ಮಂಡಳಿ ಆಯುಕ್ತ ಕೆ.ಎ. ದಯಾನಂದ್ ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಡಾ.ಬಿ.ವಿ.ನಂದೀಶ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಕಾವ್ಯಶ್ರೀ, ಕಸಾಪ ಅಧ್ಯಕ್ಷ ಡಿ.ಪಿ.ಸ್ವಾಮಿ ಮತ್ತಿತರ ಗಣ್ಯರು ಭಾಗವಹಿಸುವರು ಎಂದರು.

ಏತ ನೀರಾವರಿ ಯೋಜನೆ ಪುನರುಜ್ಜೀವನ ಕಾಮಗಾರಿಗೆ ಗುದ್ದಲಿಪೂಜೆ

ತಾಲೂಕಿನ ಅಭಿವೃದ್ಧಿಗೆ ಶ್ರಮಿಸುವೆ: ಶಾಸಕ

ಮಳವಳ್ಳಿ: ಸಿಆರ್‌ಎಸ್ ಅನುದಾನದಲ್ಲಿ ಪೊಲೀಸ್ ಇಲಾಖೆಗೆ ನಾಲ್ಕು ವಾಹನಗಳು ಹಾಗೂ ಒಂದು ಆಂಬುಲೇನ್ಸ್ ನೀಡುವುದರ ಮೂಲಕ ಹೊಸ ಕಾಯಕಲ್ಪ ಕಲ್ಪಿಸಲಾಗುವುದು ಎಂದು ಶಾಸಕ ಪಿ.ಎಂ ನರೇಂದ್ರಸ್ವಾಮಿ ತಿಳಿಸಿದರು.

ತಾಲೂಕಿನ ರಾವಣಿ ಗ್ರಾಮದಲ್ಲಿ 4.5 ಕೋಟಿ ಅನುದಾನದಲ್ಲಿ ರಾವಣಿ ಏತ ನೀರಾವರಿ ಯೋಜನೆ ಪುನರುಜ್ಜೀವನ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿ, ಬಹುದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಏತ ನೀರಾವರಿ ಯೋಜನೆಯನ್ನು ಸಣ್ಣ ನೀರಾವರಿ ಇಲಾಖೆ ವತಿಯಿಂದ ಪೂರ್ಣ ಪ್ರಮಾಣದ ಪುನಶ್ಚೇತನಕ್ಕೆ ಒತ್ತು ನೀಡಲಾಗಿದ್ದು, ಹೊಸದಾಗಿ ಪಂಪು ಮೋಟರ್, ಹಾಗೂ ಎಂಎಸ್ ಪೈಪ್ ಅಳವಡಿಸುವುದರ ಮೂಲಕ ಶಾಶ್ವತ ಪರಿಹಾರ ನೀಡಿ ಯೋಜನೆಯ ಲಾಭವನ್ನು ರೈತರು ಪಡೆಯುವ ಅವಕಾಶವನ್ನು ಕಲ್ಪಿಸಲಾಗುವುದು ಎಂದರು. ಮಳವಳ್ಳಿಯಿಂದ ಪೂರಿಗಾಲಿಗೆ ಸೇರುವ ರಸ್ತೆಗೆ 28 ಕೋಟಿಗಿಂತಲೂ ಹೆಚ್ಚು ಖರ್ಚು ವಿಸ್ತರವಾದ ಗುಣಮಟ್ಟದ ರಸ್ತೆ ನಿರ್ಮಾಣ ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ರಾವಣಿ ಗ್ರಾಮದ ಪ್ರಮುಖ ರಸ್ತೆಯನ್ನು



ಅಭಿವೃದ್ಧಿಪಡಿಸಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿಗೆ ಶ್ರಮಿಸುವುದಾಗಿ ಹೇಳಿದರು. ಮಳವಳ್ಳಿ ನೀರಾವರಿ ಯೋಜನೆಗೆ ಹಿಂದೆ 400 ಕೋಟಿ ಅನುದಾನ ತರಲಾಗಿತ್ತು. ಪ್ರಸಕ್ತ ಬಜೆಟ್ ನಲ್ಲಿ ಟಿ ನರಸಿಪುರ ಮಳವಳ್ಳಿ ಭಾಗದ ಕಿರುಗಾವಲು ಕಲ್ಕುಣಿ, ಸುಜ್ಜಲೂರು ಸೇರಿದಂತೆ ಅಂಗ್ರಪುರತನಕ ನಾಲಾ ಆಧುನೀಕರಣ ಕಾಮಗಾರಿಗೆ 200 ಕೋಟಿ ಘೋಷಣೆ ಮಾಡಲಾಗಿದೆ. ಕೊರಟಗೆರೆ ಬಾವಲಿ ರಸ್ತೆಯನ್ನು ಕೇಶಿಫ್‌ನಲ್ಲಿ ಮಳವಳ್ಳಿಯಿಂದ ಮೈಸೂರಿನವರೆಗೆ ಚುತುಷ್ಪಥ ರಸ್ತೆಯನ್ನು ಅಭಿವೃದ್ಧಿಗೊಳಿಸಲಾಗುವುದು, ಕೆರೆ ತುಂಬಿಸುವ ಯೋಜನೆಗೆ ಒತ್ತು ನೀಡಲಾಗಿದೆ. ಕಾರ್ಮಿಕ ಮಕ್ಕಳ ವಿಶೇಷ ಶಾಲೆಯನ್ನು ಮಳವಳ್ಳಿಗೆ ನೀಡಲಾಗಿದೆ. ಹೆಚ್ಚುವರಿ ಬಜೆಟ್‌ನಲ್ಲಿ ಮತ್ತೊಂದು ವಿದ್ಯಾ ವಿಚಾರವನ್ನು ಸೇರಿಸಲಾಗುವುದು ಜೊತೆಗೆ ಪಟ್ಟಣದ ಅಭಿವೃದ್ಧಿಗೆ ಪೌರಾಡಳಿತ ಇಲಾಖೆ ವತಿಯಿಂದ 10 ಕೋಟಿ ಬಿಡುಗಡೆಗೊಳಿಸುವ ಭರವಸೆಯನ್ನು ಸಚಿವರು ನೀಡಿದ್ದಾರೆಂದು ತಿಳಿಸಿದರು.

ಮನ್ ಮುಲ್ ನಿರ್ದೇಶಕರಾದ ಆರ್. ಎನ್.ವಿಶ್ವಾಸ್, ಕೃಷ್ಣೇಗೌಡ, ತಾ.ಪಂ.ಇಒ ಎಚ್.ಜಿ.ಶ್ರೀನಿವಾಸ್, ಜಿಲ್ಲಾ ಪಂಚಾಯತಿ ಎಇಇ ಅಪ್ಪಯ್ಯ ಬೋವಿ, ಲೋಕೋಪಯೋಗಿ ಇಲಾಖೆಯ ಎಇಇ ಎ.ಎಂ.ಸೋಮಶೇಖರ್, ಟಿಎಪಿಸಿಎಂಎಸ್ ಅಧ್ಯಕ್ಷ ಎಂ.ಲಿಂಗರಾಜು, ನಿರ್ದೇಶಕರಾದ ಕೆ.ಜೆ.ದೇವರಾಜು, ರವೀಂದ್ರ ಪಾಲ್ಗೊಂಡಿದ್ದರು.

ಕಿರುಸುದ್ದಿ

ರಸ್ತೆ ಸುರಕ್ಷಾ ಕಾರ್ಯಕ್ರಮ

ಚನ್ನರಾಯಪಟ್ಟಣ: ಇಡೀ ದೇಶದಲ್ಲಿ ಮತ್ತು ರಾಜ್ಯದಲ್ಲಿ ಕೊರೊನಾ ಸಂದರ್ಭದಲ್ಲಿ ಸತ್ತವರ ಸಂಖ್ಯೆ ಬಹಳಷ್ಟು ಕಡಿಮೆ ಆದರೆ ಅಪಘಾತದಲ್ಲಿ ಸತ್ತವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ ಎಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ನಿರೀಕ್ಷಕ ಶ್ರೀನಿಧಿ ತಿಳಿಸಿದ್ದಾರೆ.

ತಾಲೂಕಿನ ಹಿರಿಸಾವೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ದೇವಿಹಳ್ಳಿ ಮತ್ತು ಹಾಸನ್ ಲೈನ್ ವೇ ಟೋಲ್ ಪ್ಲಾಜಾ ಪ್ರೈವೇಟ್ ಲಿಮಿಟೆಡ್ ಮತ್ತು ಹಾಸನ ಪ್ರಾದೇಶಿಕ ರಸ್ತೆ ಸಾರಿಗೆ ಇಲಾಖೆ ಇವರ ವತಿಯಿಂದ ನಡೆದ ಉಚಿತ ಹೆಲ್ಮೆಟ್ ವಿತರಣಾ ಮತ್ತು ರಸ್ತೆ ಸುರಕ್ಷಾ ಕಾರ್ಯಕ್ರಮದಲ್ಲಿ ಮಾತನಾಡಿ, ಇಡೀ ದೇಶದಲ್ಲಿ ಮತ್ತು ರಾಜ್ಯದಲ್ಲಿ ಕೊರೋನಾ ಸಂದರ್ಭದಲ್ಲಿ ಮರಣ ಒಪ್ಪಿದವರ ಸಂಖ್ಯೆ ಬಹಳಷ್ಟು ಕಡಿಮೆ ಅದರಲ್ಲೂ ಜಿಲ್ಲೆಯಲ್ಲಿ ಮರಣ ಒಪ್ಪಿದವರ ಸಂಖ್ಯೆ ಸುಮಾರು 100 ರಿಂದ 120 ಜನ ಮರಣ ಒಪ್ಪಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ದೇವಹಳ್ಳಿ ಮತ್ತು ಹಾಸನ ಹೈವೇ ಲೈನ್ ಪ್ರವೇಟ್ ಲಿಮಿಟೆಡ್ ಮುಖ್ಯಸ್ಥ ಸುನಿಲ್ ಸಿ. ಕೆ. ಇಂಜಿನಿಯರ್ ಕರ್ನಲ್ ನಟೇಶ್, ವಾಹನ ತಪಾಸಣಾ ನಿರೀಕ್ಷಕ ಯಶ್ವಂತ್ ಇನ್ನು ಮುಂತಾದವರು ಹಾಜರಿದ್ದರು.

ಧ್ಯಾನದಿಂದ ಮಾನಸಿಕ ಸಂತೋಷ

ಹಾಸನ: ಮನಸ್ಸು ಸದಾ ಸಂತೋಷವಾಗಿರಬೇಕೆಂದರೆ ಯೋಗ, ಜ್ಞಾನ ಮತ್ತು ಆತ್ಮ ಶಾಂತಿ ಅತ್ಯಂತ ಮುಖ್ಯ ಅದಕ್ಕಾಗಿ ಪ್ರತಿನಿತ್ಯ ಬೆಳಿಗ್ಗೆ ಕೆಲ ಸಮಯ ಮೀಸಲಿಡಿ ಎಂದು ಬೆಂಗಳೂರು ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ನ ಪ್ರಿಯದರ್ಶಿನಿಜೀ ಹೇಳಿದರು.

ನಗರದ ಸಾಲಗಾಮೆ ರಸ್ತೆ ಬಳಿ ಇರುವ ಎಂಸಿಇ ಕಾಲೇಜು ಆವರಣದಲ್ಲಿ ಆರ್ಟ್ ಆಫ್ ಲಿವಿಂಗ್ ಮತ್ತು ಹಾಸನ ಲಯನ್ಸ್ ಕ್ಲಬ್ ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಯೋಗ, ಪ್ರಾಣಾಯಾಮ, ಧ್ಯಾನ ಹಾಗೂ ವಿಶ್ವಪ್ರಸಿದ್ಧ ಸುದರ್ಶನ ಕ್ರಿಯೆ ತರಬೇತಿ ಮುಕ್ತಾಯ ಸಮಾರಂಭದಲ್ಲಿ ತಮ್ಮ ಆಶೀರ್ವಚನದಲ್ಲಿ ಮಾತನಾಡಿದ ಅವರು, ಹಿಂದಿನ ಕಾಲದಿಂದಲೇ ಸಂತರು ಮಾನಸಿಕ ಶಾಂತಿ ಮತ್ತು ಸಂತೋಷಕ್ಕಾಗಿ ವಿವಿಧ ಆಧ್ಯಾತ್ಮಿಕ ಮಾರ್ಗಗಳನ್ನು ಅನುಸರಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಜನರು ಅತಿಯಾದ ಒತ್ತಡ ಮತ್ತು ಆತಂಕದಿಂದ ಜೀವನ ನಡೆಸುತ್ತಿರುವುದರಿಂದ ಆ ಸಂತೋಷ ಕಡಿಮೆಯಾಗುತ್ತಿದೆ. ಆದ್ದರಿಂದ ಮತ್ತೆ ಆ ಮಾನಸಿಕ ಸಂತೋಷವನ್ನು ಪುನಃ ಪಡೆಯುವ ಅಗತ್ಯವಿದೆ ಎಂದು ಹೇಳಿದರು. ಮಲೆನಾಡು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಚೌಡವಳ್ಳಿ ಮಾತನಾಡಿ, ಯಾವುದೇ ಜಾತಿ ಅಥವಾ ಮತಭೇದವಿಲ್ಲದೆ ಎಲ್ಲರೂ ಸಮಾನರು. ಯೋಗ ಮತ್ತು ಜ್ಞಾನವು ಮನುಷ್ಯನ ಆರೋಗ್ಯ ಹಾಗೂ ಮನಸ್ಸಿನ ಸಮತೋಲನ ಕಾಪಾಡಲು ಸಹಾಯಕವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಲಯನ್ಸ್ ಕ್ಲಬ್ ಕಾರ್ಯದರ್ಶಿ ಸಿ. ಶಿವಸ್ವಾಮಿ, ನಗರಸಭೆ ನಿವೃತ್ತ ಆಯುಕ್ತ ಪರಮೇಶ್, ಆರ್ಟ್ ಆಫ್ ಲೀವಿಂಗ್ ಫೌಂಡೇಶನ್ ಶಿಕ್ಷಕರಾದ ಜಿ.ಎ. ಸುಬ್ಬುಕೃಷ್ಣ, ಸೀನಿಯರ್ ಟೀಚರ್ ಹೆಚ್.ಎಲ್. ವಿದ್ಯಾ, ರೂಪ, ಶಿಕ್ಷಕಿ ಹೆಚ್. ವೇದಶ್ರೀ, ಪ್ರಿಯಾ, ಸಿಂಚನಾ, ಶಿಲ್ಪಾ, ಖಜಾಂಚಿ ಚನ್ನೇಗೌಡ, ವಲಯ ಅಧ್ಯಕ್ಷ ಹೆಚ್.ಕೆ. ನಾಗೇಶ್, ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಖಜಾಂಚಿ ಪಾರ್ಶ್ವನಾಥ್, ಮಲೆನಾಡು ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲರಾದ ಡಾ. ಹೆಚ್. ಜೆ.ಅಮರೇಂದ್ರ ಇದ್ದರು.

ಲೈನ್ ಮ್ಯಾನ್ ದಿವಸ ಆಚರಣೆ



ಹಾಸನ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವತಿಯಿಂದ ನಗರದಲ್ಲಿ ಹಮ್ಮಿಕೊಂಡಿದ್ದ ಲೈನ್ ಮ್ಯಾನ್ ದಿವಸ ಆಚರಣೆ ಮತ್ತು ವಿದ್ಯುತ್ ಸುರಕ್ಷಾ ಕಾರ್ಯಾಗಾರದಲ್ಲಿ ಶಾಸಕ ಸ್ವರೂಪ್ ಅವರು ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ ಶಾಸಕರು, ಲೈನ್ ಮ್ಯಾನ್‌ಗಳು ಕೂಡ ಪೌರ ಕಾರ್ಮಿಕರಂತೆ ಶ್ರಮಜೀವಿಗಳು, ನಗರಕ್ಕೆ ಹಾಗೂ ಹಳ್ಳಿಗಳಿಗೆ ಬೆಳಕು ನೀಡುವಲ್ಲಿ ಲೈನ್ ಮೆನ್‌ಗಳ ಪಾತ್ರ ಅಪಾರ, ಅವರು ಇಲ್ಲದಿದ್ದರೆ ಜನರು ಕತ್ತಲೆಯಲ್ಲಿ ಇರಬೇಕಾಗುತ್ತದೆ. ಮಳೆ, ಗಾಳಿ, ಬಿಸಿಲು ಎನ್ನದೆ, ಹಗಲು ರಾತ್ರಿ ಎನ್ನದೆ ಜನರಿಗೆ ಬೆಳಕು ನೀಡಲು ಲೈನ್‌ಮ್ಯಾನ್‌ಗಳು ಕೆಲಸ ಮಾಡುತ್ತಾರೆ ಅವರಿಗೆ ಇನ್ನಷ್ಟು ಭದ್ರತೆ ಅಗತ್ಯ, ಮುಂದಿನ ದಿನಗಳಲ್ಲಿ ಅವರ ಪರವಾಗಿ ಅಧಿವೇಶನದಲ್ಲಿ ಧ್ವನಿ ಎತ್ತಲಾಗುವುದು ಎಂದರು ಭರವಸನೆ ನೀಡಿದರು.



ಚನ್ನರಾಯಪಟ್ಟಣ ತಾಲೂಕಿನ ದೇವಿಹಳ್ಳಿ, ಹಾಸನ್ ಲೈನ್ ವೇ ಟೋಲ್ ಪ್ಲಾಜಾ ಪ್ರೈವೇಟ್ ಲಿಮಿಟೆಡ್, ಹಾಸನ ಪ್ರಾದೇಶಿಕ ರಸ್ತೆ ಸಾರಿಗೆ ಇಲಾಖೆ ವತಿಯಿಂದ ಉಚಿತ ಹೆಲ್ಮೆಟ್ ವಿತರಣೆ, ರಸ್ತೆ ಸುರಕ್ಷಾ ಕಾರ್ಯಕ್ರಮ ನಡೆಯಿತು.

ಮೀನುಮರಿ ಕೇಂದ್ರಕ್ಕೆ ಕ್ರಮ: ಶಾಸಕ

ಆಲೂರು: ತಾಲೂಕು ಕೇಂದ್ರ ಸನಿಹದಲ್ಲಿ ಮೀನುಮರಿ ಪಾಲನ ಕೇಂದ್ರ ತೆರೆಯಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ಪಟ್ಟಣದಲ್ಲಿರುವ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಇಲಾಖೆ ವತಿಯಿಂದ ರಾಜ್ಯ ವಲಯ ಮತ್ತು ಜಿಲ್ಲಾ ವಲಯ (ಎಸ್.ಸಿ.ಪಿ/ಟಿ.ಎಸ್.ಪಿ) ಯೋಜನೆಯಡಿ ಮೀನುಗಾರಿಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ, 22 ವೃತ್ತಿನಿರತ ಮೀನುಗಾರರಿಗೆ ಉಚಿತವಾಗಿ ಮೀನುಗಾರಿಕೆ ಸಲಕರಣೆ ಕಿಟ್ ಮತ್ತು ಹರಿಗೋಲು ವಿತರಿಸಿ ಮಾತನಾಡಿ, ತಾಲೂಕಿನ ಗ್ರಾಮ ಪಂಚಾಯಿತ ವ್ಯಾಪ್ತಿಯಲ್ಲಿ ಸುಮಾರು 800 ಕೆರೆಗಳಿವೆ. ಕೆರೆಗಳಲ್ಲಿ ಮೀನು ಸಾಕಲು ಹಾಸನ, ಸಕಲೇಶಪುರ ಇತರೆಡೆಯಲ್ಲಿ ಮೀನುಮರಿಗಳನ್ನು ತಂದು ಕೆರೆಗಳಿಗೆ ಬಿಡಬೇಕಾಗಿದೆ. ಸ್ಥಳೀಯವಾಗಿ ಘಟಕವನ್ನು ಸ್ಥಾಪಿಸಿದರೆ ವೆಚ್ಚ ಕಡಿಮೆಯಾಗುತ್ತದೆ. ಆದ್ದರಿಂದ ಮೀನುಮರಿ ಪಾಲನ ಕೇಂದ್ರಕ್ಕೆ ಅಗತ್ಯವಿರುವ ಜಾಗವನ್ನು ಗುರುತಿಸಬೇಕೆಂದು ಸೂಚಿಸಿದರು. ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಶಾಂತರಾಜು ಮಾತನಾಡಿ, ತಾಲ್ಲೂಕಿನಲ್ಲಿ ಇಲಾಖೆಗೆ ಸೇರಿದ ದೊಡ್ಡ ಕೆರೆಗಳಿವೆ. ಈ ಕೆರೆಗಳಲ್ಲಿ ಮೀನು ಸಾಕಲಾಗಿದೆ. ಪ್ರತಿ ವರ್ಷ ಹರಾಜು ಮೂಲಕ ಮಾರಾಟ ಮಾಡಲಾಗುವುದು. ತಾಲ್ಲೂಕು ಕೇಂದ್ರದಲ್ಲಿ ಮೀನು ಪಾಲನ ಕೇಂದ್ರವಾದರೆ ಹೆಚ್ಚು ಮೀನುಗಾರಿಕೆ ನಡೆಸಲು ಅನುಕೂಲವಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಮೀನುಗಾರಿಕೆ ಇಲಾಖೆ ಅಧಿಕಾರಿಗಳು, ಫಲಾನುಭವಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಆಲೂರು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ 22 ವೃತ್ತಿನಿರತ ಮೀನುಗಾರರಿಗೆ ಉಚಿತವಾಗಿ ಮೀನುಗಾರಿಕೆ ಸಲಕರಣೆ ಕಿಟ್, ಹರಿಗೋಲುಗಳನ್ನು ಶಾಸಕ ಸಿಮೆಂಟ್ ಮಂಜು ವಿತರಿಸಿದರು.

ರಾಜ್ಯ ಮಾಹಿತಿ ಹಕ್ಕು ಆಯುಕ್ತ ರುದ್ರಣ್ಣ ಹರ್ತಿಕೋಟೆ ಹೇಳಿಕೆ

ಆತ್ಮಾವಲೋಕನ ಅಗತ್ಯ



ಮಾಹಿತಿ ಹಕ್ಕು ಅಡಿಯಲ್ಲಿ ಪಡೆದ ಮಾಹಿತಿ ಆಧರಿಸಿ ಮಾಡಿದ ವರದಿ ಇಂಪ್ಯಾಕ್ಟ್ ಆದರೆ ಸಮಾಜ ತಿದ್ದಲು ಸಹಕಾರಿ ಆಗಲಿದೆ. ಎಲ್ಲರೂ ಇದರ ಸದ್ಬಳಕೆ ಮಾಡಿಕೊಳ್ಳಿ, ನಾವು ಕೆಟ್ಟ ವ್ಯವಸ್ಥೆ ವಿರುದ್ಧ ಈಸಬೇಕು. ಗೆದ್ದ ಎತ್ತಿನ ಬಾಲ ಹಿಡಿಯಬಾರದು ಅವಕಾಶ ವಂಚಿತರಿಗೆ ದನಿಯಾಬೇಕು, ಸಾರ್ವಜನಿಕರ ಅಹವಾಲಿಗೆ ಕಿವಿಯಾಗಬೇಕು.

■ ಬದ್ರುದ್ದೀನ್ ಕೆ., ಮಾಹಿತಿ ಆಯೋಗದ ಆಯುಕ್ತ

ಹಾಸನ: ಪತ್ರಿಕೋದ್ಯಮ ಹಾಗೂ ಮಾಹಿತಿಹಕ್ಕು ನಿಯಮ ಎರಡೂ ಕವಲು ದಾರಿಯಲ್ಲಿದ್ದು ಆತ್ಮಾವಲೋಕನದ ಅಗತ್ಯ ಇದೆ ರಾಜ್ಯ ಮಾಹಿತಿ ಹಕ್ಕು ಆಯುಕ್ತ ರುದ್ರಣ್ಣ ಹರ್ತಿಕೋಟೆ ಹೇಳಿದರು.

ಜಿಲ್ಲಾ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿಯ ಸ್ಟಡಿ ವಿತ್ ಸೊಸೈಟಿ ಅಡಿ ಮಾಹಿತಿ ಹಕ್ಕು ಕಾಯ್ದೆ ಪರಿಣಾಮ ಹಾಗೂ ಬಳಕೆ ಬಗ್ಗೆ ಉಪನ್ಯಾಸ ನೀಡಿದರು. ಇವರೆಡರ ಉದ್ದೇಶ ನಾಗರೀಕ ಸಬಲೀಕರಣವೇ ಆಗಿದೆ. ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಕೊಡುವುದು ಇವುಗಳ ಉದ್ದೇಶ. ಆದರೆ ಇವೆರಡೂ ಉದ್ದೇಶ ಮೀರಿ ಬೇರೆ ಬೇರೆ ದಾರಿಯಲ್ಲಿ ಸಾಗುತ್ತಿರುವುದು ಕಳವಳಕಾರಿ. ಹೀಗಾಗಿ ಆತ್ಮಾವಲೋಕನ ಅಗತ್ಯ ಎಂದರು. ಭಯೋತ್ಪಾದನೆ, ಕೋಮುವಾದ, ಸಾಂಸ್ಕೃತಿಕ ದಿವಾಳಿತನ ಸಂದರ್ಭದಲ್ಲಿ

ನಾವು ನಮ್ಮ ಕೆಲಸ ಮಾಡುತ್ತಿಲ್ಲ, ಇಚ್ಛಾಶಕ್ತಿ ಎಚ್ಚರಿಸುತ್ತಿಲ್ಲ, ಅಧಿಕಾರಿಗಳಿಗೆ ಮಾಹಿತಿ ಕೊಡುವ ಕೆಲಸ ಆಗಬೇಕು ಎಂದು ನುಡಿದರು. ಹೆಚ್ಚು ಮಾಧ್ಯಮಗಳು ಇಂದು ಬಂಡವಾಳ ಶಾಹಿಗಳ ಹಿಡಿತದಲ್ಲಿವೆ, ಆದರೂ ನಾವು ಸಾಮಾಜಿಕ ಹೊಣೆಗಾರಿಕೆ ಬಿಡಬಾರದು. ನಾವು ಸುಳ್ಳು-ಸತ್ಯ ನಡುವೆ ಪರಿಶೀಲನೆ ಮಾಡುತ್ತಿಲ್ಲ, ದಿನದಿಂದ ದಿನಕ್ಕೆ ನೈತಿಕತೆ ಕಳೆದು ಕೊಳ್ಳುತ್ತಿದ್ದೇವೆ, ಹಿಂದೆ ಗೌರವ ಡಾಕ್ಟರೇಟ್ ಮಾರಾಟ ಮಾಡುತ್ತಿದ್ದುದರ ಬಗ್ಗೆ ಟೀಕೆ ಮಾಡುತ್ತಿದ್ದವು. ಈಗ ಮೀಡಿಯಾ ಪ್ರಶಸ್ತಿ ಮಾರುವ ಹಂತಕ್ಕೆ ಇಳಿದರೆ ನೈತಿಕತೆ ಎಲ್ಲಿ ಉಳಿಯಲಿದೆ ಎಂದು ಬೇಸರದಿಂದ ಪ್ರಶ್ನಿಸಿದರು. ಇಂದು ಪತ್ರಕರ್ತ ಸತ್ತು ಹೋಗಿದ್ದಾನೆ, ಜೀವಂತ ಇಡಬೇಕು. ಮೂಢನಂಬಿಕೆಗಳಿಗೆ ಪ್ರಚೋದನೆ ಬೇಡ, ಕುವೆಂಪು ಆಶಯದಂತೆ ಸರ್ವ ಜನಾಂಗದ ಶಾಂತಿಯ ತೋಟದಲ್ಲಿ ನಾವು ಬದುಕೋಣ ಎಂದರು. ಅಭಿವೃದ್ಧಿ ಪತ್ರಿಕೋದ್ಯಮ ಇರಲಿ, ಊಹಾಪೋಹದ ಪತ್ರಿಕೋದ್ಯಮ ಬೇಡ. ಆದರೆ ಇವರೆಡೂ ಈಗ ಸತ್ತು ಹೋಗಿವೆ. ಮಾಹಿತಿ ಹಕ್ಕು ಪ್ರಜಾಪ್ರಭುತ್ವಕ್ಕೆ ಆಮ್ಲಜನಕ ಇದ್ದ ಹಾಗೆ, ಮಾಹಿತಿ ಹಕ್ಕು ಅಧಿನಿಯಮ ಬಳಸಿಕೊಳ್ಳಬೇಕು, ಇದರಿಂದ ಭ್ರಷ್ಟಾಚಾರ ಮುಕ್ತ ಮಾಡಲು ಸಾಧ್ಯವಿದೆ. ಕಾಯ್ದೆ ದುರ್ಬಳಕೆ ಆಗಬಾರದು. ಶಾಂತಿ ಸೌಹಾರ್ದ ನಾಡು ಕಟ್ಟುವ ನಿಟ್ಟಿನಲ್ಲಿ ಪತ್ರಕರ್ತರು ಕೆಲಸ ಮಾಡಿ, ಮಾಹಿತಿ ಹಕ್ಕು ಸಂವಿಧಾನ ಉಳಿಸಲು ಪ್ರಬಲ ಅಸ್ತ್ರ, ಇದನ್ನು ಬಳಸಿಕೊಳ್ಳಿ ಎಂದು ಕರೆ ನೀಡಿದರು. ಮತ್ತೊಬ್ಬ ಆಯುಕ್ತರಾದ ಬದ್ರುದ್ದೀನ್ ಕೆ. ಮಾತನಾಡಿ, ವಿ ಸ್ಟಡಿ ವಿತ್ ಸೊಸೈಟಿ ಅದ್ಭುತ ಪರಿಕಲ್ಪನೆ, ಮಾಹಿತಿ ಹಕ್ಕು ದೇಶದಲ್ಲಿ ಜಾರಿಗೆ ಬಂದು 20 ವರ್ಷ ಆಗಿದೆ. ಆದರೆ ಇದಕ್ಕೆ 250 ವರ್ಷಗಳ ಇತಿಹಾಸ ಇದೆ. 1766 ರಲ್ಲಿ ಮೊದಲಿಗೆ ಸ್ವೀಡನ್‌ನಲ್ಲಿ ಅನುಷ್ಠಾನಕ್ಕೆ ಬಂತು. ಈಗ 130 ರಾಷ್ಟ್ರಗಳಲ್ಲಿ ಜಾರಿಯಲ್ಲಿದೆ ಎಂದರು. ಕೆಯೂಡಬ್ಲ್ಯೂಜೆ ರಾಜ್ಯ ಉಪಾಧ್ಯಕ್ಷ ಎಚ್ .ಬಿ.ಮದನಗೌಡ, ರುದ್ರಣ್ಣ ಹರ್ತಿಕೋಟೆ ಹಾಗೂ ಬದ್ರುದ್ದೀನ್ ವೃತ್ತಿ ಘನತೆ ಎತ್ತಿ ಹಿಡಿದವರು. ಇಬ್ಬರೂ ಕರ್ನಾಟಕ ಪತ್ರಿಕೋದ್ಯಮದಲ್ಲಿ ಒಳ್ಳೆಯ ಹೆಸರು ಮಾಡಿದ್ದಾರೆ. ವೃತ್ತಿಗೆ ಕಳಂಕ ತರದ ರೀತಿ, ಗೌರವಯುತವಾಗಿ ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಂಘದ ಅಧ್ಯಕ್ಷರಾದ ಜೆ.ಆರ್.ಕೆಂಚೇಗೌಡ ಅಧ್ಯಕ್ಷತೆ ವಹಿಸಿದ್ದರು. ಸಾಂಸ್ಕೃತಿಕ ಸಮಿತಿ ಸಂಚಾಲಕ ಪ್ರಸನ್ನ ಕುಮಾರ್, ಜಿಲ್ಲಾ ಕಾರ್ಯಕಾರಿ ಹಾಗೂ ಸಾಂಸ್ಕೃತಿಕ ಸಮಿತಿ ಸದಸ್ಯ ಸಿ.ಆರ್.ನವೀನ್ ಹಿರಿಯ ಹಾಗೂ ಕಿರಿಯ ಪತ್ರಕರ್ತರು, ಸಂಘದ ಪದಾಧಿಕಾರಿಗಳು ಇದ್ದರು.

ಜಿಲ್ಲೆಯಲ್ಲಿ ಉದ್ಯೋಗ ಮೇಳ: 150ಕ್ಕೂ ಹೆಚ್ಚು ಕಂಪನಿ ಭಾಗಿ

ಹಾಸನ: ಜಿಲ್ಲೆಯ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಯುವ ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದೆ. ಪ್ರತಿ ವರ್ಷವೂ ಉದ್ಯೋಗ ಮೇಳವನ್ನು ಆಯೋಜಿಸಲಾಗುವುದು ಎಂದು ಸಂಸದರಾದ ಶ್ರೇಯಸ್ ಪಟೇಲ್ ತಿಳಿಸಿದರು.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಸಹಯೋಗದಲ್ಲಿ ನಗರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಯುವ ಉದ್ಯೋಗ ಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸುಮಾರು 150ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿದ್ದು, ಈಗಾಗಲೇ 3000 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ನೋಂದಾಣಿ ಮಾಡಿಕೊಂಡಿದ್ದು, ವಿವಿಧ ಕಂಪನಿಗಳಲ್ಲಿ ಖಾಲಿ ಇರುವ ಉದ್ಯೋಗಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಒಂದೇ ಸೂರಿನಡಿಯಲ್ಲಿ 150 ಕ್ಕೂ ಹೆಚ್ಚು ಕಂಪನಿಗಳು ಆಗಮಿಸಿರುವುದರಿಂದ ಜಿಲ್ಲೆಯ ಎಲ್ಲಾ ಯುವಕ ಯುವತಿಯರು ಆಗಮಿಸಿ ಸದುಪಯೋಗವನ್ನು ಪಡೆದುಕೊಂಡು ತಮ್ಮ ಜೀವನವನ್ನು ಆರ್ಥಿಕತೆಗೆ ಕೊಂಡೊಯ್ಯಬೇಕು ಎಂದರು. ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಿವಕಾಂತಮ್ಮ (ಕಾಂತಾ) ನಾಯಕ ಪ್ರಾಸ್ತಾವಿಕವಾಗಿ ಮಾತನಾಡಿ, ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಜತೆಗೆ ಅವರ ಕೌಶಲ್ಯಾಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. 200ಕ್ಕೂ ಹೆಚ್ಚು ಕಂಪನಿಗಳು ನೋಂದಣಿ ಮಾಡಿಕೊಂಡಿದ್ದು, ಸುಮಾರು 180



ಕಂಪನಿಗಳು ಮೇಳದಲ್ಲಿ ಭಾಗವಹಿಸಿವೆ, ಇಂದಿನ ದಿನಗಳಲ್ಲಿ ಉದ್ಯೋಗ ಹುಡುಕುವುದಕ್ಕಿಂತ ಉದ್ಯೋಗ ಸೃಷ್ಟಿ ಮಾಡುವ ಮನೋಭಾವ ಯುವಕರಲ್ಲಿ ಬೆಳಿಬೇಕು. ಯುವಕರು ಮೊಬೈಲ್ ಬಳಕೆಯಿಂದ ದೂರವಿದ್ದು ತಮ್ಮ ಕೌಶಲಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಕೌಶಲ್ಯಾಭಿವೃದ್ಧಿ ಇದ್ದರೆ ಉದ್ಯೋಗ ಸಿಗುವುದು ಸುಲಭ. ಉದ್ಯೋಗ ಸಿಗದ ಅಭ್ಯರ್ಥಿಗಳು ತರಬೇತಿ ಪಡೆದು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದರು.

ಶಾಸಕರದ ಸ್ವರೂಪ್ ಪ್ರಕಾಶ್ ಮಾತನಾಡಿ, ಉದ್ಯೋಗ ಮೇಳದ ಮೂಲಕ ಹೆಚ್ಚಿನ ಯುವಕರಿಗೆ ಉದ್ಯೋಗ ದೊರೆಯಬೇಕು. ಕನಿಷ್ಠ ನೂರಕ್ಕೂ ಹೆಚ್ಚು ಮಂದಿಗೆ ನೇರವಾಗಿ ಉದ್ಯೋಗ ಕಲ್ಪಿಸುವ ಗುರಿ ಹೊಂದಬೇಕು ಎಂದು ಹೇಳಿದರು. ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ಮಾತನಾಡಿ, ಉದ್ಯೋಗ ಮೇಳಕ್ಕೆ ಈಗಾಗಲೇ ಆನ್‌ಲೈನ್ ಮೂಲಕ ಸುಮಾರು 4 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ಸ್ಥಳದಲ್ಲಿ 3000 ಸಾವಿರ ಯುವಕ ಯುವತಿಯರು ಭಾಗವಹಿಸಿದ್ದಾರೆ ಎಂದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಟೇಲ್ ಶಿವಣ್ಣ, ಜಿ.ಪಂ ಸಿಇಒ ಪೂರ್ಣಿಮಾ, ಎಡಿಸಿ ಜಗದೀಶ್ ಗಂಗಣ್ಣ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಗಿರೀಶ್ ಇದ್ದರು.

ಸ್ಕೌಟ್ಸ್ ಗೈಡ್ಸ್ ಶಿಸ್ತು, ಸಂಯಮ ಪಾಲನೆ



ಆಲೂರು: ಮಹಿಳೆ ಹೆಚ್ಚೆಚ್ಚು ಸಬಲೀಕರಣಗೊಂಡಷ್ಟು ಸಾಮಾಜಿಕಸ್ವಾಸ್ಥ್ಯ ಸದೃಢಗೊಂಡು ಕೌಟುಂಬಿಕ ಔನತ್ಯ ಸಾಧಿಸಲು ಸಹಕಾರಿಯಾಗುತ್ತದೆ ಎಂದು ಭಾರತ್ ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಸಹಾಯಕ ಆಯುಕ್ತ ಎಂ. ಬಾಲಕೃಷ್ಣ ಅಭಿಪ್ರಾಯಪಟ್ಟರು.

ಭಾರತ್ ಸ್ಕೌಟ್ಸ್ ಗೈಡ್ಸ್ ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ಪಟ್ಟಣದ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿ, ತಾಲ್ಲೂಕು ಕಾರ್ಯದರ್ಶಿ ಕೊಟ್ರೇಶ್ ಎಸ್. ಉಪ್ಪಾರ್ ಅವರ ನೇತೃತ್ವದಲ್ಲಿ ಆಲೂರು ತಾಲೂಕಿನಲ್ಲಿ ಸ್ಕೌಟ್ಸ್ ಗೈಡ್ಸ್ ಉತ್ತಮವಾಗಿ ಸಾಗುತ್ತಿದೆ. ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಶಿಕ್ಷಕಿಯರಿಗಾಗಿ ವಿವಿಧ ಮನೋರಂಜನಾ ಆಟಗಳನ್ನು ಆಡಿಸಿ ಬಹುಮಾನ ನೀಡುತ್ತಿರುವುದು ವೃತ್ತಿ ಜೀವನದ ಕಾರ್ಯಕ್ಷಮತೆಯನ್ನು ಹೆಚ್ಚಿಸುವಲ್ಲಿ ಪುಷ್ಠಿ ನೀಡುತ್ತದೆ. ಅಜ್ಜಿಯಾಗಿ, ತಾಯಿಯಾಗಿ, ಗುರುವಾಗಿ, ಅಕ್ಕಳಾಗಿ, ತಂಗಿಯಾಗಿ, ಹೆಂಡತಿಯಾಗಿ, ಗೆಳತಿಯಾಗಿ ಜೀವನದ ಪ್ರತಿ ಹೆಜ್ಜೆಯಲ್ಲೂ ಮಹಿಳೆಯ ಧೀಶಕ್ತಿ ನಮ್ಮ ಜೊತೆಗಿರುತ್ತದೆ. ಭಾರತ್ ಸ್ಕೌಟ್ಸ್ ಗೈಡ್ಸ್ ಶಿಸ್ತು, ಸಂಯಮ, ಸೇವೆ ಕಲಿಸುವುದರ ಜೊತೆಗೆ ಕೌಟುಂಬಿಕ ಮೌಲ್ಯಗಳನ್ನು ಕಲಿಸುತ್ತಿದೆ ಎಂದರು. ತಾಲ್ಲೂಕು ಕಾರ್ಯದರ್ಶಿ ಕೊಟ್ರೇಶ್ ಎಸ್. ಉಪ್ಪಾರ್ ಮಾತನಾಡಿ, ಇಂದು ಮಹಿಳೆ ಕೇವಲ ಅಡುಗೆ ಮನೆಗೆ ಸೀಮಿತವಾಗದೇ ಆಟೋ ಚಾಲನೆ, ಪೌರಕಾರ್ಮಿಕ, ಮುಖ್ಯಮಂತ್ರಿ, ಪ್ರಧಾನ ಮಂತ್ರಿ, ರಾಷ್ಟ್ರಪತಿಯಿಂದ ಹಿಡಿದು ಪೈಲಟ್ ಹಾಗೂ ಬಾಹ್ಯಾಕಾಶದಲ್ಲಿ ಸಂಶೋಧನೆ ಮಾಡುವ ಹಂತದವರೆಗೂ ಛಾಪನ್ನು ಮೂಡಿಸಿ ಸಾಧಿಸಿ ತೋರಿಸಿದ್ದಾಳೆ. ಈ ಅವಕಾಶಗಳನ್ನು ಬಳಸಿಕೊಂಡು ನಮ್ಮ ಜೀವನವನ್ನು ಔನತ್ಯಗೊಳಿಸಿಕೊಳ್ಳಬೇಕೆಂದರು.

ವಿಶ್ವೇಶ್ವರಯ್ಯ ಕೈಗಾರಿಕಾ ತರಬೇತಿ ಕೇಂದ್ರದ ಕಿರಿಯ ತರಬೇತಿ ಅಧಿಕಾರಿ ಸಿ.ಎಸ್. ಶಿವಕುಮಾರ್ ಮಾತನಾಡಿ ಮಹಿಳೆ ಕೇವಲ ಮನೆಗೆ ಸೀಮಿತವಲ್ಲ, ಅವಳು ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲೂ ಯಶಸ್ಸು ಸಾಧಿಸುತ್ತಾಳೆ. ಸಮಾಜದ ಗೌರವವನ್ನು ಕಾಪಾಡುತ್ತಾಳೆ. ನಿಜವಾದ ಸಮಾಜದ ಪ್ರಗತಿಯಾಗುವುದೇ ಮಹಿಳೆಯರ ಕಾರ್ಯಕ್ಷಮತೆಯಿಂದ ಎಂದರು.

ಶಾಲಾ ಮುಖ್ಯ ಶಿಕ್ಷಕಿ ಪವಿತ್ರ, ವಿಶ್ವೇಶ್ವರಯ್ಯ ಕೈಗಾರಿಕಾ ತರಬೇತಿ ಕೇಂದ್ರದ ಕಿರಿಯ ತರಬೇತಿ ಅಧಿಕಾರಿ ಸಿ.ಎಸ್. ಶಿವಕುಮಾರ್, ರಂಗೇಗೌಡ, ವಿಶ್ವೇಶ್ವರಯ್ಯ, ರಾಮಚಂದ್ರು, ಶಕುಂತಲಾ, ರೋಹಿಣಿ, ರೂಹಿ, ಶಿಲ್ಪಕೃತಿ, ಸೌಮ್ಯ, ಬೈರಾಪುರ ಎಸ್. ವಿ. ಸುಮಿತ್ರ, ರಂಜಿತಾ, ಅಶ್ವಿನಿ ಸೇರಿದಂತೆ ಹಲವರಿದ್ದರು.

ಕಲುಷಿತ ನೀರಿನ ಪೂರೈಕೆ: ಗ್ರಾಮಸ್ಥರು ಆರೋಪ

ಬೇಲೂರು: ತಾಲೂಕಿನ ಅರೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಲಿಂಗಾಪುರ ಗ್ರಾಮಕ್ಕೆ ಪೂರೈಕೆಯಾಗು ತ್ತಿರುವ ಕುಡಿಯುವ ನೀರಿನಲ್ಲಿ ಹಾವು ಅಥವಾ ಇನ್ಯಾವುದೋ ಜೀವಿ ಬಿದ್ದಿದ್ದು ಕೊಳತೆ ವಾಸನೆ ಬರುತ್ತಿದೆ, ಒಂದೆರೆಡು ದಿನದಲ್ಲಿ ಸರಿಯಾಗಬಹುದೆಂದು ಸುಮ್ಮನಿದ್ದರೆ ಇದುವರೆಗೂ ಸರಿಯಾಗಿಲ್ಲ, ನೀರಿನ ವಾಸನೆ ಗ್ರಹಿಸಿದರೆ ವಾಂತಿ ಬರುವ ಹಾಗೆ ಇದೆ, ನೀರು ಗಂಟಿಯವರೆಗೆ ತಿಳಿಸಿದರೆ ಹಾವು ಅಥವಾ ಕಪ್ಪೆ ಬೀಳಲು ಸಾಧ್ಯವಿಲ್ಲ ಎಂದಿದ್ದಾರೆ. ಹಾಗಾದ್ರೆ ಇಂತಹ ದುರ್ನಾತ ಬರಲು ಕಾರಣವೇನು? ಎಂದು ಸ್ಥಳೀಯರು ಪ್ರಶ್ನಿಸಿದ್ದಾರೆ. ಅಲ್ಲದೆ ಬೋರ್ ವೆಲ್ ಕೇಸಿಂಗ್ ಪೈಪ್ ನ ಮೇಲ್ಭಾಗದಲ್ಲಿ ರಂಧ್ರ ವಾಗಿದ್ದು ಅಲ್ಲಿಂದ ಹಾವು ಬಿದ್ದಿರಬಹುದೆಂದು ಸ್ಥಳೀಯರು ಅನುಮಾನ ಪಟ್ಟಿದ್ದಾರೆ. ನಮಗೆ ಪಂಚಾಯಿತಿಯಿಂದ ಪೂರೈಕೆಯಾಗುತ್ತಿರುವ ನೀರು ಬಿಟ್ಟರೆ ಬೇರೆ ಯಾವುದೇ ಪರ್ಯಾಯ ವ್ಯವಸ್ಥೆಗಳಿಲ್ಲ, ಆದ್ದರಿಂದ ಸಂಬಂಧ ಪಟ್ಟ ಅಧಿಕಾರಿಗಳು ತುರ್ತಾಗಿ ಬೋರ್ ವೆಲ್ ಅನ್ನು ಶುಚಿಗೊಳಿಸಿ ಆರೋಗ್ಯ ಕರ ನೀರಿನ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.


ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯದಲ್ಲಿ
ಅಸಲು ದಾವಾ ನಂ. 393/2023
ವಾದಿ: ರಂಗೇಗೌಡ
ವಿರುದ್ಧ
ಪ್ರತಿವಾದಿಗಳು: ಹೆಚ್.ರಾಮೇಗೌಡ ಮತ್ತು ಇತರರು 2. ಶ್ರೀಮತಿ ಕಮಲಮ್ಮ ಕೋಂ ಹೆಚ್.ರಾಮೇಗೌಡ ಉ|| ರಾಮಚಂದ್ರ ವಯಸ್ಸು ಸುಮಾರು 65 ವರ್ಷ 3. ಸರೋಜ ಆರ್. ಬಿನ್ ಹೆಚ್.ರಾಮೇಗೌಡ ಉ|| ರಾಮಚಂದ್ರ ಸುಮಾರು 45 ವರ್ಷ 4. ಶಶಿಕುಮಾರ್ ಬಿನ್ ಹೆಚ್.ರಾಮೇಗೌಡ ಉ|| ರಾಮಚಂದ್ರ ಸುಮಾರು 43 ವರ್ಷ. ಮೇಲಿನ ಎಲ್ಲರ ವಿಳಾಸ- ಹನುಮಹಳ್ಳಿ ಗ್ರಾಮ ಕುಂದೂರು ಹೋಬಳಿ, ಆಲೂರು ತಾಲ್ಲೂಕು, ಹಾಸನ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಈ ಮೇಲ್ಕಂಡ ಕೇಸಿನ ದಾವಾದಲ್ಲಿ 2,3 ಮತ್ತು 4 ನೇ ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾಗದೆ ಇರುವುದರಿಂದ ಅವರ ವಿಳಾಸದಲ್ಲಿ ಪ್ರಚುರವಾಗುವ ದಿನ ಪತ್ರಿಕೆಯಾದ ಹೊಸದಿಗಂತ ಪತ್ರಿಕೆಯಲ್ಲಿ ಪ್ರಕಟಿಸಿ ಜಾರಿ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ. 2, 3 ಮತ್ತು 4 ನೇ ಪ್ರತಿವಾದಿಗಳನ್ನು ದಾವಾದಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದು, ಸದರಿಯವರಿಗೆ ಈ ಮೇಲ್ಕಂಡ ಘನ ನ್ಯಾಯಾಲಯದಿಂದ ನೋಟೀಸ್ ಜಾರಿಮಾಡಿದರೂ ಪಡೆಯದೇ ತಪ್ಪಿಸಿಕೊಳ್ಳುತ್ತಿರುತ್ತಾರೆ. ಆದ್ದರಿಂದ ಮೇಲ್ಕಂಡ 2,3 ಮತ್ತು 4 ನೇ ಪ್ರತಿವಾದಿ ಆದ ನೀವುಗಳು ದಿನಾಂಕ 25.03.2026 ರಂದು ಬೆಳಿಗ್ಗೆ 11-00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ತಾವಾಗಲಿ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗಿ ಏನಾದರೂ ತಕರಾರುಗಳು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮಗಳ ವಿರುದ್ಧ ಏಕಪಕ್ಷೀಯವಾಗಿ ಈ ದಾವಾವನ್ನು ತೀರ್ಮಾನಿಸಲಾಗುವುದು.
ಈ ಪ್ರಕಟಣೆಯನ್ನು ನ್ಯಾಯಾಲಯದ ಮೊಹರು ಮತ್ತು ಮುದ್ರೆಯೊಂದಿಗೆ ದಿನಾಂಕ: 06.03.2026 ರಂದು ಪ್ರಕಟಿಸಲಾಗುತ್ತದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು, ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ
ಅರ್ಜಿದಾರರ ಪರ ವಕೀಲರು
ಟಿ. ನಾಗರಾಜು, ಬಿಎಸ್ಸಿ, ಎಲ್.ಎಲ್.ಬಿ ವಕೀಲರು, ಹಾಸನ
ಸ್ಥಳ:ಹಾಸನ

ಹಾಸನದ 5ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ
ಕ್ರಿ.ಮಿಸ್: 90/2026
ಅರ್ಜಿದಾರರು : 1) ಅಣ್ಣಪ್ಪ ಬಿನ್ ಲೇಟ್ ರಾಮಯ್ಯ, ಸುಮಾರು 55 ವರ್ಷ, ವೇದಾವತಿ ಗ್ರಾಮ, ದುದ್ದ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ, 2) ಪಾರ್ವತಮ್ಮ ಬಿನ್ ಲೇಟ್ ರಾಮಯ್ಯ ಕೋಂ ಲೇಟ್ ಸಣ್ಣಯ್ಯ, ಸುಮಾರು 57 ವರ್ಷ, ಸಾವಂತನಹಳ್ಳಿ ಗ್ರಾಮ, ಶಾಂತಿಗ್ರಾಮ ಹೋಬಳಿ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ : ವಿರುದ್ಧ :
ರೆಸ್ಪಾಂಡೆಂಟರು :ತಹಶೀಲ್ದಾರ್‌ರವರು, ಜನನ ಮತ್ತು ಮರಣ ನೊಂದಾಣಾಧಿಕಾರಿಗಳು, ಹಾಸನ ತಾಲ್ಲೂಕು,
ಪತ್ರಿಕಾ ಪ್ರಕಟಣೆ
ಅರ್ಜಿದಾರರ ತಾಯಿಯವರಾದ ಕೋಡಮ್ಮ ಕೋಂ ಲೇಟ್ ರಾಮಯ್ಯ ದಿನಾಂಕ: 10.03.1990 ರಂದು ಸ್ವಗ್ರಾಮದಲ್ಲಿ ಮರಣ ಹೊಂದಿದ್ದು, ಅರ್ಜಿದಾರರ ತಾಯಿಯ ಮರಣ ಪ್ರಮಾಣ ಪತ್ರವನ್ನು ಕೋರಿ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರ ತಾಯಿಯ ಮರಣ ಪ್ರಮಾಣ ಪತ್ರವು ಜಮೀನಿನ ಖಾತೆ ಬದಲಾವಣೆಗೆ ಅತ್ಯವಶ್ಯಕವಾಗಿರುತ್ತದೆ. ಈ ಬಗ್ಗೆ ರೆಸ್ಪಾಂಡೆಂಟರು ತಮ್ಮ ಮರಣ ನೊಂದಣಿ ವಹಿಯಲ್ಲಿ ಮರಣ ದಿನಾಂಕವನ್ನು ನೊಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ದಾಖಲಿಸಿರುತ್ತಾರೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಮರಣ ದೃಢೀಕರಣ ಪತ್ರ ಕೊಡುವುದರ ಬಗ್ಗೆ ಯಾರಾದರೂ ತಂಟೆ, ತಕರಾರು ಅಥವಾ ವಾರಸುದಾರರುಗಳಿದ್ದಲ್ಲಿ ಅಂತಹವರುಗಳು ದಿ: 06.04.2026ರಂದು ಬೆಳಗ್ಗೆ 11-00 ಗಂಟೆಗೆ ಖುದ್ದು ಅಥವಾ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರು ಇಲ್ಲ ಎಂದು ಪರಿಗಣಿಸಿ ನಿಮ್ಮಗಳ ಗೈರು ಹಾಜರಿಯಲ್ಲಿ ಮೇಲ್ಕಂಡ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯತಕ್ಕದ್ದು. ದಿನಾಂಕ: 05.03.2026 ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಇದನ್ನು ಕೊಡಲಾಗಿದೆ.
ಘನ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, 5ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯದಲ್ಲಿ
ಅರ್ಜಿದಾರರ ಪರ ವಕೀಲರು : ಯು.ಕೆ.ಶಿವನಂಜಪ್ಪ ವಕೀಲರು, ಹಾಸನ, ಸ್ಥಳ : ಹಾಸನ, ದಿನಾಂಕ : 5/03/2026

ಅರಕಲಗೂಡು ಗೌರವಾನ್ವಿತ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಮತ್ತು ಪ್ರಧಾನ ಸಿವಿಲ್ ನ್ಯಾಯಾಧೀಶರ ಘನ ನ್ಯಾಯಾಲಯದಲ್ಲಿ
ಕ್ರಿಮಿನಲ್ ಮಿಸ್. ಸಂಖ್ಯೆ : 168/2026
ಅರ್ಜಿದಾರರು: ನಿಂಗಮ್ಮ ಕೋಂ ಲೇಟ್ ಅಣ್ಣೇಗೌಡ, ಸುಮಾರು 62 ವರ್ಷ, ಹರದೂರು ಗ್ರಾಮ, ಕಸಬಾ ಹೋಬಳಿ, ಅರಕಲಗೂಡು ತಾಲ್ಲೂಕು. :: ವಿರುದ್ಧ::
ರೆಸ್ಪಾಂಡೆಂಟರು : ತಹಸೀಲ್ದಾರರು, ಜನನ ಮತ್ತು ಮರಣಗಳ ನೋಂದಾಣಿಧಿಕಾರಿಗಳು, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ,
ಪತ್ರಿಕಾ ಪ್ರಕಟಣೆ
ಮೇಲ್ಕಂಡ ಅರ್ಜಿದಾರರ ತಾಯಿಯವರಾದ ಮಲ್ಲಮ್ಮ ಬಿನ್ ಲೇಟ್ ಜವರೇಗೌಡ ಇವರು ದಿನಾಂಕ:13/04/2021 ರಂದು ಅರಕಲಗೂಡು ತಾಲ್ಲೂಕು, ಕಸಬಾ ಹೋಬಳಿ, ಹರದೂರು ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಈಗ ಅರ್ಜಿದಾರರು ಅವರ ಕುಟುಂಬದ ವ್ಯವಹಾರದ ಉದ್ದೇಶಕ್ಕಾಗಿ ಮೃತರ ಮರಣ ದೃಢೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಮಲ್ಲಮ್ಮ ಬಿನ್ ಲೇಟ್ ಜವರೇಗೌಡ ಇವರ ಇತರೆ ವಾರಸುದಾರರು ಯಾರಾದರೂ ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ : 26.03.2026 ರಂದು ಪೂರ್ವಾಹ್ನ 11.00 ಗಂಟೆಗೆ ನೀವುಗಳು ಹಾಜರಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026 ನೇ ವರ್ಷದ ಫೆಬ್ರವರಿ ತಿಂಗಳಿಗೆ 24ನೇ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೆದಾರರು,ಅರಕಲಗೂಡು ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಅರಕಲಗೂಡು
ಅರ್ಜಿದಾರರ ಪರ ವಕೀಲರು : (ಪವಿತ್ರ.ಎಸ್) ಅರಕಲಗೂಡು.

ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸೇತುವೆಯಾಗಲಿ

ಹೊಳೆನರಸೀಪುರ: ಶಿಕ್ಷಕರು ಮತ್ತು ಪೋಷಕರು ಮಗುವಿನ ಶೈಕ್ಷಣಿಕ ಪ್ರಗತಿಯಲ್ಲಿ ಸೇತುವೆಯಂತೆ ಕಾರ್ಯನಿರ್ವಹಿಸಬೇಕು ಹಾಗೂ ಮಕ್ಕಳು ಸಾಮಾಜಿಕ ಜಾಲತಾಣದ ಸುಳಿಗೆ ಸಿಗದಂತೆ ಪೋಷಕರು ಹೆಚ್ಚಿನ ಜಾಗೃತೆ ವಹಿಸಬೇಕು ಎಂದು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಯುತ ಜಿ.ಎನ್. ಸೋಮಲಿಂಗೇಗೌಡ ಅವರು ಕರೆ ನೀಡಿದರು. ಪಟ್ಟಣದ ಪಿಎಂ ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಪೋಷಕ ಶಿಕ್ಷಕರ ಮಹಾಸಭೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ತಾಲೂಕು ಬಿ.ಆರ್.ಪಿ. ಶ್ರೀಯುತ ನಿಂಗರಾಜು ಮಾತನಾಡಿ, ಮಕ್ಕಳ ಕಲಿಕೆಯಲ್ಲಿ ಮತ್ತು ಅವರು ಉತ್ತಮ



ಸಂಸ್ಕಾರವಂತರಾಗಿ ಬೆಳೆಯುವಲ್ಲಿ ತಾಯಂದಿರ ಪಾತ್ರ ಅತ್ಯಂತ ಮಹತ್ವದ್ದು ಎಂದು ತಿಳಿಸಿದರು. ಮಕ್ಕಳು ಮೊಬೈಲ್ ಮತ್ತು ದೂರದರ್ಶನದಿಂದ ದೂರವಿದ್ದು ಸಂಸ್ಕಾರ ಮೈಗೂಡಿಸಿಕೊಳ್ಳಬೇಕು. ಪೋಷಕರು ಮಕ್ಕಳ ಮುಂದೆ ಜಗಳ ಅಥವಾ ವಾದ ಮಾಡದೆ ಸೌಹಾರ್ದತೆಯಿಂದ ವರ್ತಿಸುವುದು ಮಗುವಿನ ಮಾನಸಿಕ ಬೆಳವಣಿಗೆಗೆ ಪೂರಕ ಎಂದರು. ಬಿ.ಐ.ಆರ್.ಟಿ. ಶ್ರೀಯುತ ಪ್ರಶಾಂತ್ ಮಾತನಾಡಿ, ಮಕ್ಕಳು ಶಾಲೆಯ ಅವಧಿಗಿಂತ ಹೆಚ್ಚು ಸಮಯ ಪೋಷಕರೊಂದಿಗೆ ಕಳೆಯುವುದರಿಂದ ಅವರ ನಡವಳಿಕೆಯ ಮೇಲೆ ಪೋಷಕರ ಪ್ರಭಾವ ಹೆಚ್ಚಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಯುತ ರಾಜು ಅವರು ವಹಿಸಿದ್ದರು. ಶ್ರೀಯುತ ರಾಮಚಂದ್ರಪ್ಪ (ತಾಲೂಕು ಇಸಿಒ), ಚಂದ್ರಶೇಖರ್ (ಸಿಆರ್‌ಪಿ) ಪ್ರಭಾಕರ್ (ಎಸ್‌ಡಿಎಂಸಿ ಸದಸ್ಯರು) ಉಪಸ್ಥಿತರಿದ್ದರು. ಶಾಲೆಯ ಎಲ್ಲಾ ಶಿಕ್ಷಕ ವೃಂದದವರು ಹಾಗೂ ನೂರಾರು ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಿದರು.

ಹಗರಹಳ್ಳಿ ಗ್ರಾಮದಲ್ಲಿ ಕಾಡಾನೆ ಪ್ರತ್ಯಕ್ಷ

ಸಕಲೇಶಪುರ: ತಾಲೂಕಿನ ಹರಗರಹಳ್ಳಿ ಮತ್ತು ಬ್ಯಾಕರವಳ್ಳಿ ಗ್ರಾಮಗಳ ಸಮೀಪ ಕಾಡಾನೆಯೊಂದು ಕಾಣಿಸಿಕೊಂಡಿದ್ದು, ಸ್ಥಳೀಯ ಜನರಲ್ಲಿ ತೀವ್ರ ಭೀತಿ ಮೂಡಿಸಿದೆ. ಘಟನೆಯ ವಿವರ: ಇಂದು ಬೆಳಿಗ್ಗೆ ಸಕಲೇಶಪುರ ತಾಲ್ಲೂಕಿನ ಬ್ಯಾಕರವಳ್ಳಿ ಸಮೀಪ ಹರಗರಹಳ್ಳಿ ಮಾರ್ಗದಲ್ಲಿ ಒಂಟಿ ಸಲಗಮೊಂದು ರಸ್ತೆ ದಾಟುತ್ತಿರುವುದನ್ನು ಕಂಡು ಸಾರ್ವಜನಿಕರು ಆತಂಕಕ್ಕೊಳಗಾಗಿದ್ದಾರೆ ,. ಕಳೆದ ಕೆಲವು ದಿನಗಳಿಂದ ಈ ಭಾಗದಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದು, ಇಂದು ಬೆಳಿಗ್ಗೆ ಜನನಿಬಿಡ ರಸ್ತೆಯಲ್ಲೇ ಆನೆ ಕಾಣಿಸಿಕೊಂಡಿರುವುದು ಆತಂಕಕ್ಕೆ ಕಾರಣವಾಗಿದೆ.

ಬೆಳಗ್ಗೆ ತೋಟಕ್ಕೆ ಹೋಗುವ ಸಮಯದಲ್ಲಿ ಆನೆ ಎದುರಾದರೆ ಬದುಕುವುದೇ ಕಷ್ಟ. ಅರಣ್ಯ ಇಲಾಖೆಗೆ ಹಲವು ಬಾರಿ ದೂರು ನೀಡಿದರೂ ಶಾಶ್ವತ ಪರಿಹಾರ ಸಿಗುತ್ತಿಲ್ಲ ಎಂದು ಸ್ಥಳೀಯ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹರಗರಹಳ್ಳಿ ಮತ್ತು ಬ್ಯಾಕರವಳ್ಳಿ ಸುತ್ತಮುತ್ತಲಿನ ಕಾಫಿ ತೋಟಗಳಲ್ಲಿ ಆನೆಗಳು ಬೀಡು ಬಿಟ್ಟಿರುವುದರಿಂದ ಕೃಷಿ ಚಟುವಟಿಕೆಗಳಿಗೆ ತೀವ್ರ ತೊಂದರೆಯುಂಟಾಗಿದೆ. ವಿಷಯ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಸಾರ್ವಜನಿಕರು ಅನಗತ್ಯವಾಗಿ ಸಂಚರಿಸಬಾರದು ಮತ್ತು ಆನೆಯನ್ನು ಕೆಣಕಬಾರದು ಎಂದು ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ಹಾಸನದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
Com OS ನಂ. 28/2025
ವಾದಿ: ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ರಾಯರಕೊಪ್ಪಲು ಶಾಖೆ
ವಿರುದ್ಧ
ಪ್ರತಿವಾದಿ: ವರಮಹಾಲಕ್ಷ್ಮೀ ಕೋಂ ದಯಾನಂದ, ಸುಮಾರು 46 ವರ್ಷ. ಕಾರಗೋಡು ಗ್ರಾಮ, ಕೆ.ಹೊಸಕೋಟೆ ಹೋಬಳಿ, ಆಲೂರು ತಾಲ್ಲೂಕು.
ಪ್ರಕಟಣೆ
ಈ ಮೇಲ್ಕಂಡ ದಾವಾವನ್ನು ವಾದಿ ಪ್ರತಿವಾದಿಯಾದ ವರಮಹಾಲಕ್ಷ್ಮೀರವರ ವಿರುದ್ಧ ಬ್ಯಾಂಕಿಗೆ ಪಾವತಿ ಮಾಡಬೇಕಾಗಿರುವ ಸಾಲದ ಮೊಬಲಗು 10,03,308-00 ರೂ.ಗಳು ಮತ್ತು ಸಾಲಿಯಾನ ಶೇ. 11.30 ರೂ.ನಂತೆ ಬಡ್ಡಿ ಸೇರಿಸಿ ಡಿಕ್ರಿ ಮಾಡುವಂತೆ ಪ್ರಾರ್ಥಿಸಿ ಪ್ರತಿವಾದಿಯ ವಿರುದ್ಧ ದಾವಾ ತಂದಿರುತ್ತಾರೆ. ಈ ಮೇಲ್ಕಂಡ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಈ ಮೇಲ್ಕಂಡ ಕೇಸು ಈ ಘನ ನ್ಯಾಯಾಲಯದಲ್ಲಿ ದಿನಾಂಕ 28.03.2026 ರಂದು ಹಿಯರಿಂಗ್ ಇರುತ್ತದೆ. ಅಂದಿನ ದಿವಸ ಮೇಲ್ಕಂಡ ಪ್ರತಿವಾದಿಯು ಖುದ್ದಾಗಿ ಆಗಲೀ ಅಥವಾ ಅವರ ಪರ ವಕೀಲರ ಮೂಲಕವಾಗಲೀ ಅಂದಿನ ದಿವಸ ಬೆಳಿಗ್ಗೆ 11.00 ಗಂಟೆಗೆ ಈ ಮೇಲ್ಕಂಡ ಕೇಸಿನಲ್ಲಿ ನ್ಯಾಯಾಲಯಕ್ಕೆ ಹಾಜರಾಗುವುದೆಂದು ಈ ಮೂಲಕ ಪ್ರಕಟಿಸಿರುತ್ತದೆ. ತಾವು ಹಾಜರಾಗದಿದ್ದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಈ ಕೇಸು ಏಕಪಕ್ಷೀಯವಾಗಿ ತೀರ್ಮಾನವಾಗುತ್ತದೆ ಎಂದು ಈ ಮೂಲಕ ಪ್ರಕಟಣೆಗೊಳಿಸಿರುತ್ತದೆ.
ದಿನಾಂಕ06.03.2026ರಂದು ನನ್ನ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಆಡಳಿತ ಅಧಿಕಾರಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾಸನ
ಅರ್ಜಿದಾರರ ಪರ ವಕೀಲರು
ಕೆ. ನಾಗರಾಜ, ವಕೀಲರು, ಬಿ.ಎಂ.ರಸ್ತೆ, ಹಳೇ ಕೋರ್ಟ್ ಸರ್ಕಲ್, ಆಲೂರು

**:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು**

ಹಾಸನದ 5ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ
ಕ್ರಿ.ಮಿಸ್: 169/2026
ಅರ್ಜಿದಾರರು : 1) ಅಣ್ಣಪ್ಪ ಬಿನ್ ಲೇಟ್ ರಾಮಯ್ಯ, ಸುಮಾರು 55 ವರ್ಷ, ವೇದಾವತಿ ಗ್ರಾಮ, ದುದ್ದ ಹೋಬಳಿ, [illegible]

ಹೊಳೆನರಸೀಪುರದ ಮಾನ್ಯ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯದಲ್ಲಿ
ಸಿ.ಮಿಸ್.ನಂ.70/2026
ಅರ್ಜಿದಾರರು : 1)ಕಾಳಮ್ಮ ಕೋಂ ವೀರಭದ್ರಯ್ಯ, ಸುಮಾರು 65 ವರ್ಷ, ವಾರ್ಡ್ ನಂ. 23, ಕೇರಳಾಪುರ ರಸ್ತೆ, ಅಂಬೇಡ್ಕರ್ [illegible]

ಹಾಸನದ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯದಲ್ಲಿ
ಆರ್.ಎ.ಸಂಖ್ಯೆ : 12/2026
ಅಪೀಲುದಾರರು : ಶ್ರೀ ಕೃಷ್ಣೇಗೌಡ ಬಿನ್ ದ್ಯಾವೇಗೌಡ, ಸುಮಾರು 55 ವರ್ಷ ವಯಸ್ಸು, ವಿಳಾಸ: ಲಿಂಗಾಪುರ ಗ್ರಾಮ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, -ವಿರುದ್ಧ-
ಎದುರುದಾರರು : ಶ್ರೀ. ಕೃಷ್ಣೇಗೌಡ ಮತ್ತು ಇತರರು [illegible]



ಬೀಳ್ಕೊಡುಗೆ ಕೊಡಿಗೇನಹಳ್ಳಿಯ ನಿಸರ್ಗ ಜ್ಞಾನ ಮಂದಿರ ಶಾಲೆಯಲ್ಲಿ ಶಾರದ ಪೂಜೆ ಹಾಗೂ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಶಾಲಾ ಆಡಳಿತ ಮಂಡಳಿ, ಶಿಕ್ಷಕರು ಹಾಗೂ ಮಕ್ಕಳು ಸಾಂಪ್ರದಾಯಿಕ ವಸ್ತ್ರ ಧರಿಸಿ ಹಾಜರಿದ್ದರು.

ಗರಿಷ್ಠ 28° ಕನಿಷ್ಠ 19°

ಹೊಸ ದಿಗಂತ

ಭಾನುವಾರ 8 ಮಾರ್ಚ್ 2026

ತುಮಕೂರು

ನಗರ ಸ್ವಚ್ಛತಾ ರಾಯಭಾರಿ ಚಿತ್ರಾ | ೨

ಕೋಲಾರ ಜಿಲ್ಲೆಗೆ 16 ಕೆಪಿಎಸ್ | ೩

ಎಐ: ಗಣಿತ ಕಲಿಕೆಗೆ ಹೆಚ್ಚು ಆದ್ಯತೆ | ೪

ಕಿರುಸುದ್ದಿ

ಮಂಥನ ಕಾರ್ಯಕ್ರಮ

ತುಮಕೂರು: ನಗರದ ಕೋತಿತೋಪು ರಸ್ತೆಯ ಸಾಧನಾ ಕಾರ್ಯಾಲಯದಲ್ಲಿ ಇಂದು (ಮಾ.8)ಭಾನುವಾರ ಮಂಥನ ತುಮಕೂರು ವೈಚಾರಿಕ ವೇದಿಕೆ ವತಿಯಿಂದ ವಂದೇ ಮಾತರಂ-150 ಉಪನ್ಯಾಸ ಮತ್ತು ಸಂವಾದ ನಡೆಯಲಿದೆ. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್ ಉಪನ್ಯಾಸ ನೀಡಲಿದ್ದಾರೆ.

ಅರ್ಜಿ ಆಹ್ವಾನ

ತುಮಕೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ(ಕೆಎಸ್‌ಒಯು)ವು 2025-26ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಗೆ ಯುಜಿಸಿ ಅನುಮೋದಿತ ಶಿಕ್ಷಣ ಕ್ರಮ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಸ್ನಾತಕ/ಸ್ನಾತಕೋತ್ತರ ಕೋರ್ಸುಗಳಾದ ಬಿ.ಎ., ಬಿ.ಕಾಂ., ಬಿ.ಬಿ.ಎ., ಬಿ.ಸಿ.ಎ., ಬಿ.ಎಲ್.ಐ.ಎಸ್ಸಿ., ಬಿ.ಎಸ್.ಡಬ್ಲ್ಯೂ., ಬಿ.ಎಸ್ಸಿ, ಎಂ.ಎ., ಎಂ.ಸಿ.ಜೆ., ಎಂ.ಕಾಂ., ಎಂ.ಸಿ.ಎ., ಎಂ.ಎಸ್.ಡಬ್ಲ್ಯೂ., ಎಂ.ಎಲ್.ಐ.ಎಸ್ಸಿ., ಎಂ.ಎಸ್ಸಿ., ಎಂ.ಬಿ.ಎ., ಪಿ.ಜಿ. ಸರ್ಟಿಫಿಕೇಟ್, ಡಿಪ್ಲೊಮಾ, ಸರ್ಟಿಫಿಕೇಟ್ ಪ್ರೋಗ್ರಾಮ್ ಕೋರ್ಸುಗಳಿಗೆ ತುಮಕೂರಿನ ಕರಾಮುವಿ ಪ್ರಾದೇಶಿಕ ಕೇಂದ್ರದಲ್ಲಿ ಪ್ರವೇಶಾತಿ ಪ್ರಾರಂಭವಾಗಿದೆ. ಪ್ರಥಮ ವರ್ಷದ ಬಿ.ಎ. ಕೋರ್ಸಿಗೆ 9,240 ರೂ., ಬಿ.ಕಾಂ-9,790 ಬಿ.ಬಿ.ಎ/ಬಿ.ಎಲ್.ಐ.ಎಸ್ಸಿ/ ಎಂ.ಕಾಂ.-13,640 ರೂ., ಬಿ.ಸಿ.ಎ/ಬಿ.ಎಸ್ಸಿ-26,290 ರೂ., ಬಿ.ಎಸ್.ಡಬ್ಲ್ಯೂ-14,190 ರೂ., ಎಂ.ಎ-11,660 ರೂ., ಎಂ.ಸಿ.ಜೆ- 17,820 ರೂ., ಎಂ.ಬಿ.ಎ-32,890 ರೂ., ಎಂ.ಎಸ್ಸಿ/ಎಂ.ಸಿ.ಎ-32,670 ರೂ., ಎಂ.ಎಸ್.ಡಬ್ಲ್ಯೂ- 23,430 ರೂ., ಎಂ.ಎಲ್.ಐ.ಎಸ್ಸಿ- 19,965 ರೂ.ಗಳಾಗಿದೆ. ಯುಜಿಸಿ ನಿಯಮಾವಳಿ ಪ್ರಕಾರ ಮುಕ್ತ ವಿಶ್ವವಿದ್ಯಾನಿಲಯಗಳ ದೂರ ಶಿಕ್ಷಣದ ಪದವಿ ಮತ್ತು ಸಾಂಪ್ರದಾಯಿಕ ವಿ.ವಿ.ಗಳು ನೀಡುವ ಶಿಕ್ಷಣ ಕ್ರಮಗಳ ಪದವಿಗಳಿಗೆ ಸಮಾನವಾಗಿರುತ್ತದೆ. ಕರಾಮುವಿಯು ವಿದ್ಯಾರ್ಥಿಗಳ ಮನೆ ಬಾಗಿಲಿಗೆ ಉನ್ನತ ಶಿಕ್ಷಣ ನೀಡಲು ಪ್ರಯತ್ನಿಸುತ್ತಿದ್ದು, 10+2(ಪದವಿ ಪೂರ್ವ) ಹಾಗೂ 10+2+3(ಸ್ನಾತಕ ಪದವಿ) ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಪದವಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ದೂ.ಸಂ. 0816-2955580, 9902363902, 9886112434, 7349474339 ಸಂಪರ್ಕಿಸಬಹುದು ಎಂದು ಕರಾಮುವಿ ಪ್ರಾದೇಶಿಕ ಕೇಂದ್ರ ಪ್ರಾದೇಶಿಕ ನಿರ್ದೇಶಕರಾದ ಡಾ: ವಿಜಯ್ ಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ

ತುಮಕೂರು: ಶಿರಾ ನಗರ ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಂಡಿರುವುದರಿಂದ ಮಾರ್ಚ್ 8ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಬರಗೂರು, ದೊಡ್ಡಬಾಣಗೆರೆ, ದ್ವಾರನಕುಂಟೆ, ತಡಕಲೂರು, ಹುಲಿಕುಂಟೆ ಪಂಚಾಯ್ತಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

ಪೋಷಕರು, ಶಿಕ್ಷಕರ ಸಭೆ

ಮಧುಗಿರಿ: ಮಕ್ಕಳ ಶೈಕ್ಷಣಿಕ ಪ್ರಗತಿಯ ಬಗ್ಗೆ ಶಿಕ್ಷಕರೊಂದಿಗೆ ಪೋಷಕರು ಮುಕ್ತವಾಗಿ ಚರ್ಚಿಸಿ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಕೈಜೋಡಿಸಬೇಕು ಎಂದು ಇ.ಸಿ.ಓ. ಕಾಪುರಾಧಾಕೃಷ್ಣ ತಿಳಿಸಿದರು. ತಾಲೂಕಿನ ದೊಡ್ಡೇರಿ ಹೋಬಳಿ ದಬ್ಬೇಘಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಹಮ್ಮಿಕೊಂಡಿದ್ದ 2025-26 ನೇ ಸಾಲಿನ ಪೋಷಕರು ಮತ್ತು ಶಿಕ್ಷಕರ 3ನೇ ಮಹಾಸಭೆ ಮತ್ತು ದಾಖಲಾತಿ ಆಂದೋಲನ ಹಾಗೂ ಮಾತೃವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಾ ಪೋಷಕರು ಮಕ್ಕಳನ್ನು ಶಾಲೆಗೆ ಕಳಿಸುವುದು ಮಾತ್ರ ಜವಾಬ್ದಾರಿಯಲ್ಲ, ವಿದ್ಯೆಗೆ ಪೂರಕವಾದ ವಾತಾವರಣವನ್ನು ಮನೆಯಲ್ಲಿಯೂ ಕಲ್ಪಿಸಬೇಕು. ಶಾಲೆಗೆ ಬಂದು ಶಿಕ್ಷಕರೊಂದಿಗೆ ಮುಕ್ತವಾಗಿ ಚರ್ಚಿಸಬೇಕು. ಶಿಕ್ಷಕರ ಜೊತೆಗೆ ಪೋಷಕರ ಜವಾಬ್ದಾರಿಯು ಮಕ್ಕಳ ವಿದ್ಯಾಭ್ಯಾಸದ ಪ್ರಗತಿಗೆ ಮಹತ್ವದ್ದಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಹೆಚ್ಚಿನ ದಾಖಲಾತಿಗಳು ನಡೆಯಲಿ ಎಂದು ತಿಳಿಸಿದರು. ಮುಖ್ಯ ಶಿಕ್ಷಕ ಗಂಗಾಧರಯ್ಯ, ಶಿಕ್ಷಕ ರಾಮೇಗೌಡ ಎಸ್ ಡಿಎಂಸಿ ಅಧ್ಯಕ್ಷರಾದ ತಿಪ್ಪೇರುದ್ರಯ್ಯ, ಉಪಾಧ್ಯಕ್ಷರಾದ ಮಮತ, ಶಿಕ್ಷಕ ದಿನೇಶ್ ವೈ.ಎಸ್, ಮೀನಾಕ್ಷಿ ಇದ್ದರು.

ಶಸ್ತ್ರಚಿಕಿತ್ಸಾ ಉಚಿತ ಶಿಬಿರ ಉದ್ಘಾಟಿಸಿದ ಟಿ.ಎಂ.ಸ್ವಾಮಿ ಹೇಳಿಕೆ

ಕುಟುಂಬಕ್ಕೆ ಆಧಾರಸ್ತಂಭ ಸ್ತ್ರೀ



> ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಗೌರವಾರ್ಥವಾಗಿ, ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಉತ್ತಮ ಗುಣಮಟ್ಟದ ಶಸ್ತ್ರಚಿಕಿತ್ಸಾ ಸೇವೆಗಳನ್ನು ಒದಗಿಸುವುದು ನಮ್ಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಈ ಶಿಬಿರವು ಕೇವಲ ತಪಾಸಣೆಗೆ ಸೀಮಿತವಾಗದೆ, ಅಗತ್ಯವಿರುವವರಿಗೆ ಶಸ್ತ್ರಚಿಕಿತ್ಸೆಯ ಸೌಲಭ್ಯವನ್ನೂ ಒಳಗೊಂಡಿರುವುದು ವಿಶೇಷ.
>
> ■ **ಟಿ.ಎಂ.ಸ್ವಾಮಿ,** ವೈದ್ಯಕೀಯ ಸೇವೆಗಳ ಕಾರ್ಯದರ್ಶಿ

ತುಮಕೂರು: ಮಹಿಳೆಯು ಕುಟುಂಬದ ಆಧಾರಸ್ತಂಭ. ಆಕೆಯ ಆರೋಗ್ಯ ಇಡೀ ಕುಟುಂಬದ ಆರೋಗ್ಯಕ್ಕೆ ಸಮಾನ ಎಂದು ವೈದ್ಯಕೀಯ ಸೇವೆಗಳ ಕಾರ್ಯದರ್ಶಿಗಳಾದ ಟಿ.ಎಂ.ಸ್ವಾಮಿ ತಿಳಿಸಿದರು.

ನಗರದ ಶ್ರೀ ಸಿದ್ದಗಂಗಾ ಆಸ್ಪತ್ರೆಯಲ್ಲಿ ಸಿದ್ದಗಂಗಾ ವೈದ್ಯಕೀಯಮಹಾವಿದ್ಯಾಲಯಮತ್ತುಸಂಶೋಧನಾ ಸಂಸ್ಥೆಯು, ದಿ ಅಸೋಸಿಯೇಷನ್ ಆಫ್ ಸರ್ಜನ್ಸ್ ಆಫ್ ಇಂಡಿಯಾ ಸಹಯೋಗದೊಂದಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಶೇಷ ಸಂದರ್ಭದಲ್ಲಿ ಮಹಿಳೆಯರಿಗಾಗಿ ನಡೆದ ಬೃಹತ್ ಉಚಿತ ಶಸ್ತ್ರಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಪ್ರಾಚಾರ್ಯರಾದ ಡಾ. ಶಾಲಿನಿ ಎಂ ಮಾತನಾಡಿ ವೈದ್ಯಕೀಯ ಶಿಕ್ಷಣ ಸಂಸ್ಥೆಯಾಗಿ ನಾವು ಸಮಾಜದ ಬಗ್ಗೆ ಹೊಂದಿರುವ ಜವಾಬ್ದಾರಿಯ ಭಾಗವಾಗಿ ಈ ಕಾರ್ಯಕ್ರಮ ರೂಪಿಸಿದ್ದೇವೆ. ಈ ಶಿಬಿರದಲ್ಲಿ ಅನುಭವೀ ತಜ್ಞ ವೈದ್ಯರ ತಂಡವು ಭಾಗವಹಿಸುತ್ತಿದ್ದು ಆಯ್ದ 'ಜನರಲ್ ಸರ್ಜರಿ' ಮತ್ತು 'ಸ್ತ್ರೀರೋಗ' ವಿಭಾಗದ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸೆ ನೀಡಲಾಗುವುದು. ಮಹಿಳೆಯರು ತಮ್ಮ ಆರೋಗ್ಯದ ಸಮಸ್ಯೆಗಳನ್ನು ಮುಚ್ಚಿಡದೆ ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ನಿರ್ದೇಶಕ ಡಾ.ಎಸ್.ಪರಮೇಶ್ ಮಾತನಾಡಿ ಪ್ರತಿ ಮನೆಯೂ ಆರೋಗ್ಯವಂತ ಮನೆಯಾಗಬೇಕು ಎನ್ನುವ ಉದ್ದೇಶದಿಂದ ಸಿದ್ಧಗಂಗಾ ಆಸ್ಪತ್ರೆಯಲ್ಲಿ ಆಧುನಿಕ ಸೌಲಭ್ಯಗಳೊಂದಿಗೆ ಈ ಶಿಬಿರ ನಡೆಯುತ್ತಿದೆ. ತಜ್ಞ ವೈದ್ಯರಿಂದ ತಪಾಸಣೆ, ಸಲಹೆ, ಆಸ್ಪತ್ರೆಯ ಹಾಸಿಗೆ ಸೌಲಭ್ಯ ಹಾಗೂ ನರ್ಸಿಂಗ್ ಸೇವೆಗಳನ್ನು ಸಂಪೂರ್ಣ ಉಚಿತವಾಗಿ ನೀಡಲಾಗುತ್ತಿದ್ದು ಈಗಾಗಲೇ ಉಚಿತ ಆರೋಗ್ಯ ಸೇವೆ ನೀಡುತ್ತಿರುವ ನಮಗೆ ಈ ಶಿಬಿರ ಮತ್ತಷ್ಟು ಮಹಿಳೆಯರಿಗೆ ಆರೋಗ್ಯ ಕಾಪಾಡಲಿದೆ ಎಂದರು.

ವೈದ್ಯಕೀಯ ಅಧೀಕ್ಷಕ ಡಾ. ನಿರಂಜನ ಮೂರ್ತಿ ಬಿ, ಜನರಲ್ ಸರ್ಜರಿ ವಿಭಾಗದ ಮುಖ್ಯಸ್ಥರಾದ ಡಾ. ಚಂದ್ರಶೇಖರ್, ಸ್ತ್ರೀರೋಗ ವಿಭಾಗದ ಡಾ. ಹೇಮಾ, ಅನಾಸ್ಥೆಸಿಯಾ ವಿಭಾಗದ ಡಾ.ಶಶಿಕಿರಣ್ ಹಾಗೂ ವೈಧ್ಯಕೀಯ ಕಾಲೇಜಿನ ಉಪನ್ಯಾಸಕರು ಹಾಗೂ ಸಿಬ್ಬಂದಿ ಮುಂತಾದವರಿದ್ದರು.

ಹೇಮೆ ನೀರು ವಿಳಂಬಕ್ಕೆ ನಿರ್ಲಕ್ಷ್ಯವೇ ಕಾರಣ

ಚಿಕ್ಕನಾಯಕನಹಳ್ಳಿ: ತಾಲೂಕಿನ 26 ಕೆರೆಗಳಿಗೆ ಹೇಮಾವತಿ ನಾಲೆಯಿಂದ ನೀರು ಹರಿಸುವ ಯೋಜನೆ ವಿಳಂಬಕ್ಕೆ ಈ ಕ್ಷೇತ್ರವನ್ನಾಳಿದ ನಾಯಕರ ನಿರ್ಲಕ್ಷವೇ ಕಾರಣ ಎಂದು ಮಾಜಿ ಶಾಸಕ ಕೆ.ಎಸ್ ಕಿರಣ್‌ಕುಮಾರ್ ಕಟುವಾಗಿ ಟೀಕಿಸಿದರು.

ತಾಲೂಕಿನ ಅಂತರ್ಜಲ ಹೆಚ್ಚಳ ಹಾಗೂ ಜನಜಾನುವಾರುಗಳ ಕುಡಿಯುವ ನೀರಿಗಾಗಿ ಹೇಮಾವತಿ ನಾಲೆಯಿಂದ ತಾಲ್ಲೂಕಿನ 26 ಕೆರೆಗಳಿಗೆ ನೀರುಣಿಸುವ ಯೋಜನೆಯ ಕಾಮಗಾರಿಯನ್ನು ತಮ್ಮ ಪಕ್ಷದ ತಂಡದ ಜೊತೆಯಲ್ಲಿ ವೀಕ್ಷೀಸಿದ ನಂತರತಮ್ಮಕಾಂಗ್ರೆಸ್‌ಕಾರ್ಯಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಈಹಿಂದೆಈಯೋಜನೆಯಡಿಈಭಾಗಕ್ಕೆ ನೀರೇ ಬರುವುದಿಲ್ಲ ಎಂದು ಹೋರಾಟಗಾರರನ್ನು ಲೇವಡಿ ಮಾಡಿದ್ದ ಅಂದಿನ ಶಾಸಕರ ವರ್ತನೆಗೆ ಬೇಸರ ವ್ಯಕ್ತಪಡಿಸಿದ ಅವರು ಈ ಯೋಜನೆಯಲ್ಲಿ ನೀರು ಹರಿಯುವ ಬಗ್ಗೆ ಖಾತ್ರಿಗಾಗಿ ಸರ್ವೆ ಮಾಡಿಸಲುಹಾಗೂಯೋಜನೆಯಕಾರ್ಯಗತಕ್ಕೆ ಅನುದಾನ ಬಿಡುಗಡೆಯಲ್ಲಿ ನಾನು ಸರ್ಕಾರದ ಜೊತೆಯಲ್ಲಿ ನಿಂತು ಕಾರ್ಯನಿರ್ವಹಿಸಿದ್ದೇನೆ. ಆದರೆ ಅಂದಿನ ಶಾಸಕರು ಸರ್ವೆಗಾಗಿ ನಿಯೋಜನೆಗೊಂಡ ಅಧಿಕಾರಿಗೆ ಬೆದರಿಕೆಯೊಡ್ಡಿದ್ದರೆಂದರು.

ಕುಂಟುತ್ತಾ ಸಾಗಿದ ಕಾಮಗಾರಿ: 2013ರಿಂದ ಹಿಡಿದು ಈವರೆಗೂ ಈ ಯೋಜನೆ ಕುಂಟುತ್ತಾ ಸಾಗಿ ಜನರ ತಾಳ್ಮೆಗೆಡಿಸುವಲ್ಲಿ ಆ ಅವಧಿಯಲ್ಲಿದ್ದ ಶಾಸಕರುಗಳೇ ಹೊಣೆಗಾರರಾಗುತ್ತಾರೆ. ನಾಲ್ಕುಬಾರಿ ಗೆದ್ದ ಈ ಇಬ್ಬರಲ್ಲಿ ಒಬ್ಬರು ಸಚಿವರರಾಗಿದ್ದರೂ ರೈತರ ಆದ್ಯತೆಯನ್ನು ಮರೆತು, ಎತ್ತಿನ ಹೊಳೆ ಅನುದಾನದ250 ಕೋಟಿರೂ.ಗಳನ್ನುಪೈಪ್‌ಲೈನ್‌ನ್ನುಕೆರೆಗಳಿಗೆ ಹದ್ದಿಸಿ ತುಕ್ಕುಹಿಡಿಸಿ ಹೋಗಿದ್ದಾರೆ ಹೊರತು ಒಂದು ಹನಿ ನೀರು ಹರಿಸಿಲ್ಲವೆಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸಿ.ಡಿ. ಚಂದ್ರಶೇಖರ್, ಪಿ.ಟಿ. ಚಿಕ್ಕಣ್ಣ, ಮುಖಂಡರಾದ ಪಂಚಾಕ್ಷರಿ ಎಚ್.ಬಿ. ಎಂ.ಎಂ. ಜಗದೀಶ್, ಶರತ್, ತೀರ್ಥಪುರ ವಾಸು ಮುಂತಾದವರಿದ್ದರು. ಕೆ.ಜಿ. ಕೃಷ್ಣೇಗೌಡ ಸ್ವಾಗತಿಸಿದರು.



ವಿವಿಧ ಕಾಮಗಾರಿಗಳಿಗೆ ಶಾಸಕ ಭೂಮಿಪೂಜೆ



» ಅರ್ಹ 19 ಫಲಾನುಭವಿಗಳಿಗೆ ಕೃಷಿ ಪರಿಕರ ವಿತರಣೆ

ವೈ.ಎನ್.ಹೊಸಕೋಟೆ: ಹೋಬಳಿಯ ವಿವಿಧ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಚ್.ವಿ.ವೆಂಕಟೇಶ್ ಶನಿವಾರ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು. ಹೋಬಳಿ ಕೇಂದ್ರದ ಅಂಬೇಡ್ಕರ್ ವೃತ್ತದಿಂದ ವಾಲ್ಮೀಕಿ ವೃತ್ತದ ಬಸ್ ನಿಲ್ದಾಣದವರೆಗೆ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣದ 50ಲಕ್ಷ ರೂ.ವೆಚ್ಚದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.

ಜೋಡಿ ಅಚ್ಚಮ್ಮನಹಳ್ಳಿಯಿಂದ ಮೇಗಳಪಾಳ್ಯದವರೆಗೆ ರಸ್ತೆ ಅಭಿವೃದ್ಧಿಗೆ ಒಂದು ಕೋಟಿ ರೂ.ವೆಚ್ಚದ ಕಾಮಗಾರಿ, ಜಾಲೋಡು ಗ್ರಾಮದ ಶ್ರೀರಾಮ ದೇವಸ್ಥಾನದ ಬಳಿ 10 ಲಕ್ಷ ರೂ.ವೆಚ್ಚದ ಅಭಿವೃದ್ಧಿ ಕಾಮಗಾರಿ, ಅದೇ ಗ್ರಾಮದಲ್ಲಿ 15 ಲಕ್ಷ ರೂ.ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ, ತಿಪ್ಪಗಾನಹಳ್ಳಿ ಇಂದ ಬಲ್ಲೇನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಅಭಿವೃದ್ಧಿಗೆ 50 ಲಕ್ಷ ರೂ ವೆಚ್ಚದ ಕಾಮಗಾರಿ, ಬೂದಿಬೆಟ್ಟ ಗ್ರಾಮದಿಂದ ರಾಚಮಾರನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಡಾಂಬರೀಕರಣಕ್ಕಾಗಿ 50 ಲಕ್ಷ ರೂ. ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಿದರು. ಸಣ್ಣ ನೀರಾವರಿ ಇಲಾಖೆಯಲ್ಲಿ ಕೊಳವೆ ಬಾವಿ ಅನುಕೂಲ ಪಡೆದಿದ್ದ ಪಾವಗಡ ತಾಲೂಕಿನ ಅರ್ಹ 19ಫಲಾನುಭವಿಗಳಿಗೆ ಜಾಲೋಡು ಗ್ರಾಮದಲ್ಲಿ ಪಂಪು ಮೋಟಾರ್ ಮತ್ತು ವಿದ್ಯುತ್ ಪರಿಕರಗಳನ್ನು ವಿತರಿಸಿದರು. ಅದೇ ಗ್ರಾಮದಲ್ಲಿ ನೂತನ ಹಾಲು ಶೇಖರಣಾ ಘಟಕವನ್ನು ಉದ್ಘಾಟಿಸಿದರು

ತುಮುಲ್ ನಿರ್ದೇಶಕ ಚಂದ್ರಶೇಖರ ರೆಡ್ಡಿ, ತಾಲೂಕು ಪಂಚಾಯಿತಿ ಇಒ ಮಧುಸೂದನ್ ಬಿಇಒ ರೇಣುಕಮ್ಮ ಜಿ.ಪಂ. ಇಂಜಿನಿಯ ಸುರೇಶ್, ಬಸಲಿಂಗಪ್ಪ ಗುತ್ತಿಗೆದಾರರಾದ ಈರಾರೆಡ್ಡಿ, ದಿವಾಕರಪ್ಪ, ಮುಖಂಡರಾದ ಜೆ.ಪಾಲಯ್ಯ, ಮುರುಳಿಧರ, ಎನ್.ಆರ್. ಅಶ್ವತ್ ಕುಮಾರ್, ಎಸ್.ಟಿ. ನಾಗರಾಜು ಟಿ.ಉಮೇಶ್‌ಎಚ್.ಕೆ. ಶ್ರೀನಿವಾಸ್ ಜಗನ್ನಾಥ್ ಜಿ.ರಂಗಪ್ಪ ಬೋರ್ವೆಲ್ ನಾಗೇಶ್, ಎಲ್. ಕೆ.ರಾಘವೇಂದ್ರ, ಶಂಷುದ್ದೀನ್,ಇತರರು ಇದ್ದರು.

ಶಿಕ್ಷಣ ಮೌಲ್ಯಾಧಾರಿತವಾಗಲಿ: ಡಾ.ಸಿ.ರಾಜಣ್ಣ

ಮಧುಗಿರಿ: ಶಿಕ್ಷಣ ಸೈದ್ಧಾಂತಿಕವಾಗದೇ ಮೌಲ್ಯಾಧಾರಿತವಾಗಲಿ. ಪದವಿ ಪ್ರಮಾಣಪತ್ರ ಪಡೆಯುವುದಷ್ಟೇ ಗುರಿಯಾಗದೇ, ನಡೆ ನುಡಿಯಲ್ಲಿ ನೈತಿಕತೆ ರೂಢಿಸಿಕೊಳ್ಳಬೇಕೆಂದು ನಿವೃತ್ತ ಪ್ರಾಂಶುಪಾಲ ಡಾ.ಸಿ.ರಾಜಣ್ಣ ಅಭಿಪ್ರಾಯಪಟ್ಟರು. ಪಟ್ಟಣದ ಶ್ರೀ ಟಿವಿವಿ ಬಿ.ಎಡ್.ಕಾಲೇಜಿನಲ್ಲಿ ಏರ್ಪಡಿಸಿದ್ದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಮತ್ತು ಪ್ರತಿಭಾ ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿ ಪದವಿ ಪ್ರಮಾಣತ್ರಗಳಿಗಿಂತ ಜೀವನ ಪರೀಕ್ಷೆಯಲ್ಲಿ ಯಶಸ್ವಿಯಾಗಿ ಸಮಾಜದ ಸತ್ಪ್ರಜೆಗಳಾಗಬೇಕೆಂದು ತಿಳಿಸಿದರು.

ವಿಶೇಷ ಆಹ್ವಾನಿತರಾಗಿ ಪ್ರೊ.ಮಲನ ಮೂರ್ತಿ ಮಾತನಾಡಿ ಅಕ್ಷರ ವಿದ್ಯಾರ್ಥಿಗಳ ಅಂತಕರಣ ಅರಳಿಸಿ ಆತ್ಮವಿಶ್ವಾಸ ಹೆಚ್ಚಿಸಿ ಅರಿವು ವಿಸ್ತರಿಸಿ ಪೋಷಕರ ಮತ್ತು ಗುರುಹಿರಿಯರ ನೆರವು ಸಹಕಾರಕ್ಕೆ ಋಣಿಯಾಗಲಿ ಎಂದರು. ಟಿವಿವಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಮಹಂತೇಶ ಹೊಸಮನಿ ಕಾರ್ಯಕ್ರಮಕ್ಕೆ ಯಶಸ್ಸು ಕೋರಿದರು. ಉಪನ್ಯಾಸಕಿ ಬಿ.ಜೆ.ಸೌಮ್ಯ ಮಾತನಾಡಿ ಮಹಿಳಾ ಶಿಕ್ಷಣಕ್ಕೆ ಹೊತ್ತು ನೀಡಬೇಕೆಂದು ಕರೆ ನೀಡಿದರು. ದೈ.ಶಿ ನಿರ್ದೇಶಕ ಎಂ.ಆರ್. ವೆಂಕಟೇಶಮೂರ್ತಿ ಮಾತನಾಡಿ ಮೈ ಮನಸ್ಸು ಕೂಡಿ ಬೆಳೆಯಬೇಕೆಂದರು.ಗ್ರಂಥಪಾಲಕ ನಾಗಭೂಷಣ ಮತ್ತು ಗಣಕ ಯಂತ್ರ ನಿರ್ವಾಹಕಿ ಎಂ.ಎಸ್.ಜ್ಯೋತಿ ಉಪಸ್ಥಿತರಿದ್ದರು.



» ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ, ಪ್ರತಿಭಾ ಪ್ರದರ್ಶನ

ಅಧ್ಯಕ್ಷತೆವಹಿಸಿ ಮಾತನಾಡಿದ ಪ್ರಾಂಶುಪಾಲ ಡಾ.ಶಿವಕುಮಾರಸ್ವಾಮಿ.ಎಸ್ ಶಿಕ್ಷಣ-ಶಿಕ್ಷಕ ನಿತ್ಯ ನಿರಂತರ ಜಗದ ಬೆಳಕು, ಗುರು-ಶಿಷ್ಯರ ಸಂಬಂಧ ಸ್ನೇಹ ಸೌಹಾರ್ದ ಮೈತ್ರಿ ಭಾವದಿಂದ ಕೂಡಿರಬೇಕೆಂದು ತಿಳಿಸಿದರು. ಹಾಗೂ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು. ಶ್ವೇತಾ ಪ್ರಾರ್ಥಿಸಿ,ಅಖಿಲಾ ಸ್ವಾಗತಿಸಿ,ಜಯಪ್ರಕಾಶ್ ಮತ್ತು ಸಹನಾ ನಿರೂಪಿಸಿ ನಾಗಲಕ್ಷ್ಮಿ ವಂದಿಸಿದರು.

ಮಾ.18ರಿಂದ ಏ.2ರವರೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ: ನಿಷೇಧಾಜ್ಞೆ

ತುಮಕೂರು: ಜಿಲ್ಲೆಯಾದ್ಯಂತ 131 ಪರೀಕ್ಷಾ ಕೇಂದ್ರಗಳಲ್ಲಿ ಮಾರ್ಚ್ 18 ರಿಂದ ಏಪ್ರಿಲ್ 2ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ನಡೆಯಲಿದ್ದು, ಪರೀಕ್ಷೆಯನ್ನು ಯಾವುದೇ ಲೋಪದೋಷವಿಲ್ಲದಂತೆ ಹಾಗೂ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ನಡೆಸಲು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀ. ವ್ಯಾಪ್ತಿಯೊಳಗಿನ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಶುಭ ಕಲ್ಯಾಣ್ ಅವರು ಆದೇಶ ಹೊರಡಿಸಿದ್ದಾರೆ. ನಿಷೇಧಾಜ್ಞೆಯು ಮಾರ್ಚ್ 18 ರಿಂದ ಏಪ್ರಿಲ್ 2ರವರೆಗೆ(ಸರ್ಕಾರಿ ರಜೆ ಮತ್ತು ಪರೀಕ್ಷೆ ನಡೆಯದೆ ಇರುವ ದಿನಗಳನ್ನು ಹೊರತುಪಡಿಸಿ) ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಜಾರಿಯಲ್ಲಿರುತ್ತದೆ. ಜಿಲ್ಲೆಯಲ್ಲಿ ಪ್ರಶ್ನೆ ಪತ್ರಿಕೆಗಳ ಸೋರಿಕೆ ಮತ್ತು ಪರೀಕ್ಷಾ ಅಕ್ರಮಗಳಿಗೆ ಉತ್ತೇಜನ ನೀಡುವಂತಹ ವ್ಯಕ್ತಿಗಳು ಕಂಡುಬಂದಲ್ಲಿ ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 2023ರಡಿ ಅಗತ್ಯ ಮುಂಜಾಗ್ರತಾ ಕ್ರಮ ಕ್ರಮಕೈಗೊಳ್ಳಲಾಗುವುದು ಎಂದು ಸೂಚಿಸಿದ್ದಾರೆ.

ಮಹಿಳಾ ಉತ್ಪನ್ನಗಳ ಪ್ರದರ್ಶನ

ತುಮಕೂರು: ವಿಶ್ವ ಮಹಿಳಾ ದಿನಾಚರಣೆ ಹಾಗೂ ಯುಗಾದಿ ಪ್ರಯುಕ್ತ ಮಿಲನ್ ಸಂಸ್ಥೆ ನಗರದ ಅಮಾನಿಕೆರೆಯ ಗಾಜಿನ ಮನೆಯಲ್ಲಿ ಮಹಿಳಾ ಸ್ವಸಹಾಯ ಸಂಘಗಳು ಉತ್ಪಾದಿಸಿದ ವಸ್ತುಗಳ ಪ್ರದರ್ಶನ ಹಾಗೂ ಮಾರಾಟದ ಎರಡು ದಿನಗಳ ವಸ್ತುಪ್ರದರ್ಶನ ಶನಿವಾರ ಆರಂಭವಾಯಿತು.

ವಿವಿಧ ಮಹಿಳಾ ಸ್ವಸಹಾಯ ಸಂಘಗಳು ತಯಾರಿಸಿರುವ ಗೃಹೋಪಯೋಗಿ ವಸ್ತು ಗಳು, ಅಡುಗೆ ಸಾಮಾಗ್ರಿ, ಅಲಂಕಾರಿಕ ಪದಾರ್ಥ ಗಳು, ಸೀರೆ ಸೇರಿದಂತೆ ಮಕ್ಕಳ ಮತ್ತು ಮಹಿಳೆಯರ ಉಡುಪುಗಳು ವಸ್ತು ಪ್ರದರ್ಶನದ ಆಕರ್ಷಣೆಯಾಗಿವೆ. ರಿಯಾಯಿತಿ ದರದ ಮಾರಾಟ ವ್ಯವಸ್ಥೆ ಮಾಡಲಾಗಿದೆ. ಮಿಲನ್ ಸಂಸ್ಥೆ ಮುಖ್ಯಸ್ಥೆ ಪೂಜಾ ಮಾತನಾಡಿ, ವಿಶ್ವ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸಲು, ಅವರ ಉತ್ಪನ್ನಗಳನ್ನು ಗ್ರಾಹಕರಿಗೆ ಪರಿಚಯಿಸಲು ಹಾಗೂ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಈ ವಸ್ತುಪ್ರದರ್ಶನ ಏರ್ಪಡಿಸಲಾಗಿದೆ ಎಂದು ಹೇಳಿದರು. ವಸ್ತುಪ್ರದರ್ಶನ ಉದ್ಘಾಟನಾ ಸಮಾರಂಭದಲ್ಲಿ ಇನ್ನರ್ ವ್ಹೀಲ್ ಸಂಸ್ಥೆ ಅಧ್ಯಕ್ಷೆ ಮಂಜುಳಾ ಲೋಕೇಶ್, ಐಕ್ಯ ಫೌಂಡೇಶನ್ ಅಧ್ಯಕ್ಷೆ ರೇಖಾ ಕುಮಾರ್, ಟಿ.ಎಸ್.ಲಲಿತಾ ಮಹೇಶ್, ಸದಸ್ಯೆ ಲೀಲಾವತಿ ಅಶೋಕ್ ಭಾಗವಹಿಸಿದ್ದರು.



» ಗಾಜಿನಮನೆಯಲ್ಲಿ ವಿಲನ್ ಸಂಸ್ಥೆಯಿಂದ ಪ್ರದರ್ಶನ ಆಯೋಜನೆ

ವಾತ್ಸಲ್ಯ ಮನೆ ಹಸ್ತಾಂತರ

ಹುಳಿಯಾರು: ಹೋಬಳಿಯ ದಬ್ಬಗುಂಟೆ ನಿವಾಸಿ ಅಸಹಾಯಕ ಹಾಗೂ ದೃಷ್ಟಿ ಹೀನರಾದ ಶಿವಣ್ಣ ನವರಿಗೆ ಜ್ಞಾನವಿಕಾಸ ಮಹಿಳಾ ಕಾರ್ಯಕ್ರಮದ ಅಧ್ಯಕ್ಷರಾಗಿರುವ ಹೇಮಾವತಿ ಅಮ್ಮನವರ ವಾತ್ಸಲ್ಯ ಕಾರ್ಯಕ್ರಮದಲ್ಲಿ 1.35.000 ರೂ.ವೆಚ್ಚದಲ್ಲಿ ನಿರ್ಮಿಸಲಾದ ವಾತ್ಸಲ್ಯ ಮನೆ ಹಸ್ತಾಂತರ ಮಾಡಲಾಯಿತು.

ಧರ್ಮಸ್ಥಳ ಯೋಜನೆಯ ಜಿಲ್ಲಾ ನಿರ್ದೇಶಕರಾದ ಪ್ರವೀಣ್ ಕುಮಾರ್ ಮಾತನಾಡಿ ನಮ್ಮ ಸ್ವ ಸಹಾಯ ತಂಡದ ಮಹಿಳಾ ಸದಸ್ಯರು ಪ್ರತಿ ವರ್ಷ ಪ್ರಗತಿ ನಿಧಿ ಪಡೆದು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಹಾಗೂ ಸ್ವಉದ್ಯೋಗಕ್ಕಾಗಿ ಸದ್ಬಳಕೆ ಮಾಡಿಕೊಂಡು ಕಾಲಕಾಲಕ್ಕೆ ಮರುಪಾವತಿ ಮಾಡುತ್ತಿದ್ದಾರೆ ಎಂದರು. ಗ್ರಾಮ ಪಂಚಾಯಿತಿ ಸದಸ್ಯರಾದ ಚೇತನ್, ಸಾಮಾಜಿಕ ಹೋರಾಟಗಾರ ರವಿಕುಮಾರ್, ಲೋಕೇಶ್, ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ ಗ್ರಾಮಾಭಿವೃದ್ಧಿ ಯೋಜನೆಯಿಂದ ಗ್ರಾಮ ಹಾಗೂ ಕುಟುಂಬಗಳ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ಇದು ದೇಶಕ್ಕೆ ಮಾದರಿಯಾದ ಯೋಜನೆಯಾಗಿದೆ ಎಂದರು. ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಲಕ್ಷ್ಮಿಕಾಂತ್, ಯೋಜನಾಧಿಕಾರಿಗಳಾದ ರಾಮಚಂದ್ರ, ವಲಯದ ಮೇಲ್ವಿಚಾರಕರಾದ ಶಕುಂತಲಾ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸುನಿತಾ ಭಾಗವಹಿಸಿದ್ದರು.

ಆಟೋ ಚಾಲಕ, ಮಾಲಿಕರ ಒಕ್ಕೂಟದಿಂದ ಮನವಿ ಸಲ್ಲಿಸಲು ನಿರ್ಧಾರ

ಆನ್‌ಲೈನ್ ಟ್ಯಾಕ್ಸಿಗಳಿಗೆ ಅವಕಾಶ ನೀಡದಿರಿ

ತುಮಕೂರು: ಆಟೋ ಚಾಲಕರು ಮತ್ತು ಮಾಲಕರಿಗೆ ಡಿಸ್‌ಪ್ಲೇ ಕಾರ್ಡು ನೀಡುವುದು, ಆನ್‌ಲೈನ್ ಟ್ಯಾಕ್ಸಿಗಳಿಗೆ ಅವಕಾಶ ನೀಡಬಾರದು, ಎಲ್ಲಾ ಚಾಲಕರಿಗೆ ಯೂನಿಫಾರಂ ಕಡ್ಡಾಯ ಸೇರಿದಂತೆ ಹಲವು ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ತುಮಕೂರು ಜಿಲ್ಲಾ ಆಟೋ ಚಾಲಕರು ಮತ್ತು ಮಾಲೀಕರಒಕ್ಕೂಟದವತಿಯಿಂದಸಲ್ಲಿಸಲಾಗುವುದು ಎಂದು ಒಕ್ಕೂಟದ ಮುಖಂಡರಾದ ರುದ್ರಾರಾಧ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಟೋ ಡಿಸ್‌ಪ್ಲೇ ಕಾರ್ಡುಗಳನ್ನು 2010ರಿಂದ 2016ರವರೆಗೆ ಜಿಲ್ಲಾ ಸಾರಿಗೆ ಪ್ರಾಧಿಕಾರದಿಂದ ನೀಡಲಾಗುತ್ತಿತ್ತು.

ಆದರೆ 2016ರ ನಂತರ ನಿಲ್ಲಿಸಿದ ಕಾರಣ, ತುಮಕೂರು ನಗರದಲ್ಲಿ 6000 ಸಾವಿರ ಆಟೋಗಳಿಗೆ ಪರ್ಮಿಟ್ ನೀಡಿದರೆ, 10 ಸಾವಿರಕ್ಕೂ ಹೆಚ್ಚು ಆಟೋಗಳು ಸಂಚರಿಸುತ್ತಿವೆ.

ಒಕ್ಕೂಟದ ಮುಖಂಡ ಫೈರೋಜ್ ಮಾತನಾಡಿ, ತುಮಕೂರು ಜಿಲ್ಲೆಯಲ್ಲಿ ಆಟೋ ಡೀಲರ್‌ಗಳ ಅಟ್ಟಹಾಸ ಮೀತಿ ಮೀರಿದೆ. ಆರ್‌ಬಿಐ ನಿಯಮದ ಪ್ರಕಾರ ಲಕ್ಷ ರೂ.ಗೆ ಡೀಲರ್ 1.60 ರೂ. ಮಾತ್ರ ಬಡ್ಡಿ ಪಡೆಯಬೇಕು. ಆದರೆ ಡೀಲರ್‌ಗಳು ಎರಡು ರೂ. ಪಡೆಯುತ್ತಿದ್ದಾರೆ.

ಮತ್ತೊಬ್ಬ ಮುಖಂಡ ರುದ್ದೇಶ್, ತುಮಕೂರು ಜಿಲ್ಲಾ ಆಟೋ ಚಾಲಕರು ಮತ್ತು ಮಾಲೀಕರ ಒಕ್ಕೂಟದ ಪದಾಧಿಕಾರಿಗಳಾದ ರುದ್ರೇಶ್.ಎಂ.ಕೆ, ರುದ್ರಾರಾಧ್ಯ, ಮೋಹನ್ ಕುಮಾರ್, ಫೈರೋಜ್, ರವಿಕಿರಣ್, ಅನಿಲ್ ಕುಮಾರ್, ಶಾಂತಕುಮಾರ್, ರವಿಪ್ರಕಾಶ್, ರಂಗಪ್ಪ, ಭದ್ರೇಶ್, ತಿಪ್ಪೇಸ್ವಾಮಿ, ನಾಗಣ್ಣ ಮತ್ತಿತರರು ಪಾಲ್ಗೊಂಡಿದ್ದರು.



> ಹೊರಗಿನಿಂದ ಬರುವ ಆಟೋ ಚಾಲಕರು, ಮಾಲಿಕರು ಡ್ರಗ್ಸ್, ಮದ್ಯಪಾನದಂತಹ ಚಟಗಳಿಗೆ ದಾಸರಾಗಿ, ನಿಜವಾಗಿಯೂ ಆಟೋ ದುಡಿಮೆಯನ್ನೇ ನಂಬಿ ಬದುಕುತ್ತಿರುವ ಆಟೋ ಚಾಲಕರು ಮತ್ತು ಮಾಲೀಕರಿಗೆ ಕೆಟ್ಟ ಹೆಸರು ತರುತ್ತಿದ್ದಾರೆ. ಇದರ ಬಗ್ಗೆ ಗೊತ್ತಿದ್ದರೂ ಆರ್‌ಟಿಒ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದಾರೆ.
>
> ■ **ರುದ್ರಾರಾಧ್ಯ,** ಒಕ್ಕೂಟದ ಮುಖಂಡ

ಕಿತ್ತನಾಗಮಂಗಲದಲ್ಲಿ ಕೆರೆ ಮಣ್ಣು ತೆಗೆಯುವ ವಿಚಾರಕ್ಕೆ ವಿವಾದ

ಕೆರೆ ಮಣ್ಣು ವಿಚಾರದಲ್ಲಿ ರೈತರ ಪರ: ಶಾಸಕ

ಕುಣಿಗಲ್: ನನ್ನ ಅಕ್ಕಪಕ್ಕದವರೇ ಆಗಲಿ ನನ್ನ ತಮ್ಮನೇ ಆಗಲಿ ರೈತರ ವಿಚಾರ ಬಂದಾಗ ನಾನು ರೈತರ ಪರ, ರೈತರ ತೀರ್ಮಾನಕ್ಕೆ ನಾನು ಬದ್ಧನಾಗಿದ್ದೇನೆ. ನಾನು ರೈತರ ಜತೆ ಇದ್ದೇನೆ. ಕಾರ್ಖಾನೆಯವರು ಗ್ರಾಮಸ್ಥರೊಂದಿಗೆ ಒಪ್ಪಂದ ಮಾಡಿಕೊಂಡು ಮಣ್ಣು ತೆಗೆದುಕೊಂಡರೆ ನನ್ನ ಅಭ್ಯಂತರವಿಲ್ಲ, ಇಷ್ಟು ವರ್ಷ ಬೇರೆ ಬೇರೆ ಪಕ್ಷದ ಮುಖಂಡರು ಕಾರ್ಖಾನೆಗೆ ಅಕ್ಕಪಕ್ಕದ ಕೆರೆಗಳಿಂದ ಮಣ್ಣನ್ನು ಹೊಡೆದಿದ್ದಾರೆ. ಈಗ ನಮ್ಮವರಿಗೆ ಟೆಂಡರ್ ಆಗಿರಬಹುದು ಆಗಂದ ಮಾತ್ರಕ್ಕೆ ಕಾನೂನು ಮೀರಿ ಯಾರೂ ನಡೆದುಕೊಳ್ಳಬಾರದು. ಸರ್ಕಾರದ ನಿಯಮದಂತೆ ನಾನು ನಡೆಯುತ್ತೇನೆ ಎಂದು ಶಾಸಕ ಡಾ.ರಂಗನಾಥ್ ತಿಳಿಸಿದರು.

ತಾಲೂಕು ಕಚೇರಿಯಲ್ಲಿ ಶನಿವಾರ ತಾಲೂಕಿನ ಕಸಬಾ ಹೋಬಳಿ ಕಿತ್ತನಾಗಮಂಗಲ ಗ್ರಾಮದಲ್ಲಿ ಕೆರೆಯ ಮಣ್ಣು ತೆಗೆಯುವ ವಿಚಾರವಾಗಿ ವಿವಾದ ಉಂಟಾದ ಹಿನ್ನೆಲೆಯಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿ, ರೈತರು ತಮ್ಮ ತೋಟಗಳಿಗೆ ಮಣ್ಣ ತೆಗೆದುಕೊಳ್ಳುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಕಾರ್ಖಾನೆಗೆ ಮತ್ತು ಬೇರೆ ಯಾರೇ ಮಣ್ಣನ್ನು ತೆಗೆದುಕೊಳ್ಳಲು ನನ್ನ ಸಹಮತವಿಲ್ಲ ಎಂದರು. ವಿನರ್ ಬರ್ಗರ್ ಸಂಸ್ಥೆಯ ಮುಖ್ಯಸ್ಥ ಹೇಮಂತ್ ಕುಮಾರ್, ತಹಸೀಲ್ದಾರ್, ಕರಿಯಾ ನಾಯಕ್, ಡಿವೈಎಸ್ಪಿ ಓಂಪ್ರಕಾಶ್, ಇನ್ಸ್‌ಪೆಕ್ಟರ್ ಮಾಧ್ಯಾನಾಯಕ್, ಎಇಇ ತಿಪ್ಪೇಸ್ವಾಮಿ, ಸಹಾಯಕ ಇಂಜಿನಿಯರ್ ಜ್ಞಾನಮೂರ್ತಿ, ಜೆಡಿಎಸ್ ಮುಖಂಡ ಬಾಂಬೆ ಶಿವಣ್ಣ, ಗಂಗಾಧರ್, ಪರಶುರಾಮ್, ಬ್ರಹ್ಮ, ರಂಗಸ್ವಾಮಿ, ಕುಮಾರ್, ಶಿವಣ್ಣ, ರೈತ ಮುಖಂಡರಾದ ಆನಂದ್ ಪಟೇಲ್, ಅನಿಲ್, ಕರಿಗೌಡ, ಮುನಿಯಪ್ಪ ಇದ್ದರು.



ರೈತರ ವಿರೋಧ

ವಿವಿಧ ರೈತ ಸಂಘಟನೆಗಳ ಮುಖಂಡರು ಮಾತನಾಡಿ ರೈತರು ತಮ್ಮ ಹೊಲ ಗದ್ದೆ ತೋಟಗಳಿಗೆ ಕೆರೆಯ ಮಣ್ಣನ್ನ ಹೊಡೆದು ಕೊಳ್ಳುವುದಕ್ಕೆ ಯಾರು ಅಡ್ಡಿಪಡಿಸಬಾರದು, ವೀನರ್ ಬರ್ಗರ್ ಕಾರ್ಖಾನೆಯವರಿಗೆ ಮಣ್ಣನ್ನ ಗುತ್ತಿಗೆ ನೀಡುವಾಗ ಟೆಂಡರ್ ಪ್ರಕ್ರಿಯೆಯಲ್ಲಿ ಗೋಲ್ಮಾಲ್ ಆಗಿದೆ. ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿದ್ದರೆ ರೈತರು ವಿರೋಧ ವ್ಯಕ್ತಪಡಿಸುತ್ತಿದ್ದರು.

ಕಿರುಸುದ್ದಿ

ನಾಳೆ ನೀರು ಸರಬರಾಜುವಿನಲ್ಲಿ ವ್ಯತ್ಯಯ

ರಾಮನಗರ: ರಾಮನಗರ ನಗರಕ್ಕೆ ನೆಟ್ಕಲ್ ಜಲಾಶಯ ಮೂಲದಿಂದ ಬೆಂಗಳೂರು ಜಲಮಂಡಳಿಯ 5ನೇ ಹಂತದ ಯೋಜನೆಯಡಿ ಕಾವೇರಿಯ ಕಚ್ಚಾ ನೀರು ಪೂರೈಕೆ ಮಾಡಿ, ಟಿ.ಕೆ. ಹಳ್ಳಿಯಲ್ಲಿರುವ ಶುದ್ಧೀಕರಣ ಘಟಕದಿಂದ ಶುದ್ಧೀಕರಿಸಿದ ನೀರು ಸರಬರಾಜು ಮಾಡಲಾಗುತ್ತಿದೆ. ಟಿ.ಕೆ. ಹಳ್ಳಿಯಿಂದ ಅರಳಾಳುಸಂದ್ರ, ಮಧ್ಯಂತರ ಪಂಪಿನ ಮನೆಯವರೆಗಿನ ಕೊಳವೆ ಮಾರ್ಗದಲ್ಲಿ ವಿವಿಧ ಕ್ರಿಯಾತ್ಮಕ ವಾಲ್ವ್‌ಗಳನ್ನು ಫೆ.20ರಂದು ಅಳವಡಿಸಲಾಗಿತ್ತು. ಉಳಿದಂತೆ ಅರಳಾಳುಸಂದ್ರದಿಂದ ರಾಮನಗರ ನಗರದವರೆಗಿನ ವಾಲ್ವ್‌ಗಳನ್ನು ಅಳವಡಿಸುವ ಕಾಮಗಾರಿಗಳನ್ನು ಮಾ.9ರಂದು ತುರ್ತಾಗಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ಆದ್ದರಿಂದ ಮಾ.9 ಹಾಗೂ 10ರಂದು ಎರಡು ದಿನಗಳಂದು ರಾಮನಗರ ನಗರಕ್ಕೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಿರುವುದರಿಂದ, ಗ್ರಾಹಕರು ನೀರನ್ನು ಶೇಖರಿಸಿ ಮಿತವಾಗಿ ಉಪಯೋಗಿಸಬೇಕು ಹಾಗೂ ರಾಮನಗರ ನಗರಸಭೆ ಮತ್ತು ಜಲಮಂಡಳಿಯೊಂದಿಗೆ ಸಹಕರಿಸುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಚನ್ನಪಟ್ಟಣ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಪೂರ್ವಭಾವಿ ಸಭೆ

ರಾಮನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಾ.28ರಂದು ಶ್ರೀ ಅಗ್ನಿಬನ್ನಿರಾಯ ಜಯಂತಿ ಆಚರಣೆ ಸಂಬಂಧ ಮಾ.09ರಂದು ಬೆಳಿಗ್ಗೆ 10.30ಕ್ಕೆ ನಗರದ ಕಂದಾಯ ಭವನದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 409ರಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ. ಈ ಸಂಬಂಧ ಜಯಂತಿ ಆಚರಣೆಯ ರೂಪುರೇಷೆಗಳ ಕುರಿತು ಚರ್ಚಿಸಲು ಜಿಲ್ಲೆಯ ಎಲ್ಲಾ ಸಮುದಾಯದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಮುಖಂಡರು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಪೂರ್ವಭಾವಿಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ವ ಸದಸ್ಯರ ಸಭೆ

ಕನಕಪುರ: ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಕನಕಪುರ ತಾಲೂಕು ಸರ್ವಸದಸ್ಯರ ಸಭೆಯನ್ನು ನೂತನ ತಾಲೂಕು ಸಂಚಾಲಕರಾಗಿ ಶಿವಮ್ಮ ಆಯ್ಕೆ ಮಾಡಲಾಯಿತು. ನಗರದ ಬಸವೇಶ್ವರ ದೇವಸ್ಥಾನದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಪಕ್ಷದ ಸಂಘಟನೆ ಬಲಪಡಿಸುವುದು, ಜನಸಂಪರ್ಕ ಅಭಿಯಾನಗಳನ್ನು ಮತ್ತಷ್ಟು ವೇಗಗೊಳಿಸುವುದು ಹಾಗೂ ಮುಂಬರುವ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ನಿಯೋಜಿಸುವ ಕುರಿತು ವಿಸ್ತತವಾಗಿ ಚರ್ಚಿಸಲಾಯಿತು. ಹಳೆಯ ತಾಲೂಕು ಸಮಿತಿಯನ್ನು ವಿಸರ್ಜಿಸಿ ನೂತನ ತಾಲೂಕು ಸಮಿತಿಯನ್ನು ರಚಿಸಲಾಯಿತು. ತಾಲೂಕು ಸಂಚಾಲಕರನ್ನಾಗಿ ಶಿವಮ್ಮ ಅವರನ್ನು ಆಯ್ಕೆ ಮಾಡಲಾಗಿದ್ದು, ಸಹ ಸಂಚಾಲಕರಾಗಿ ದುರ್ಗೇಶ್, ಸುನಿತ್ ಹಾಗೂ ರಂಗನಾಥ್ ಅವರನ್ನು ನೇಮಿಸಲಾಯಿತು. ನೂತನ ತಂಡದ ನೇತೃತ್ವದಲ್ಲಿ ಕನಕಪುರ ತಾಲೂಕಿನಲ್ಲಿ ಸಂಘಟನೆಯನ್ನು ಇನ್ನಷ್ಟು ಬಲಪಡಿಸುವ ಸಂಕಲ್ಪ ವ್ಯಕ್ತಪಡಿಸಲಾಯಿತು. ಸಭೆಯಲ್ಲಿ ಬೆಂಗಳೂರು ಪಶ್ಚಿಮ ಜಿಲ್ಲಾ ಉಸ್ತುವಾರಿ ಹಾಗೂ ರಾಜ್ಯ ಜಂಟಿ ಕಾರ್ಯದರ್ಶಿ ಎಲ್. ಜೀವನ್, ಜಿಲ್ಲಾಧ್ಯಕ್ಷರಾದ ಗಂಗಾಧರಯ್ಯ ಹಾಗೂ ಪದಾಧಿಕಾರಿಗಳಾದ ಕುಮಾರ್, ಷಣ್ಮುಗ, ಸ್ವಾಮಿಗೌಡ, ಪ್ರಕಾಶ್, ಮಂಜುನಾಥ್, ಲೋಕೇಶ್, ರವಿ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾರು, ದುಡ್ಡು ಸುಲಿಗೆ: ಆರೋಪಿಗಳ ಬಂಧನ

ಹಾರೋಹಳ್ಳಿ: ಊಬರ್ ಮೂಲಕ ಬಾಡಿಗೆಗಾಗಿ ಕಾರು ಬುಕ್ ಮಾಡಿ ಕಾರು ಮತ್ತು 2500ಹಣವನ್ನು ಸುಲಿಗೆ ಮಾಡಿದ್ದ ಕುಖ್ಯಾತ ಆರೋಪಿಗಳನ್ನು ಬಂಧಿಸುವಲ್ಲಿ ಹಾರೋಹಳ್ಳಿ ಪೊಲೀಸರು ಯಶಸ್ವಿಯಾಗಿದ್ದಾರೆ. ಆರೋಪಿಗಳನ್ನು ರಕ್ಷಿತ್ ಕುಮಾರ್(22)ಹೊಸಕೆರೆಹಳ್ಳಿ, ಅಭಿ ಅಲಿಯಾಸ್ ಜಯಂತ್(23)ಲಾಳಘಟ್ಟ ಗ್ರಾಮ ಜೀವನ್ ಲಿಯಾಸ್ ಕರಿಯ(20) ಲಾಳಘಟ್ಟ ಗ್ರಾಮ ಎಂದು ಗುರುತಿಸಲಾಗಿದೆ. ಆರೋಪಿಗಳು ಮಾ.3ರಂದು ಬೆಂಗಳೂರು ಮೈಸೂರು ರಾಷ್ಟ್ರೀಯ ಹೆದ್ದಾರಿಯ ವಂಡರ್ ಲಾ ಗೇಟ್ ಬಳಿ ಊಬರ್ ಮೂಲಕ ಕಾರನ್ನು ಬುಕ್ ಮಾಡಿ ಬಳಿಕ ಚನ್ನಪಟ್ಟಣಕ್ಕೆ ಬಂದು ಮತ್ತೊಬ್ಬ ಸ್ನೇಹಿತನನ್ನು ಹತ್ತಿಸಿಕೊಂಡಿದ್ದಾರೆ. ಈ ವೇಳೆ ಕಾರು ಚಾಲಕನಿಗೆ ಹಣವೂ ಸಹ ನೀಡದೆ ಹಾರೋಹಳ್ಳಿಯ ಕೈಗಾರಿಕಾ ಪ್ರದೇಶಕ್ಕೆ ಬಂದು, ಚಾಲಕನಿಗೆ 30,000 ಹಣ ಕೊಡುವಂತೆ ಬೆದರಿಸಿದ್ದಾರೆ. . ಪತ್ತೆ ಕಾರ್ಯದಲ್ಲಿ ಎಸ್ಪಿ ಶ್ರೀನಿವಾಸ್ ಗೌಡ,ಎ.ಎಸ್ಪಿ. ರಾಮಚಂದ್ರಯ್ಯ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಶ್ರೀನಿವಾಸ್ ನೇತೃತ್ವದಲ್ಲಿ ಠಾಣಾ ನಿರೀಕ್ಷಕ ಮಲ್ಲೇಶ್,ಪಿಎಸ್ಐ ಲೋಕೇಶ್ ,ಜಯಕುಮರ್, ಪ್ರಜ್ವಲ್ ಪಾಲ್ಗೊಂಡಿದ್ದರು.



ಊಬರ್ ಮೂಲಕ ಬಾಡಿಗೆಗಾಗಿ ಕಾರು ಬುಕ್ ಮಾಡಿ ಕಾರು ಮತ್ತು 2,500 ಹಣವನ್ನು ಸುಲಿಗೆ ಮಾಡಿದ್ದ ಕುಖ್ಯಾತ ಆರೋಪಿಗಳನ್ನು ಬಂಧಿಸುವಲ್ಲಿ ಹಾರೋಹಳ್ಳಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಒಳ ಮೀಸಲಾತಿ: ಬೃಹತ್ ಪ್ರತಿಭಟನೆ

ರಾಮನಗರ: ಪರಿಶಿಷ್ಟ ಬಲಗೈ ಜಾತಿ ಹಿತರಕ್ಷಣಾ ಸಮಿತಿ ಕನಕಪುರ ವತಿಯಿಂದ ಮಾರ್ಚ್ 9ರಂದು ಕನಕಪುರದಲ್ಲಿ ಒಳ ಮೀಸಲಾತಿ ನಾಗಮೋಹನ್ ದಾಸ್ ವರದಿ ತಿರಸ್ಕರಿಸಿ ಎಸ್ಸಿ ಎಸ್ಟಿ ಅಲೆಮಾರಿ ಜನರನ್ನು ಒಡೆದು ಹೋಳಾಗಿಸದಂತೆ ಒತ್ತಾಯಿಸಿ ಬೃಹತ್ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಧಮ್ಮ ದೀವಿಗೆ ಚಾರಿಟಬಲ್ ಟ್ರಸ್ಟಿನ ಅಧ್ಯಕ್ಷ ಮಲ್ಲಿಕಾರ್ಜುನ್ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ ಸಂದರ್ಭ ಬಂದಾಗ, ಕಾಂಗ್ರೆಸ್, ಬಿಜೆಪಿ, ಜನತಾದಳ, ಕಮ್ಯೂನಿಸ್ಟರು, ಫಾರ್ವಡ್ ಬ್ಲಾಕ್‌ನವರು ಎಲ್ಲರೂ ಸೇರಿ ರಾಜಕೀಯ ಮೀಸಲಾತಿಯನ್ನು ತುಂಬಿಸಲು ತೋರುವ ಆಸಕ್ತಿಯನ್ನು, ಶೈಕ್ಷಣಿಕ, ಉದ್ಯೋಗ, ಸಾಮಾಜಿಕ ಮೀಸಲಾತಿಯನ್ನು ತುಂಬಲು ಆಸಕ್ತಿ ತೋರುವುದಿಲ್ಲ ಉದ್ಯೋಗದ ಮೀಸಲಾತಿಯಿಂದ 5 ಕೋಟಿ ಉದ್ಯೋಗವನ್ನು ಕೊಡಬೇಕು. ಆ ಉದ್ಯೋಗಗಳು ಭರ್ತಿಯಾಗುತ್ತದೆ ಎಂದರು. ಐದು ಕೋಟಿ ಉದ್ಯೋಗಗಳು ಕೂಡಿದರೆ 25 ಕೋಟಿ ಜನ ಎಸ್.ಸಿ. ಮತ್ತು ಎಸ್.ಟಿ. ಆದಿವಾಸಿಗಳು, ಅಲೆಮಾರಿಗಳು ಬದುಕು ಕಟ್ಟಿಕೊಳ್ಳುತ್ತಾರೆ. ಅದಕ್ಕಾಗಿಯೇ ಉದ್ಯೋಗದ ಮೀಸಲಾತಿಯನ್ನು ತುಂಬಲು ಅವರಿಗಿಷ್ಟವಿಲ್ಲ. ಶೈಕ್ಷಣಿಕ ಮೀಸಲಾತಿಯನ್ನು ತುಂಬಿದರೆ ಇದರಿಂದ ಪ್ರಜ್ಞಾವಂತರು, ಬುದ್ದಿವಂತರು, ಅರ್ಹರು ಸೃಷ್ಟಿಯಾಗುತ್ತಾರೆ. ಸುದ್ದಿಗೋಷ್ಠಿಯಲ್ಲಿ ಭರತ್, ಸುಮಲತಾ, ರಾಮು, ಗಿರೀಶ್ ಹಾಗೂ ಇತರರು ಇದ್ದರು.



ಸುದ್ದಿಗೋಷ್ಠಿಯಲ್ಲಿ ರಾಮನಗರ ಧಮ್ಮ ದೀವಿಗೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ್ ಮಾತನಾಡಿದರು.

ಲಡಾಖ್‌ಗೆ ಸೋಲೋ ರೈಡ್‌ನಿಂದ ಜಾಗೃತಿ ಮೂಡಿಸಿದ್ದ ನಾಟ್ಯ ಕಲಾವಿದೆ

ಸ್ವಚ್ಛತಾ ರಾಯಭಾರಿ ಚಿತ್ರಾ

ಎಸ್. ರುದ್ರೇಶ್ವರ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ವಿಶೇಷ

ರಾಮನಗರ: ಭರತನಾಟ್ಯ ಕಲಾವಿದೆ, ಕನ್ಯಾಕುಮಾರಿಯಿಂದ ಕಾಶ್ಮೀರದ ಲಡಾಖ್ ವರೆಗೆ ಸೋಲೋ ರೈಡ್ ಮಾಡಿದ್ದ ಯುವತಿ ಚಿತ್ರಾ ರಾವ್ ರಾಮನಗರ ನಗರಸಭೆಗೆ ಸ್ವಚ್ಛತಾ ರಾಯಭಾರಿಯಾಗಿ ನೇಮಕಗೊಂಡು ರಾಮನಗರವನ್ನು ತ್ಯಾಜ್ಯಮುಕ್ತವನ್ನಾಗಿ ಮಾಡುವಲ್ಲಿ ಶ್ರಮಿಸುತ್ತಿದ್ದಾರೆ.

ತಾಲೂಕಿನ ಕೃಷ್ಣಾಪುರದೊಡ್ಡಿಯ ಚಿತ್ರಾ ರಾವ್ ಎಂಬಿಎ ಪದವೀಧರೆಯಾಗಿದ್ದಾರೆ. ಬಾಲ್ಯದಿಂದಲೂ ಭರತನಾಟ್ಯ ಕಲಾವಿದೆ. ಶಾಂತಲಾ ಕಲಾ ಕೇಂದ್ರ ಎಂಬ ನಾಟ್ಯ ಶಾಲೆಯನ್ನು ತೆರೆದಿರುವ ಇವರು ಕರ್ನಾಟಕ ಮಾತ್ರವಲ್ಲ, ಬೇರೆ ಬೇರೆ ರಾಜ್ಯಗಳಲ್ಲಿಯೂ ತಮ್ಮ ಭರತನಾಟ್ಯ ಪ್ರದರ್ಶನವನ್ನು ನೀಡಿದ್ದಾರೆ. ಪ್ರವೃತ್ತಿಯಲ್ಲಿ ಫೋಟೋಗ್ರಾಫರ್ ಕೂಡ ಆಗಿದ್ದಾರೆ. ಅಲ್ಲಲ್ಲಿ ಬೀದಿ ನಾಟಕಗಳನ್ನು ಮಾಡುವುದು, ಕಲಾತಂಡವನ್ನು ರಚಿಸಿ ಪರಿಸರ ಗೀತೆ, ಕಿರುನಾಟಕವನ್ನು ರಚಿಸಿ ಪ್ರದರ್ಶನ ಮಾಡುವುದು. ಶಾಲಾ-ಕಾಲೇಜುಗಳಲ್ಲಿ ಸ್ವಚ್ಛತೆಗೆ ಸಂಬಂಧಿಸಿದಂತೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಅರಿವು ಮೂಡಿಸುತ್ತಿದ್ದಾರೆ.

ಲಡಾಖ್‌ಗೆ ಸೋಲೋರೈಡ್: ಇಂದು ಅವಿಭಕ್ತ ಕುಟುಂಬ ಎನ್ನುವ ಕಲ್ಪನೆಯೇ ಮಾಯವಾಗುತ್ತಿದೆ. ಇರುವ ಕುಟುಂಬದಲ್ಲಿಯೇ ವೃದ್ಧರು ಎಂದರೆ ಎಲ್ಲರಿಗೂ ಅಲರ್ಜಿ ಎನ್ನುವಂತೆ ಆಗಿ, ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಇದಕ್ಕೆ ಕಾರಣ ಹಿರಿಯರ ಬಗೆಗಿನ ತಾತ್ಸಾರ. ಆದರೆ ಹಿರಿಯರನ್ನು ಕಡೆಗಣಿಸಬೇಡಿ ಎನ್ನುವ ಸಂದೇಶವನ್ನು ಹೊತ್ತು ಚಿತ್ರಾ ರಾವ್ ಕನ್ಯಾಕುಮಾರಿಯಿಂದ ಜಮ್ಮು ಕಾಶ್ಮೀರದ ಲಡಾಖ್ ವರೆಗೆ ಏಕಾಂಗಿ ಬೈಕ್ ರೈಡ್ ಮಾಡಿ ಗಮನ ಸೆಳೆದಿದ್ದರು.

10 ರಾಜ್ಯಗಳ ಸುಮಾರು 5 ಸಾವಿರ ಕಿ.ಮೀ. ಉದ್ದವನ್ನು ಏಕಾಂಗಿಯಾಗಿಯೇ ಬೈಕ್‌ನಲ್ಲಿ ಸಂಚರಿಸುವ ಮೂಲಕ ವೃದ್ಧ ತಂದೆ-ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸಬೇಡಿ ಎಂಬ ಸಂದೇಶ ಸಾರಿದ್ದರು. ಚಿತ್ರಾ ರಾವ್ ತಾಯಿ ಕವಿತಾರಾವ್, ರಾಮನಗರ ತಾಲೂಕಿನ ಕೃಷ್ಣಾಪುರ ದೊಡ್ಡಿಯಲ್ಲಿ ದಾರಿದೀಪ ವೃದ್ಧಾಶ್ರಮ ಆರಂಭಿಸಿ ಅನಾಥರು, ನಿರ್ಗತಿಕರಿಗೆ ಆಶ್ರಯ ಕೊಡುತ್ತಿದ್ದಾರೆ. ಇಂತಹ ಆಶ್ರಮಗಳು ಸಮಾಜಕ್ಕೆ ಬೇಡ ಎನ್ನುವ ಕಾರಣಕ್ಕೆ ಸಮಾಜಕ್ಕೆ ಉತ್ತಮ ಸಂದೇಶ ಕೊಡಲು ಚಿತ್ರಾ ರಾವ್ ಕನ್ಯಾಕುಮಾರಿಯಿಂದ ಕಾಶ್ಮೀರದ ಲಡಾಕ್ ವರೆಗೆ ಸೋಲೊ ರೈಡ್ ನಡೆಸಿದ್ದರು. ಚಿತ್ರಾ ರಾವ್ ಅಪ್ರತಿಮ ಭರತನಾಟ್ಯ ಕಲಾವಿದೆಯಾಗಿದ್ದು ಯೂಥ್ ಐಕಾನ್ ಆಗಿದ್ದಾರೆ. ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಸೋಲೋ ಬೈಕ್ ರೈಡ್ ಮಾಡಿದ್ದರು. ಯುಧರ್ಮ ಎನ್ನುವ ಎನ್ ಜಿಒ ಮಾಡಿಕೊಂಡು ಸಮಾಜಸೇವೆ ಮಾಡುತ್ತಿದ್ದಾರೆ. ಸ್ವಚ್ಛತಾ ಕಾರ್ಯಕ್ರಮಗಳನ್ನು ಮಾಡಿ ಸಾರ್ವಜನಿಕರಿಗೆ ಪರಿಸರದ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ. ಹೀಗಾಗಿ ಇವರನ್ನು ನಗರಸಭೆಯ ಸ್ವಚ್ಛತಾ ರಾಯಭಾರಿಯನ್ನಾಗಿ ಎಲ್ಲಾ ಸದಸ್ಯರ ಒಪ್ಪಿಗೆಯ ಮೇರೆಗೆ ನೇಮಕ ಮಾಡಿದ್ದೇವೆ ಎಂದು ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ, ತಿಳಿಸಿದರು.



ಪರಿಸರ ಬಗ್ಗೆ ಅರಿವು

ನಗರಸಭೆಯ ಸ್ವಚ್ಛತಾ ರಾಯಭಾರಿಯಾಗಿರುವ ಚಿತ್ರಾ ರಾವ್ ಅವರಿಗೆ ಹಲವು ಜವಾಬ್ದಾರಿಗಳನ್ನು ನೀಡಲಾಗಿದೆ. ನಗರದಲ್ಲಿನ ಎಲ್ಲಾ ಶಾಲಾ-ಕಾಲೇಜುಗಳಿಗೆ ಭೇಟಿ ಕೊಟ್ಟು, ಅಲ್ಲಿನ ವಿದ್ಯಾರ್ಥಿಗಳಿಗೆ ಸ್ವಚ್ಛತೆ ಮತ್ತು ಸುಂದರ ಪರಿಸರದ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ. ಎಲ್ಲೆಂದರಲ್ಲಿ ಕಸ ಬಿಸಾಡುವುದರಿಂದ ಎದುರಾಗುವ ಸಮಸ್ಯೆಗಳ ಬಗ್ಗೆಯೂ ತಿಳಿಸಿ ಕೊಡುತ್ತಿದ್ದಾರೆ.



ಪೌರ ಕಾರ್ಮಿಕರ ಆರೋಗ್ಯ ವಿಚಾರದಲ್ಲಿ ರಾಜಿ ಇಲ್ಲ

ರಾಮನಗರ: ಪೌರ ಸೇವಾ ಕಾರ್ಮಿಕರ ಆರೋಗ್ಯದ ವಿಚಾರದಲ್ಲಿ ನಾವು ರಾಜೀ ಆಗುವುದಿಲ್ಲ ಅವರ ಆರೋಗ್ಯವೇ ನಮಗೆ ಮುಖ್ಯ. ಯಾವುದೇ ಖಾಯಿಲೆಯಾದರೂ ಉಚಿತವಾಗಿ ಆರೋಗ್ಯ ತಪಾಸಣೆ ಮಾಡಿಸುತ್ತೇವೆ. ನಗರ ಮತ್ತು ಸಮಾಜದ ಸ್ವಾಸ್ಥವನ್ನು ಕಾಪಾಡಲು ಪೌರ ಸೇವಾ ನೌಕರರರಿಂದ ಮಾತ್ರ ಸಾಧ್ಯ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ತಿಳಿಸಿದರು.

ಇಲ್ಲಿನ ನಗರಸಭಾ ಕಾರ್ಯಾಲಯ ಮತ್ತು ಬಿಡದಿ ಹೋಬಳಿ ಕೆಮಿಸ್ಟ್ ಅಂಡ್ ಡ್ರಗ್ಗಿಸ್ಟ್ ಫೌಂಡೇಶನ್ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ನಗರಸಭೆಯ ಎಲ್ಲಾ ನೌಕರರು, ಸದಸ್ಯರು, ಪೌರಸೇವಾ ನೌಕರರು, ಲೋಡರ್ಗಳು, ಯುಜಿಡಿ ಸಹಾಯಕರು, ಹಾಗೂ ಸದಸ್ಯರಿಗೆ ಆಯೋಜಿಸಿದ್ದ ಉಚಿತ ಕಣ್ಣಿನ ಪರೀಕ್ಷೆ ಶಿಬಿರ ಉದ್ಘಾಟಿಸಿ ಮಾತನಾಡಿದರು.ನಗರಸಭೆ ಆಯುಕ್ತ ಡಾ. ಜಯಣ್ಣ ಮಾತನಾಡಿ ವ್ಯಕ್ತಿಯೊಬ್ಬರು ಮರಣ ಹೊಂದಿದ ಆರೂವರೆ ಗಂಟೆಯೊಳಗೆ ಕಣ್ಣಿನ ಪದರವನ್ನು ತೆಗೆದರೆ, ಇಬ್ಬರು ಅಂಧರಿಗೆ ಬೆಳಕು ನೀಡಬಹುದು. ವಿದೇಶದಲ್ಲಿ ತಂತ್ರಜ್ಞಾನ ಬಳಸಿ ನಾಲ್ಕು ಜನರಿಗೆ ಬೆಳಕನ್ನು ನೀಡಬಹುದು. ಮತ್ತೊಂದು ಸ್ವಯಂಪ್ರೇರಿತ ರಕ್ತದಾನದಿಂದ ಅನೇಕ ಜೀವ ಉಳಿಸಬಹುದು. ರಕ್ತದಾನ ದಿಂದ ದೇಹದಲ್ಲಿ ರಕ್ತನಾಳಗಳು ಆರೋಗ್ಯವಾಗಿರುತ್ತದೆ ಎಂದು ತಿಳಿಸಿದರು.

ನಿವೃತ್ತ ಔಷಧ ನಿಯಂತ್ರಕ ಶ್ರೀನಿವಾಸ್, ಬಿಡದಿ ಹೋಬಳಿ ಕೆಮಿಸ್ಟ್ ಅಂಡ್ ಡ್ರಗ್ಗಿಸ್ಟ್ ಫೌಂಡೇಶನ್ ಟ್ರಸ್ಟ್‌ನ ಮಂಜುನಾಥ್, ಶಂಕರ ಐ ಕಣ್ಣಿನ ಆಸ್ಪತ್ರೆಯ ಸೆಲ್ವಕುಮಾರ್, ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸದಸ್ಯರಾದ ಬಿ.ಸಿ. ಪಾರ್ವತಮ್ಮ, ನಿಜಾಂಪಾಷ, ಸಮದ್, ಪರಿಸರ ಇಂಜಿಯರ್ ಸುಬ್ರಮಣಿ, ಆರ್ .ನಾಗರಾಜು ಇತರರು ಇದ್ದರು.



ಖಾತೆ ಆಂದೋಲನ ಆರ್ಥಿಕ ಸ್ವಾವಲಂಬನೆಗೆ ಸಹಕಾರಿ

ಕನಕಪುರ: ಗ್ರಾಮ ಪಂಚಾಯಿತಿಯಲ್ಲಿ ಕಂದಾಯ ಆಂದೋಲನವು ಆಸ್ತಿ ತೆರಿಗೆ, ನೀರಿನ ಕರ ಮತ್ತು ಇತರೆ ಬಾಕಿಗಳನ್ನು ಆರ್ಥಿಕ ವರ್ಷದ ಮಾರ್ಚ್ ಅಂತ್ಯದೊಳಗೆ ಶೀಘ್ರವಾಗಿ ವಸೂಲಿ ಮಾಡಲು ಕ್ರಮ ಕೈಗೊಳ್ಳುವ ವಿಶೇಷ ಅಭಿಯಾನ ನಡೆಸುವಂತೆ ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯದರ್ಶಿ ಶಿವಕುಮಾರ್ ಹೇಳಿದರು. ಶನಿವಾರ ತಾಲೂಕಿನ ಕಬ್ಬಾಳು ಗ್ರಾಮ ಪಂಚಾಯಿತಿಯಲ್ಲಿ ಜರುಗಿದ ಸಾಮಾನ್ಯ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆರ್ಥಿಕ ವರ್ಷದಲ್ಲಿ ಮಾರ್ಚ್ ಕೊನೆಯೊಳಗಾಗಿ ಕಂದಾಯ ಕಟ್ಟುವವರಿಗೆ ಶೇ.5 ರಿಯಾಯಿತಿ ದರದಲ್ಲಿ ತೆರಿಗೆ ವಸೂಲಿ ಮಾಡಲಾಗುವುದು, ಮಾರ್ಚ್ ನಂತರ ಕಂದಾಯ ಕಟ್ಟುವ ಗ್ರಾಹಕರಿಗೆ ಶೇ.5 ದಂಡ ವಸೂಲಿ ಮಾಡಲಾಗುವುದು. ಗ್ರಾಮಸ್ವರಾಜ್ ತಿದ್ದುಪಡಿಗಳ ಮೂಲಕ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಿ, ಬಾಕಿ ತೆರಿಗೆಗಳನ್ನು ಸಂಗ್ರಹಿಸಲು ಗ್ರಾಮ ಪಂಚಾಯಿತಿ ಅಧಿಕಾರಿಗಳು, ಸಿಬ್ಬಂದಿ ಕಂದಾಯ ಆಂದೋಲನವನ್ನು ನಾಳೆಯಿಂದಲೇ ಪ್ರಾರಂಭಿಸಬೇಕೆಂದು ಸೂಚನೆ ನೀಡಿದರು.

ಗ್ರಾಮ ಪಂಚಾಯಿತಿಯಲ್ಲಿ ಸ್ವಚ್ಛತೆ, ನೈರ್ಮಲ್ಯ, ಮೂಲಸೌಲಭ್ಯ, ತ್ಯಾಜ್ಯ ನಿರ್ವಹಣೆ ಕಂದಾಯ ವಸೂಲಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಪ್ರಗತಿಪರ ಕೆಲಸ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಬ್ಬಾಳು ದೇವಾಲಯವು ಇಡೀ ಜಿಲ್ಲೆಯಲ್ಲಿ ಎ ಗ್ರೇಡ್ ಸ್ಥಾನ ಪಡೆದಿರುವ ಕೇಂದ್ರವಾಗಿದೆ. ಈ ಸ್ಥಳದಲ್ಲಿ ಏಕ ಬಳಕೆ ಪ್ಲಾಸ್ಟಿಕ್ ನಿಷೇಧ ಜಾರಿಗೆ ತರಲು ಅಗತ್ಯ ಕ್ರಮ ಕೈಗೊಳ್ಳಬೇಕು.

ದೇವಾಲಯದ ಸುತ್ತ ಅಲ್ಲದೇ, ವಾಣಿಜ್ಯ ಸಂಕೀರ್ಣಗಳಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧಕ್ಕೆ ಹೆಚ್ಚು ಒತ್ತು ಕೊಡಬೇಕು, ಪ್ಲಾಸ್ಟಿಕ್ ಬಳಕೆ ನಿಷೇಧಿಸುವ ನಿಟ್ಟಿನಲ್ಲಿ ಇನ್ನು ಮುಂದೆ ನಿದ್ಯಾಕ್ಷಿಣವಿಲ್ಲದೆ ಕ್ರಮ ಕೈಗೊಳ್ಳಬೇಕೆಂದು ಎಚ್ಚರಿಕೆ ನೀಡಿದರು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎನ್.ಎಸ್.ರಘು, ಕಾರ್ಯದರ್ಶಿ ಶಿವರಾಂ, ಕರವಸೂಲಿಗಾರ ದೇವೇಗೌಡ ಸೇರಿದಂತೆ ಪಂಚಾಯಿತಿ ಅಧಿಕಾರಿಗಳು, ಸಿಬ್ಬಂದಿ, ಪೌರಕಾರ್ಮಿಕರು ಸಭೆಯಲ್ಲಿ ಹಾಜರಿದ್ದರು.



ಕನಕಪುರ ತಾಲೂಕಿನ ಕಬ್ಬಾಳು ಗ್ರಾಮ ಪಂಚಾಯಿತಿಯಲ್ಲಿ ಸಾಮಾನ್ಯ ಸಭೆ ಜರುಗಿತು.

ಮಕ್ಕಳಿಗೆ ವಸ್ತುಪ್ರದರ್ಶನದಿಂದ ಜ್ಞಾನ ವೃದ್ಧಿ

ಮಾಗಡಿ: ಮಕ್ಕಳಿಗೆ ವರ್ಷಪೂರ್ತಿ ಬೋದನೆಯೊಂದೆ ಶಿಕ್ಷಣವಲ್ಲ ಅವರ ಬುದ್ದಿ ಸಾಮರ್ಥ್ಯವನ್ನು ತಿಳಿಯಲು ಕೌಶಲ್ಯಗಲ ಮಟ್ಟವನ್ನು ತಿಳಿಯಲು ವಸ್ತು ಪ್ರದರ್ಶನದಲ್ಲಿ ಪಾಲ್ಗೊಳ್ಳುವುಕೆ ಸಹಕಾರಿಯಾಗುತ್ತದೆ ಎಂದು ಶಾಲಾ ಆಡಳಿತ ಆಧಿಕಾರಿ ವಿಮಾ ಅಶೋಕ್ ತಿಳಿಸಿದರು.

ತಾಲೂಕಿನ ಹುಲಿಕಟ್ಟೆ ಗ್ರಾಮದಲ್ಲಿರುವ ನ್ಯಾಷಿನಲ್ಲಿ ಪಬ್ಲಿಕ್ ಶಾಲೆಯಲ್ಲಿ ನಡೆದ ವಸ್ತ ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ಮಾತನಾಡಿದ ಅವರು, ಮಕ್ಕಳಲ್ಲಿ ಕೇವಲ ಬೋದನೆಯಿಂದ ಜ್ಞಾನ ವೃದ್ಧಿಯಾದರೆ ಸಲದು ಅವರು ತಮ್ಮ ಕೌಶಲ್ಯವನ್ನು ಬಳಸಿ ತಮಗೆ ಯಾವು ವಿಷಯದ ಬಗ್ಗೆ ಆಸಕ್ತಿ ಹೊಂದಿದ್ದಾರೆ ಎಂಬು ಶಿಕ್ಷಕರಿಗೆ ಮನವರಿಕೆಯಾಗುವ ಮೂಲಕ ಮಕ್ಕಳಿಗೆ ಕಲಿಸಿಲು ಸಹಾಯವಾಗುತ್ತದೆ ಎಂದ ಅವರು ಇಂದು ನಮ್ಮ ಶಾಲೆಯಲ್ಲಿ ಒಂದರಿಂದ ಹತ್ತನೇ ತರಗತಿಯ ವರೆಗೆ ವ್ಯಾಸಾಂಗ ಮಾಡುತ್ತಿದ್ದಾರೆ.

ಒಂದರಿಂದ ನಾಲ್ಕನೇ ತರಗತಿಯವರಗಿನ ಮಕ್ಕಳು ಸರಳವಾಗಿ ಅವರ ಬರವಣಿಗೆ, ಪ್ರಾಣಿಗಳು ಆವಾಸ ಸ್ಥಳ, ತರಕಾರಿ ಮತ್ತು ಮಾರಾಟ, ಮಣ್ಣಿನ ವಸ್ತುಗಳನ್ನು ತಾವೆ ಸಿದ್ಧ ಪಡಿಸಿ ಅವುಗಳನ್ನು ವಸ್ತು ಪ್ರದರ್ಶನದಲ್ಲು ಇಟ್ಟಿದ್ದಾರೆ, ಐದರಿಂದ ಏಳನೇ ತರಗತಿ ವಿದ್ಯಾರ್ಥಿಗಳು ನಮ್ಮ ಅಕ್ಕಪಕ್ಕದ ರಾಜ್ಯಗಳ ಆಚಾರ ವಿಚಾರ ಮತ್ತು ಪ್ರಮುಖ ಸ್ಥಳಗಳ ವಿವರಣೆ ಮತ್ತು ಅಲ್ಲಿನ ಉಡುಗೆ ತೊಡುಗೆಯನ್ನು ವಿವರಿಸಿದ್ದಾರೆ, ಎಂಟರಿಂದ ಹತ್ತನೇ ತರಗತಿ ವಿದ್ಯಾರ್ಥಿಗಳು ವಿದ್ಯುತ್ ನಿಂದ ಸಹಕಾರಿಯಾಗುವ ಆವಿಷ್ಕಾರಗಳು, ಸೌರಮಂಡಲ ರಚನೆ, ಜೈವಿಕ ವಿಘಟನೆ, ಪ್ಲಾಸ್ಟಿಕ್ ಮರುಬಳಕೆ ಮತ್ತು ಚಂದ್ರಯಾನ ಸರಳ ಮಾದರಿಯನ್ನು ಪ್ರದರ್ಶಿಸುವದರ ಜೊತೆಗೆ ವಿವರಗಳನ್ನು ನೀಡಿದ್ದಾರೆ, ಮುಖ್ಯಶಿಕ್ಷಕ ವಾಸುದೇವ್, ಸಿಆರ್‌ಪಿ ಕುಮಾರಸ್ವಾಮಿ, ಶಿಕ್ಷಕರಾದ ಕುಮಾರ್, ಮುದ್ದೇಶಸ್ವಾಮಿ, ಕವಿತ, ಫರೀಧ, ದೇವರಾಜು ಸೇರಿದಂತೆ ಅಗಲಕೋಟೆ, ಚಕ್ರಭಾವಿ, ಹುಲೀಕಟ್ಟೆ, ಸರಕಾರಿ ಶಾಲೆಯ ಮಕ್ಕಳು ಭಾಗವಹಿಸಿದ್ದರು.



ಬೋರನಕಣಿವೆ ಜಲಾಶಯದಿಂದ ನೀರು ಬಿಡಲಿ

ಹುಳಿಯಾರು: ಹುಳಿಯಾರು ಹೋಬಳಿಯ ಬೋರನಕಣಿವೆ ಜಲಾಶಯದ ಅಚ್ಚುಕಟ್ಟು ಪ್ರದೇಶದ ರೈತರು ಜಲಾಶಯದ ಬಳಿ ಸಭೆ ಸೇರಿ, ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಮೇವು ಬೆಳೆಯಲು ಜಲಾಶಯದಿಂದ ಕಾಲುವೆ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಬಿಡುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಕಳೆದ ಮೂರು ವರ್ಷಗಳಿಂದ ಸಮರ್ಪಕ ಮಳೆಯಿಲ್ಲದೆ ಬರ ಪರಿಸ್ಥಿತಿ ಎದುರಾಗಿದ್ದು, ಅಂತರ್ಜಲ ಮಟ್ಟ ಕುಸಿದಿರುವುದರಿಂದ ಬೋರ್ ವೆಲ್‌ಗಳಲ್ಲಿ ನೀರು ದೊರೆಯುತ್ತಿಲ್ಲ. ಇದರಿಂದ ಜನರು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ ಎಂದು ರೈತರು ಸಭೆಯಲ್ಲಿ ಆತಂಕ ವ್ಯಕ್ತಪಡಿಸಿದರು. ಜಲಾಶಯದ ನೀರು ಕಾಲುವೆ ಮೂಲಕ ಸರಾಗವಾಗಿ ಹರಿಯಲು ಕಾಲುವೆಯ ಎರಡೂ ಬದಿಯಲ್ಲಿ ಬೆಳೆದಿರುವ ಜಂಗಲ್ ಗಿಡಗಳನ್ನು ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ತಕ್ಷಣ ಸ್ವಚ್ಛಗೊಳಿಸಿ ರೈತರಿಗೆ ಅನುಕೂಲ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಈ ಹಿನ್ನೆಲೆಯಲ್ಲಿ ರೈತರ ನಿಯೋಗವು ಶಾಸಕ ಸಿ.ಬಿ.ಸುರೇಶ್ ಬಾಬು, ತಹಸೀಲ್ದಾರ್ ಮಮತಾ ಹಾಗೂ ತಿಪಟೂರು ಉಪವಿಭಾಗಾಧಿಕಾರಿ ಸಪ್ತಶ್ರೀ ಅವರನ್ನು ಭೇಟಿ ಮಾಡಿ ಜಲಾಶಯದಿಂದ ನೀರು ಬಿಡುವಂತೆ ಮನವಿ ಪತ್ರ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಆಸಕ್ತ ರೈತರು ಈ ನಿಯೋಗದಲ್ಲಿ ಭಾಗವಹಿಸುವಂತೆ ರೈತರು ಮನವಿ ಮಾಡಿದ್ದಾರೆ. ಬೋರನಕಣಿವೆ ಜಲಾಶಯವನ್ನು ನಿರ್ಮಿಸಿದ ಮೈಸೂರು ಅರಸರ ಪ್ರತಿಮೆಯನ್ನು ಕೆತ್ತಿಸಿ ಹೊಯ್ಸಳಕಟ್ಟೆ ಬಸ್ ನಿಲ್ದಾಣದ ಆವರಣದಲ್ಲಿ ಪ್ರತಿಷ್ಠಾಪಿಸುವ ವಿಚಾರವೂ ಸಭೆಯಲ್ಲಿ ಚರ್ಚೆಯಾಯಿತು.

ಸಭೆಯಲ್ಲಿ ರೈತರಾದ ರವಿಕುಮಾರ್, ಮಲ್ಲಿಕಾರ್ಜುನ, ಗಿರೀಶ್, ರಘುವೀರ್, ಈರಣ್ಣ, ಲಕ್ಷ್ಮಿಕಾಂತ, ಅಕ್ಕಿರಾಮಯ್ಯ, ಹನುಮಂತರಾಯಪ್ಪ, ಬಾದೇಗೌಡ, ದಶರಥ, ವೆಂಕಟೇಶ್, ಕಿಟ್ಟಿ, ಮೋಹನ್, ಪುಟ್ಟಯ್ಯ, ನರೇಂದ್ರಪ್ಪ, ದೊಡ್ಡರಂಗಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ವಾಟಾಳ್ ಪಕ್ಷದಿಂದ ಮಾ.12ರಂದು ರಾಜ್ಯಾದ್ಯಂತ ಕನ್ನಡ ಚಳವಳಿ: ನಾಗರಾಜ್

ಕನ್ನಡ ಶಾಲೆಗಳ ನಿರ್ಲಕ್ಷ್ಯಿಸುತ್ತಿರುವ ಸರ್ಕಾರ

ರಾಮನಗರ: ಕನ್ನಡ ಶಾಲೆಗಳ ಬಗ್ಗೆ ನಿರ್ಲಕ್ಷತೆ ತಾಳುತ್ತಿರುವ ಕರ್ನಾಟಕ ಸರ್ಕಾರದ ವಿರುದ್ಧ ವಾಟಾಳ್ ಪಕ್ಷದಿಂದ ಇದೇ ಮಾರ್ಚ್ 12ರಂದು ರಾಜ್ಯಾದ್ಯಂತ ಕನ್ನಡ ಚಳವಳಿ ಮಾಡಲಾಗುವುದು. ಕನ್ನಡ ಶಾಲೆಗಳ ಬಂದ್ ಮಾಡಿ ಸರ್ಕಾರಕ್ಕೆ ಬಿಸಿ ಮುಟ್ಟಿಸಲಾಗುತ್ತದೆ ಎಂದು ಕನ್ನಡಪರ ಹಿರಿಯ ಹೋರಾಟಗಾರ ವಾಟಾಳ್ ನಾಗರಾಜ್ ತಿಳಿಸಿದರು.

ಐಜೂರು ವೃತ್ತದಲ್ಲಿ ಕನ್ನಡ ಚಳವಳಿ ವಾಟಾಳ್ ಹಾಗೂ ಕರುನಾಡ ಸೇನೆ ಸಂಯುಕ್ತಾಶ್ರಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳಿಗೆ ಆಯವ್ಯಯದಲ್ಲಿ ಅನುದಾನ ಘೋಷಣೆ ಮಾಡದಿರುವುದು, ಸಾಮಾಜಿಕ ಜಾಲತಾಣ ನಿಷೇಧವನ್ನು ವಿರೋಧಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿ ಮಾತನಾಡಿದರು

ಸರ್ಕಾರ ಕನ್ನಡ ಶಾಲೆಗಳ ಅಭಿವೃದ್ಧಿಗಾಗಿ 1000 ಕೋಟಿ ಅನುದಾನ ನೀಡಿದ್ದರೆ ಸಂತೋಷಪಡುತ್ತಿದ್ದೇವೆ. ಆದರೆ ಪಕ್ಕದ ಕೇರಳ, ತಾಳವಾಡಿ, ಹೊಸೂರು, ಅಕ್ಕಲಕೋಟೆ, ಮಡಗಸಿರಾ, ಸೊಲ್ಲಾಪುರದಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುತ್ತಿದ್ದಾರೆ ಎಂದರು. ಕನ್ನಡ ಶಾಲೆಗಳನ್ನು ಹೇಳುವವರು ಕೇಳುವವರು ಇಲ್ಲ. ಕನ್ನಡ ಶಾಲೆಗಳನ್ನು ಉಳಿಸಿ, ಗೌರವಿಸಬೇಕು. ಇದಕ್ಕಾಗಿ ತೀವ್ರ ಹೋರಾಟವನ್ನು ಕನ್ನಡ ಚಳವಳಿ ವಾಟಾಳ್ ಪಕ್ಷದಿಂದ ಮಾರ್ಚ್, 12 ರಂದು ರಾಜ್ಯದಾದ್ಯಂತ ಕನ್ನಡ ಶಾಲೆಗಳ ಬಂದ್ ಮಾಡಲಾಗುವುದು. ಬೆಳಿಗಿನಿಂದ ಸಂಜೆಯವರೆಗೆ ಸಂಪೂರ್ಣ ಬಂದ್ ಆಚರಿಸಲಾಗುವುದು. ರಾಜ್ಯದ ಎಲ್ಲಾ ಕನ್ನಡ ಶಾಲೆಗಳ ಉಪಾಧ್ಯಾಯರು, ವ್ಯವಸ್ಥಾಪಕರಿಗೆ ಈ ಬಂದ್‌ಗೆ ಸಹಕಾರ ನೀಡಬೇಕೆಂದು ಮನವಿ ಮಾಡುತ್ತೇವೆ ಎಂದರು.

ನಿಷೇಧ ಬೇಡ: ಮಕ್ಕಳ ಮೊಬೈಲ್ ಹಾಗೂ ಸಾಮಾಜಿಕ ಜಾಲವನ್ನು ಸರ್ಕಾರದವರು ನಿಷೇಧ ಹೇಗೆ ಮಾಡುತ್ತಾರೆ ಮಕ್ಕಳು ಮೊಬೈಲ್ ಬಳಸಿದರೆ, ಅವರನ್ನು ಬಂಧನ ಮಾಡಿ ಅವರ ವಿರುದ್ಧ ಕೇಸು ಹೂಡಿ ಜೈಲಿಗೆ ಹಾಕಲು ಸಾಧ್ಯವೇ ಕಾಲೇಜು, ಶಾಲೆ, ಪರೀಕ್ಷೆ ಕೊಠಡಿಗಳಿಗೆ ಮೊಬೈಲ್ ಬಳಕೆ ಬೇಡ. ಆದರೆ ಪ್ರಪಂಚದ ಉದ್ದಗಲಕ್ಕೂ ಇಂದು ಸಾಮಾಜಿಕ ಜಾಲತಾಣ ಬೆಳವಣಿಗೆ ಆಗಿದೆ. ನೀವು ಮಕ್ಕಳಿಗೆ ಮೊಬೈಲ್ ಬಳಕೆಯನ್ನು ನಿಷೇಧ ಮಾಡಿದರೆ ಮಕ್ಕಳು ಮನೆಯಲ್ಲಿನ ತಂದೆ, ತಾಯಿ, ಸಹೋದರ, ಸಹೋದರಿಯರನ್ನು ವಿರೋಧ ಮಾಡಿ, ಮನೆ ಬಿಟ್ಟು ಹೋಗುತ್ತಾರೆ ಎಂದರು.

ಕರುನಾಡ ಸೇನೆ ರಾಜ್ಯ ಉಪಾಧ್ಯಕ್ಷ ಎಂ. ಜಗದೀಶ್ ಐಜೂರು, ರಾಜ್ಯ ಉಸ್ತುವಾರಿ ಅಧ್ಯಕ್ಷ ಗಂಗಾಧರ್ ವಿ.ಎನ್, ಜಿಲ್ಲಾಧ್ಯಕ್ಷ ಜಯಕುಮಾರ್, ತಾಲ್ಲೂಕು ಮಹಿಳಾ ಅಧ್ಯಕ್ಷೆ ಭಾಗ್ಯಸುಧಾ, ಕಾರ್ಯಾಧ್ಯಕ್ಷ ಶಿವಮೂರ್ತಿ, ಪ್ರಧಾನ ಕಾರ್ಯದರ್ಶಿ ಕುಮಾರ್, ವಿದ್ಯಾರ್ಥಿ ಘಟಕದ ಅಧ್ಯಕ್ಷ ಹೇಮಂತ್, ಕಾರ್ಯದರ್ಶಿ ಕೊತ್ತಿಪುರ ಸುರೇಶ್, ವಾಟಾಳ್ ನಾಗರಾಜ್ ಅವರ ಆಪ್ತ ಸಹಾಯಕ ಪಾರ್ಥಸಾರಥಿ ಹಾಗೂ ಇತರರು ಇದ್ದರು.



ಅಂಗನವಾಡಿಗಳು ಸುಸಂಸ್ಕೃತ ಪ್ರಜೆಗಳ ತರಬೇತಿ ಕೇಂದ್ರ

ಮಾಗಡಿ: ಅಂಗನವಾಡಿ ಕೇಂದ್ರ ಶಿಕ್ಷಕಿಯರು ಉತ್ತಮವಾಗಿ ಸಂಯಮದಿಂದ ಕಾರ್ಯ ನಿರ್ವಹಿಸಿದ್ದೆ ಆದರೆ ಸಮಾಜದಲ್ಲಿ ಉತ್ತಮ ಮತ್ತು ಸಂಸ್ಕೃತಿ ಹೊಂದಿದ ಪ್ರಜೆಗಳು ಹೊರಹುಮ್ಮುವುದರಲ್ಲಿ ಯಾವುದೇ ಅನುಮಾನ ಇಲ್ಲ ಎಂದು ತಾಲೂಕು ಗ್ಯಾರಂಟಿ ಅನುಷ್ಠಾನಗಳ ಅಧ್ಯಕ್ಷ ಕಲ್ಕೆರೆ ಶಿವಣ್ಣ ಅಭಿಪ್ರಾಯಪಟ್ಟರು.

ಪಟ್ಟಣದ ಶ್ರೀ ಪ್ರಸನ್ನ ಸೋಮೇಶ್ವರ ದೇವಾಲಯದ ಆವರಣದಲ್ಲಿ ಅಜೀಂ ಪ್ರೇಮ್ ಜೀ ಫೌಂಡೇಷನ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಆಯೋಜನೆ ಮಾಡಿದ್ದ ಚಿಲಿಪಿಲಿ ಚಿತ್ತಾರ ಎಂಬ ಶೀರ್ಷಿಕೆಯಲ್ಲಿ ಅಂಗನವಾಡಿ ಶಿಕ್ಷಕಿಯರ ಮೇಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಖಾಸಗಿ ಶಿಕ್ಷಣ ಸಂಸ್ಥೆಗಳ ಹಾವಳಿಯ ನಡುವೆ ಅಜೀಂ ಪ್ರೇಮ್ ಜೀ ಪೌಂಢೇಷನ್ ಸೇರಿದಂತೆ ಇತರ ಸಂಸ್ಥೆಗಳು ಸರಕಾರದ ಪರ ನಿಂತು ತಾವು ದುಡಿದ ಹಣದಲ್ಲಿ ಗ್ರಾಮೀಣಭಾಗದ ಮಕ್ಕಳ ಶ್ರೇಯಯಸ್ಸಿಗೆ ಶ್ರಮ ವಹಿಸುತ್ತಿದ್ದಾರೆ.

ತಿಪ್ಪಸಂದ್ರ ಕುದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೆಂಕಟೇಶ್ ಮಾತನಾಡಿ, ಮಕ್ಕಳಿಗೆ ಮೊದಲು ಪಾಠ ಶಾಲೆ ಮನೆಯಾದರೆ ಹಿಂದೆ ಶಿಶುವಿಹಾರ ಎಂದು ಇತಿಹಾಸ, ಅಂದಿನ ಪ್ರಧಾನಿ ಉಕ್ಕಿನ ಮಹಿಳೆ ಇಂದಿರಾ ಗಾಂಧಿಯವರು ಅನುಷ್ಠಾನ ಮಾಡಿದ್ದರು ಅದು ಇಂದಿಗೆ ಸುಮಾರು ಐವತ್ತು ವರ್ಷಗಳಾಗಿವೆ ಎಂದು ಮನವಿ ಮಾಡಿದರು.

ಆದರೆ ಇಂದು ಅಜೀಂ ಪ್ರೇಂ ಜೀ ಅವರು ನೀಡಿರುವ ತರಬೇತಿಯನ್ನು ಸಮರ್ಪಕವಾಗಿ ಅಳವಡಿಸಿಕೊಂಡು ಕಾರ್ಯ ನಿರ್ವಹಿಸಿದರೆ ಮಕ್ಕಳು ಸರಿಯಾದ ಕ್ರಮದಲ್ಲಿ ಕಲಿಕೆಯನ್ನು ಪ್ರಾರಂಭಿಸುತ್ತಾರೆ ಎಂದು ತಿಳಿಸಿದರು. ಶಿಶು ಅಭಿವೃದ್ಧಿ ಅಧಿಕಾರಿ ಬಿ.ಎಲ್.ಸುರೇಂದ್ರ, ವನಜಾ, ಟಿಎಪಿಸಿಎಂಎಸ್ ನಿರ್ದೇಶಕ ರಮೇಶ್, ನಾಗರತ್ನ, ರೇಖಾ, ಅಜೀಂ ಪ್ರೇಂ ಜಿ ಸಂಸ್ಥೆಯ ಜಿಲ್ಲಾ ನೋಡೆಲ್ ಅಧಿಕಾರಿ ಪ್ರಿಯಾಂಕ, ತಾಲೂಕು ನೋಡೆಲ್ ಅಧಿಕಾರಿ ಹೇಮಂತ್, ಲಕ್ಷ್ಮೀದೇವಮ್ಮ ಭಾಗವಹಿಸಿದ್ದರು.

ಕಿರುಸುದ್ದಿ

ವೈದ್ಯಕೀಯ ಕ್ಷೇತ್ರದಲ್ಲಿ ಚಿನ್ನದ ಪದಕ

ಕೋಲಾರ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಪ್ರಕಟಿಸಿದ ಎಂ.ಡಿ.(ಎರ್ಮಜೆನ್ಸಿ ಮೆಡಿಸಿನ್) ಫಲಿತಾಂಶದಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿರುವ ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನ ಡಾ.ತೃಪ್ತಿ ಎನ್.ಎಸ್ ಅವರಿಗೆ ಚಿನ್ನದ ಪದಕ ಲಭಿಸಿದೆ. ಡಾ. ತೃಪ್ತಿ ಅವರು ಕೋಲಾರ ನಗರದ ಎಸ್.ಜಿ. ಲೇಔಟ್ ನಿವಾಸಿಗಳಾದ ಮೇಡತಂಬಿಹಳ್ಳಿಯವರು ಮತ್ತು ಜಿಲ್ಲಾ ಸರ್ಕಾರಿ ನೌಕರರ ಸಂಘದ ರಾಜ್ಯಪರಿಷತ್ ಸದಸ್ಯರೂ, ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಅಧೀಕ್ಷಕರಾಗಿರುವ ಎನ್.ಶ್ರೀನಿವಾಸರೆಡ್ಡಿ ಮತ್ತು ಸುನೀತಾ ದಂಪತಿಯ ಪುತ್ರಿಯಾಗಿದ್ದು, ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ. ಡಾ.ತೃಪ್ತಿ ಅವರ ಈ ಸಾಧನೆಗೆ ಕುಟುಂಬದವರು, ಬಂಧುಗಳು, ಸ್ನೇಹಿತರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುವ ಮೂಲಕ ಹಾಗೂ ಸಮಾಜಕ್ಕೆ ಸೇವೆ ಮಾಡಬೇಕು ಎಂಬುದು ತಮ್ಮ ಉದ್ದೇಶ ಎಂದು ಡಾ.ತೃಪ್ತಿ ಎನ್.ಎಸ್.ತಿಳಿಸಿದ್ದಾರೆ.

ದತ್ತ ಪ್ರತಿಷ್ಠಾ ವರ್ಧಂತಿ

ಕೋಲಾರ: ಶೃಂಗೇರಿ ಶ್ರೀಶಂಕರ ಮಠದಲ್ಲಿ ಇದೇ ಮಂಗಳವಾರ, ಮಾರ್ಚ್ 10ರಂದು ಒಂಭತ್ತನೇ ದತ್ತ ಪ್ರತಿಷ್ಠಾ ವರ್ಧಂತಿ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 6.30 ರಿಂದ ಮಹಾನ್ಯಾಸ ಪುರಸ್ಸರ ರುದ್ರಾಭಿಷೇಕ, ವಿಶೇಷ ಅಲಂಕಾರಗಳು ಏರ್ಪಡಿಸಿದ್ದು, 8.30 ಕ್ಕೆ ಮಹಾಮಂಗಳಾರತಿ ನಡೆಯಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗುರುದತ್ತರ ಕೃಪೆಗೆ ಪಾತ್ರರಾಗಲು ಶ್ರೀಮಠದ ಪ್ರಕಟಣೆಯಲ್ಲಿ ಅಧ್ಯಕ್ಷರು ಮತ್ತು ಧರ್ಮಾಧಿಕಾರಿಗಳು ಕೋರಿದ್ದಾರೆ.

ರಂಜಾನ್, ಯುಗಾದಿ ಜನರಿಗೆ ಸುಖ ಶಾಂತಿ ನೀಡಲಿ: ಸಚಿವ

ಕೋಲಾರ: ಅಂಜುಮಾನ್ ಇಸ್ಲಾಮೀಯ ಅಧ್ಯಕ್ಷ ಜಮೀರ್ ಅಹ್ಮದ್ ಹಾಗೂ ಕಾಂಗ್ರೆಸ್ ಮುಖಂಡ ಮತ್ತು ಸಮಾಜ ಸೇವಕ ಫರ್ವೀಜ್ ಖಾನ್ ನೇತೃತ್ವದಲ್ಲಿ ಶುಕ್ರವಾರ ಸಚಿವ ಕೆ.ಎಚ್.ಮುನಿಯಪ್ಪರವರ ಬೆಂಗಳೂರು ಮನೆಯಲ್ಲಿ ಭೇಟಿ ಮಾಡಿ ಅವರಿಗೆ ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರಿದರು. ಈ ವೇಳೆ ಸಚಿವರು ಮಾತನಾಡಿ, ರಂಜಾನ್ ಹಾಗೂ ಯುಗಾದಿ ಹಬ್ಬಗಳು ರಾಜ್ಯದ ಜನತೆಗೆ ಸುಖ ಶಾಂತಿ ಹಾಗೂ ಸಂವೃದ್ಧಿ ತರಲಿ ಹಾಗೂ ಹಿಂದೂ ಮುಸ್ಲಿಮ್ ಜನತೆ ಅಣ್ಣ ತಮ್ಮಂದಿರಂತೆ ಬಾಳೋಣ ಎಂದು ಆಶಿಸಿದರು. ಅಲ್ಪಸಂಖ್ಯಾತ ಸಮುದಾಯದ ಮುಖಂಡರುಗಳಾದ ಸಾದೀಕ್, ಷಂಶ್, ಆರೀಫ್, ಅಸ್ಲಂ, ಆಯೋಬ್ ಖಾನ್, ಸಕ್ಲೀನ್, ಸೈಬ್, ಇರ್ಷಾದ್ ಹಾಗೂ ಕಾಂಗ್ರೆಸ್ ಮುಖಂಡರುಗಳಾದ ಕಲ್ಲೇಶ್, ನದೀಶ್, ದೀಪು ಸೇರಿದಂತೆ ಹಲವಾರು ಉಪಸ್ಥಿತರಿದ್ದರು.

ರೈಲಿನಿಂದ ಇಳಿಯಲು ಹೋಗಿ ಎರಡು ಕಾಲು ತುಂಡು

ಬಂಗಾರಪೇಟೆ: ಪಟ್ಟಣದ ರೈಲ್ವೆ ನಿಲ್ದಾಣದಲ್ಲಿ ಚಲಿಸುತ್ತಿರುವ ರೈಲಿನಿಂದ ಇಳಿಯಲು ಹೋಗಿ ಆಯತಪ್ಪಿ ಕೆಳಗೆ ಬಿದ್ದು ಎರಡು ಕಾಲುಗಳು ತುಂಡಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಘಟನೆ ನಡೆದಿದೆ. ಇಂದು ಪಟ್ಟಣದ ರೈಲ್ವೆ ನಿಲ್ದಾಣದ ಪ್ಲಾಟ್ ಫಾರಂ ನಂಬರ್ 4ರಲ್ಲಿ ಮಾರಿಕೊಪ್ಪಂನಿಂದ ಬೆಂಗಳೂರಿಗೆ ಚಲಿಸುವ ಪ್ಯಾಸೆಂಜರ್ ರೈಲು ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಒಬ್ಬ ವ್ಯಕ್ತಿ ರೈಲುಗಾಡಿಯ ಡೋರ್‌ನಲ್ಲಿ ನಿಂತು ಚಲಿಸುತ್ತಿದ ರೈಲು ಗಾಡಿಯಿಂದ ಇಳಿಯಲು ಹೋಗಿ ಆಯತಪ್ಪಿ ಕೆಳಗೆ ಬಿದ್ದು ರೈಲು ಚಕ್ರಕ್ಕೆ ಸಿಲುಕಿ ಎರಡು ಕಾಲಗಳು ತುಂಡಾಗಿದ್ದು, ಸದರಿ ವ್ಯಕ್ತಿಯನ್ನು ಚಾಂದ್ ಪಾಷಾ ತಂದೆ ಅಬ್ದುಲ್ ಅನೀಫ್ (38) ರಹೀಂ ಕಾಂಪೌಂಡ್, ಬಂಗಾರಪೇಟೆ ನಿವಾಸಿಯಾಗಿದ್ದು, ಇತನನ್ನು ತಕ್ಷಣ ಪಟ್ಟಣದ ರೈಲ್ವೆ ಪೋಲೀಸರು ಸ್ಥಳಕ್ಕೆ ಆಗಮಿಸಿ ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಿದ್ದು, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಕೋಲಾರದ ಆಸ್ಪತ್ರೆಗೆ ಕಳುಹಿಸಲಾಗಿದೆ, ಈ ಬಗ್ಗೆ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಆರೋಗ್ಯ ಉಚಿತ ಶಿಬಿರ

ಚಿಕ್ಕಬಳ್ಳಾಪುರ: ಜಿ.ಎಸ್.ಆಸ್ಪತ್ರೆ ಹಾಗೂ ಭಾರತೀಯ ವೈದ್ಯಕೀಯ ಸಂಘ ಚಿಕ್ಕಬಳ್ಳಾಪುರ ಜಿಲ್ಲಾ ಶಾಖೆಯಿಂದ ಮಂಚೇನಹಳ್ಳಿ ತಾಲೂಕಿನ ಜರಬಂಡಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಅವರಣದಲ್ಲಿ ಇಂದು ಮಾ.8 ಉಚಿತ ಆರೋಗ್ಯ ಶಿಬಿರ ಆಯೋಜಿಸಲಾಗಿದೆ. ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ ತಿಳಿಸಿರುವ ಜಿ.ಎಸ್.ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಭಾರತೀಯ ವೈದ್ಯಕೀಯ ಸಂಘ ಚಿಕ್ಕಬಳ್ಳಾಪುರ ಜಿಲ್ಲಾ ಶಾಖೆ ಅಧ್ಯಕ್ಷ ಡಾ.ಸಿದ್ದಲಿಂಗಪ್ಪ ಜಿ.ಅವರು ಮಹಿಳಾ ದಿನಾಚರಣೆ ಅಂಗವಾಗಿ ಭಾರತೀಯ ವೈದ್ಯಕೀಯ ಮಂಡಳಿ ಇವರ ಸಂಯುಕ್ತ ಆಶ್ರಯದಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಜನರ ಆರೋಗ್ಯದ ಹಿತದೃಷ್ಟಿಯಿಂದ ಉಚಿತ ಆರೋಗ್ಯ ಶಿಬಿರವನ್ನು ಹಮ್ಮಿಕೊಂಡಿದ್ದು ಇಂದು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಶಿಬಿರ ನಡೆಯಲಿದೆ.



ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಪ್ರಕಟಿಸಿದ ಎಂ.ಡಿ ಫಲಿತಾಂಶದಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿರುವ ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿ ಹಾಗೂ ಕೋಲಾರದವರಾದ ಡಾ.ತೃಪ್ತಿ ತಮ್ಮ ಹೆತ್ತವರೊಂದಿಗೆ.

ವಸತಿರಹಿತ ದಲಿತ ಕುಟುಂಬಕ್ಕೆ 5 ಎಕರೆ ಕೃಷಿ ಭೂಮಿ ನೀಡಿ

ಕೋಲಾರ: ಅಂಬೇಡ್ಕರ್ ಅವರು ಕನಸು ಕಂಡ ಆರ್ಥಿಕ ಸಮಾನತೆಗಾಗಿ ಭೂಮಿ ನೀಡಿ ಎಂದು ಆಗ್ರಹಿಸಿ ಕೋಲಾರ ತಹಶಿಲ್ದಾರಾದ ನಯನಾರಿಗೆ ಮನವಿ ನೀಡಿ ರಾಜ್ಯಾಧ್ಯಕ್ಷ ಹೂಹಳ್ಳಿ ನಾಗರಾಜ್ ಹಕ್ಕೊತ್ತಾಯ ಮಂಡಿಸಿದರು.

ನಗರದ ತಹಸೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಭೂರಹಿತರ ನೇತೃತ್ವ ವಹಿಸಿದ್ದ ಅವರು, ಸ್ವಾತಂತ್ರ್ಯ ಬಂದು ದಶಕಗಳೇ ಕಳೆದರೂ, ಈ ನಾಡಿನ ಮಣ್ಣಿನ ಮಕ್ಕಳಾದ ದಲಿತರು ಮತ್ತು ಬಹುಜನರು ಇಂದಿಗೂ ಭೂಹೀನರಾಗಿ ಪರದಾಡುತ್ತಿರುವುದು ದುರಂತ. ಈ ಮಣ್ಣನ್ನು ನಂಬಿ, ಇದೇ ಮಣ್ಣಿನಲ್ಲಿ ಬೆವರು ಸುರಿಸಿ ದುಡಿಯುತ್ತಿರುವ ನಮಗೆ ಸ್ವಂತ ಭೂಮಿಯಿಲ್ಲದಂತಾಗಿದೆ ಎಂದರು.

ಶ್ರೀಮಂತರ ಪಾಲಾಗಿರುವ ಅಕ್ರಮ ಸರ್ಕಾರಿ ಭೂಮಿಯನ್ನು ವಶಪಡಿಸಿಕೊಂಡು ದಲಿತರಿಗೆ ಹಂಚಿಕೆ ಮಾಡಬೇಕು. ಜಿಲ್ಲೆಯಾದ್ಯಂತ ಇರುವ ಗಾಯರಾಣ ಮತ್ತು ಪಾಳು ಭೂಮಿಗಳ ಸರ್ವೆ ನಡೆಸಿ ಭೂ ರಹಿತರಿಗೆ ಒಪ್ಪಿಸಬೇಕು. ಭೂಮಿ ನೀಡುವವರೆಗೂ ಭೂ ರಹಿತ ಕಾರ್ಮಿಕರಿಗೆ ವಿಶೇಷ ಜೀವನಾಧಾರ ಭತ್ಯೆ ನೀಡಬೇಕೆಂದು ಜಿಲ್ಲಾಧ್ಯಕ್ಷರಾದ ನಂದಂಬಳ್ಳಿ ಶಶಿಕಲಾ ತಿಳಿಸಿದರು. ಹೋರಾಟದಲ್ಲಿ ಬ್ಯಾಟಪ್ಪ ಶ್ಯಾಮಲ ಅದಿಥಿ, ನಂದೀಶ್ ಗೌಡ, ಗೀರಿಜಾ, ರಾಮಮೂರ್ತಿ ಮತ್ತು ನೂರಾರು ಭೂರಹಿತರು ಭಾಗವಹಿಸಿದ್ದರು.



ಕೋಲಾರ ನಗರದ ತಹಸೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಭೂರಹಿತರು, ತಲಾ ಐದು ಎಕರೆ ಜಮೀನು ನೀಡಲು ಆಗ್ರಹಿಸಿದರು.

ಅರಾಭಿಕೊತ್ತನೂರು ಪ್ರೌಢಶಾಲೆಯಲ್ಲಿ ಶಿಕ್ಷಕ-ಪೋಷಕರ ಮಹಾಸಭೆ

ಜಿಲ್ಲೆಯಲ್ಲಿ 16 ಕೆಪಿಎಸ್



> ಮಕ್ಕಳನ್ನು ಶಾಲೆಗೆ ದಾಖಲಿಸಿದರೆ ನಮ್ಮ ಜವಾಬ್ದಾರಿ ಮುಗಿಯಿತು ಎಂಬ ಮನೋಭಾವದಿಂದ ಹೊರಬನ್ನಿ, ನಿಮ್ಮ ಮಕ್ಕಳ ಕಲಿಕಾ ಪ್ರಗತಿ ಅರಿಯಲು ಕನಿಷ್ಟ ತಿಂಗಳಿಗೆ ಎರಡು ಬಾರಿಯದರೂ ಶಾಲೆಗೆ ಬನ್ನಿ. ಸರ್ಕಾರಿ ಶಾಲೆಗಳನ್ನು ಉಳಿಸಲು ಪೋಷಕರು ಸಹಕಾರ ನೀಡಿ.
>
> ■ **ಅಲ್ಮಾಸ್‌ಫರ್ವೀನ್‌ತಾಜ್**, ಉಪನಿರ್ದೇಶಕಿ, ಶಾಲಾ ಶಿಕ್ಷಣ ಇಲಾಖೆ

ಕೋಲಾರ: ಜಿಲ್ಲೆಗೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ 16 ಕರ್ನಾಟಕ ಪಬ್ಲಿಕ್ ಶಾಲೆಗಳು ಮಂಜೂರಾಗಿವೆ ಮತ್ತು ಎಲ್ಲಾ ಪ್ರಾಥಮಿಕ ಶಾಲೆಗಳಲ್ಲೂ ದ್ವಿಭಾಷಾ ಮಾಧ್ಯಮದಲ್ಲಿ ಶಿಕ್ಷಣ ಜಾರಿಗೊಳ್ಳಲಿದ್ದು, ಮಕ್ಕಳು,ಪೋಷಕರ ಇಚ್ಚೆಗೆ ತಕ್ಕಂತೆ ಗುಣಮಟ್ಟದ ಹಾಗೂ ಕನ್ನಡ-ಇಂಗ್ಲೀಷ್ ಎರಡೂ ಮಾಧ್ಯಮಗಳಲ್ಲಿ ಶಿಕ್ಷಣ ಸಿಗಲಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಅಲ್ಮಾಸ್ ಫರ್ವೀನ್ ತಾಜ್ ತಿಳಿಸಿದರು.

ತಾಲ್ಲೂಕಿನ ಅರಾಭಿಕೊತ್ತನೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಜಿಲ್ಲಾಮಟ್ಟದ ಕಾರ್ಯಕ್ರಮವಾಗಿ ನಡೆದ ಈ ಶೈಕ್ಷಣಿಕ ಸಾಲಿನ ಕೊನೆಯ ಪೋಷಕ-ಶಿಕ್ಷಕರ ಮಹಾಸಭೆಗೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಶಾಲೆಯಲ್ಲಿ ಓದಿ ಸಾಧಕರಾಗಿ ಉತ್ತಮ ಸ್ಥಾನಕ್ಕೆ ಹೋಗಿರುವ ಹಳೆಯ ವಿದ್ಯಾರ್ಥಿಗಳ ನೆರವನ್ನು ಶಾಲೆಗೆ ಹರಿಸಲು ಎಸ್‌ಡಿಎಂಸಿ ಗಮನ ಹರಿಸಬೇಕು, ದಾಖಲಾತಿ ಹೆಚ್ಚಿಸಬೇಕು ಎಂದು ಕಿವಿಮಾತು ಹೇಳಿದರು.

ಶಿಕ್ಷಕರು ಶಾಲಾಭಿವೃದ್ಧಿ ಸಮಿತಿಯ ಸಹಕಾರ ಪಡೆದುದಾಖಲಾತಿ ಆಂದೋಲನನಡೆಸಲುಸಲಹೆ ನೀಡಿದ ಅವರು, ಸರ್ಕಾರಿ ಶಾಲೆಗಳ ದಾಖಲಾತಿ ಕುಸಿತ ಆತಂಕಕಾರಿಯಾಗಿದ್ದು, ಪೋಷಕರ ಮನವೊಲಿಸಿ ಮಕ್ಕಳನ್ನು ಇಲ್ಲೇ ದಾಖಲಿಸಲು ಮಾರ್ಗದರ್ಶನ ನೀಡಬೇಕು ಎಂದರು.

ಎಸ್ಸೆಸ್ಸೆಲ್ಸಿ ಶೇ.100 ಫಲಿತಾಂಶಕ್ಕೆ ಕ್ರಮ: ಜಿಲ್ಲೆಯ ಎಸ್ಸೆಸ್ಸೆಲ್ಸಿ ಫಲಿತಾಂಶವನ್ನು ಶೇ.100ರ ಗುರಿ ತಲುಪಿಸಲು ಶ್ರಮಿಸಲಾಗುತ್ತಿದೆ, ಶಿಕ್ಷಕರು, ಪೋಷಕರ ಸಹಕಾರ ಪಡೆದು ಗುಣಾತ್ಮಕ ಫಲಿತಾಂಶಕ್ಕಾಗಿ ರೂಪಿಸಿರುವ ಕ್ರಿಯಾ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಕ್ರಮ ವಹಿಸಲಾಗಿದೆ ಎಂದು ತಿಳಿಸಿದ ಅವರು, ಜಿಲ್ಲೆಯ ಶಾಸಕರೂ ಸಹಾ ಇದಕ್ಕೆ ಸಹಕಾರ ನೀಡಿ ಪೋಷಕರ ಮನೆ ಭೇಟಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಕ್ಕಳ ಕಲಿಕೆ ಸದೃಢಗೊಳ್ಳಲು ಸಹಕಾರ ನೀಡಿದ್ದಾರೆ ಎಂದು ಧನ್ಯವಾದ ಸಲ್ಲಿಸಿದರು.

ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ ರಾಜೇಶ್ವರಿ, ಜಿಲ್ಲಾ ಶಿಕ್ಷಣಾಧಿಕಾರಿ ಡಾ.ಎಸ್. ಆರ್.ವೀಣಾ ಮಾತನಾಡಿ,ಮಕ್ಕಳು ಶಾಲೆಗೆ ಗೈರಾಗುವುದನ್ನು ತಪ್ಪಿಸಿ ಸಹಕರಿಸಲು ಪೋಷಕರಿಗೆ ಮನವಿ ಮಾಡಿದ ಅವರು, ಉತ್ತಮ ಫಲಿತಾಂಶದ ದೃಷ್ಟಿಯಿಂದ ಶಿಕ್ಷಕರು ತರಗತಿ ಜತೆಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು. ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಶಂಕರೇಗೌಡ, ಶಾಲೆಯ ಮುಖ್ಯಶಿಕ್ಷಕಿ ತಾಹೇರಾನುಸ್ರತ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಡಿಡಿಪಿಐ ಕಚೇರಿಯ ತಾಂತ್ರಿಕ ಸಹಾಯಕ ಶರಣಪ್ಪ ಜಮಾದಾರ್, ಎಸ್‌ಡಿಎಂಸಿ ಅಧ್ಯಕ್ಷ ರಾಘವೇಂದ್ರ, ನಿಕಟಪೂರ್ವ ಅಧ್ಯಕ್ಷ ಮಹೇಂದ್ರ, ಎಸ್‌ಡಿಎಂಸಿ ಉಪಾಧ್ಯಕ್ಷ ವೆಂಕಟೇಶಪ್ಪ , ಶಿಕ್ಷಕರಾದ ಸಿದ್ದೇಶ್ವರಿ, ಎಂ.ಆರ್.ಗೋಪಾಲಕೃಷ್ಣ, ಭವಾನಿ, ವೆಂಕಟರೆಡ್ಡಿ,ಸುಗುಣಾ, ಶ್ವೇತಾ, ಶ್ರೀನಿವಾಸಲು, ರಮಾದೇವಿ, ಚೈತ್ರಾ ಮತ್ತಿತರರಿದ್ದರು.

ರಾಜ್ಯ ಬಜೆಟ್ ಖಂಡಿಸಿ ಜಿಲ್ಲಾ ಬಿಜೆಪಿಯಿಂದ ಅಣಕು ಪ್ರದರ್ಶನ

ಕೋಲಾರ: ಸಿದ್ದರಾಮಯ್ಯ ಅವರು ಮಂಡಿಸಿರುವ 17ನೇ ರಾಜ್ಯ ಬಜೆಟ್ ನಲ್ಲಿ ಜಿಲ್ಲೆಗೆ ಚಂಬು ನೀಡಿದೆ ಎಂದು ಜಿಲ್ಲಾ ಬಿಜೆಪಿ ವತಿಯಿಂದ ನಗರದ ಡೂಂ ಲೈಟ್ ವೃತ್ತದಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜ್, ಮಾವು ಸಂಸ್ಕರಣ ಘಟಕ, ರಿಂಗ್ ರೋಡ್ ರಸ್ತೆ, ನೂತನ ಎಪಿಎಂಸಿ ಮಾರುಕಟ್ಟೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆ ಮಾಡುವ ರೀತಿ ಅಣಕು ಪ್ರದರ್ಶನ ಮಾಡುವ ಮೂಲಕ ವಿನೂತನ ಪ್ರತಿಭಟನೆಯನ್ನು ಮಾಡಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲೆಯ 4 ಕಾಂಗ್ರೆಸ್ ಶಾಸಕರ ಹಾಗೂ ಇಬ್ಬರು ಎಂಎಲ್‌ಸಿಗಳ ವಿರುದ್ಧ ಘೋಷಣೆಗಳನ್ನು ಕೂಗಿ, ಇವರ ಮುಖವಾಡವನ್ನು ಧರಿಸಿ ಕೋಲಾರ ಜಿಲ್ಲೆ ಜನತೆಗೆ ಚಂಬು ನೀಡಿದ್ದಾರೆ ಎಂದು ವ್ಯಂಗ್ಯ ಮಾಡುತ್ತಾ ಪ್ರತಿಭಟಿಸಿದರು. ಈ ವೇಳೆ ಮಾತನಾಡಿದ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ಓಂ ಶಕ್ತಿ ಚಲಪತಿ, ಹಣ್ಣು, ತರಕಾರಿ, ಹೂವು, ಬೆಳೆಯುವುದರಲ್ಲಿ ಜಿಲ್ಲೆಯು ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಅತಿ ಕಡಿಮೆ ಮಳೆ ಮತ್ತು ಅಂತರ್ಜಲದ ನಡುವೆ ಬೆಳೆಯುವ ಹಾಲು, ರೇಷ್ಮೆ, ತರಕಾರಿ, ಹೂ ಹಣ್ಣುಗಳಿಗೆ, ಬೆಳೆಗಳಿಗೆ ಅಗತ್ಯವಿರುವ ಮಾರುಕಟ್ಟೆ ಜಿಲ್ಲೆಯಲ್ಲಿ ಇಲ್ಲವಾಗಿದೆ. ಹಣ್ಣು, ಹೂ ಅಲ್ಪ ದಿನಗಳ ಕಾಲ ಶೇಖರಿಸಿಡಲು ಶೀಥಲೀಕರಣ ಘಟಕಗಳಿಲ್ಲದೆ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಟೊಮ್ಯಾಟೋ, ಮಾವಿನ ಹಣ್ಣು ಶೇಖರಿಸಲು ಘಟಕಗಳು ಘೋಷಣೆ ಮಾಡದಿರುವುದು ರೈತರಿಗೆ ಮಾಡಿರುವ ಅನ್ಯಾಯವೆಂದು ಆಕ್ರೋಶ ವ್ಯಕ್ತಪಡಿಸಿದರು.

ಎಪಿಎಂಸಿ ಮಾರುಕಟ್ಟೆಗೆ ಸ್ಥಳ ಪರಿಶೀಲನೆ ಮಾಡುವ ಹಗಲು ನಾಟಕ, ರಿಂಗ್ ರೋಡ್ ಮಾಡುವುದಾಗಿ ಸರ್ವೇ ಮಾಡುವುದು ಇದೇ ರೀತಿ ಜನರಿಗೆ ಮೋಸ ಮಾಡಿ ಜಿಲ್ಲೆ ವಿಧಾನಸಭಾ ನಾಲ್ಕು ಶಾಸಕರು, ಇಬ್ಬರು ಎಂಎಲ್‌ಸಿಗಳು ಜನಗಳ ಮುಂದೆ ತಮ್ಮನ್ನು ತಾವೇ ಮೇಧಾವಿಗಳು ಎಂದು ಹೇಳುತ್ತಾ ವಿಧಾನಸೌಧದಲ್ಲಿ ಬಾಯಿ ಬಿಡದೆ ಜಿಲ್ಲೆಗೆ ಮೋಸ ಮಾಡಿದ್ದಾರೆ ಎಂದು ಗುಡುಗಿದರು. ಜಿಲ್ಲೆಯ ವಿದ್ಯಾವಂತ ಮಕ್ಕಳಿಗೆ, ಅದರಲ್ಲೂ ಬಡ ರೈತರ, ಮಧ್ಯಮ ವರ್ಗದ ವಿದ್ಯಾವಂತ ಮಕ್ಕಳು ವೈದ್ಯರಾಗುವ ಬಯಕೆಯನ್ನು ಈಡೇರಿಸಬೇಕಾಗಿರುವ ಇವರು, ವರ್ಷಕ್ಕೊಂದು ಮೆಡಿಕಲ್ ಕಾಲೇಜುಗಳನ್ನು ತರುವುದರಲ್ಲಿ ನಿಸ್ಸೀಮರಾಗಿದ್ದಾರೆ ಎಂದರು. ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ವಿಜಯಕುಮಾರ್ ಕಾರ್ಯಕರ್ತರಾದ ಸಮಾಬಾಬು, ಮಂಜುನಾಥ್, ನಾಮಾಲ್ ಮಂಜುನಾಥ್, ಹರೀಶ್, ಲಕ್ಷ್ಮಣ್ ಗೌಡ, ನಟರಾಜ್, ಸುರೇಶ್ ಹಾಗೂ ಮತ್ತಿತರರು ಹಾಜರಿದ್ದರು.



ದಲಿತ ಕುಟುಂಬಕ್ಕೆ ಪಿಡಿಒ ಅನ್ಯಾಯ ಖಂಡಿಸಿ ಪ್ರತಿಭಟನೆ

ಕೋಲಾರ: ತಾಲೂಕಿನ ಮಾರ್ಜೇನಹಳ್ಳಿ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಮಧುಮತಿ ಅವರು ದಲಿತ ಕುಟುಂಬಕ್ಕೆ ಅನ್ಯಾಯ ಎಸಗಿದ್ದಾರೆಂದು ಆರೋಪಿಸಿ ಕರ್ನಾಟಕ ದಲಿತ ಸಿಂಹ ಸೇನೆ ಹೂಹಳ್ಳಿ ಪ್ರಕಾಶ್ ನೇತೃತ್ವದಲ್ಲಿ ಜಿಪಂ ಮುಂದೆ ಪ್ರತಿಭಟನೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಪಂ ಉಪ ಕಾರ್ಯದರ್ಶಿ ರಮೇಶ್‌ರಿಗೆ ಮನವಿ ಸಲ್ಲಿಸಿದ ಅವರು, ಗ್ರಾಮದ ದಲಿತ ಕುಟುಂಬದ ಲಕ್ಷ್ಮಮ್ಮ ಕೋಂ ಬೈರಪ್ಪ ನವರ ನಿವೇಶನದ ವಿಚಾರವಾಗಿ ಶುಕ್ರವಾರ 11 ಗಂಟೆಗೆ ಸ್ಥಳ ಪರಿಶೀಲನೆ ಮತ್ತು ಮಹಜರ್ ಮಾಡಲು ಸಮಯ ನಿಗಧಿಪಡಿಸದ್ದರು.

ಎದುರುದಾರರ ಪರವಾಗಿ ಶಾಮಿಲಾಗಿರುವ ಮಧುಮತಿಯವರು ಸ್ಥಳಕ್ಕೆ ಬರದೆ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ದಲಿತ ಕುಟುಂಬಕ್ಕೆ ಅನ್ಯಾಯ ಮಾಡಿದ್ದಾರೆ.

ಮನವಿ ಸ್ವೀಕರಿಸಿದ ಡಿ.ಎಸ್. ರಮೇಶ್ ಮಾತನಾಡಿ ಸೋಮವಾರ ಸಮಸ್ಯೆ ಬಗೆಹರಿಸಲು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿದರು. ಪ್ರತಿಭಟನೆಯಲ್ಲಿ ಲಕ್ಷ್ಮಮ್ಮ,ಬೈರಪ್ಪ,ಜಿಲ್ಲಾಧ್ಯಕ್ಷರಾದಮಾಸ್ತಿಬಾಬು, ಪ್ರಧಾನ ಕಾರ್ಯದರ್ಶಿ ಸಾಮ್ರಾಟ್, ಕೃಷ್ಣಮೂರ್ತಿ, ಸುಬ್ರಮಣಿ, ಹನುಮಾನ್, ಕೆಂಚಪ್ಪ, ರತ್ನಪ್ಪ, ಘಟ್ಟಹಳ್ಳಿ ಮಂಜು ಚೋಳಘಟ್ಟ ರಾಮಚಂದ್ರಪ್ಪ, ವೆಂಕಟೇಶ್, ಮುನಿಯಪ್ಪ ಇನ್ನಿತರರು ಭಾಗವಹಿಸಿದ್ದರು.



ಪೌರಕಾರ್ಮಿಕರಿಗೆ ನಿಂದನೆ, ಪ್ರಾಣ ಬೆದರಿಕೆ

ಬಂಗಾರಪೇಟೆ: ಮಹಿಳಾ ಪೌರಕಾರ್ಮಿಕರ ಮೇಲೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಪ್ರಾಣ ಬೆದರಿಕೆ ಹಾಕಿದ್ದಾರೆಂದು ಪಟ್ಟಣದ ಪೌರಕಾರ್ಮಿಕರು ತಮ್ಮ ಕೆಲಸಗಳನ್ನು ಸ್ಥಗಿತಗೊಳಿಸಿ ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿರುವ ಘಟನೆ ನಡೆದಿದೆ.

ಪಟ್ಟಣದ ವಿಜಯನಗರದ ನಾಲ್ಕನೇ ರಸ್ತೆಯಲ್ಲಿರುವ ನವೀನ್ ರಾಜ್ ಎಂಬಾತ ಮಹಿಳಾ ಪೌರ ಕಾರ್ಮಿಕರನ್ನು ಕಂಡರೆ ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ ಬಾಯಿಗೆ ಬಂದಂತೆ ಬೈಯುವುದು, ವಿನಾ ಕಾರಣ ಕಿರುಕುಳ ನೀಡುವುದು. ಇದರಿಂದ ಬೇಸತ್ತು ಪೌರ ಕಾರ್ಮಿಕರು ಪಟ್ಟಣದ ಪೊಲೀಸ್ ಠಾಣೆಗೆ ತಮ್ಮ ಕೆಲಸವನ್ನು ಸ್ಥಗಿತಗೊಳಿಸಿ ಪುರಸಭೆ ಮುಖ್ಯಾಧಿಕಾರಿ ಹಾಗೂ ಸಿಬ್ಬಂದಿ ಆಗಮಿಸಿ ನವೀನ್ ರಾಜ್ ವಿರುದ್ದ ದೂರು ದಾಖಲಿಸಿದ್ದಾರೆ.

ಬನಿಯನ್ ಮತ್ತು ಒಳಚಡ್ಡಿ ಹಾಕಿಕೊಂಡು ಮಾಡಿ ತಮ್ಮ ಮನೆಯ ಮಹಡಿಯ ಮೇಲೆ ನಿಂತು ಪ್ರತಿದಿನ ಕೆಟ್ಟಶಬ್ದಗಳಿಂದ ಮಹಿಳಾ ಪೌರ ಕಾರ್ಮಿಕರನ್ನು ಬಯ್ಯುವುದೇಈತನನಿತ್ಯಕಾಯಕವಾಗಿದ್ದು, ಇಂದೂ ಸಹ ಅದೇ ರೀತಿ ನಡೆದುಕೊಂಡ ಕಾರಣ ಪೌರಕಾರ್ಮಿಕರೆಲ್ಲರೂ ತಮ್ಮ ಕೆಲಸಗಳನ್ನು ಸ್ಥಗಿತಗೊಳಿಸಿ ಪುರಸಭಾ ಅಧಿಕಾರಿಗಳೊಂದಿಗೆ ಸಿಬ್ಬಂದಿ ಆಗಮಿಸಿ ಸಿಐ ರವಿಕುಮಾರ್ ರವರಿಗೆ ದೂರು ನೀಡಿದ್ದಾರೆ.

ಈವೇಳೆಪುರಸಭಾಮುಖ್ಯಾಧಿಕಾರಿಸತ್ಯನಾರಾಯಣ ಮಾತನಾಡಿ ನವೀನ್‌ರಾಜ್ ಎಂಬಾತ ಈ ರೀತಿ ಹಲವಾರು ಬಾರಿ ಪುರಸಭಾ ಮಹಿಳಾ ಕಾರ್ಮಿಕರಿಗೆ ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ ಪ್ರಾಣ ಬೆದಿರಿಕೆ ಹಾಕಿದ್ದಾನೆ. ಆದ್ದರಿಂದ ಕಾರ್ಮಿಕರು ಕೆಲಸವನ್ನು ಸ್ಥಗಿತಗೊಳಿಸಿದ್ದಾರೆ.

ಈತನ ವಿರುದ್ಧ ಠಾಣೆಗೆ ದೂರು ನೀಡಲಾಗಿದ್ದು ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಈ ವೇಳೆ ಟಿಎಪಿಎಂಎಸ್ ಉಪಾಧ್ಯಕ್ಷ ಆ.ನಾ.ಹರೀಶ್,ದಲಿತ ಸಿಂಹಸೇನೆ ಅಧ್ಯಕ್ಷ ಹುಣಸನಹಳ್ಳಿ ವೆಂಕಟೇಶ್ ಹಾಗೂ ಪುರಸಭಾ ಸಿಬ್ಬಂದಿ ಹಾಗೂ ಪೌರಕಾರ್ಮಿಕರು ಹಾಜರಿದ್ದರು.



ಬಜೆಟ್: ಕೋಲಾರ, ಚಿಕ್ಕಬಳ್ಳಾಪುರ ಜನತೆಗೆ ನಿರಾಸೆ

ಕೋಲಾರ: ರಾಜ್ಯ ಬಜೆಟ್‌ನಲ್ಲಿ ಕೆ.ಸಿ ವ್ಯಾಲಿ, ಎಚ್.ಎನ್. ವ್ಯಾಲಿ 3ನೇ ಹಂತದ ಶುದ್ದೀಕರಣ ಮಾತೇ ಇಲ್ಲ ಯಾಕೆ, ಕನಿಷ್ಠ ಪಕ್ಷ ಕೃಷ್ಣ ನದಿಯ ನೀರಿನ ವಿಚಾರ ಪ್ರಸ್ತಾಪವೇ ಇಲ್ಲ ಎತ್ತಿನಹೊಳೆ ಕೂಡ ಮರೀಚಿಕೆಯಾಗಿದೆ. ಈ ವಿಚಾರಗಳು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಜನರಿಗೆ ನಿರಾಸೆ ತರಿಸಿದೆ ಎಂದು ರೈತ ಸಂಘ ಹಾಗೂ ಹಸಿರು ಸೇನೆ ಯುವ ಘಟಕ ಅಧ್ಯಕ್ಷ ಕಲ್ವಮಂಜಲಿ ರಾಮುಶಿವಣ್ಣ ತಿಳಿಸಿದ್ದಾರೆ. ರೈತ ನಾಯಕ ದಿ.ಸಿ.ಬೈರೇಗೌಡರವರು ಪ್ರತಿನಿಧಿಸಿ ಶಾಸಕರು ಮಂತ್ರಿಯಾದ ವೇಮಗಲ್ ವಿಧಾನಸಭಾ ಕ್ಷೇತ್ರವನ್ನು ವೇಮಗಲ್ ತಾಲೂಕು ಕೇಂದ್ರವನ್ನಾಗಿ ಮಾಡಿ ವೇಮಗಲ್ ವಿಧಾನಸಭಾ ಕ್ಷೇತ್ರವಾಗಿ ಮರುಸ್ಥಾಪನೆ ಮಾಡಬೇಕು. ಜೊತೆಗೆ ಕ್ಯಾಲನೂರುನ್ನು ಹೋಬಳಿ ಕೇಂದ್ರವನ್ನಾಗಿ ಮೇಲ್ದರ್ಜೆಗೆ ಏರಿಸಬೇಕು. ವೇಮಗಲ್ ಮತ್ತು ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಪ್ರತಿ ಎಕರೆಗೆ 3 ಕೋಟಿ ಹಣ ಪರಿಹಾರವಾಗಿ ನೀಡಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇವೆ. ಕೋಲಾರ ಜಿಲ್ಲೆಯ ಜನರ ಬೇಡಿಕೆಗಳು ಈಡೇರಿಸುವ ತನಕ ನಿರಂತರವಾಗಿ ರೈತ ಸಂಘದಿಂದ ಹೋರಾಟಗಳನ್ನು ಹಮ್ಮಿಕೊಳ್ಳಲಾಗುತ್ತದೆ ಎಂದು ಹಸಿರು ಸೇನೆಯ ಕಲ್ವಮಂಜಲಿ ರಾಮು ಶಿವಣ್ಣ ತಿಳಿಸಿದರು.

ಅಭಿವೃದ್ಧಿ ಶೂನ್ಯ ಬಜೆಟ್: ಕೆಂಬೋಡಿ ನಾರಾಯಣಸ್ವಾಮಿ



ಕೋಲಾರ: ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರದ 17ನೇ ಬಜೆಟ್ ಹಿಂದೂಗಳ ತೆರಿಗೆ ಹಣವನ್ನು ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಮುಸ್ಲಿಮರಿಗೆ ಧಾರೆ ಎರೆದಿರುವ ರಾಜ್ಯ ಅಭಿವೃದ್ಧಿ ಶೂನ್ಯ ಬಜೆಟ್ ರಾಜ್ಯದ ಜನತೆಯ ತಲೆಯ ಮೇಲೆ ಸಾಲ ಹೊರೆಸಿದೆ ಎಂದು ಬಿಜೆಪಿ ಮಾಧ್ಯಮ ಸಹ ಸಂಚಾಲಕ ಕೆಂಬೋಡಿ ನಾರಾಯಣಸ್ವಾಮಿ ವ್ಯಂಗ್ಯವಾಡಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಕಾಂಗ್ರೆಸ್‌ನ ಸಿದ್ದರಾಮಯ್ಯ ಸರ್ಕಾರ ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಸಂಪೂರ್ಣವಾಗಿ ಮುಸ್ಲಿಮರನ್ನು ಓಲೈಕೆ ಮಾಡುತ್ತಾ ಬಹುಸಂಖ್ಯಾತ ಹಿಂದೂಗಳಿಗೆ ವಂಚನೆ ಮಾಡುತ್ತಾ ಬಂದಿದೆ ಎಂದಿದ್ದಾರೆ. ಸಿದ್ದರಾಮಯ್ಯನವರ ಈ ಮೂರು ಬಜೆಟ್‌ನಲ್ಲಿ ಮುಸ್ಲಿಮರಿಗೆ ಅತಿ ಹೆಚ್ಚಿಗೆ ಅನುದಾನವನ್ನು ನೀಡುತ್ತಾ ಬಂದಿರುವುದು ರಾಜ್ಯವನ್ನು ಯಾವ ದಿಕ್ಕಿಗೆ ಕೊಂಡೊಯ್ಯುತ್ತಿದ್ದಾರೆ ಎಂಬುದು ಅರ್ಥವಾಗುತ್ತಿಲ್ಲ, ಸಾವಿರಾರು ಕೋಟಿ ಹಿಂದೂಗಳ ತೆರಿಗೆ ಹಣವನ್ನು ಮುಸ್ಲಿಮರಿಗೆ ನೀಡುತ್ತಿರುವಂತೆ ಬಹುಸಂಖ್ಯಾತ ಹಿಂದೂಗಳಿಗೂ ನೀಡಬೇಕಾಗಿತ್ತು. ಆದರೆ ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಹಚ್ಚುತ್ತಿರುವುದು ಮುಂದಿನ ದಿನಗಳಲ್ಲಿ ರಾಜ್ಯದ ಜನರೇ ತಕ್ಕ ಉತ್ತರ ನೀಡಲಿದ್ದಾರೆ. ಕೋಲಾರ ಎಪಿಎಂಸಿ ಮಾರ್ಕೆಟ್‌ಗೆ ಜಾಗ ನೀಡುವ ಬದಲು ರೈತ ಮಾಲ್‌ಗಳನ್ನು ಮಾಡುವುದಾಗಿ ಹೇಳಿದ್ದಾರೆ. ಕೋಲಾರ ಕೆ.ಸಿ ವ್ಯಾಲಿ ಮೂರನೇ ಹಂತದ ಶುದ್ಧೀಕರಣ ಪ್ರಸ್ತಾಪ ಮಾಡಿಲ್ಲ, ಕೋಲಾರದ ಮೆಡಿಕಲ್ ಕಾಲೇಜ್ ಗಗನ ಕುಸುಮವಾಗಿದೆ ಕೋಲಾರ ಜಿಲ್ಲೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವ ಸಿದ್ದರಾಮಯ್ಯನವರ ಬಜೆಟ್ ರೈತ ವಿರೋಧಿ, ದಲಿತ ವಿರೋಧಿ, ಹಿಂದುಳಿದ ವರ್ಗಗಳ ವಿರೋಧಿ, ವಿದ್ಯಾರ್ಥಿ ವಿರೋಧಿ ಬಜೆಟ್ ಎಂದು ಟೀಕಿಸಿದ್ದಾರೆ.

ಕೇಂದ್ರ ಬಜೆಟ್ ನಂತರದ ವೆಬಿನಾರ್, ದೇಶಿ ತಳಿಗಳ ಸಂರಕ್ಷಣೆ ಕುರಿತು

ಕೃಷಿ ಉತ್ಪನ್ನಗಳಲ್ಲಿ ಕೀಟನಾಶಕ ಶೇಷಾಂಶ: ತರಬೇತಿ

ಕೋಲಾರ: ಪ್ರಧಾನ ಮಂತ್ರಿಗಳ ಸಾನ್ನಿಧ್ಯದಲ್ಲಿ ಬಜೆಟ್ ನಂತರದ ವೆಬಿನಾರ್ ನಡೆದಿದ್ದು, ಕೆವಿಕೆಯಲ್ಲಿ ರೈತರಿಗೆ ಅದರ ನೇರಪ್ರಸಾರ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಗ್ರಾಮೀಣ ಅಭಿವೃದ್ಧಿ, ಗ್ರಾಮೀಣ ಪ್ರದೇಶ ರೈತರ ಅಭಿವೃದ್ಧಿ ಆಗಲು ಆರ್ಥಿಕವಾಗಿ ಸಬಲರನ್ನಾಗಿ ಮಾಡುವ ಕುರಿತು ಪ್ರಧಾನಿ ನರೇಂದ್ರ ಮೋದಿಯವರು ನೇರಪ್ರಸಾರದಲ್ಲಿ ಮಾತನಾಡಿದರು.

ನೇರಪ್ರಸಾರದ ನಂತರ ರೈತರಿಗಾಗಿ ಕೋಲಾರ ಜಿಲ್ಲೆಯಲ್ಲಿ ಕೃಷಿ ಮತ್ತು ರೈತರ ಆರೋಗ್ಯದ ದೃಷ್ಟಿ ಯಿಂದ ದೇಶಿ ತಳಿಗಳ ಸಂರಕ್ಷಣೆ ಹಾಗೂ ಕೃಷಿ ಉತ್ಪನ್ನಗಳಲ್ಲಿ ಕಂಡುಬರುವ ಕೀಟನಾಶಕಗಳ ಶೇಷಾಂಶದ ಬಗ್ಗೆ ನಗರದ ಕೃಷಿ ವಿಜ್ಞಾನ ಕೇಂದ್ರದಲ್ಲಿ ರೈತರಿಗೆ ವಿಶೇಷ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕಿ ಜಾವಿದಾ ನಸೀಮಾ ಖಾನಂ ಉದ್ಘಾಟನೆ ನೆರವೇರಿಸಿ ಮಾತ ನಾಡಿ, ದೇಶಿ ತಳಿಗಳ ಮಹತ್ವವನ್ನು ವಿವರಿಸಿ, ದೇಶಿ ತಳಿಗಳು ಸ್ಥಳೀಯ ವಾತಾವರಣಕ್ಕೆ ಉತ್ತಮವಾಗಿ ಹೊಂದಿಕೊಳ್ಳುವ ಸಾಮರ್ಥ್ಯ ಹೊಂದಿದ್ದು, ಅವುಗಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿರುತ್ತದೆ ಎಂದು ತಿಳಿಸಿದರು.



ಇತ್ತೀಚಿನ ವರ್ಷಗಳಲ್ಲಿ ಹೈಬ್ರಿಡ್ ತಳಿಗಳ ಬಳಕೆಯಿಂದ ಆಹಾರ ಉತ್ಪಾದನೆ ಹೆಚ್ಚಾದರೂ, ಅನೇಕ ದೇಶಿ ತಳಿಗಳು ನಿಧಾನವಾಗಿ ಕಣ್ಮರೆಯಾಗುತ್ತಿರುವುದು ಆತಂಕಕಾರಿ ವಿಷಯವೆಂದರು. ಇದು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಗಂಭೀರ ವಿಷಯವಾಗಿದೆ ಎಂದು ತಿಳಿಸಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಶಿವಾನಂದ ಹೊಂಗಲ, ಡಾ.ತಿಮ್ಮೇಗೌಡ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಜಿಕೆವಿಕೆ, ಬೆಂಗಳೂರುರವರು ಸುಸ್ಥಿರ ಕೃಷಿ ಕುರಿತು, ಡಾ. ಅನಿಲ್ ಕುಮಾರ್, ವಿಜ್ಞಾನಿ(ಮಣ್ಣು ವಿಜ್ಞಾನ) ಕೆವಿಕೆ, ಕೋಲಾರ, ಅರಿವು ಪ್ರಭಾಕರ್, ಪ್ರಗತಿ ಪರ ರೈತರು, ಪಿಚ್ಚಗುಂಟ್ಲಹಳ್ಳಿ, ಮುಳಬಾಗಿಲು ಹಾಗೂ ಚಿಟ್ನಹಳ್ಳಿ ನಾಗರಾಜ, ಇವರು ತಾಂತ್ರಿಕ ಅಧಿವೇಶನದಲ್ಲಿ ದೇಸಿ ತಳಿಗಳ ಸಂರಕ್ಷಣೆ ಕುರಿತು ವಿಸ್ತಾರವಾದ ವಿವರ ನೀಡಿದರು. ಲಕ್ಷ್ಮೀದೇವಿ ಎಸ್. ವಿ., ಉಪಯೋಜನಾ ನಿರ್ದೇಶಕರು, ಆತ್ಮಯೋಜನೆ, ಕೋಲಾರ, ಹಾಗೂ ಆತ್ಮ ಯೋಜನೆಯ ಸಿಬ್ಬಂದಿಗಳು, ಕೆವಿಕೆ ಸಿಬ್ಬಂದಿ ಉಪಸ್ಥಿತರಿದ್ದರು.

ಕೆ.ಎಚ್.ಮುನಿಯಪ್ಪ ಹುಟ್ಟುಹಬ್ಬ ಹಿನ್ನೆಲೆ, ಹಾಲಿನ ಅಭಿಷೇಕ, ರಕ್ತದಾನ ಶಿಬಿರ

ಆಟೋಚಾಲಕರಿಗೆ ಸಮವಸ್ತ್ರ, ರೋಗಿಗಳಿಗೆ ಹಣ್ಣು

ಕೋಲಾರ: ರಾಜ್ಯದಲ್ಲಿ ದಲಿತರಿಗೆ ಅವಕಾಶ ಸಿಗುವುದಾದರೆ ಸತತ ಏಳುಬಾರಿ ಸಂಸದರಾಗಿ, ಈಗ ರಾಜ್ಯ ಸರ್ಕಾರದ ಆಹಾರ ಸಚಿವರಾಗಿ ಅತ್ಯುತ್ತಮ ಕೆಲಸ ಮಾಡಿ ಜನಾನುರಾಗಿಯಾಗಿರುವ ಕೆ.ಎಚ್. ಮುನಿಯಪ್ಪ ಅವರನ್ನು ಕಾಂಗ್ರೆಸ್ ಹೈಕಮಾಂಡ್ ಮುಖ್ಯಮಂತ್ರಿಯನ್ನಾಗಿ ಘೋಷಿಸಲಿ ಎಂದು ಅವರ ಅಭಿಮಾನಿಗಳು ಆಗ್ರಹಿಸಿದರು.

ಸಚಿವಕೆ.ಎಚ್.ಮುನಿಯಪ್ಪಅವರಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿಗಳು ನಗರದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ನಗರದ ಡೂಂಲೈಟ್ ವೃತ್ತದಲ್ಲಿ ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ, ಸಾಯಿಬಾಬಾ ದೇವಾಲಯದಲ್ಲಿ ವಿಶೇಷ ಪೂಜೆ, ಪ್ರಸಾದ ವಿನಿಯೋಗ, ಜಿಲ್ಲಾಸ್ಪತ್ರೆಯಲ್ಲಿ ಹಣ್ಣುಹಂಪಲು ವಿತರಣೆ, ಗಂಗಮ್ಮನಪಾಳ್ಯದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಸಿಎಂ ಸ್ಥಾನಕ್ಕೆ ಸೂಕ್ತ ನಾಯಕ: ಕಾಂಗ್ರೆಸ್ ಎಸ್ಸಿಘಟಕದ ಜಿಲ್ಲಾಧ್ಯಕ್ಷ ಕೆ.ಜಯದೇವ್ ನಗರದ ಡೂಂಲೈಟ್ ವೃತ್ತದಲ್ಲಿ ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಿ ಮಾತನಾಡಿ, ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನವನ್ನು ದಲಿತರಿಗೆ ನೀಡುವುದಾದರೆ ಏಳುಬಾರಿ ಸಂಸದರಾಗಿ ಕೇಂದ್ರ ಸಚಿವರಾಗಿ ಕೆಲಸ ಮಾಡುವ ಕೆ.ಎಚ್.ಮುನಿಯಪ್ಪ ಅವರನ್ನು ಪರಿಗಣಿಸಬೇಕು ಎಂಬುದುಅಭಿಮಾನಿಗಳಮನವಿಯಾಗಿದೆಎಂದರು. ಜಿಲ್ಲೆಯಲ್ಲಿ ಏಳುಬಾರಿ ಸಂಸದರಾಗಿ ರಾಷ್ಟ್ರೀಯ ಹೆದ್ದಾರಿ, ರೈಲ್ವೆ ಮಾರ್ಗಗಳ ನಿರ್ಮಾಣ ಮತ್ತಿತರ ಜನಪರ ಕಾರ್ಯಗಳ ಮೂಲಕ ಜನರ ಮನಗೆದ್ದಿದ್ದ ಕೆ.ಎಚ್.ಮುನಿಯಪ್ಪ ಅವರು ಸರಳ,ಸಜ್ಜನಿಕೆ, ತಾಳ್ಮೆಗೆ ಹೆಸರಾಗಿದ್ದು, ಅವರಿಗೆ ದೇವರು ಉತ್ತಮ ಆರೋಗ್ಯ,ಐಶ್ವರ್ಯ, ಅವಕಾಶಗಳನ್ನು ನೀಡಲಿ ಎಂದು ಪ್ರಾರ್ಥಿಸಿದ್ದಾಗಿ ತಿಳಿಸಿದರು. ಕಾಂಗ್ರೆಸ್ ಎಸ್ಸಿಘಟಕದ ಜಿಲ್ಲಾಧ್ಯಕ್ಷ ಕೆ.ಜಯದೇವ್, ನಗರಸಭಾ ಹಾಲಿ ಸದಸ್ಯ ಮುರಳಿಗೌಡ, ಮಾಜಿ ಸದಸ್ಯರಾದ ಸೋಮಶೇಖರ್, ಲಾಲ್‌ಬಹುದ್ದೂರು ಶಾಸ್ತ್ರಿ, ಎಲ್.ಖಲೀಲ್, ಮುಖಂಡರಾದ ತಾಪಂ ಮಾಜಿ ಸದಸ್ಯ ಮುನಿರಾಜು, ಪ್ಯಾರೇಜಾನ್, ನವೀನ್, ಸುಧೀರ್,ಮಾರ್ಜೇನಹಳ್ಳಿ ಬಾಬು, ಹಾರೋಹಳ್ಳಿ ರವಿ, ಸುರೇಶ್,ಗಂಗಮ್ಮನಪಾಳ್ಯ ಮಂಜುನಾಥ್, ಫರ್ವೀಜ್,ರಾಜಶೇಖರರೆಡ್ಡಿ ಮತ್ತಿತರರಿದ್ದರು.



ಕಿರುಸುದ್ದಿ

17 ಬಾರಿ ಬಜೆಟ್ ಮಂಡಿಸಿದ್ದೇ ವಿಶೇಷ: ಸಂಸದ



◆ **ಚಿಂತಾಮಣಿ:** 17ನೇ ಬಾರಿ ಬಜೆಟ್ ಮಂಡಿಸಿದ ಮತ್ತು ಅತಿಹೆಚ್ಚು ಬಾರಿ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಎಂಬ ಖ್ಯಾತಿಗೆ ಸಿದ್ಧರಾಮಯ್ಯನವರು ಪಾತ್ರರಾಗಿದ್ದಾರೆಂದು ಸಂಸದ ಕೆ.ಸುಧಾಕರ್ ನುಡಿದರು. ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ಬಜೆಟ್‌ನಲ್ಲಿ ಬಯಲು ಜಿಲ್ಲೆಗಳಾದ ತುಮಕೂರು, ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಯಾವುದೇ ಪ್ರಯೋಜನವಿಲ್ಲ, 4.5ಲಕ್ಷ ಕೋಟಿ ಸಾಲದ ಹೊರೆಯನ್ನು ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾದಗಿನಿಂದಲೂ ಮಾಡಿರುವ ಸಾಧನೆಯಾಗಿದ್ದು, ರೈತರು, ಸಾಮಾನ್ಯ ಜನರು, ಮಧ್ಯಮ ಮತ್ತು ಬಡವರ್ಗದ ಜನರಿಗೆ ಈ ಬಜೆಟ್‌ನಿಂದ ಯಾವುದೇ ಲಾಭವಿಲ್ಲವೆಂದು ಇದು ಕೇವಲ ಸಿದ್ಧರಾಮಯ್ಯನವರು ಹೆಚ್ಚುಬಾರಿ ಮಂಡಿಸಿದ ಬಜೆಟ್ ಮಾತ್ರ ಆಗಲಿದೆಯೆಂದರು. ತಾವು ಮುಖ್ಯಮಂತ್ರಿಗಳಾಗುವುದಕ್ಕೂ ಮುನ್ನಾ ವಿತ್ತ ಸಚಿವರಾಗಿ ಮಂಡಿಸಿದ ಬಜೆಟ್‌ಗಳಲ್ಲಿ ಇದ್ದಂತಹ ಆರ್ಥಿಕ ಮತ್ತು ಹಣಕಾಸಿನ ವಿಚಾರಗಳು ಹಗಲು ಮತ್ತು ರಾತ್ರಿಗೂ ಇರುವ ವ್ಯತ್ಯಾಸದಷ್ಟಿದೆಯೆಂದರು. ದೇವನಹಳ್ಳಿ ವೇಣುಗೋಪಾಲ್, ವಾಣಿಕೃಷ್ಣಾರೆಡ್ಡಿ, ಕೆ.ಎಂ.ರಾಜಶೇಖರ್ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

◆ **ಚಿಕ್ಕಬಳ್ಳಾಪುರ:** ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) ಅಧಿನಿಯಮ-2013 ರನ್ವಯ ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ದೂರುಗಳ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸ್ಥಳೀಯ ದೂರು ನಿವಾರಣಾ ಸಮಿತಿಯ ಅವಧಿಯು ಮುಗಿದಿರುವುದರಿಂದ ಹೊಸದಾಗಿ ಸ್ಥಳೀಯ ದೂರು ನಿವಾರಣಾ ಸಮಿತಿ ರಚಿಸಬೇಕಾಗಿರುತ್ತದೆ. ಆದ್ದರಿಂದ ಸಮಾಜ ಕಲ್ಯಾಣ ಕ್ಷೇತ್ರದಲ್ಲಿ ಸಮರ್ಥರಾದ ಮತ್ತು ಮಹಿಳಾ ಕ್ಷೇತ್ರದಲ್ಲಿ ಮಹಿಳೆಯರ ಅಭ್ಯುದಯಕ್ಕಾಗಿ ಕಾರ್ಯನಿರ್ವಹಿಸಿದವರು, ಸರ್ಕಾರೇತರ ಸಂಸ್ಥೆಗಳಿಂದ ಅಥವಾ ಮಹಿಳೆಯರ ಅಭ್ಯುದಯಕ್ಕೆ ಕಾರಣವಾದ ಸಂಘಟನೆಗಳನ್ನು ರಚಿಸಿರುವ ಅಥವಾ ಲೈಂಗಿಕ ಕಿರುಕುಳ ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿರುವ ಅರ್ಹ ಅಭ್ಯರ್ಥಿಗಳು ತಮ್ಮ ಮಾಹಿತಿ ಹಾಗೂ ದಾಖಲೆ ಸಹಿತ ವಿವರದೊಂದಿಗೆ ಪ್ರಸ್ತಾವನೆಯನ್ನು ಏಪ್ರಿಲ್ 6 ರೊಳಗೆ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಎಸ್.ಬಿ-05, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ ಇಲ್ಲಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 7795520866 ಗೆ ಸಂಪರ್ಕಿಸಬಹುದು.

ಪೂರ್ವಭಾವಿ ಸಭೆ

◆ **ಚಿಕ್ಕಬಳ್ಳಾಪುರ:** ನಗರಸಭೆಯ 2026-27ನೇ ಸಾಲಿನ ಆಯ-ವ್ಯಯ ಪತ್ರಿಕೆ ತಯಾರಿಸಬೇಕಾಗಿದ್ದು, ಅದಕ್ಕೆ ಸಾರ್ವಜನಿಕರ ಕುಂದುಕೊರತೆ ಹಾಗೂ ಅತ್ಯವಶ್ಯ ಬೇಡಿಕೆಗಳ ಅರಿತುಕೊಳ್ಳಲು ಹಾಗೂ ತಮ್ಮೆಲ್ಲರ ಅತ್ಯಮೂಲ್ಯ ಸಲಹೆ ಸೂಚನೆಗಳನ್ನು ಪಡೆದುಕೊಳ್ಳುವ ಉದ್ದೇಶದಿಂದ ಮಾರ್ಚ್ 10 ರಂದು ಮಧ್ಯಾಹ್ನ 12 ಗಂಟೆಗೆ 2ನೇ ಸುತ್ತಿನ ಪೂರ್ವಭಾವಿ ಸಭೆಯನ್ನು ನಗರಸಭೆಯ ಸರ್. ಎಂ.ವಿಶ್ವೇಶ್ವರಯ್ಯ ಸಾಭಂಗಣದಲ್ಲಿ ಆಯೋಜಿಸಿದ್ದು, ಸಾರ್ವಜನಿಕರು, ಸಾಮಾಜಿಕ ಕಾರ್ಯಕರ್ತರು, ಗಣ್ಯವ್ಯಕ್ತಿಗಳು ಹಾಗೂ ವಿವಿಧ ಸಂಘಟನೆ/ಸರಕಾರೇತರ ಸಂಘ ಸಂಸ್ಥೆಗಳ ಮುಖ್ಯಸ್ಥರು, ಸದಸ್ಯರನ್ನೊಳಗೊಂಡ ಎಲ್ಲರೂ ಸದರಿ ಸಭೆಯಲ್ಲಿ ಭಾಗವಹಿಸಿ ತಮ್ಮ ತಮ್ಮ ವಾರ್ಡ್ ಗಳಲ್ಲಿ ನಗರಸಭೆಯಿಂದ ಅತ್ಯವಶ್ಯಕವಾಗಿ ಒದಗಿಸಬೇಕಾಗಿರುವ ಸೌಕರ್ಯ/ಸೌಲಭ್ಯಗಳ ಬಗ್ಗೆ ಅಹವಾಲುಗಳನ್ನು ಲಿಖಿತ ರೂಪದಲ್ಲಿ ನೀಡಬಹುದು ಎಂದು ಚಿಕ್ಕಬಳ್ಳಾಪುರ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧಿಕಾರಿಗಳಿಗೆ ತರಬೇತಿ

◆ **ಚಿಕ್ಕಬಳ್ಳಾಪುರ:** ಭಾರತ ಜನಗಣತಿ-2027ರ ಕಾರ್ಯಾಚರಣೆಯ ಪ್ರಯುಕ್ತ ಜಿಲ್ಲೆಯ ಎಲ್ಲಾ ಜನಗಣತಿ ಅಧಿಕಾರಿಗಳಿಗೆ ತರಬೇತಿ ನೀಡುವ ಮೂಲಕ ಜಿಲ್ಲಾಧಿಕಾರಿಗಳು ಹಾಗೂ ಪ್ರಧಾನ ಜನಗಣತಿ ಅಧಿಕಾರಿಗಳಾದ ಪ್ರಭು.ಜಿ ಅವರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಚಾಲನೆ ನೀಡಿ ಮಾತನಾಡಿದರು. ಜನಗಣತಿ ಕಾರ್ಯದ ಮೊದಲನೇ ಹಂತವಾಗಿ ಸ್ವಯಂ ಜನಗಣತಿ ಕಾರ್ಯವು 1ನೇ ಏಪ್ರಿಲ್ 2026 ರಿಂದ 15 ನೇ ಏಪ್ರಿಲ್ 2026 ರವರೆಗೆ ನಡೆಯಲಿರುತ್ತದೆ. ನಂತರ ಹೌಸ್ ಲಿಸ್ಟಿಂಗ್ ಬ್ಲಾಕ್ ಕಾರ್ಯವು 16ನೇ ಏಪ್ರಿಲ್ 2026 ರಿಂದ ಗಣತಿದಾರರು ಪ್ರತಿ ಮನೆಗೆ ತೆರಳುವ ಮೂಲಕ ಕೈಗೊಳ್ಳಲಿರುತ್ತಾರೆ. ಎರಡನೇ ಹಂತದಲ್ಲಿ ಜನಗಣತಿ ಕಾರ್ಯವನ್ನು ಫೆಬ್ರವರಿ-2027 ರಿಂದ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು. ಅಪರ ಜಿಲ್ಲಾಧಿಕಾರಿ ಡಾ. ಎನ್. ಭಾಸ್ಕರ್, ಅತೀಕ್ ಪಾಷಾ, ಉಪ ವಿಭಾಗಾಧಿಕಾರಿ ಡಿ.ಎಚ್.ಅಶ್ವಿನ್ ಇದ್ದರು.



ಭಾರತ ಜನಗಣತಿ-2027ರ ಕಾರ್ಯಾಚರಣೆಯ ಪ್ರಯುಕ್ತ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಜನಗಣತಿ ಅಧಿಕಾರಿಗಳಿಗೆ ತರಬೇತಿ ನೀಡುವ ಮೂಲಕ ಜಿಲ್ಲಾಧಿಕಾರಿಗಳು ಹಾಗೂ ಪ್ರಧಾನ ಜನಗಣತಿ ಅಧಿಕಾರಿಗಳಾದ ಪ್ರಭು.ಜಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಚಾಲನೆ ನೀಡಿದರು.

ಮೈತ್ರೇಯಿ ಕಲ್ಯಾಣ ಮಂಟಪ ಉದ್ಘಾಟನೆ

◆ **ಗೌರಿಬಿದನೂರು:** ತಾಲೂಕಿನ ವಿದುರಾಶ್ವತ್ಥದಲ್ಲಿ ಶ್ರೀ ವಿದುರಾಶ್ವತ್ಥ ನಾರಾಯಣ ಸ್ವಾಮಿ ಬ್ರಾಹ್ಮಣ ಸೇವಾ ಟ್ರಸ್ಟ್ ವತಿಯಿಂದ ಇಂದು(ಮಾ.8)ರಂದು ನೂತನ ಮೈತ್ರೇಯಿ ಕಲ್ಯಾಣ ಮಂಟಪ ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಭಾ ಕಾರ್ಯಕ್ರಮವನ್ನು ಬೆಂಗಳೂರಿನ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ವೇದವ್ಯಾಸಚಾರ್ ಶ್ರೀಶಾನಂದ, ಮಾಜಿ ಅಡ್ವಕೇಟ್ ಜನರಲ್ ಮತ್ತು ಹಿರಿಯ ವಕೀಲ ಅಶೋಕ ಹಾರನಹಳ್ಳಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಲ್ಲೇಶ್ವರಂ ಶಾಸಕರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ್, ಶಾಸಕರಾದ ಗೋಪಾಲಯ್ಯ, ಎಲ್.ಎ. ರವಿಸುಬ್ರಹ್ಮಣ್ಯ, ಸಿ.ಕೆ. ಪುಟ್ಟಸ್ವಾಮಿ ಗೌಡ, ಅಡಿಶನಲ್ ಅಡ್ವೋಕೇಟ್ ಜನರಲ್ ಮಲ್ಹಾರಾವ್, ಮಾಜಿ ಸಚಿವರಾದ ಎನ್.ಎಚ್ ಶಿವಶಂಕರರೆಡ್ಡಿ, ರಾಜ್ಯ ವಾಯುಮಾಲಿನ್ಯ ನಿಯಂತ್ರಣ ಮಂಡಳಿ ಮಾಜಿ ಅಧ್ಯಕ್ಷರಾದ ಲಕ್ಷ್ಮಣ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಎಸ್.ರಘುನಾಥ್, ಆರ್.ಲಕ್ಷ್ಮೀಕಾಂತ ಭಾಗವಹಿಸುವರು. ಅಧ್ಯಕ್ಷತೆಯನ್ನು ಟ್ರಸ್ಟ್‌ನ ಅಧ್ಯಕ್ಷ ಡಿ.ವಿ. ರಾಜೇಂದ್ರಪ್ರಸಾದ್ ವಹಿಸುವರು.

ವೇದ ಬ್ರಹ್ಮ ಡಾ.ವಿ.ಭಾನುಪ್ರಕಾಶ್ ಶರ್ಮಾ, ವೇದಬ್ರಹ್ಮ ಡಾ.ಬಿ.ಎಸ್. ರಾಘವೇಂದ್ರಭಟ್, ಎನ್.ಜ್ಯೋತಿರೆಡ್ಡಿ, ಎನ್.ಎಂ. ರವಿನಾರಾಯಣರೆಡ್ಡಿ, ಸಿ.ಆರ್. ನರಸಿಂಹಮೂರ್ತಿ, ನಾಗರಾಜ್ ನಾಯ್ಕ್, ಆರ್.ಅಶೋಕ್‌ಕುಮಾರ್ ಭಾಗವಹಿಸಲಿದ್ದಾರೆ.



ಕಾಲಜ್ಞಾನಿ, ವರಕವಿ, ಸದ್ಗುರು ಶ್ರೀ ಯೋಗಿ ನಾರೇಯಣ ತಾತಯ್ಯನವರ ರಥೋತ್ಸವವನ್ನು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನೇರವೇರಿಸಲಾಯಿತು. ಈ ಹಿನ್ನೆಲೆಯಲ್ಲಿ ಸಚಿವ ಡಾ.ಎಂ.ಸಿ.ಸುಧಾಕರ್ ಚಿಂತಾಮಣಿ ಕೈವಾರದ ತಾತಯ್ಯನವರ ಸನ್ನಿಧಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಜಿಲ್ಲಾಮಟ್ಟದ ಗಣಿತ ವಿಚಾರ ಸಂಕಿರಣ ಕಾರ್ಯಕ್ರಮಕ್ಕೆ ಚಾಲನೆ

ಗಣಿತ ಕಲಿಕೆಗೆ ಹೆಚ್ಚು ಆದ್ಯತೆ

◆ **ಚಿಕ್ಕಬಳ್ಳಾಪುರ:** ಕೃತಕ ಬುದ್ಧಿಮತ್ತೆ (ಎಐ) ತಂತ್ರ ಜ್ಞಾನಕ್ಕೆ ಒತ್ತು ನೀಡುತ್ತಿರುವ ಪ್ರಸ್ತುತದ ದಿನಮಾನಗಳಲ್ಲಿ ಗಣಿತದ ಕಲಿಕೆಗೆ ಹೆಚ್ಚು ಆದ್ಯತೆ ಸಿಗಲಿದ್ದು, ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಗಣಿತದ ಕಲಿಕೆಗೆ ಹೆಚ್ಚು ಒತ್ತು ನೀಡುವಂತೆ ಡಯಟ್ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕ (ಆಡಳಿತ) ಮುನಿಕೆಂಪೇಗೌಡ ಎಂ. ಅವರು ಸಲಹೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಮತ್ತು ಅಕ್ಷರ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ ಜೂನಿಯರ್ ಕಾಲೇಜು ಆವರಣದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾಮಟ್ಟದ ಗಣಿತ ವಿಚಾರ ಸಂಕಿರಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

2017ನೇ ಸಾಲಿನಿಂದ ಜಿಲ್ಲೆಯಲ್ಲಿ ಗಣಿತ ಕಲಿಕಾ ಆಂದೋಲನ ಕಾರ್ಯಕ್ರಮದಲ್ಲಿ 4, 5, 6ನೇ ತರಗತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಗಣಿತ ಕಲಿಕೆಯ ಕಾರ್ಯಕ್ರಮ ರೂಪಿಸಿ ಗಣಿತ ವಿಷಯದಲ್ಲಿ ಮಕ್ಕಳನ್ನು ಪ್ರೋತ್ಸಾಹಿಸುವಂತಹ ಕೆಲಸವಾಗಿದೆ ಎಂದು ಶ್ಲಾಘಿಸಿದರು.

ಅಕ್ಷರ ಫೌಂಡೇಶನ್ ನ ಅಧ್ಯಕ್ಷರಾದ ಅಶೋಕ್ ಕಾಮತ್ ಅವರು ಮಾತನಾಡಿ, ಚಿಕ್ಕಬಳ್ಳಾಪುರ ಜಿಲ್ಲೆಯ 6 ತಾಲೂಕುಗಳ 793 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಗಣಿತ ಕಲಿಕಾ ಆಂದೋಲನದ ಗಣಿತ ಕಿಟ್‌ಗಳನ್ನು ಸರಬರಾಜು ಮಾಡಲಾಗಿದೆ. ಗಣಿತ ಶಿಕ್ಷಕರಿಗೆ ತಜ್ಞರಿಂದ ತರಬೇತಿಯನ್ನು ನೀಡಲಾಗಿದೆ.

2017-18ನೇ ಸಾಲಿನಿಂದ ಈ ಶೈಕ್ಷಣಿಕ ಸಾಲಿನ ವರೆಗೆ ಜಿಲ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಗ್ರಾಮ ಪಂಚಾಯಿತಿ ಮಟ್ಟದ ಗಣಿತ ಸ್ಪರ್ಧೆಯನ್ನು ಪ್ರತಿ ವರ್ಷದಂತೆ ಈ ವರ್ಷವೂ ಶಾಲಾ ಹಂತದ ಗಣಿತಸ್ಪರ್ಧೆಯನ್ನು ಜಿಲ್ಲೆಯ 281 ಶಾಲೆಗಳಲ್ಲಿ ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ 4,5,6ನೇ ತರಗತಿ ಮಕ್ಕಳು ಭಾಗವಹಿಸಿದ್ದರು. ತಜ್ಞರಿಂದ ಪ್ರಶ್ನೆಪತ್ರಿಕೆಗಳನ್ನು ಸಿದ್ದಪಡಿಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಮಾಡಲಾಗಿದೆ.



> 2025-26ನೇ ಸಾಲಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಹಂತದ ಗಣಿತ ಸ್ಪರ್ಧೆಗಳ ಆಯೋಜನೆಯು ಶಿಕ್ಷಣ ಇಲಾಖೆ, ಅಕ್ಷರ ಫೌಂಡೇಶನ್ ಮತ್ತು ಸಮುದಾಯದ ಸಹಕಾರದಿಂದ ಉತ್ತಮ ಯಶಸ್ಸು ಕಂಡಿದೆ. ಈ ಕಾರ್ಯಕ್ರಮವು ಗಣಿತ ಕಲಿಕಾ ಆಂದೋಲನದ ಕಾರ್ಯಕ್ರಮದ ಒಂದು ಭಾಗವಾಗಿದೆ.
> ■ **ಮುನಿಕೆಂಪೇಗೌಡ ಎಂ.,** ಉಪನಿರ್ದೇಶಕ

ಸಂಪನ್ಮೂಲ ತಂಡದಿಂದ ಮೌಲ್ಯಮಾಪನ ಮಾಡಿಸಿ ತರಗತಿಯಲ್ಲಿ ಅತಿ ಹೆಚ್ಚು ಅಂಕಪಡೆದ ಮಕ್ಕಳಿಗೆ ಪ್ರತಿಶಾಲೆಗೆ 9 ಬಹುಮಾನಗಳ ಜೊತೆಗೆ ಅಭಿನಂದನಾ ಪತ್ರಗಳನ್ನು ನೀಡಲಾಗಿದೆ. ಸರ್ಕಾರಿ ಶಾಲೆಗಳೊಂದಿಗೆ ಕೈಜೋಡಿಸಿ ಇಂತಹ ಕಲಿಕಾ ಕಾರ್ಯಕ್ರಮಗಳನ್ನು ನಿರಂತರವಾಗಿ ಮಾಡಲು ನಮ್ಮ ಸಂಸ್ಥೆ ಬದ್ದವಾಗಿದ್ದು, ಈ ವರ್ಷ ರಾಜ್ಯದ 6 ಲಕ್ಷ ವಿದ್ಯಾರ್ಥಿಗಳಿಗೆ ಗಣಿತ ಕಲಿಕಾ ಆಂದೋಲನ ಕಾರ್ಯಕ್ರಮದಡಿ ಸ್ಪರ್ಧೆಗಳನ್ನು ಆಯೋಜಿಸಿ ಗಣಿತ ಕಲಿಕೆಗೆ ಪ್ರೋತ್ಸಾಹಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ನಾರಾಯಣಸ್ವಾಮಿ ಅಕ್ಷರ ಫೌಂಡೇಶನ್ ನ ನಿರ್ದೇಶಕಿ ವೈಜಯಂತಿ, ಡಯಟ್ ಉಪನ್ಯಾಸಕರಾದ ಯಶೋಧ, ಟಿ.ಕೆ.ವೆಂಕಟ ಮೋಹನ್, ಸುಬ್ಬಾರೆಡ್ಡಿ, ಆನಂದ.ಎ, ಜಯಸಿಂಹ, ವಾರ್ತಾ ಸಹಾಯಕ ಎಂ.ಆರ್.ಮಂಜುನಾಥ, ವಿವಿಧ ಶಾಲೆಗಳ ಎಸ್.ಡಿ.ಎಂ.ಸಿ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸಿ.ಆರ್.ಪಿ ಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಜರಿದ್ದರು.

ಮೂರ್ಛೆರೋಗ ಮುಕ್ತ ಜಿಲ್ಲೆ ಅಭಿಯಾನ ಶಿಬಿರ

ಮೂರ್ಛೆ ರೋಗದ ಬಗ್ಗೆ ಜನರಲ್ಲಿ ಜಾಗೃತಿ ಅಗತ್ಯ

◆ **ಕೋಲಾರ:** ಕಳಂಕ ತಾರತಮ್ಯ ಅಂಜಿಕೆ ಹಿಂಜರಿಕೆ ಮುಕ್ತ ಸಮಾಲೋಚನೆ ಇಲ್ಲದಿರುವುದು ಹಾಗೂ ತಿಳುವಳಿಕೆ ಕೊರತೆಯಿಂದ ಸವಾಲಾಗಿ ಪರಿಣಮಿಸಿರುವ ಮೂರ್ಛೆ ರೋಗದ ವಿರುದ್ಧ ಸಾರ್ವಜನಿಕವಾಗಿ ಜಾಗೃತಿ ಮೂಡಿಸುವುದರಿಂದ ಪರಿಹಾರ ರೂಪಿಸಲು ಸಾಧ್ಯ ಎಂದು ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ಹೇಳಿದರು.

ತಾಲೂಕಿನ ವೇಮಗಲ್ ಸರಕಾರಿ ಆಸ್ಪತ್ರೆಯಲ್ಲಿ ರೋಟರಿ ಸಂಸ್ಥೆ, ಆಸ್ಟರ್ ಆಸ್ಪತ್ರೆ, ಆರೋಗ್ಯ ಇಲಾಖೆವತಿಯಿಂದ ಕೋಲಾರ ಜಿಲ್ಲೆಯನ್ನು ಮೂರ್ಛೆ ರೋಗಮುಕ್ತ ಜಿಲ್ಲೆಯನ್ನಾಗಿಸಲು ಹಮ್ಮಿಕೊಂಡಿದ್ದ ಮೊದಲ ಮೂರ್ಛೆ ರೋಗ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮೂರ್ಛೆ ರೋಗವು ಕಾಯಿಲೆ ಅಲ್ಲ, ಆದರೆ, ಪೂರ್ವಾಗ್ರಹ ಪೀಡಿತ ಹುಸಿ ಕಲ್ಪನೆಗಳಿಂದ ಉಂಟಾಗಿರುವ ಮನಸ್ಥಿತಿ ಅಡೆತಡೆಗಳಿಂದ ರೋಗ ನಿವಾರಣೆ ಸವಾಲಾಗಿದ್ದು, ಮುಕ್ತ ಸಮಾಲೋಚನೆ ಹಾಗೂ ಇಂತಹ ಶಿಬಿರಗಳ ಪ್ರಯೋಜನ ಪಡೆದುಕೊಂಡು ಮೂರ್ಛೆ ರೋಗವನ್ನು ನಿರ್ಮೂಲನೆ ಮಾಡಲು ಪ್ರತಿಯೊಬ್ಬರೂ ಸಹಕರಿಸಬೇಕು ಎಂದರು. ಕೋಲಾರ ಜಿಲ್ಲೆ ಸೇರಿದಂತೆ ರಾಜ್ಯ ಮಟ್ಟದಲ್ಲಿಯೂ ಮೂರ್ಛೆ ರೋಗಿಗಳ ನಿಖರ ಸಂಖ್ಯೆ ಕುರಿತು ಅಂಕಿ ಅಂಶಗಳಿಲ್ಲ, ಆದರೆ, ಮೂರ್ಛೆ ರೋಗವು ಸಾಮಾನ್ಯವಾಗಿದ್ದು ಬಹಿರಂಗಪಡಿ ಸುತ್ತಿಲ್ಲ, ರೋಟರಿ ಸಂಸ್ಥೆಯ ಸಹಯೋಗದಲ್ಲಿ ದೇಶದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಕೋಲಾರ ಜಿಲ್ಲೆಯನ್ನು ಮೂರ್ಛೆ ರೋಗ ಮುಕ್ತ ಜಿಲ್ಲೆಯನ್ನಾಗಿಸಲು ಮೂರು ವರ್ಷಗಳ ಯೋಜನೆಗೆ ಇಂದು ವೇಮಗಲ್‌ನಲ್ಲಿ ಚಾಲನೆ ನೀಡುತ್ತಿದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಕೋರಿದರು.

ಮೂರ್ಛೆ ರೋಗ ಪರಿಣಿತ ವೈದ್ಯ ಡಾ.ಸತೀಶ್ ರುದ್ರಪ್ಪ, ರೋಟರಿ ಸಹಾಯಕ ರಾಜ್ಯಪಾಲ ಸಿ.ಎಂ.ಆರ್.ಶ್ರೀನಾಥ್, ಮೂರ್ಛೆ ರೋಗ ತಜ್ಞ ಡಾ.ರವೀಶ್, ರೋಟರಿ ರಾಜ್ಯಪಾಲ ಡಾ.ಅನಿಲಗುಪ್ತ, ವೇಮಗಲ್ ಪಟ್ಟಣ ಪಂಚಾಯ್ತಿ ಅಧ್ಯಕ್ಷೆ ಡಿ.ಅನೂಷಾ, ಉಪಾಧ್ಯಕ್ಷ ಸಿ.ಎಸ್.ವೆಂಕಟೇಶ್, ಮುಖ್ಯಾಧಿಕಾರಿ ಎಸ್.ಎಂ.ವೆಂಕಟೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಎ.ವಿ.ನಾರಾಯಣಸ್ವಾಮಿ, ಎಲ್‌ಜಿ ಫೌಂಡೇಷನ್ ಲಕ್ಷ್ಮಣಗೌಡ, ವೇಮಗಲ್ ಆಸ್ಪತ್ರೆಯ ಡಾ.ರವಿಕಿರಣ್ ಹಾಜರಿದ್ದರು.



ಪಕ್ಷದ ಸಂಘಟನೆಗೆ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಲಿ

◆ **ಗೌರಿಬಿದನೂರು:** ತಾಲೂಕಿನಲ್ಲಿ ಬಿಜೆಪಿ ನಾಯಕತ್ವವನ್ನು ಪಕ್ಷದ ಹೈಕಮಾಂಡ್ ಯಾರಿಗೆ ನೀಡಿದರೂ ಎಲ್ಲರೂ ಒಗ್ಗಟ್ಟಿನಿಂದ ಪಕ್ಷದ ಸಂಘಟನೆಯಲ್ಲಿ ಸಕ್ರಿಯವಾಗಿ ಕೆಲಸ ಮಾಡಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸೀಕಲ್ ರಾಮಚಂದ್ರಗೌಡ ಹೇಳಿದರು.

ಅವರು ನಗರದ ನದಿ ದಡ ಆಂಜನೇಯ ಸ್ವಾಮಿ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಬಿಎಲ್‌ಎ 2 ಕಾರ್ಯಾಗಾರ ವಿಶೇಷ ಮತದಾರ ಪಟ್ಟಿಪರಿಷ್ಕರಣೆಕಾರ್ಯಕ್ರಮದಲ್ಲಿಭಾಗವಹಿಸಿ ಮಾತನಾಡಿದ ಅವರು ತಾಲೂಕಿನಲ್ಲಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬರಲೇಬೇಕು ಆ ನಿಟ್ಟಿನಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಕೆಲಸ ಮಾಡಬೇಕು. ಹಾಗೂ ಮುಂದಿನ ದಿನಗಳಲ್ಲಿ ತಾಲೂಕಿನಲ್ಲಿ ಬಿಜೆಪಿ ಪಕ್ಷದ ಶಾಸಕರು ಜಯಗಳಿಸುವ ನಿಟ್ಟಿನಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಮೋದಿ ಅವರ ಅಭಿವೃದ್ಧಿಯನ್ನು ಗುರ್ತಿಸಿ ಮನೆ ಮನೆಗೆ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಕೆಲಸವನ್ನು ಮಾಡುವ ಜತೆಗೆ ಪಕ್ಷದ ಗೆಲುವಿಗೆ ಹೆಚ್ಚಿನ ಪ್ರಾಮುಖ್ಯ ನೀಡಬೇಕು ಮತ್ತು ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಿ ಕೆಲಸ ಮಾಡಬೇಕು.

ಗಡಿ ಭಾಗಕ್ಕೆ ಹತ್ತಿರವಾಗಿರುವುದರಿಂದ ಬೇರೆ ರಾಜ್ಯದ ಮತದಾರರು ಇಲ್ಲಿ ಬಂದು ಮತ ಚಲಾಯಿಸುವ ಸನ್ನಿವೇಶ ಬರಬಹುದು ಆದ್ದರಿಂದ ಅಂತಹ ನಕಲಿ ಮತದಾರರನ್ನು ಕಿತ್ತು ಹಾಕುವ ಪ್ರಯತ್ನ ನಾವೆಲ್ಲರೂ ಸೇರಿ ಮಾಡಬೇಕು ಎಂದು ಹೇಳಿದರು.

ರಾಜ್ಯ ಸಂಚಾಲಕ ಜಗದೀಶ್ ಹಿರೇಮಣಿ. ರಾಜ್ಯ ಉಪ ಸಂಚಾಲಕಿ ನಿಶ್ಚಿತಾ,ಆನಂದ ಗೌಡ,ಮಾರ್ಕೆಟ್ ಮೋಹನ್ , ಮುರಳಿಧರ್. ರಮೇಶ್ ರಾವ್ ಶೆಲ್ಕೆ. ಕೋಡೀರ್ಲಪ್ಪ. ವೇಣು ಮಾದವ್, ಜಿಮ್ ಹರೀಶ್, ನಾಗಭೂಷಣ್ ರಾವ್, ಅನಿಲ್ ಕುಮಾರ್,ಶ್ರೀನಿವಾಸ್ ಗೌಡ,ವೆಂಕಟಾದ್ರಿ,ಶ್ರೀನಿವಾಸ್ ಶೆಟ್ಟಿ, ಹಾಗೂ ಅನೇಕ ಮುಖಂಡರು ಹಾಜರಿದ್ದರು.



ದಲಿತರ ಜಮೀನು ಕಬಳಿಕೆ ಆರೋಪ ಸತ್ಯಕ್ಕೆ ದೂರ

◆ **ಚಿಂತಾಮಣಿ:** ತಾಲೂಕಿನ ಮುಂಗಾನಹಳ್ಳಿಯ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂಬರ್ 2ರ 5 ಎಕರೆ 5 ಗುಂಟೆ ಜಮೀನನ್ನು ಅಶ್ವತ್ ರೆಡ್ಡಿ ಕುಟುಂಬದವರು ಒತ್ತುವರಿ ಮಾಡಿಕೊಂಡಿದ್ದಾರೆಂದು ಆರೋಪಿಸಿ ದಲಿತ ಸಂಘಟನೆಯ ಮುಖಂಡ ಕೋಲಾರ ಸಂದೇಶ್ ಆರೋಪ ಮಾಡಿರುವುದು ಸರಿಯಲ್ಲವೆಂದು ರಾಜ್ಯ ಕೆಂಪೇಗೌಡರ ಒಕ್ಕಲಿಗರ ಸಂಘ ಆಕ್ರೋಶ ವ್ಯಕ್ತಪಡಿಸಿದರು.



ತಾಲೂಕು ಕಚೇರಿ ಮುಂಭಾಗ ಕರ್ನಾಟಕ ರಾಜ್ಯ ಕೆಂಪೇಗೌಡರ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಗೋಪಲ್ಲಿ ರಘುನಾಥ್‌ರೆಡ್ಡಿರ ನೇತೃತ್ವದಲ್ಲಿ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದ ಅಶ್ವತ್ಥ್ ರೆಡ್ಡಿರ ಕುಟುಂಬದವರ ಪರ ನಿಂತಿರುವುದಾಗಿ ಈ ಕುಟುಂಬದವರು ಯಾವುದೇ ಜಮೀನು ಕಬಳಿಕೆ ಮಾಡಿಲ್ಲ ಕೋಲಾರ್ ಸಂದೇಶ ಹಾಗೂ ಮುನಿರಾಜು ಮಾಡಿರುವ ಆರೋಪ ಸತ್ಯಕ್ಕೆ ದೂರವಾದದೆಂದು ಆ ಜಮೀನಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು ತಹಸೀಲ್ದಾರ್ ಸುದರ್ಶನ್ ಯಾದವ್‌ಗೆ ನೀಡಿದರು.

ರಾಜ್ಯ ಕೆಂಪೇಗೌಡರ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಗೋಪಲ್ಲಿ ರಘುನಾಥ್‌ರೆಡ್ಡಿ ಮಾತನಾಡಿ ಯಾವುದೇ ಆರೋಪವನ್ನು ಮಾಡುವ ಮುಂಚೆ ಅದಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನು ಮಾಹಿತಿಯನ್ನು ಕಲೆ ಹಾಕಬೇಕು, ಕೋಲಾರ ಸಂದೇಶಗೆ ಈ ವಿಚಾರದಲ್ಲಿ ಮಾಹಿತಿಯ ಕೊರತೆ ಇದೆ. ಅಶ್ವತ್ಥ್ ರೆಡ್ಡಿ ಕುಟುಂಬದವರ ಮೇಲೆ ಭೂಗಳ್ಳರು ಎಂದು ಹೇಳಿಕೆ ನೀಡಿರುವುದು ಸರಿಯಲ್ಲ, ಕೋಲಾರ ಸಂದೇಶ ಹಾಗೂ ಮುನಿರಾಜು ವಿರುದ್ಧ ಕೆಂಪೇಗೌಡರ ಒಕ್ಕಲಿಗರ ಸಂಘ ಮುಂದಿನ ದಿನಗಳಲ್ಲಿ ಕಾನೂನು ಉಗ್ರ ಹೋರಾಟ ಮಾಡಲು ಸಜ್ಜಾಗುತ್ತದೆಯೆಂದು ಹೇಳಿದರು. ಗುಡೇ ಶ್ರೀನಿವಾಸ್‌ರೆಡ್ಡಿ, ಜಯರಾಮರೆಡ್ಡಿ, ಮುನಿವೆಂಕಟರೆಡ್ಡಿ, ಕೃಷ್ಣಾರೆಡ್ಡಿ, ದೇವರಾಜ್, ವಕೀಲರಾದ ಜೆ.ವಿ.ಸುರೇಶ, ರಾಜಣ್ಣ, ಚೌಡಪ್ಪ, ಅಶ್ವತ್ ರೆಡ್ಡಿ ಭಾಗವಹಿಸಿದ್ದರು.

ಗಾನಯೋಗಿ ಸಂಗೀತ ಅಕಾಡೆಮಿಯಿಂದ ಆರಾಧನೋತ್ಸವ

◆ **ಗೌರಿಬಿದನೂರು:** ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪುರಂದರದಾಸರು, ತ್ಯಾಗರಾಜರು ಮತ್ತು ಡಾ.ಪುಟ್ಟರಾಜ ಗವಾಯಿ ಅವರುಗಳ ಆರಾಧನಾ ಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ತೀರ್ಥ ಶಾಲೆಯ ಅಧ್ಯಕ್ಷ ಡಾ.ಕೆ.ವಿ.ಪ್ರಕಾಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪುರಂದರದಾಸರು ಕನ್ನಡದ ದಾಸ ಸಾಹಿತ್ಯದ ಅಗ್ರಗಣ್ಯ ಕವಿ ಹಾಗೂ ಕರ್ನಾಟಕದ ಸಂಗೀತ ಪಿತಾಮಹರು. ಇವರು ಪುರಂದರ ವಿಠಲ ಅಂಕಿತನಾಮದಲ್ಲಿ ಸಾವಿರಾರು ಕೀರ್ತನೆಗಳನ್ನು ಜನಸಾಮಾನ್ಯರಿಗೆ ತಲುಪಿಸಿದ್ದಾರೆ. ಇವರ ದಾಸ ಸಾಹಿತ್ಯವು ಭಕ್ತಿ, ನೈತಿಕತೆ ಮತ್ತು ಸಾಮಾಜಿಕ ಸುಧಾರಣೆಯ ಸಂದೇಶಗಳನ್ನು ಒಳಗೊಂಡಿವೆ.



ತ್ಯಾಗರಾಜರು ಪ್ರಸಿದ್ಧ ಸಂಗೀತಗಾರರು, ಇವರು ಸಂಗೀತ ಮತ್ತು ಭಕ್ತಿಯನ್ನು ಬೆರೆಸಿ, ಸಾಂಸಾರಿಕ ಜೀವನದಲ್ಲಿನ ನೀತಿ,ಭಕ್ತಿ ಮತ್ತು ವೈರಾಗ್ಯವನ್ನು ಜನಸಾಮಾನ್ಯರಿಗೆ ಸರಳಭಾಷೆಯಲ್ಲಿ ಬೋಧಿಸಿದ್ದಾರೆ. ಗಾನಯೋಗಿ ಡಾ.ಪುಟ್ಟರಾಜ ಗವಾಯಿ ಅವರು ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತಕ್ಕೆ ಹೆಚ್ಚು ಪ್ರೋತ್ಸಾಹ ನೀಡಿರುತ್ತಾರೆ. ಶಾಲೆಗಳಲ್ಲಿ ಪಠ್ಯೇತರ ವಿಷಯವಾದ ಸಂಗೀತ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ನೀಡಬೇಕು. ಸಂಗೀತವು ಭಗವಂತನನ್ನು ತಲುಪುವ ಮಾರ್ಗ ಹಾಗೂ ಸಂಗೀತ ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗ ಎಂದು ತಿಳಿಸಿದರು.

ಆಯೋಜಕ ಸಂಗೀತ ಶಿಕ್ಷಕಿ ಗೀತಾ. ಆರ್. ಹೆಗ್ಡೆ, ಮುಖ್ಯ ಅತಿಥಿಗಳಾಗಿ ಶಾಲೆಯ ಮುಖ್ಯ ಶಿಕ್ಷಕ ಶ್ರೀನಿವಾಸ್. ನಾದಬ್ರಹ್ಮ ಹಂಸಲೇಖ ಅವರ ಶಿಷ್ಯರಾದ ರಾಜಶೇಖರ್ ಮತ್ತು ಅಂಜನಾ, ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷಣೆ ಶ್ವೇತಾ, ಅತಿಥಿ ಗಳಾದ ವಿನೋದ್ ಕುಮಾರ್, ಆನಂದಮ್ಮ, ಶಾಲಾ ಸಿಬ್ಬಂದಿ, ಗಾನಯೋಗಿ ಸಂಗೀತ ಶಾಲೆಯ ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು.

ಸಚಿವ ಮುನಿಯಪ್ಪ ಜನ್ಮದಿನ ಪ್ರಯುಕ್ತ ಅಭಿಮಾನಿ ಬಳಗದಿಂದ ಅನ್ನ ಸಂತರ್ಪಣೆ

ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ನಿರಂತರ ಶ್ರಮ

◆ **ಬಾಗೇಪಲ್ಲಿ:** ರಾಜ್ಯ ಆಹಾರ ನಾಗರಿಕ ಸರಬರಾಜು ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ಅವರು ರಾಜ್ಯದ ಬಡವರು, ರೈತರು ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ಜನಪರ ನಾಯಕ ಎಂದು ಮಾದಾರ ಮಹಾಸಭಾದ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಅ.ನ.ಮೂರ್ತಿ ತಿಳಿಸಿದರು.

ರಾಜ್ಯದ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರಾದ ಕೆ.ಎಚ್. ಮುನಿಯಪ್ಪ ಅವರ ಜನ್ಮದಿನದ ಪ್ರಯುಕ್ತ ಮಾದಾರ ಮಹಾಸಭಾ ವತಿಯಿಂದ ಬಾಗೇಪಲ್ಲಿ ಪಟ್ಟಣದ ತಾಲೂಕು ಪಂಚಾಯ್ತಿ ಕಚೇರಿ ಪಕ್ಕದ ಅಂಬೇಡ್ಕರ್ ಭವನ ನಿರ್ಮಾಣ ಸ್ಥಳದಲ್ಲಿ ಅನ್ನ ಸಂತರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸಚಿವ ಕೆ.ಎಚ್. ಮುನಿಯಪ್ಪ ಅವರು ರಾಜ್ಯದ ಬಡವರು, ರೈತರು ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ಜನಪರ ನಾಯಕ. ಸಮಾಜದ ಎಲ್ಲ ವರ್ಗಗಳ ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವ ಹಾಗೂ ಸರಳ ಸಜ್ಜನಿಕೆಯ ವ್ಯಕ್ತಿತ್ವದ ಮೂಲಕ ಜನರ ಮನ ಗೆದ್ದಿರುವ ಮುನಿಯಪ್ಪ ಅವರು ರಾಜಕೀಯ ಕ್ಷೇತ್ರದಲ್ಲಿ ದೀರ್ಘ ಕಾಲ ಸೇವೆ ಸಲ್ಲಿಸಿ ಜನಸೇವೆ ಮಾಡುತ್ತಿರುವುದು ಶ್ಲಾಘನೀಯವಾಗಿದೆ.



ಬಡವರು, ನಿರ್ಗತಿಕರು ಹಾಗೂ ಅಗತ್ಯವಿರುವ ಜನರಿಗೆ ನೆರವಾಗುವುದು ನಮ್ಮ ಸಾಮಾಜಿಕ ಹೊಣೆಗಾರಿಕೆ. ಈ ನಿಟ್ಟಿನಲ್ಲಿ ಸಚಿವರ ಜನ್ಮದಿನದ ಅಂಗವಾಗಿ ಅನ್ನ ಸಮರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಇಂತಹ ಸೇವಾ ಕಾರ್ಯ ಕ್ರಮಗಳು ಸಮಾಜದಲ್ಲಿ ಮಾನವೀಯತೆ ಹಾಗೂ ಸಹಕಾರದ ಮನೋಭಾವವನ್ನು ಬೆಳೆಸಲು ಸಹಕಾರಿ ಯಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ನೂರಾರು ಜನರಿಗೆ ಅನ್ನ ಸಂತರ್ಪಣೆ ಮಾಡಲಾಗಿದ್ದು, ಸ್ಥಳೀಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಸಚಿವರಿಗೆ ದೀರ್ಘಾಯುಷ್ಯ ಮತ್ತು ಆರೋಗ್ಯ ದೊರೆಯಲಿ ಎಂದು ಹಾರೈಸಿದರು. ಮುಖಂಡರಾದ ಬಿ.ವಿ.ವೆಂಕಟರವಣ, ಬಿ.ನರಸಿಂಹಪ್ಪ, ನಾಗಪ್ಪ, ಎಂ.ಜಿ. ಕಿರಣ್‌ಕುಮಾರ್, ಜೀವಿಕ ನಾರಾಯಣಸ್ವಾಮಿ, ಗೂಳೂರು ಲಕ್ಷ್ಮೀನಾರಾಯಣ, ಕೆಇಬಿ ಬಾಲು, ಎಸ್.ಎನ್. ನರಸಿಂಹಮೂರ್ತಿ, ನಾಗಭೂಷಣ ಸೇರಿದಂತೆ ಮತ್ತಿತರರು ಹಾಜರಿದ್ದರು.

ಮಳಮಾಚನಹಳ್ಳಿ ಎಸ್‌ಎಫ್‌ಎಸ್‌ಸಿಎಸ್ ಮೊದಲ ಬಾರಿ ಜೆಡಿಎಸ್ ತೆಕ್ಕೆಗೆ

ಅಧ್ಯಕ್ಷ ಸ್ಥಾನಕ್ಕೆ ರಮೇಶ್‌ಗೌಡ ಅವಿರೋಧ ಆಯ್ಕೆ

◆ **ಶಿಡ್ಲಘಟ್ಟ:** ಮಳಮಾಚನಹಳ್ಳಿ ಗ್ರಾಮದಲ್ಲಿ ರೇಷ್ಮೆ ಬೆಳೆಗಾರರ ಹಾಗೂ ಸೇವಾ ಸಹಕಾರ ಸಂಘವೂ ಪ್ರಾರಂಭವಾದಾಗಿನಿಂದಲೂ ಕಾಂಗ್ರೆಸ್ ಪಾಲಾಗಿದ್ದು ಮೊಟ್ಟ ಮೊದಲ ಬಾರಿಗೆ ಜೆಡಿಎಸ್ ಪಾಲಾಗಿದ್ದು, ಸಂಘದ ಆಡಳಿತ ಮಂಡಳಿಗೆ ಈ ಬಾರಿ ನಡೆದ ಚುನಾವಣೆಯಲ್ಲಿ ಹನ್ನೆರಡು ನಿರ್ದೇಶಕರ ಸ್ಥಾನದಲ್ಲಿ ಏಳು ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು, 5 ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ನಿರ್ದೇಶಕರ ಸ್ಥಾನಗಳನ್ನು ಹಂಚಿಕೊಳ್ಳುವ ಮುಖಾಂತರ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಮೇಲುಗೈ ಸಾಧಿಸಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ.

ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಮೇಶ್ ಗೌಡ ಬಿ.ಕೆ, ಉಪಾಧ್ಯಕ್ಷ ಸ್ಥಾನಕ್ಕೆ ನಂದಾ ಮುನಿರೆಡ್ಡಿ ರವರು ಮಾತ್ರ ನಾಮ ಪತ್ರ ಸಲ್ಲಿಸಿದ್ದರಿಂದ ಅಧ್ಯಕ್ಷ ಸ್ಥಾನಕ್ಕೆ ರಮೇಶ್ ಗೌಡ ಬಿ.ಕೆ,ಉಪಾಧ್ಯಕ್ಷ ಸ್ಥಾನಕ್ಕೆ ನಂದಾ ಮುನಿರೆಡ್ಡಿ ರವರನ್ನ ಅವಿರೋಧ ಆಯ್ಕೆ ಎಂದು ಚುನಾವಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ರಿಟರ್ನಿಂಗ್ ಆಫೀಸರ್ ಮಂಜುನಾಥ್ ರವರು ಘೋಷಣೆ ಮಾಡಿದರು.



ಎಸ್‌ಎಫ್‌ಎಸ್‌ಸಿಎಸ್ ನಾ ನೂತನ ಅಧ್ಯಕ್ಷ ರಮೇಶ್ ಗೌಡ ರವರು ಮಾತನಾಡಿ, ಸಂಘದ ಎಲ್ಲಾ ನಿರ್ದೇಶಕರ ಸಹಮತದಿಂದ ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದು, ಎಲ್ಲಾ ನಿರ್ದೇಶಕರ ಮಾರ್ಗದರ್ಶನದಿಂದ ಸಂಘದ ವ್ಯಾಪ್ತಿಗೆ ಬರುವ ಎಲ್ಲಾ ಹಳ್ಳಿಗಳ ರೈತರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಪಕ್ಷಾತೀತವಾಗಿ ಕಲ್ಪಿಸುತ್ತೇವೆ ಎಂದು ತಿಳಿಸಿದರು.

ಮಳಮಾಚನಹಳ್ಳಿ ಗ್ರಾಮ ಪಂಚಾಯತಿ ಸದಸ್ಯ ಆನಂದ್ ಮಾತನಾಡಿ ಈ ಗೆಲುವಿಗೆ ಮುಖ್ಯ ಕಾರಣ ನಮ್ಮ ನೆಚ್ಚಿನ ನಾಯಕರಾದ ಈ ಕ್ಷೇತ್ರದ ಜನಪ್ರಿಯ ಶಾಸಕ ಬಿ.ಎನ್.ರವಿಕುಮಾರ್, ಅವರ ಮಾರ್ಗದರ್ಶನದಲ್ಲಿ ನಾವು ನಡೆಯುತ್ತಿದೇವೇ ಎಂದು ತಿಳಿಸಿದರು. ತಾಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಎಂ.ಕೆ.ರಾಜಶೇಖರ್, ಜೆಡಿಎಸ್ ನಾ ಯುವ ಮುಖಂಡ ಎಂ.ಜಿ.ನವೀನ್‌ಕುಮಾರ್, ಮಳಮಾಚನಹಳ್ಳಿ ಎಸ್ ಎಫ್‌ಎಸ್‌ಸಿಎಸ್ ನಾ ನೂತನ ನಿರ್ದೇಶಕ ನಾಗಮಂಗಲ ಮುರಳೀಧರ, ಮಳಮಾಚನಹಳ್ಳಿ ಎಸ್‌ಎಫ್‌ಎಸ್‌ಸಿಎಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಉಷಾರಾಣಿ, ಸಂಘದ ನೂತನ ಉಪಾಧ್ಯಕ್ಷೆ ನಂದಾ ಮುನಿರೆಡ್ಡಿ , ನಿರ್ದೇಶಕರುಗಳಾದ ಎನ್.ನಾರಾಯಣಪ್ಪ, ಎಂ ಚನ್ನಯ್ಯ, ಎಚ್.ಎಂ. ಲೋಕೇಶ್, ಸಿ.ದೇವರಾಜಮ್ಮ, ಸಿ.ಗೋಪಾಲಪ್ಪ, ಎನ್.ಸಿ.ರಾಮಚಂದ್ರ ಇದ್ದರು.